ಮರೆಯಲ್ಲಿರುವ ಮಹಾನುಭಾವರು ಗ್ರಂಥಮಾಲೆ

ವಿ. ಎನ್. ಕಾಗಲಕರ್

ಶ್ರೀನಿವಾಸ ಸಿರನೂರಕರ್



ಕರ್ನಾಟಕ ಸರ್ಕಾರ

ಕನ್ನಡ ಪುಸ್ತಕ ಪ್ರಾಧಿಕಾರ
ಬೆಂಗಳೂರು

ಮರೆಯಲ್ಲಿರುವ ಮಹಾನುಭಾವರು ಗ್ರಂಥ ಮಾಲೆ

ವಿ.ಎನ್. ಕಾಗಲಕರ್

ಶ್ರೀನಿವಾಸ ಸಿರನೂರಕರ್

ಕರ್ನಾಟಕ ಸರ್ಕಾರ
ಕನ್ನಡ ಪುಸ್ತಕ ಪ್ರಾಧಿಕಾರ
ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು-೫೬೦ ೦೦೨.

V.N. KAGALKAR - A monograph of V.N. Kogalkor by **Sreenivasa Siranookar** Chief reporter, Indian Exporess; 'Mandinik', Oja Colony, Near Sri Guru College, Ring Road, Jevorgi Road, Gulbarga- 585 102, And Published by **Ashoka N. Chalavadi**, Administrative Officer, Kannada Pustaka Pradhikara, Kannada Book Authority, Kannada Bhavana, J.C., Road, Bangalore- 560 002.

ಮೊದಲ ಮುದ್ರಣ : 2007

ಪುಟಗಳು : xvi + 151

ಬೆಲೆ : 65

ISBN : 81-7713-213-X

ಕರಡು ತಿದ್ದಿದವರು : ಡಾ. ಮೀರಾಸಾಬಿಹಳ್ಳಿ ಶಿವಣ್ಣ

ಪ್ರಕಾಕರು : ಶ್ರೀ ಅಶೋಕ ಎನ್. ಚಲವಾದಿ
ಆಡಳಿತಾಧಿಕಾರಿಗಳು
ಕನ್ನಡ ಪುಸ್ತಕ ಪ್ರಾಧಿಕಾರ,
ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು-೨

ಮುಖ ಪುಟ
ಮತ್ತು ಮುದ್ರಣ **ಸತ್ಯಶ್ರೀ ಪ್ರಿಂಟರ್ಸ್ (ಪ್ರೈ) ಲಿಮಿಟೆಡ್**
೧೬/೧, (ಎಡಗಡೆಯ) ೩ನೇ ಅಡ್ಡರಸ್ತೆ, ೨ನೇ ಮುಖ್ಯ ರಸ್ತೆ,
ಕಸ್ತೂರಿಬಾ ನಗರ, ಮೈಸೂರು ರಸ್ತೆ, ಬೆಂಗಳೂರು-೨೬.
ದೂರವಾಣಿ : ೦೮೦-೩೨೫೦೩೭೩೮
ಮೊಬೈಲ್ : ೯೩೪೨೮೬೪೭೬೧

ಒಂದು ದಿನ ಒಳಕೊಂಡಿತ್ತು ನೋಡಾ

ನಮ್ಮ ಕಣ್ಣೆದುರಿಗೆ ಎರಡು ವಾಸ್ತವಗಳಿವೆ. ಒಂದು - ಜನಾಂಗಿಕ ಸಂಸ್ಕೃತಿಯ ಸ್ಮೃತಿ ಸಂಚಯಗಳಂತಿರುವ ಜನಪದ ಪುರಾಣ ಕಥನಗಳನ್ನು ತಲೆಮಾರಿನಿಂದ ತಲೆಮಾರಿಗೆ ಬಾಯಿಯಿಂದ ಬಾಯಿಗೆ ನೆನಪಿನ ವಾಹಕದಲ್ಲಿ ಸೃಜನಶೀಲವಾಗಿ ಕಾಪಾಡಿಕೊಂಡು ಬಂದ ಮೌಖಿಕ ಜಗತ್ತು. ಇದು ಈಗಾಗಲೇ ನಮ್ಮ ನಡುವೆ ಕಣ್ಮರೆಯಾಗುತ್ತಿರುವ ಜಗತ್ತು. ಇನ್ನೊಂದು - ಬದುಕಿನ ಎಲ್ಲ ಜ್ಞಾನ ಶಾಖೆಗಳ ಮಾಹಿತಿ ಭಂಡಾರವನ್ನೂ ತನ್ನ ಸೂಚ್ಯಂತದಲ್ಲಿ ದಾಖಲಿಸಿಕೊಳ್ಳುತ್ತಾ, ಮನುಷ್ಯನ ಸೃಜನಶ್ರಮದ ಕಾಲದೀರ್ಘತೆಯನ್ನು ತನ್ನ ಅಣುಕ್ಷಣಗಳ ಹ್ರಸ್ವತೆಗೆ ತಂದಿಟ್ಟುಕೊಂಡು ದೈತ್ಯ ಸಾಧನೆಯನ್ನು ಮೆರೆಯುತ್ತಿರುವ ಗಣಕ ಜಗತ್ತು. ಇದು ದಿನದಿಂದ ದಿನಕ್ಕೆ ಗಣನೆಗೆ ಸಿಗದ ವೇಗದಲ್ಲಿ ಚಲಿಸುತ್ತಿರುವ ಜ್ಞಾನ ಜಗತ್ತು.

ಮೌಖಿಕ ಸೃಜನ ಪ್ರತಿಭೆಯ ಪ್ರತೀಕ ಸಿರಿಯಜ್ಜಿ. ಗಣಕ ಜ್ಞಾನದ ವೇಗದ ಪ್ರತೀಕ ಶಕುಂತಲಾದೇವಿ. ಸಿರಿಯಜ್ಜಿಯದು ಕೇವಲ ನೆನಪಲ್ಲ; ಅದೊಂದು ಸೃಜನ ಪ್ರತಿಭೆ. ಅದು ಭೂತವಲ್ಲ, ವರ್ತಮಾನ. ಪರಂಪರೆಯನ್ನು ಅರಗಿಸಿಕೊಂಡ ಸಮಕಾಲೀನವಾದ ಸೃಜನೆ. ಅದು ಕೇವಲ ವ್ಯಕ್ತಿಯಲ್ಲ, ಅದೊಂದು ಸಮುದಾಯ ಪ್ರಜ್ಞೆ. ಶಕುಂತಲಾ ದೇವಿಯವರ ಜ್ಞಾನಶಕ್ತಿ ೨ ಮತ್ತು ೨ = ೪ರ ಲೆಕ್ಕಾಚಾರಾದ ಅಗಾಧ ನೆನಪಿನ ಕೋಶ. ಇದು ತಾಂತ್ರಿಕ ನೈಪುಣ್ಯತೆ ಹಾಗೂ ಪರಿಕಲ್ಪನೆಗಳ ಅದ್ಭುತ ಸಮೀಕರಣದ ಜ್ಞಾನಶಕ್ತಿ. ಇಲ್ಲಿ ಪರಿಭಾವಿಸಬೇಕಾದ ಬಹು ಮುಖ್ಯ ವಿಚಾರವೆಂದರೆ, ಮೊದಲನೆಯದು ಭಾವಪ್ರಭೆಯ ಸೃಜನೆಯ ಫಲ. ಎರಡನೆಯದು ಬುದ್ಧಿ ಸಂಚಯದ ತರ್ಕದ ಫಲ. ಇಂದು ಈ ಎರಡು ವಾಸ್ತವಗಳ ನಡುವೆ ಅಕ್ಷರ ಲೋಕದ ಚಲನೆ ಹಲವು ಸವಾಲುಗಳಿಗೆ ಹಲವು ಬಿಕ್ಕಟ್ಟುಗಳಿಗೆ ಮುಖಾಮುಖಿಯಾಗಿದೆ.

ಜ್ಞಾನದ ಶೋಧ ವಿಸ್ತರಣೆಗೊಂಡಂತೆ, ಬಹಳಷ್ಟು ಆತಂಕಗಳು ನಿತ್ಯದ ಭಯಗಳಾಗಿ ನಮ್ಮೆದುರು ಬಿಚ್ಚಿಕೊಳ್ಳುತ್ತಿವೆ. ಮಾಹಿತಿ ತಂತ್ರಜ್ಞಾನದ ವೇಗದಾಳಿಗೆ

ಸಿಲುಕಿ ಜಗತ್ತಿನ ಬಹುತೇಕ ಭಾಷೆಗಳು ಕಣ್ಮರೆಯಾಗುವ ಆತಂಕವನ್ನು ಹಲವು ಜನ ಭಾಷಾತಜ್ಞರು ಗಂಭೀರ ಸಮಸ್ಯೆಯಾಗಿ ಜಗತ್ತಿನ ಮುಂದಿಟ್ಟಿದ್ದಾರೆ. ಈ ಆತಂಕದ ಆವರಣದಲ್ಲಿ ನಮ್ಮ ಕನ್ನಡ ಭಾಷೆಯ ಸ್ಥಿತಿ ಏನು ಇದು ಇಂದು ನಾವು ಕೇಳುಕೊಳ್ಳಬೇಕಾದ ಪ್ರಮುಖ ಪ್ರಶ್ನೆ. ಭಾಷೆ ಎಂಬುದು ಕೇವಲ ಸಂವಹನ ಸಂಕೇತವಲ್ಲ. ಇದು ಸಮುದಾಯದ ಸಂಸ್ಕೃತಿ, ನಾಗರಿಕತೆ, ಸೃಜನಶಕ್ತಿ, ಬುದ್ಧಿಭಾವಗಳು ಸಂಲಗ್ನಗೊಂಡ ಬುದುಕಿನ ಪ್ರತೀಕ. ಅದು ಸಮುದಾಯದ ಉಸಿರು. ಇಂಥ ಭಾಷೆಯ ಅಳಿಯುವಿಕೆ ಎಂದರೆ ಬದುಕಿನ ಎಲ್ಲ ಕ್ಷೇತ್ರಗಳ ಪ್ರಮುಖ ವ್ಯಾವಹಾರಿಕತೆಯಿಂದ ಆ ಭಾಷೆಯನ್ನು ಹೊರಗಿಡುವುದು; ಆಡಳಿತ ಶಿಕ್ಷಣ ಸಂಪರ್ಕ ಮಾಧ್ಯಮ ಸ್ಥಾನದಿಂದ ಆ ಭಾಷೆಯನ್ನು ಕಣ್ಮರೆ ಮಾಡುವುದು. ಇದರ ಅರ್ಥ ಬಹುದೊಡ್ಡ ಭಾಷಿಕ ಸಮುದಾಯವೊಂದನ್ನು ಜ್ಞಾನದ ಬೆಳಕಿನಿಂದ ದೂರವಿಡುವುದು. ಜಾಗತಿಕ ಬದುಕಿನ ಸುಖ ಸವಲತ್ತುಗಳಿಂದ ವಂಚಿಸುವುದು. ಇಂಥ ಹಲವು ಅಘಾತಕಾರೀ ಆತಂಕಗಳ ವಾತಾವರಣದಲ್ಲಿ ಇದು ಕನ್ನಡ ಅಕ್ಷರ ಲೋಕ ತನ್ನ ಗತಿಯನ್ನು ಕಂಡು ಕೊಳ್ಳಬೇಕಾಗಿದೆ.

ಸಾವಿರಾರು ವರ್ಷಗಳ ಇತಿಹಾಸದಲ್ಲಿ ಸಾಂಸ್ಕೃತಿಕ, ರಾಜಕೀಯ ದಬ್ಬಾಳಿಕೆಯನ್ನು ಸಮರ್ಥವಾಗಿ ಎದುರಿಸಿ, ಬೆಳೆದುಬಂದ ಕನ್ನಡ ಭಾಷೆಗೆ, ಕನ್ನಡ ಬದುಕಿಗೆ ಆತಂಕ ಆಘಾತಗಳು ಮೈಯುಂಡ ಬಾಳು. ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತ ಮತಿಗಳಿಂದ ಮೊದಲ್ಗೊಂಡು ಓತಮಿತ ಮೃದುವಚನ, ನುಡಿ ಟಠಡಢಣ, ಮಾತು ಜ್ಯೋತಿರ್ಲಿಂಗ, ಹಲಗೆ ಬಳಪವ ಪಿಡಿಯದೊಂದಗ್ಗಳಿಕೆಯಲ್ಲಿ ಒಲಿದಂತೆ ಹಾಡಿದ ಹಲವು ಕಾಲದ ಹಲವು ನಿಟ್ಟಿನ ನುಡಿಸಾಧಕರ ಮಾರ್ಗದೇಸಿಗಳ ಸಮಾಹಿತದಲ್ಲಿ ತನಗೆದುರಾದ ಆತಂಕ ಆಘಾತಗಳನ್ನು ಅರಗಿಸಿಕೊಂಡು ಕನ್ನಡದ ದೀಪ ಬೆಳಗಿದೆ. ಇದರರ್ಥ ಆಯಾ ಕಾಲದ ಕನ್ನಡ ಸಮುದಾಯ ತನ್ನ ಕಾಲದ ಸವಾಲುಗಳಿಗೆ ತಕ್ಕ ವಿವೇಕ ತೋರಿ ಸೃಜನಶೀಲವಾಗಿದೆ. ಆದರೆ, ಇಂದಿನ ಆತಂಕ ಹಿಂದೆಂದಿನ ಆಕ್ರಮಣಗಳಿಗಿಂತ ಭಯಾನಕವಾದುದು. ಈ ಭಯಾನಕತೆಯನ್ನು ಎದುರಿಸುವ ಹಾಗೂ ಆರೋಗ್ಯಕರವಾಗಿ ಅದನ್ನು ಅರಗಿಸಿಕೊಂಡು ಬೆಳೆಯುವ ಸತ್ವಶಕ್ತಿ ಭಾಷೆಗಿದ್ದರೂ, ಭಾಷಿಕ ಸಮುದಾಯದ ಇಚ್ಛಾಶಕ್ತಿಯ ಕೊರತೆ ಎದ್ದುಕಾಣುವ ಸಂಗತಿ. ಈ ಇಚ್ಛಾಶಕ್ತಿ ಹೊರಗಿನಿಂದ ಆಮದು ಮಾಡಿಕೊಳ್ಳುವ ಸರಕಲ್ಲ; ಬದುಕನ್ನು ರೂಪಿಸುವ ಪ್ರಭುತ್ವ ಹಾಗೂ ಪ್ರಭುತ್ವವನ್ನು ಆಯ್ಕೆ ಮಾಡಿಕೊಳ್ಳುವ ಜನಸಮುದಾಯದೊಳಗೆ

ಅರಿವೇ ಗುರುವಾಗಿ ಮೂಡಬೇಕಾದ ಪ್ರಜ್ಞಾ ವಿಶೇಷ. ಈ ಪ್ರಜ್ಞಾ ವಿಶೇಷ ಸಿರಿಯಜ್ಜಿಯ ಸಮುದಾಯವನ್ನು ಕಡೆಗಣಿಸದೆ ಸಮೀಕರಣದ ಜ್ಞಾನ ಶಕ್ತಿಗೆ ಮಣೆ ಹಾಕಬೇಕಿದೆ. ಅತಿರೇಕಗಳ ಅವಾಂತರದಿಂದ ಸಮುದಾಯವನ್ನು ಕಾಪಾಡುವ ಶಕ್ತಿ ಅಕ್ಷರ ಲೋಕಕ್ಕಿದೆ. ಆದ್ದರಿಂದ ಅಕ್ಷರ ಲೋಕ ಸೃಜನಶೀಲತೆಯನ್ನು ಎಚ್ಚರದಿಂದ ಉಳಿಸಿಕೊಳ್ಳುತ್ತಾ, ಜ್ಞಾನದ ಹೊಸ ವಿಸ್ತರಣೆಗೆ ತೆರೆದುಕೊಳ್ಳುವ ಅಗತ್ಯವಿದೆ.

ವಿಜ್ಞಾನದ ಹೊಸ ಹೊಸ ಆವಿಷ್ಕಾರಗಳಿಂಗ ಪ್ರತಿಸ್ಪಂದಿಸುತ್ತಾ ಬೆಳೆಯುವ ಭಾಷೆಯ ಸೃಜನಶೀಲತೆ ಪ್ರಕಾಶಿಸುತ್ತದೆ. ವೈಜ್ಞಾನಿಕ ವಿಚಾರ ಸೃಜನಶೀಲಭಾವದಲ್ಲಿ ಅಭಿವ್ಯಕ್ತಗೊಂಡಾಗ ಅದಕ್ಕೊಂದು ಮಾನವೀಯತೆಯ ಪ್ರಭೆ ಪ್ರಾಪ್ತವಾಗುತ್ತದೆ. ಹೊಸಕಾಲದ ಸಂವೇದನೆಗಳಿಗೆ ವೈಜ್ಞಾನಿಕ ವಿಚಾರಗಳಿಗೆ ತಾತ್ವಿಕ ತರ್ಕದೀಪ್ತಿಗಳಿಗೆ ತೆರೆದುಕೊಳ್ಳುವ ಸಮ್ಯಗುಣ ಜೀವಂತ ಭಾಷೆಯೊಂದರ ದೊಡ್ಡ ಶಕ್ತಿ. ಕಾಲದ ಅಗತ್ಯಗಳಿಗೆ ಸ್ಪಂದಿಸಬಲ್ಲ ಸಮ್ಯಗುಣ ಕನ್ನಡ ಭಾಷೆಯ ದೊಡ್ಡ ಶಕ್ತಿ. ಜಾಗತಿಕ ಮಟ್ಟದಲ್ಲಿ ವಿಸ್ತರಣೆಗೊಳ್ಳುತ್ತಿರುವ ಎಲ್ಲ ಜ್ಞಾನಶಾಖೆಗಳ ಪರಿಭಾಷಿಕ ಶಬ್ದ ಸಂಪತ್ತನ್ನು ಸ್ವೀಕರಿಸುತ್ತಾ, ತನ್ನ ಖೇಣ ವಿಷಯ ಜ್ಞಾನವನ್ನು ಅರಗಿಸಿಕೊಂಡು ಕನ್ನಡ ಭಾಷೆ ಬೆಳೆಯಬೇಕಿದೆ. ಕನ್ನಡದ ಜ್ಞಾನ ಚೇತನಗಳ ಇಚ್ಛಾಶಕ್ತಿ ಈ ದಿಸೆಯಲ್ಲಿ ಹೆಚ್ಚು ಕ್ರಿಯಾಶೀಲವಾಗಬೇಕಾದ ಅಗತ್ಯವಿದೆ. ಅಲ್ಲಮನ ಒಂದು ವಚನ ಹೀಗಿದೆ -

ಹಿಂದಣ ಅನಂತವನು ಮುಂದಣ ಅನಂತವನು
ಒಂದು ದಿನ ಒಳಕೊಂಡಿತ್ತು ನೋಡಾ
ಒಂದು ದಿನವನೊಳಕೊಂಡು ಮಾತಾಡುವ ಮಹಾಂತನ
ಕಂಡು ಬಲ್ಲವರಾರಯ್ಯ
ಆದ್ಯರು ವೇದ್ಯರು ಅನಂತ ಹಿರಿಯರು ಕಾಲದಂತುವನರಿಯದೆ
ಅಂತೆ ಹೋದರು ಕಾಣಾ ಗುಹೇಶ್ವರ

ಜಗತ್ತಿ ಜ್ಞಾನಕ್ಕೆ ಹಿಂದಣ ಪರಂಪರೆಯ ಅಪಾರತೆ ಇದೆ. ಮುಂದಣ ಭವಿಷ್ಯದ ಅನಂತತೆ ಇದೆ. ವರ್ತಮಾನದಲ್ಲಿ ಈ ಎರಡೂ ಸಂಲಗ್ನಗೊಂಡ ಭಾವದಲ್ಲಿ ಸೃಜನಶೀಲವಾದಾಗ ಅದು ಅಳಿಯದ ಮಾತಾಗುತ್ತದೆ. ಈ ಮಾತು ಜ್ಯೋತಿರ್ಲಿಂಗ ರೂಪಿಯಾಗುತ್ತದೆ. ನಿಜವಾದ ಪುಸ್ತಕಗಳು ಮಾತು ಜ್ಯೋತಿರ್ಲಿಂಗವಾದ ಸಂಸ್ಕೃತಿ ಸಂಚಯದ ಜ್ಞಾನದೀವಿಗೆಗಳು. ಜ್ಞಾನವನ್ನು ಕೇವಲ ಪಂಡಿತಮಾನ್ಯರ ಸ್ವತ್ತಾಗಿಸದೆ, ಜನಸಾಮಾನ್ಯರ ಬದುಕಾಗಿಸುವುದು ಅಕ್ಷರಲೋಕದ ಗುರಿಯಾಗಬೇಕು. ಜ್ಞಾನ ಪರಂಪರೆಗಳನ್ನು ಶೋಧನೆಗೆ ಹಚ್ಚುತ್ತಾ,

ಆತ್ಮಾವಲೋಕನದ ಒಳಮುಖೀದರ್ಶನ ದೀಪ್ತಿಯಲ್ಲಿ ಸತ್ಯವನ್ನು ಮನಗಾಣಿಸಬೇಕು. ಕಂಡ ಸತ್ಯದ ಬೆಳಕಿನಲ್ಲಿ ವರ್ತಮಾನದ ದಾರಿ ತೆರೆದು ಭವಿಷ್ಯದ ಮುಂಗಾಣ್ಕೆಯಿಂದ ಗುರಿಯ ಕಡೆ ಹೆಜ್ಜೆ ಹಾಕಬೇಕು. ಇದು ಬದುಕಿನ ಗತಿಶೀಲ ಗುಣವಾದಾಗ ಅತಿರೇಕಗಳಿಗೆ ಅವಕಾಶವಿರುವುದಿಲ್ಲ.

ಇದು ಜಾಗತೀಕರಣದ ಯುಗ. ಪ್ರಕ್ರಿಯೆಯ ವೇಗ ಅಪರಿಮಿತವಾದಷ್ಟು ಅಪಾಯಕಾರಿಯೂ ಆಗಿದೆ. ಜಾಗತೀಕರಣದ ದಾಳಿಯಲ್ಲಿ ಏಕಸಂಸ್ಕೃತಿ, ಏಕಜೀವನಶೈಲಿ, ಏಕಭಾಷಾಧಿಪತ್ಯಕ್ಕೆ ಜಗತ್ತನ್ನು ಒಳಗುಮಾಡುವುದರಿಂದ ಆಗುವ ದುಷ್ಪರಿಣಾಮವೆಂದರೆ, ಜೀವನ ವೈವಿಧ್ಯತೆಯ ಬಹುಮುಖೀ ಸಂಸ್ಕೃತಿಗಳ ಸಾವು. ಅತಿರೇಕದ ವೈಪರೀತ್ಯಕ್ಕೆ ಒಳಗಾಗಿ ಬದುಕನ್ನು ಬರಡಾಗಿಸುವ ಹಾಗೂ ಅಸಮಾನತೆಯ ಪ್ರಮಾಣವನ್ನು ಅಗಾಧವಾಗಿಸುವ ಅಪಾಯದಿಂದ ಈ ಸಮುದಾಯಗಳನ್ನು ರಕ್ಷಿಸುವ ಅಗತ್ಯ ಇಂದಿನ ತುರ್ತು. ಈ ತುರ್ತಿನ ಸನ್ನಿವೇಶದಲ್ಲಿ ವಿವೇಕದ ದಾರಿ ತೋರಿ ಅತಿರೇಕಕ್ಕೆ ಕಡಿವಾಣವನ್ನು ಹಾಕಿ ಸಂಸ್ಕೃತಿಯನ್ನು, ಬದುಕನ್ನು ಮಾನವ ಕೋಟಿಯನ್ನು ಸಂರಕ್ಷಿಸಬಲ್ಲ ಶಕ್ತಿ ಅಕ್ಷರಲೋಕಕ್ಕಿದೆ. ಏಕರೂಪೀ ಗುಣದಿಂದ ಕೂಡಿದ ಗಣಕೀಕರಣದ ಏಕಾಧಿಪತ್ಯಕ್ಕಿಂತ ಬಹುರೂಪಿ ಗುಣದ ಪ್ರತಿಭಾ ಸಂಪನ್ನತೆಯಿಂದ ಹೊಳೆವ ಅಕ್ಷರಲೋಕ ಜಗತ್ತಿನ ವೈವಿಧ್ಯತೆಯನ್ನು ಸಂರಕ್ಷಿಸುತ್ತದೆ. ವೈವಿಧ್ಯತೆಗಳೊಳಗಿನ ಸೃಜನಶೀಲತೆಯನ್ನು ಬೆಳೆಸುತ್ತದೆ.

ಪುಸ್ತಕಗಳು ಅಕ್ಷರ ಲೋಕದ ಮೂರ್ತರೂಪಗಳು; ಅಮೂರ್ತವಾದ ಜ್ಞಾನಸಂಪತ್ತನ್ನು ಧಾರಣ ಮಾಡಿಕೊಂಡ ಶಬ್ದರೂಪಗಳು. ಶಬ್ದ ಕೇವಲ ಅರ್ಥದ ಅಭಿದಾವೃತ್ತಿಯಲ್ಲಿ ನೆಲೆ ನಿಲ್ಲುವುದಲ್ಲ, ವ್ಯಂಜನಾ ವ್ಯಾಪಾರದಲ್ಲಿ ಅನುಭಾವಿಕವಾಗುವುದು. ಈ ವ್ಯಂಜನಾ ವ್ಯಾಪಾರ ಬುದ್ಧಿಭಾವಗಳ ವಿದ್ಯುದಾಲಿಂಗನ ಪ್ರಭೆಯ ಫಲಿತ. ಹೀಗಾಗಿ ಪುಸ್ತಕಗಳು ಸಂಸ್ಕೃತಿ ನಾಗರಿಕತೆಗಳ ಸಂಚಯಿತ ಫಲವಾದಷ್ಟೇ ಸಂಸ್ಕೃತಿಯನ್ನು ನಿರಂತರವಾಗಿ ಉಜ್ಜೀವಿಸುವ ಧಾತು ದ್ರವ್ಯಗಳು.

ಕನ್ನಡ ಪುಸ್ತಕ ಪ್ರಾಧಿಕಾರವು ಕರ್ನಾಟಕದಾದ್ಯಂತ ಪುಸ್ತಕ ಸಂಸ್ಕೃತಿಯನ್ನು ಬೆಳೆಸುವ ಸದುದ್ದೇಶದಿಂದ ಪ್ರಾರಂಭವಾದ ಒಂದು ಸಂಸ್ಕೃತಿ ಕೇಂದ್ರ. ವಾಚನಾಭಿರುಚಿಯನ್ನು ಬೆಳೆಸುವುದೂ ಹಾಗೂ ಪುಸ್ತಕೋದ್ಯಮವನ್ನು ಆರೋಗ್ಯಕರವಾಗಿ ಪೋಷಿಸುವುದು ಪ್ರಾಧಿಕಾರದ ಹೊಣೆಯಾಗಿರುತ್ತದೆ. ಅದಕ್ಕಾಗಿ ಹಲವು ರೀತಿಯ ಕಾರ್ಯಯೋಜನೆಗಳನ್ನು ಪ್ರಾಧಿಕಾರ ರೂಪಿಸಿಕೊಂಡಿದೆ. ಯುವ

ಸಮುದಾಯದಲ್ಲಿ ವಾಚನಾಭಿರುಚಿ ಹೆಚ್ಚಿಸಲು ವಾಚನಾಭಿರುಚಿ ಕಮ್ಮಟಗಳನ್ನು ನಡೆಸುತ್ತಿದೆ. ಪ್ರಕಾಶಕರು, ಲೇಖಕರು ಹಾಗೂ ಓದುಗರ ನಡುವೆ ಚಿಂತನಾ ಕಮ್ಮಟಗಳನ್ನು ನಡೆಸುತ್ತಿದೆ. ಇವುಗಳ ಜೊತೆಗೆ ಎರಡನೆಯ ಆದ್ಯತೆಯಾಗಿ ಪುಸ್ತಕ ಪ್ರಕಟಣೆಯ ಜವಾಬ್ದಾರಿಯನ್ನು ನಿರ್ವಹಿಸುತ್ತಿದೆ. ಶೈಕ್ಷಣಿಕ ಶಿಸ್ತಿನಲ್ಲಿ ಅಧ್ಯಯನ ಮಾಡುವ ಪರಾಮರ್ಶನ ಗ್ರಂಥಗಳ ಜೊತೆಗೆ ಜನಸಾಮಾನ್ಯರಿಗೆ ಅಗತ್ಯವಾಗಿಬೇಕಾದ ಅರಿವನ್ನು ಹಂಚುವ ಪುಸ್ತಕಗಳ ಪ್ರಕಟಣೆಯೂ ಪ್ರಾಧಿಕಾರದ ಉದ್ದೇಶವಾಗಿದ.

❀ ❀ ❀ ❀ ❀

ವಿ.ಎನ್. ಕಾಗಲ್ಕರ್ ಅವರು ಹೈದರಾಬಾದ್ ಕರ್ನಾಟಕ ಪ್ರದೇಶದ ಪತ್ರಿಕೋದ್ಯಮದಲ್ಲಿ ಒಂದು ದೊಡ್ಡ ಹೆಸರು. ಪತ್ರಿಕೋದ್ಯಮವನ್ನು ಬದುಕಿನ ಉಸಿರಾಗಿಸಿಕೊಂಡು ಕಾಯಕ ದೃಷ್ಟಿಯಲ್ಲಿ ಬಾಳಿದವರು. ಅಂಥವರ ಹೋರಾಟ, ಸಾಧನೆಗಳು ಚರಿತ್ರೆಯಲ್ಲಿ ದಾಖಲಾಗಬೇಕಾದ ಅಗತ್ಯವಿದೆ. ಮರೆಯಲ್ಲಿರುವ ಮಹಾನುಭಾವರು ಮಾಲಿಕೆಯಲ್ಲಿ ಅವರ ಬಗ್ಗೆ ಕೃತಿ ಬರೆದುಕೊಟ್ಟ ಶ್ರೀನಿವಾಸ ಸಿರನೂರಕರ್ ಅವರಿಗೆ ಪ್ರಾಧಿಕಾರದ ಕೃತಜ್ಞತೆಗಳು.

ಪ್ರೊ|| ಎಸ್.ಜಿ. ಸಿದ್ಧರಾಮಯ್ಯ
ಅಧ್ಯಕ್ಷರು

ಲೇಖಕರ ಮಾತು

ವಿ.ಎಸ್. ಕಾಗಲಕರ್ ಅವರನ್ನು ಕುರಿತು ಪುಸ್ತಕ ಬರೆಯುವುದೆಂದರೆ ಹಲವು ಕಾರಣಗಳಿಗಾಗಿ ಒಂದು ಸವಾಲಿನ ವಿಷಯವೇ ಹೌದು. ಹೈದ್ರಾಬಾದ ಕರ್ನಾಟಕ ಪ್ರದೇಶದ ಪತ್ರಿಕೋದ್ಯಮದ ಹರಿಕಾರರಾದ ಅವರ ಬದುಕಿನ ಉಸಿರೇ ಪತ್ರಿಕಾ ಬರವಣಿಗೆಯಾಗಿತ್ತು. ಅವರ ಸರಳತೆ, ಸಜ್ಜನಿಕೆ, ನಿಷ್ಠೆ, ವೃತ್ತಿಗೌರವ ಕಾಯ್ದುಕೊಳ್ಳುವ ಎಚ್ಚರಿಕೆ ಮತ್ತು ಕಾಳಜಿ, ಜೀವನದ ಮೌಲ್ಯಗಳ ಬಗ್ಗೆ ತುಡಿತ, ಅಗಾಧವಾದ ಸಾಂಸ್ಕೃತಿಕ ಸಂಪನ್ನತೆ, ಇತ್ಯಾದಿಗಳೆಲ್ಲ ಬೆರಗುಗೊಳಿಸುವಂತಹವುಗಳು.

ಉದರಂಭರಣಗಾಗಿ ಜವಳಿ ಗಿರಣಿಯೊಂದರಲ್ಲಿ ಕಾರಕೂನರಾಗಿದ್ದರೂ ಅವರು ತಮ್ಮ ಜೀವನವನ್ನೇ ಪತ್ರಿಕೋದ್ಯಮಕ್ಕೆ ಮೀಸಲಾಗಿಟ್ಟವರು. ಆದಾಗ್ಯೂ ಅವರ ಬಗ್ಗೆ ನಿಖರವಾಗ ಮಾಹಿತಿ ಲಭ್ಯವಿಲ್ಲದಿರುವುದು ಒಂದು ದೊಡ್ಡ ಕೊರತೆ. ಪ್ರಚಾರ, ಪ್ರಸಿದ್ಧಿ, ಕೀರ್ತಿಗಳಿಂದ ಗಾವುದ ದೂರವಿದ್ದು ಕನ್ನಡ ಮತ್ತು ಇಂಗ್ಲೀಷ್ ಪತ್ರಿಕೋದ್ಯಮಗಳೆರಡರಲ್ಲೂ ಸಮಾನ ಪರಿಣತಿಯಿಂದ ನಿಸ್ಪೃಹ ಸೇವೆಗೈದ ಕಾಗಲಕರ್ ಎಲ್ಲ ಕಾಲಕ್ಕೂ ಅನುಕರಣೀಯ ಪತ್ರಕರ್ತರು.

ಮ್ಯಾಟ್ರಿಕ್ ಶಿಕ್ಷಣವನ್ನು ಪೂರೈಸದ ಕಾಗಲಕಲ್ ಅವರು ಕನ್ನಡ ಮತ್ತು ಇಂಗ್ಲೀಷ್ ಭಾಷೆಗಳೆರಡರಲ್ಲೂ ಪ್ರಭುತ್ವ ಸ್ಥಾಪಿಸಿಕೊಂಡಿದ್ದು ಎಲ್ಲರಿಗೂ ಆಶ್ಚರ್ಯವನ್ನುಂಟು ಮಾಡುತ್ತದೆ. ಬಡತನದ ಬೇಗೆಯಲ್ಲಿ ದೊಡ್ಡ ಸಂಸಾರವನ್ನೇ ಬೆನ್ನಿಗೆ ಕಟ್ಟಿಕೊಂಡು ಹಲವು ಹತ್ತು ಕೌಟುಂಬಿಕ ಸಂಕಷ್ಟಗಳನ್ನು ಎದುರಿಸಿದರೂ ಅದನ್ನು ಇನ್ನೊಬ್ಬರೆದುರಿಗೆ ತೋಡಿಕೊಳ್ಳದ, ತೋರಿಸಿಕೊಳ್ಳದ ಅಪರೂಪದ ಜೀವಿ. ನೋವನ್ನೆಲ್ಲ ನುಂಗಿ ನಲಿವನ್ನಷ್ಟೇ ಸಮಾಜದೊಂದಿಗೆ ಹಂಚಿಕೊಂಡ ಕಾಗಲಕರ್ ಅವರ ಕಾಲದ ಪತ್ರಿಕೋದ್ಯಮದ ಬೆಳವಣಿಗೆ ಒಂದು ರೀತಿಯಲ್ಲಿ ಕಲಬುರಗಿಯ ಬೆಳವಣಿಗೆಯೂ ಹೌದು. ಅಭಿವೃದ್ಧಿ ಪ್ರಗತಿ, ಸಾಹಿತ್ಯ-ಸಂಸ್ಕೃತಿ, ಕಲೆ, ಗಾಯನ,

ಜನಪದ ಇತ್ಯಾದಿ ಹಲವು ಹತ್ತು ವಿಷಯಗಳ ಕುರಿತಾಗಿ ಓತಪ್ರೋತವಾಗಿ ಕನ್ನಡ ಮತ್ತು ಇಂಗ್ಲೀಷಿನಲ್ಲಿ ಸುಮಾರು ನಾಲ್ಕು ದಶಕಗಳ ಕಾಲ ಬರೆದು ಸಮಾಜ ಋಣವನ್ನು ತೀರಿಸಿ ತಮ್ಮ ಬದುಕನ್ನು ಸಾರ್ಥಕಪಡಿಸಿಕೊಂಡವರು ಕಾಗಲಕರ್.

ಇಂತಹ ಮೇರು ವ್ಯಕ್ತಿತ್ವದ ಕಾಗಲಕರ್ ಅವರ ಬಗ್ಗೆ ಪುಸ್ತಕ ಬರೆಯುವ ಅವಕಾಶ ಬದಗಿ ಬಂದದ್ದು ನನ್ನ ಸುಯೋಗವೆಂದೇ ಭಾವಿಸಿದ್ದೇನೆ. ಕನ್ನಡ ಪುಸ್ತಕ ಪ್ರಾಧಿಕಾರವು 'ಮರೆಯಲ್ಲಿರುವ ಮಹಾನುಭಾವರು' ಮಾಲೆಯಲ್ಲಿ ಕಾಗಲಕರ್ ಅವರನ್ನು ಕುರಿತಾದ ಪುಸ್ತಕ ಪ್ರಕಟಿಸುತ್ತಿರುವುದು ಅತ್ಯಂತ ಸೂಕ್ತವೂ, ಅನ್ವರ್ಥಕವೂ ಆಗಿದೆ. ಪುಸ್ತಕ ಬರೆಯುವಂತೆ ನನ್ನನ್ನು ಪ್ರೇರೇಪಿಸಿ, ಅದು ಕಾರ್ಯಗತವಾಗಲು ಕಾರಣಕರ್ತರಾದ ಪ್ರಾಧಿಕಾರದ ಸದಸ್ಯರೂ, ನನ್ನ ಆತ್ಮೀಯ ಸಹೋದ್ಯೋಗಿ ಸ್ನೇಹಿತರೂ ಆದ ಶ್ರೀಮತಿ ಶೀಲಾ ತಿವಾರಿ ಅವರಿಗೆ ಮತ್ತು ಪ್ರಾಧಿಕಾರದ ಅಧ್ಯಕ್ಷರಾದ ಪ್ರೊ|| ಎಸ್.ಜಿ. ಸಿದ್ಧರಾಮಯ್ಯ ಅವರಿಗೆ ಆಡಳಿತಾಧಿಕಾರಿಗಳಾದ ಶ್ರೀ ಅಶೋಕ ಎನ್. ಛಲವಾದಿ ಅವರಿಗೆ ನನ್ನ ಮೊದಲ ಕೃತಜ್ಞತೆ ಸಲ್ಲಬೇಕು.

ಕಾಗಲಕಲ್ ಅವರ ಬಗ್ಗೆ ತಮ್ಮಲ್ಲಿದ್ದ ಎಲ್ಲ ಮಾಹಿತಿಯನ್ನು ಧಾರೆ ಎರೆದು ಸಹಕರಿಸಿದ ನಾಡಿನ ಖ್ಯಾತ ಕವಿಗಳಾದ ವಸಂತ ಕುಷ್ಟಗಿ ಅವರಿಗೆ ಎಷ್ಟೇ ಕೃತಜ್ಞತೆ ಸಲ್ಲಿಸಿದರೂ ಕಡಿಮೆಯೇ. ಕುಷ್ಟಗಿ ಅವರ ಅಮೂಲ್ಯ ಮಾಹಿತಿ ಇರದಿದ್ದಲ್ಲಿ ಈ ಕೃತಿ ಬೆಳಕು ಕಾಣುತ್ತಿರಲಿಲ್ಲವೇನೋ!

ಹಿರಿಯ ಕಮ್ಯೂನಿಸ್ಟ್ ನಾಯಕರಾದ ಗೋಪಾಲರಾವ್ ಗುಡಿ ಅವರು ಕಾಗಲಕರ್ ಅವರ ಕಾರ್ಮಿಕ ನಾಯಕತ್ವದ ಪರಿಚಯ ನೀಡಿ ಕೃತಿಯ ಸೊಬಗನ್ನು ಹೆಚ್ಚಿಸಿದ್ದಾರೆ. ಅವರಿಗೆ ವಿಶೇಷ ಕೃತಜ್ಞತೆಗಳು. ಖ್ಯಾತ ವಕೀಲರಾದ ಕಲ್ಯಾಣರಾವ್ ಬಕ್ಷಿ, ವಿಧಾನ ಪರಿಷತ್ತಿನ ಮಾಜಿ ಉಪಸಭಾಪತಿ ಬಿ.ಆರ್. ಪಾಟೀಲ, ನಿವೃತ್ತ ವಾರ್ತಾಧಿಕಾರಿ ಅಪ್ಪಾರಾವ್ ಅಕ್ಕೋಣಿ ಮತ್ತು ವಿಠ್ಠಲರಾವ್ ಕಾಗಲಕರ್ ಅವರು ಮಹತ್ವದ ಮಾಹಿತಿ ನೀಡಿ ಕೃತಜ್ಞತೆಗೆ ಪಾತ್ರರಾಗಿದ್ದಾರೆ.

ಪತ್ರಕರ್ತ ಜಯತೀರ್ಥ ಕಾಗಲಕರ್ ಅವರು ತಮ್ಮ ತಂದೆಯ ಬಗ್ಗೆ ತಮ್ಮಲ್ಲಿದ್ದ ಎಲ್ಲ ಮಾಹಿತಿ, ದಾಖಲೆಗಳನ್ನು ನೀಡಿ ಸಹಕರಿಸಿದ್ದಾರೆ. ಇನ್ನೋರ್ವ ಪತ್ರಕರ್ತ ಜಯತೀರ್ಥ ಪಾಟೀಲ ಬಹಳ ಪ್ರೀತಿಯಿಂದ ಪುಸ್ತಕ ಬರೆಯಲು ನನ್ನನ್ನು ಒತ್ತಾಯಿಸುತ್ತಲೇ ಇದ್ದರು. ಕಾಗಲಕರ್ ಅವರ ಗರಡಿಯಲ್ಲಿ ಪಳಗಿ ಇಂದು ಪತ್ರಿಕೋದ್ಯಮದ ಉನ್ನತ ಸ್ಥಾನದಲ್ಲಿರುವ ಶ್ರೀಕಾಂತ ಆಚಾರ್ಯ ಮಣೂರ ಅವರು

ತಮ್ಮ ಗುರುವಿನ ಬಗ್ಗೆ ಸಾಕಷ್ಟು ಮಾಹಿತಿಯನ್ನು ಒದಗಿಸಿಕೊಟ್ಟಿದ್ದಾರೆ. ಈ ಮೂವರು ಮಹನೀಯರಿಗೂ ನಾನು ಋಣಿಯಾಗಿದ್ದೇನೆ.

ವಿ.ಎಸ್. ಕಾಗಲಕರ್ ಅವರು ಭೌತಿಕವಾಗಿ ಸ್ವಾತಂತ್ರ್ಯೋತ್ತರದ ಮೊದಲ ಪೀಳಿಗೆಯ ಅತ್ಯಂತ ಮಹತ್ವದ ಪತ್ರಕರ್ತರಾಗಿದ್ದರೂ ಅವರು ಎಲ್ಲ ಪೀಳಿಗೆಗಳಿಗೂ ಆದರ್ಶ ಪ್ರಾಯರು. ಪ್ರಸ್ತುತ ಕೃತಿಯನ್ನು ಪತ್ರಕರ್ತರು ಮತ್ತು ಪತ್ರಕರ್ತರಲ್ಲದವರು ಓದಿ ಒಂದು ಕ್ಷಣ ಚಿಂತನೆಗೊಳಗಾವುದಾದರೆ ತನ್ನ ಶ್ರಮ ಸಾರ್ಥಕವಾಯಿತೆಂದು ಭಾವಿಸುತ್ತೇನೆ.

ಗುಲ್ಬರ್ಗ   **- ಶ್ರೀನಿವಾಸ ಸಿರನೂರಕರ್**

ಪರಿವಿಡಿ

ವಿ.ಎಸ್. ಕಾಗಲಕರ್

ಅಧ್ಯಾಯ-೧

ಕಣ್ಣು ತೆರೆಸಿದ ವೆಂಕಣ್ಣ

ಸುಮಾರು ಮೂರುವರೆ ದಶಕಗಳ ಹಿಂದಿನ ಮಾತು ಕುಳ್ಳನೆಯ, ಕೃಷ್ಣವರ್ಣದ, ಕುದುರೆ ನಡಿಗೆಯ, ಕೈಯಲ್ಲೊಂದು, ಡೈರಿ ಹಿಡಿದುಕೊಂಡ ಮೂವತ್ತೈದರ ಹರೆಯದ ವ್ಯಕ್ತಿಯೊಬ್ಬ ಗುಲ್ಬರ್ಗ ಜಿಲ್ಲೆಯ ಯಾದಗಿರಿಯ ಕೆರೆಯ ಏರಿಯ ಮೇಲೆ ತನ್ನ ಪಾಡಿಗೆ ತಾನು ನಡೆದುಕೊಂಡು ಹೋಗುತ್ತಿದ್ದ. ಇದ್ದಕ್ಕಿದ್ದ ಹಾಗೆ ಆ ವ್ಯಕ್ತಿಯ ಕಿವಿಗಳು ನೆಟ್ಟಗಾದವು. ಕೆರೆಯಲ್ಲಿ ಬಟ್ಟೆ ಒಗೆಯುತ್ತಿದ್ದ ಇಬ್ಬರು ಹೆಣ್ಣು ಮಕ್ಕಳು ತಮ್ಮೊಳಗೇ ಆಡಿಕೊಳ್ಳುತ್ತಿದ್ದ ಪಿಸುಮಾತು ಆ ವ್ಯಕ್ತಿಯನ್ನು ಕಟ್ಟೆಚ್ಚರಗೊಳಿಸಿದ್ದವು. ಪ್ರದೇಶ ನಿರ್ಜನವಾಗಿದ್ದರೂ ಆ ಇಬ್ಬರು ಮಹಿಳೆಯರು ಸುತ್ತಮುತ್ತ ನೋಡುತ್ತಾ ಸನಿಹದಲ್ಲಿ ಯಾರೂ ಇಲ್ಲದಿರುವುದನ್ನು ಖಚಿತ ಪಡಿಸಿಕೊಂಡು ಅಗದಿ ಗಂಭೀರ ಸ್ವರೂಪದ ಸಂಭಾಷಣೆಯಲ್ಲಿ ತೊಡಗಿದ್ದರು. ಅವರೊಳಗಿನ ಮಾತುಗಳು ಬರೀ ಕುತೂಹಲಕಾರಿ ಅಷ್ಟೇ ಇಲ್ಲ ಸ್ಫೋಟಕವೂ ಆಗಿದ್ದವು.

ಅವರಲ್ಲೊಬ್ಬಳು : "ಏನು ಕಾಲ ಬಂತೆ ಯವ್ವ, ಯಾರ್ದೂ ಅಂಜಿಕೇನೆ ಇಲ್ಲಾಂಗ ಆತು ನೋಡು. ಗೌಡರ ಮಾತು ಕೇಳಲಾರದವರ ಗತಿ ಹೀಂಗ ನೋಡು!"

ಇನ್ನೊಬ್ಬಳು : "ಪಾಪ, ಆ ಮನುಷ್ಯ ಏನಾರ ಯಾಕ ಮಾಡಿರ್ಲಿ ಬಿಡು, ಶಿವ! ಶಿವ! ಅವನ ಕಣ್ಣಾs ಕಿತ್ತಬೇಕೇನ ತಾಯೀ!"

ಮತ್ತೊಬ್ಬಳು : "ಕಣ್ಣು ಕಿತ್ತಿಕೇಸಿ ಎರಡು ದಿನ ಆತು ನೋಡು, ಆತನ್ನೆ ಕೂಡೇ ಹಾಕ್ಯಾರೆಂತ, ಹೊರಾಗ ಎಲ್ಲೂ ಬಿಡವಲ್ಲಾಗ್ಯೆರಂತ!"

ಹಳ್ಳಿ ಹೆಂಗಸರ ಈ ಸ್ಫೋಟಕಮಯ ಸಂಭಾಷಣೆಯನ್ನು ಮೈಯೆಲ್ಲ ಕಿವಿಯಾಗಿ ಕೇಳಿಸಿಕೊಳ್ಳುತ್ತಿದ್ದ ಆ ವ್ಯಕ್ತಿ ಯಾದಗಿರಿ ಊರೊಳಗೆ ಹೋಗುವುದನ್ನು ಬಿಟ್ಟು, ಆ ಹೆಂಗಸರು ಬಟ್ಟೆ ತೊಳೆಯುತ್ತಿದ್ದ ಸ್ಥಳದ ಸಮೀಪಕ್ಕೆ ಬಂದ. ಮುಖ

ತೊಳೆದುಕೊಂಡ ನೆಪ ಮಾಡಿ ಆ ಮಹಿಳೆಯರ ಜೊತೆಗೆ ಕುಶಲೋಪರಿ ಸಂಭಾಷಣೆಗೆ ಇಳಿದ. ಅವರಿಬ್ಬರನ್ನು ವಿಶ್ವಾಸಕ್ಕೆ ತೆಗೆದುಕೊಂಡ ಆ ವ್ಯಕ್ತಿ ಬಹಳ ಜಾಣ್ಮೆಯಿಂದ ಅವರು ಮುಂಚೆ ಆಡಿಕೊಳ್ಳುತ್ತಿದ್ದ ಆ ಸ್ಫೋಟಕ ಸಮಾಚಾರದತ್ತ ಮಾತು ಹೊರಳಿಸಿದ. ಅವರಿಬ್ಬರೂ ಅವಾಕ್ಕಾದರು. ಅಪರಿಚಿತನೊಂದಿಗೆ ಒಂದೆರಡು ನಿಮಿಷಗಳ ಮಾತಿನ ಸಲಿಗೆ ಬೆಳೆದಿತ್ತಾದರೂ ಆ ಭಯಾನಕ ವಿಷಯವನ್ನು ಕುರಿತು ಮಾತನಾಡಲು ಅವರು ಹಿಂಜರಿದರು.

ಅದ್ಹೇಗೋ ಆ ವ್ಯಕ್ತಿ ತನ್ನ ಮಾತಿನ ಕೌಶಲದಿಂದ ಅವರಿಬ್ಬರನ್ನು ಮತ್ತಷ್ಟು ವಿಶ್ವಾಸಕ್ಕೆ ತೆಗೆದುಕೊಂಡು ತನ್ನೆಲ್ಲ ಯುಕ್ತಿಯನ್ನುಪಯೋಗಿಸಿ ಅವರಿಗೆ ಗೊತ್ತಿದ್ದ ವಿಷಯುವನ್ನೆಲ್ಲ ಅವರಿಂದ ಬಾಯಿ ಬಿಡಿಸಿದ. ಅದು ವಾಸ್ತವವಾಗಿ ಬರೀ ಕುತೂಹಲ, ಸ್ಫೋಟಕವಷ್ಟೇ ಅಲ್ಲ ಅತಿ ಭಯಂಕರ ವಿಷಯವಾಗಿತ್ತು. ಇಡೀ ಮನುಕುಲವನ್ನೇ ನಡುಗಿಸುವ ದುರಂತ ಅದಾಗಿತ್ತು.

ಯಾದಗಿರಿ ಸಮೀಪದಲ್ಲಿದ್ದ ರಾಮಸಮುದ್ರ ಗ್ರಾಮದಲ್ಲಿ ಕೆಲವು ದುಷ್ಟ, ಊಳಿಗಮಾನ್ಯ ಶಕ್ತಿಗಳ ದಲಿತ ಜನಾಂಗಕ್ಕೆ ಸೇರಿದ ಒಬ್ಬ ವ್ಯಕ್ತಿಯ ಕಣ್ಣುಗಳನ್ನೇ ಕಿತ್ತಿದ್ದರು! ಸರಂಜಾಮಿ ಶಕ್ತಿಗಳಿಗೆ ಸಂಪೂರ್ಣ ಶರಣಾಗಲು ಇಚ್ಛಿಸದ ಆ ವ್ಯಕ್ತಿಗೆ ನೀಡಿದ ಕ್ರೂರ ಶಿಕ್ಷೆ ಅದಾಗಿತ್ತು. ಕಣ್ಣು ಕಿತ್ತಿ ಕೆಲವು ದಿನಗಳೇ ಆಗಿದ್ದರೂ ಆ ಘಟನೆ ರಾಮಸಮುದ್ರದ ಸುತ್ತಮುತ್ತಲಷ್ಟೇ ಗಿರಕಿ ಹೊಡೆಯುತ್ತಿತ್ತು. ಇದೀಗ ಅದು ತಾಲೂಕಾ ಕೇಂದ್ರವಾದ ಯಾದಗಿರಿ ತಲುಪಿತ್ತು. ದೈತ್ಯ ಶಕ್ತಿಗಳು ಮಾನವೀಯತೆಯನ್ನು ಬಲಿಕೊಟ್ಟು ದಲಿತ ದೃಷ್ಟಿಯನ್ನು ಶಾಶ್ವತವಾಗಿ ಕಸಿದುಕೊಂಡಿದ್ದವು. ಕಣ್ಣು ಕಿತ್ತ ನಂತರ ಆತನನ್ನು ದಿಗ್ಬಂಧನದಲ್ಲಿ ಇಡಲಾಗಿತ್ತು. ಅವನ ಕಣ್ಣಿನ ಚಿಕಿತ್ಸೆಗೂ ಅವಕಾಶ ಇರಲಿಲ್ಲ. ಬಳಲಿ, ಬೆಂದು ಸಾಯುವುದೊಂದೇ ಪ್ರಾಯಃ ಅವನಿಗಿದ್ದ ಏಕೈಕ ಪರ್ಯಾಯವಾಗಿತ್ತು. ಗೌಡರ ಮಾತನ್ನು ಕೇಳದವರಿಗೆ ಅದೊಂದು ಜ್ವಲಂತ ಎಚ್ಚರಿಕೆಯ ನಿದರ್ಶನವಾಗಿತ್ತು. ಭಯ-ಭೀತಿಯಲ್ಲಿ ಬಾಳು ನೂಕುವುದು ದಲಿತರಿಗೆ ಅನಿವಾರ್ಯವಾಗಿತ್ತು.

ಆದರೆ ಮರುದಿನ ಒಂದು ಆಶ್ಚರ್ಯ ಕಾದಿತ್ತು. ಕಲಬುರಗಿ ಪ್ರದೇಶದಲ್ಲಿ ಏಕೈಕ ಪ್ರಮುಖ ಮತ್ತು ಪ್ರಭಾವೀ ದಿನ ಪತ್ರಿಕೆಯಾಗಿದ್ದ 'ಸಂಯುಕ್ತ ಕರ್ನಾಟಕ'ದ ಮುಖಪುಟದಲ್ಲಿ ಪ್ರಕಟನಾದ ಆ ಸುದ್ದಿ ಸಾಮಾಜಿಕ, ರಾಜಕೀಯ ಹಾಗೂ ಆಡಳಿತ ವಲಯುಗಳಲ್ಲಿ ಅಲ್ಲೋಲ ಕಲ್ಲೋಲವನ್ನುಂಟು ಮಾಡಿತ್ತು. ಯಾರಿಗೂ ಗೊತ್ತಾಗದಂತೆ, ಅತ್ಯಂತ ಗುಪ್ತವಾಗಿ ಕಾಪಾಡಿಕೊಂಡು ಬಂದಿದ್ದ ಹೀನ ಬುದ್ಧಿಯ

ಪಾಳೆಗಾರಿಕೆಯ ಕುಕೃತ್ಯ ಬೆಳಕಿಗೆ ಬಂದಿತ್ತು. ಅದುವರೆಗೆ ಸುಖನಿದ್ರೆಯಲ್ಲಿದ್ದ ಜಿಲ್ಲಾಡಳಿತ ಮೈಕೊಡವಿಕೊಂಡು ಜಾಗೃತವಾಯಿತು. ೧೯೭೨-೭೩ರ ಸುಮಾರಿನ ಅವಧಿಯಲ್ಲಿ ಪ್ರಕಟವಾದ ಈ ಸುದ್ದಿ ರಾಜ್ಯ ಸರಕಾರದ ಗಮನ ಸೆಳೆದು ಇಡೀ ಕರ್ನಾಟಕದ ಕಣ್ಣು ತೆರೆಯುವಂತೆ ಮಾಡಿತ್ತು.

ಈ ಅಮಾನವೀಯ, ಅತಿಘೋರ ಘಟನೆಯ ಬಗ್ಗೆ ಕಣ್ಣು ತೆರೆಸಿದವರು ವಿ.ಎನ್. ಕಾಗಲಕರ್. ಯಾವುದೋ ವೈಯಕ್ತಿಕ ಕೆಲಸಕ್ಕಾಗಿ ಯಾದಗಿರಿಗೆ ಹೋಗಿದ್ದ ಅವರು ತಮಗೆ ಅಕಸ್ಮಾತ್ತಾಗಿ ಗೊತ್ತಾದ ಘಟನೆಯ ಬಗ್ಗೆ ಪತ್ತೇದಾರಿಕೆ ನಡೆಸಿ, ಹಳ್ಳಿ ಹೆಂಗಸರ ಬಾಯಿ ಬಿಡಿಸಿ ಸಕಲ ವೃತ್ತಾಂತವನ್ನು ಸಂಗ್ರಹಿಸಿದ್ದರು. ತಮ್ಮ ವೈಯಕ್ತಿಕ ಕೆಲಸವನ್ನು ಬದಿಗೊತ್ತಿದ್ದ ಕಾಗಲಕರ್ ಕಲಬುರ್ಗಿಗೆ ಧಾವಿಸಿದವರೇ ಸುದ್ದಿಯನ್ನು ಹುಬ್ಬಳ್ಳಿಗೆ ರವಾನಿಸಿದರು. ತಮ್ಮ ನಾಲ್ಕೂವರೆ ದಶಕದ ಸುದೀರ್ಘ ಪತ್ರಿಕಾಜೀವನದಲ್ಲಿ ಕಾಗಲಕರ್ ಬರೆದ ಸುದ್ದಿಗಳಲ್ಲೆಲ್ಲ ಪ್ರಾಯಃ ದಲಿತನ ಕಣ್ಣು ಕಿತ್ತ ಪ್ರಕರಣ ಕಳಶಪ್ರಾಯವಾಗಿತ್ತು. ಇದು ಎಷ್ಟೊಂದು ಪರಿಣಾಮಕಾರಿಯಾದ ಸಂಚಲನವನ್ನು ಉಂಟು ಮಾಡಿತ್ತೆಂದರೆ ದಿಲ್ಲಿಯ ಕೇಂದ್ರ ಸರಕಾರದ ವರಿಷ್ಠರಿಗೂ ಅದು ತಲುಪಿ ಅವರನ್ನೂ ಜಾಗೃತಗೊಳಿಸಿತ್ತು. ಕಾಂಗ್ರೆಸ್ ಪಕ್ಷದಲ್ಲಿ ಮತ್ತು ಕೇಂದ್ರ ಸರಕಾರದ ವರಿಷ್ಠ ದಲಿತ ನಾಯಕರಾಗಿದ್ದ ಬಾಬು ಜಗಜೀವನರಾಂ ಅವರು ರಾಮಸಮುದ್ರ ಘಟನೆಯಿಂದ ದಿಗ್ಭ್ರಮೆಗೊಂಡು ಕುಲಬುರ್ಗಿಯ ಕಾಂಗ್ರೆಸ್ ನಾಯಕರನ್ನು ಈ ಬಗ್ಗೆ ಎಚ್ಚರಿಸಿ ಅವರೂ ಸೂಕ್ತ ರೀತಿಯಲ್ಲಿ ಕಾರ್ಯೋನ್ಮುಖ -ರಾಗುವಂತೆ ಸೂಚಿಸಿದ್ದರು.

ರಾಜ್ಯ ಹಾಗೂ ರಾಷ್ಟ್ರೀಯ ನೆಲೆಯಲ್ಲಿ ತೀವ್ರ ಸಂಚಲನವನ್ನುಂಟು ಮಾಡಿದ್ದ ಈ ಪುಟ್ಟ ವರದಿ ಕಲಬುರ್ಗಿ ಜಿಲ್ಲೆಯ ದಲಿತರ ಶೋಷಣೆಯ ಪರಾಕಾಷ್ಠೆಯ ಒಂದು ಪ್ರಾತಿನಿಧಿಕ ಸಂಕೇತವಾಗಿತ್ತಷ್ಟೇ. ಆಗಿನ ಸಂದರ್ಭದಲ್ಲಿ ಜಮೀನುದಾರಿಕೆ ಪದ್ಧತಿಯ ಊಳಿಗಮಾನ್ಯ ಶಕ್ತಿಗಳದ್ದೇ ದರಬಾರು. ಅವರು ಹೇಳಿದ್ದೇ ಆಖೈರು ನುಡಿ. ಅದನ್ನು ಪ್ರಶ್ನಿಸುವವರು ಅವರ ಅವಕೃಪೆಯಿಂದ ತಪ್ಪಿಸಿಕೊಳ್ಳುವಂತಿರಲಿಲ್ಲ. ಅದರಲ್ಲೂ ಅಕ್ಷರಗಳ ಪರಿಚಯವೇ ಇಲ್ಲದ ಅಸ್ಪೃಶ್ಯ ದಲಿತ ಜನಾಂಗದವರು ಪಾಳೆಗಾರಿಕೆಯನ್ನು ಮೆರೆಯುವವರಿಗೆ ವಿಧೇಯರಾಗಿ ಇರಲೇಬೇಕಾದದ್ದು ಅಲಿಖಿತ ಶಾಸನವೇ ಆಗಿತ್ತು. ರಾಮಸಮುದ್ರದ ರಾವಣರ ರಾಕ್ಷಸೀ ಕೃತ್ಯವಾಗಲೀ, ಬೀದರ್ ಜಿಲ್ಲೆಯ ಭಾಲ್ಕಿಯಲ್ಲಿ ದಲಿತನೊಬ್ಬನನ್ನು ಜೀವಂತ ಸುಟ್ಟ ಪ್ರಕರಣವಾಗಲೀ ಹೈದ್ರಾಬಾದ ಕರ್ನಾಟಕ ಪ್ರದೇಶದ ಊಳಿಗಮಾನ್ಯ ಶಕ್ತಿಗಳ ಆರ್ಭಟದ ಸ್ಯಾಂಪಲ್ಲುಗಳ ಮೊತ್ತ. ಇಂತಹ ಹೇಯ ಘಟನೆಗಳನ್ನು ವರದಿ ಮಾಡುವವರಿಗೆ ಆಗಿನ ಕಾಲದಲ್ಲಿ

ಎಂಟೆದೆ ಇರಬೇಕಿತ್ತು. ಅಂದಿನ ದಿನಗಳಲ್ಲಿ ಕಾಗಲಕರ್ ಹೆಚ್ಚು ಕಡಿಮೆ ಏಕಾಂಗಿ ಪತ್ರಕರ್ತರೇ ಆಗಿದ್ದರು. ಈಗಿರುವಂತೆ ಆಗ ಪತ್ರಕರ್ತರ ಸಂಘಟನೆಗಳು ಇರಲಿಲ್ಲ. ಸಾಮಾಜಿಕ ಜಾಗೃತಿ ತೀರಾ ಕೆಳಮಟ್ಟದಲ್ಲಿದ್ದ ಅಂದಿನ ದಿನಗಳಲ್ಲಿ ಸಾಮಾಜಿಕ ಸಂಘಟನೆಗಳು ಅನ್ಯಾಯವನ್ನು ಬಯಲಿಗೆಳೆಯುವ ಮತ್ತು ಹಾಗೆ ಬಯಲಿಗೆಳೆಯುವವರ ಪರವಾಗಿ ನಿಲ್ಲುವ ಸಂದರ್ಭವೇ ಇರಲಿಲ್ಲ. ದುಷ್ಟ ಶಕ್ತಿಗಳ ಅಟ್ಟಹಾಸದ ಸನ್ನಿವೇಶದಲ್ಲಿ ಪತ್ರಕರ್ತ ತನ್ನ ಸಾಮಾಜಿಕ ಜವಾಬ್ದಾರಿಯನ್ನು ನಿರ್ವಹಿಸುವುದು ಅತ್ಯಂತ ದುರ್ಭರವಾಗಿತ್ತು. ತಮಗೆ ಆಕಸ್ಮಾತ್ತಾಗಿ ಗೊತ್ತಾದ ದಲಿತನ ದೃಷ್ಟಿ ಕೀಳಿದ ಪ್ರಕರಣವನ್ನು ಕಾಗಲಕರ್ ಉಪೇಕ್ಷಿಸಬಹುದಿತ್ತು. ಅದನ್ನು ಬರೆಯದೆ ಸುರಕ್ಷತೆಯ ಜೀವನದ ಮೊರೆ ಹೋಗಬಹುದಿತ್ತು. ಆದರೆ ಕಾಗಲಕರ್ ಅವರಲ್ಲಿದ್ದ ಸಂವೇದನಾಶೀಲ ಪತ್ರಕರ್ತ ಅನ್ಯಾಯದೊಂದಿಗೆ ಮತ್ತು ತನ್ನ ವೃತ್ತಿಯ ಧ್ಯೇಯೋದ್ದೇಶಗಳೊಂದಿಗೆ ರಾಜಿ ಮಾಡಿಕೊಳ್ಳಲು ಸಿದ್ಧನಿರಲಿಲ್ಲ. ಆ ಕ್ಷಣದಲ್ಲಿ ಆ ಸುದ್ದಿಯನ್ನು ಬರೆಯುವುದು ಮಾತ್ರ ಅವರ ಏಕೈಕ ಉದ್ದೇಶವಾಗಿತ್ತು. ಅದರಿಂದ ತಮಗೆ ಉಂಟಾಗಬಹುದಾದ ವೈಯಕ್ತಿಕ ಅಪಾಯದ ಬಗ್ಗೆ ಅವರು ಯೋಚಿಸಿಯೇ ಇರಲಿಲ್ಲ.

ವಿದ್ಯಾರ್ಥಿ ದೆಸೆಯಲ್ಲಿ ಹೈದ್ರಾಬಾದಿನಲ್ಲಿದ್ದಾಗ ನಿಜಾಂಶಾಹಿಯ ಪುಂಡು ಸೈನ್ಯವಾಗಿದ್ದ ರಜಾಕಾರರ ದೌರ್ಜನ್ಯದ ವಿರುದ್ಧ ಹೋರಾಡಿದ್ದ ಕಾಗಲಕರ್ ಕಲಬುರ್ಗಿ ಜಿಲ್ಲೆಯ ಸಮಾಜ ಕಂಟಕ ಪ್ರಾಯವಾಗಿದ್ದ ಶಕ್ತಿಗಳ ವಿರುದ್ಧ ಲೇಖನಿಯನ್ನು ಹರಿತಗೊಳಿಸುವುದು ಕಷ್ಟದಾಯಕವಾಗಿ ಕಂಡು ಬಂದಿರಲಿಕ್ಕಿಲ್ಲ.

ವರದಿ ಪ್ರಕಟವಾದ ಕೆಲವೇ ದಿನಗಳಲ್ಲಿ ಯಾದಗಿರಿಯಿಂದ ಒಂದು ದಲಿತರ ದಂಡು ಹಲಗೆ, ತಮಟೆಗಳನ್ನು ಬಾರಿಸುತ್ತ ಕಲಬುರ್ಗಿಗೆ ಬಂದು ಕಾಗಲಕಲ್ ಅವರನ್ನು ಭೇಟಿಯಾಗಿ ಅವರು ಮಾಡಿದ್ದ ಪುಣ್ಯ ಕಾರ್ಯಕ್ಕೆ ತನ್ನ ಕೃತಜ್ಞತೆಯನ್ನು ಸಲ್ಲಿಸಿತ್ತು!

ಸಾಮಾಜಿಕ, ಶೈಕ್ಷಣಿಕ ಹಾಗೂ ಆರ್ಥಿಕವಾಗಿ ರಾಜ್ಯದಲ್ಲೇ ಅತ್ಯಂತ ಹಿಂದುಳಿದ ಪ್ರದೇಶ ಎಂದು ಅಧಿಕೃತವಾಗಿ ಒಪ್ಪಿಕೊಳ್ಳಲಾದ ಹೈದ್ರಾಬಾದ ಕರ್ನಾಟಕ ಪ್ರದೇಶದ ಪತ್ರಿಕೋದ್ಯಮದಲ್ಲಿ ಚಿರಸ್ಥಾಯಿಯಾಗಿ ನಿಲ್ಲುವ ಹೆಸರು ವಿ.ಎನ್. ಕಾಗಲಕರ್. ಸಮಷ್ಟಿ ಪ್ರಜ್ಞೆಯನ್ನು ಬಿಡಿದೆಬ್ಬಿಸುವಲ್ಲಿ, ಸಾಮಾಜಿಕ ಜಾಗೃತಿಯನ್ನುಂಟು ಮಾಡುವಲ್ಲಿ ಪತ್ರಿಕೆಗಳು ವಹಿಸುವ ಪಾತ್ರದ ಮಹತ್ವ ಮತ್ತು ಪ್ರಾಮುಖ್ಯತೆಯನ್ನು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಪತ್ರಿಕೆಗಳ ಪಾತ್ರವೆಂದರೆ

ವಾಸ್ತವವಾಗಿ ಪತ್ರಕರ್ತರ ಪಾತ್ರವಲ್ಲದೆ ಬೇರೇನೂ ಅಲ್ಲ. ಅದರಲ್ಲೂ ದೇಶಕ್ಕೆ ಸ್ವಾತಂತ್ರ್ಯ ಪ್ರಾಪ್ತಿಯಾದ ಹೊಸದರಲ್ಲಿ ಅಂದರೆ ೧೯೫೦ರ ದಶಕದ ಪ್ರಾರಂಭದ ದಿನಗಳಲ್ಲಿ ಪತ್ರಿಕೆಗಳು ವಹಿಸುವ ಪಾತ್ರ, ತಾಳುವ ನಿಲುವು, ಭವಿಷ್ಯದ ಬೆಳವಣಿಗೆಗೆ ಪೂರಕ ಆಗಿರುತ್ತದೆ. ಐದು ದಶಕಗಳ ಹಿಂದೆ ಕಲಬುರ್ಗಿಯಂತಹ ಸಾಮಾಜಿಕ-ಶೈಕ್ಷಣಿಕ ಬೆಂಗಾಡಿನಲ್ಲಿ ಜನಸಾಮಾನ್ಯರ ಅದರಲ್ಲೂ ಮುಖ್ಯವಾಗಿ ಬಡವರ, ದಲಿತರ, ದನಿ ಇಲ್ಲದವರ, ಅಸಹಾಯಕರ ನಿಸ್ಸಹಾಯಕರ ಮತ್ತು ಇವರೆಲ್ಲರನ್ನೂ ಪ್ರತಿನಿಧಿಸುವ ಮಹಿಳೆಯರ ಬದುಕು, ಹೇಗಿದ್ದಿರಬಹುದೆಂಬುದನ್ನು ಯಾರಾದರೂ ಊಹಿಸಿಕೊಳ್ಳಬಹುದು. ಮಾನವ ಹಕ್ಕುಗಳಿಗೆ ನೆಲೆ-ಬೆಲೆ ಇಲ್ಲದ ದಿನಗಳಲ್ಲಿ ಪ್ರಬಲ ಶಕ್ತಿಗಳ ಅಟ್ಟಹಾಸವೇ ಕಾನೂನು-ಕಟ್ಟಳೆ ಎಲ್ಲವೂ ಆಗಿತ್ತು. ಬಡವರ, ದೀನ ದಲಿತರ ಮತ್ತು ಮಹಿಳೆಯರ ಸ್ಥಿತಿ-ಗತಿ ತೀರ ಶೋಚನೀಯ, ಚಿಂತಾಜನಕವಾಗಿದ್ದ ದಿನಗಳಲ್ಲಿ ಅವರ ಸಾಕ್ಷರತಾ ಪ್ರಮಾಣ ಎರಡಂಕಿಯ ಗಡಿಯನ್ನು ದಾಟಿರಲಾರದು. ಗುಲ್ಬರ್ಗ ಜಿಲ್ಲೆಯ ಕೆಲವು ಕಡೆ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಮಹಿಳೆಯರ ಸಾಕ್ಷರತಾ ಪ್ರಮಾಣ ಇಂದಿಗೂ ಶೇಕಡಾ ೨೦ರಷ್ಟು ಇಲ್ಲದಿರುವುದು ಗಮನಾರ್ಹ.

ಕನ್ನಡದ ಪರಿಸ್ಥಿತಿಯಂತೂ ಅತ್ಯಂತ ಶೋಚನೀಯವಾಗಿದ್ದ ಕಾಲ ಅದು. ಉರ್ದು ಮತ್ತು ಮರಾಠಿ ಭಾಷೆಗಳ ಪ್ರಾಬಲ್ಯದಿಂದಾಗಿ ಮಾತೃಭಾಷೆ ಕನ್ನಡ ಜರ್ಜರಿತವಾಗಿತ್ತು. ಅಂತೆಯೇ ಕನ್ನಡ ಓದುವವರ ಸಂಖ್ಯೆ ತೀರಾ ವಿರಳ. ಕನ್ನಡ ಮನೆಗಳಲ್ಲಿ ನಾಲ್ಕು ಗೋಡೆಗಳ ನಡುವೆ ಆಡುವ ಭಾಷೆಯಾಗಿ ಉಳಿದಿತ್ತೆ ವಿನಃ ಅದು ಸಂಪರ್ಕ ಭಾಷೆಯಾಗಲೀ, ಆಡಳಿತ ಭಾಷೆಯಾಗಲೀ ಅಥವಾ ಶಿಕ್ಷಣ ಮಾಧ್ಯಮದ ಭಾಷೆಯಾಗಲೀ ಆಗಿರಲಿಲ್ಲ. ಇಂತಹ ದುರ್ಭರ ಸನ್ನಿವೇಶದಲ್ಲಿ ಪತ್ರಿಕೋದ್ಯಮದಂತಹ ಪವಿತ್ರ ಕ್ಷೇತ್ರದಲ್ಲಿ ಧ್ರುವತಾರೆಯಂತೆ ಕಾಣಿಸಿಕೊಂಡರು ಕಾಗಲಕರ್. ಅದು ಕಲಬುರ್ಗಿಯ ಸೌಭಾಗ್ಯವೆಂದೇ ಹೇಳಬೇಕು.

ಬಡತನದ ಬೇಗೆಯಲ್ಲಿ

ಶ್ರೀ ನಾರಾಯಣರಾವ್ ಕಾಗಲಕರ್ ಮತ್ತು ಶ್ರೀಮತಿ ಲಕ್ಷ್ಮೀಬಾಯಿ ದಂಪತಿಗಳಿಗೆ ಜ್ಯೇಷ್ಠ ಪುತ್ರನಾಗಿ ೧೯೨೭ರ ಸೆಪ್ಟೆಂಬರ್ ೨೫ ರಂದು ಈಗಿನ ಗದಗ ಜಿಲ್ಲೆಯ ರೋಣ ತಾಲೂಕಿನ ಗಜೇಂದ್ರಗಡದಲ್ಲಿ ಅತ್ಯಂತ ಬಡತನದ, ಸಾಂಪ್ರದಾಯಕ ಮಾಧ್ವ ಬ್ರಾಹ್ಮಣ ಕುಟುಂಬದಲ್ಲಿ ಜನಿಸಿದ ವೆಂಕಟರಾವ್ ನಾರಾಯಣರಾವ್ ಕಾಗಲಕಲ್ ಎಲ್ಲರ ಪ್ರೀತಿಯ ವೆಂಕಣ್ಣನಾಗಿದ್ದ. ತಂಗಿ

ತಿಲೋತ್ತಮೆ, ತಮ್ಮ ಶಾಮರಾವ್, ಮೂರು ಮಕ್ಕಳ ಚಿಕ್ಕಚೊಕ್ಕ ಕುಟುಂಬವಾಗಿದ್ದರೂ ಕಾಡಿ ತಿನ್ನುವ ಬಡತನ ಸದಾ ಅವರ ಬೆನ್ನ ಹಿಂದೆಯೇ. ಕಿರಿಯ ಸಹೋದರನಾದ ಶಾಮ ಮಾನಸಿಕ ವಿಕಲಾಂಗ. ತಂದೆ ಕಸ್ಟಮ್ ಇಲಾಖೆಯಲ್ಲಿ ಕಾರಕೂನ. ಕುಟುಂಬ ಪೋಷಣೆಯೇ ಒಂದು ಸವಾಲಾಗಿತ್ತು.

ಕಾಗಲಕರ್ ಅವರ ಪೂರ್ವಿಕರು ಈ ಹಿಂದೆ ಯಾವಾಗಲೋ ಗಜೇಂದ್ರ ಗಡಕ್ಕೆ ಬಂದು ನೆಲೆಸಿದವರು. ಆದರೆ ಅವರು ಮೂಲತಃ ಕಾಗಲ್ ಎಂಬ ಊರಿಗೆ ಸೇರಿದವರು. ಕಾಗಲ್ ಎಂಬುದು ಮಹಾರಾಷ್ಟ್ರ ಪ್ರಾಂತ್ಯದ ಕೊಲ್ಲಾಪುರದ ಹತ್ತಿರ ಇರುವ ಒಂದು ಊರು. ಈ ಹಿಂದೆ ಅದು ಒಂದು ಸಂಸ್ಥಾನವಾಗಿತ್ತು. ಆ ಸಂಸ್ಥಾನದಲ್ಲಿ ವೆಂಕಟರಾಯರ ಹಿಂದಿನ ತಲೆಮಾರುಗಳ ಪೈಕಿ ಒಬ್ಬರು, ಸಂಸ್ಕೃತ ಪಂಡಿತರಾಗಿದ್ದರು. ಅವರ ಪಾಂಡಿತ್ಯಕ್ಕೆ ಮೆಚ್ಚಿ ಕಾಗಲ್ ಸಂಸ್ಥಾನದ ಅರಸರು ಕಾಗಲ್‌ನಲ್ಲಿ ಜಮೀನನ್ನು ಇನಾಂ ಆಗಿ ನೀಡಿದ್ದರು. ಕಾಲಾನುಕ್ರಮದಲ್ಲಿ ಯಾವ ಕಾರಣಕ್ಕೋ ಅವರ ಪೂರ್ವಜರು ಗಜೇಂದ್ರಗಡಕ್ಕೆ ಬಂದು ನೆಲೆಯೂರಿದರು.

ಗಜೇಂದ್ರಗಡವೂ ಒಂದು ಸಂಸ್ಥಾನವೇ. ಆ ಸಂಸ್ಥಾನದಲ್ಲಿ ಕಾಗಲಕರ್ ವಂಶದ ಪೂರ್ವಿಕರೊಬ್ಬರು ಮಂತ್ರಿಯಾಗಿದ್ದರು. ತುಳಜಾಪುರದ ಅಂಬಾ ಭವಾನಿಯನ್ನು ಕುಲದೇವತೆಯನ್ನಾಗಿ ಹೊಂದಿದ್ದ ಕಾಗಲಕಲ್ ಕುಟುಂಬ ಅತ್ಯಂತ ಧಾರ್ಮಿಕ ಹಾಗೂ ಆಧ್ಯಾತ್ಮಿಕ ಶ್ರದ್ಧೆಯುಳ್ಳ ಮನೆತನ.

ವೆಂಕಣ್ಣನ ಪ್ರಾಥಮಿಕ ಶಿಕ್ಷಣ ಕೊಪ್ಪಳ ಜಿಲ್ಲೆಯ ಕುಷ್ಟಗಿ ತಾಲೂಕಿನ ಬಾದನಾಳ ಗ್ರಾಮದಲ್ಲಿ ನೆರವೇರಿತು. ಆಡಳಿತದ ಯಾವುದೋ ಒಂದು ಕಾರಣಕ್ಕಾಗಿ ಕಸ್ಟಮ್ಸ್ ಇಲಾಖೆಯಲ್ಲಿ ಕಾರಕೂನನಾಗಿದ್ದ ಅವರ ತಂದೆ ನೌಕರಿಗೂ ಸಂಚಕಾರ ಒದಗಿ ಬಂದಿತ್ತು. ಸಂಕಷ್ಟಗಳ ಸರಮಾಲೆಯ ನಡುವೆಯೇ ವೆಂಕಣ್ಣನ ಪ್ರಾಥಮಿಕ ಶಿಕ್ಷಣ ಅದ್ಹೇಗೋ ನಡೆದು ಹೋಯಿತು. ಕಡುಬಡತನದಿಂದಾಗಿ ಅವರು ಮುಂದಿನ ಶಿಕ್ಷಣವನ್ನು ಪೂರೈಸುವ ಸ್ಥಿತಿಯಲ್ಲಿರಲಿಲ್ಲ. ನಾರಾಯಣರಾಯರ ಕುಟುಂಬ ಮಕ್ಕಳ ಸಮೇತ ಅವರ ಕಿರಿಯ ಸಹೋದರ ಶ್ರೀನಿವಾಸರಾವ್ ಕಾಗಲಕರ್ ಅವರ ಆಶ್ರಯಕ್ಕಾಗಿ ಹೈದ್ರಾಬಾದಿಗೆ ಸ್ಥಳಾಂತರ ಹೊಂದಬೇಕಾಯಿತು.

ಹೈದ್ರಾಬಾದಿನ ನೃಪತುಂಗ ಶಾಲೆಯಲ್ಲಿ ಕನ್ನಡ ಮಾಧ್ಯಮದಲ್ಲಿ ಕಾಗಲಕರ್ ತಮ್ಮ ಹಿರಿಯ ಪ್ರಾಥಮಿಕ ಶಿಕ್ಷಣವನ್ನು ಮುಂದುವರೆಸಿದರು. ಹೈದ್ರಾಬಾದ್ ನಿಜಾಂ ರಾಜ್ಯದ ರಾಜಧಾನಿಯಾಗಿದ್ದರೂ 'ತಹತಾನಿಯಾ' ಅಂದರೆ ಪ್ರಾಥಮಿಕ ಶಿಕ್ಷಣ ಕನ್ನಡ ಮಾಧ್ಯಮದಲ್ಲಿ ನಡೆಸುವುದಕ್ಕೆ ಅವಕಾಶವಿತ್ತು. ನಾಲ್ಕನೆ ತರಗತಿ ವರೆಗಿನ ಪ್ರಾಥಮಿಕ

ಶಿಕ್ಷಣವನ್ನು 'ತಹತಾನಿಯಾ' ಎಂತಲೂ, ಐದರಿಂದ ಏಳನೆ ತರಗತಿವರೆಗೆ ಮಾಧ್ಯಮಿಕ ಶಿಕ್ಷಣವನ್ನು 'ವಸ್ತಾನಿಯಾ' ಎಂತಲೂ ಮತ್ತು ಅನಂತರ ಪ್ರೌಢ ಶಿಕ್ಷಣವನ್ನು 'ಫೌಖಾನಿಯಾ' ಎಂತಲೂ ಆಗ ಕರೆಯಲಾಗುತ್ತಿತ್ತು. ಮ್ಯಾಟ್ರಿಕ್ ಶಿಕ್ಷಣವನ್ನು, ಅಂದರೆ ಹತ್ತನೆ ತರಗತಿ ವ್ಯಾಸಂಗವನ್ನು 'ಆಲಾಸಾನವಿ' ಎಂದು ಕರೆಯಲಾಗುತ್ತಿತ್ತು.

ಪಠ್ಯಕ್ಕಿಂತಲೂ ಪಠ್ಯೇತರ ಚಟುವಟಿಕೆಗಳಲ್ಲಿ ವಿಶೇಷ ಆಸಕ್ತಿ ಹೊಂದಿದ್ದ ಕಾಗಲಕರ್ 'ಫೌಖಾನಿಯ' (ಒಂಭತ್ತನೆ ತರಗತಿ) ವರೆಗೆ ಮಾತ್ರ ಶಿಕ್ಷಣ ಪಡೆಯಲು ಸಾಧ್ಯವಾಯಿತು. ಇನ್ನೇನು 'ಆಲಾಸಾನವಿ' ಪ್ರವೇಶ ಪಡೆದು ಮ್ಯಾಟ್ರಿಕ್ ಶಿಕ್ಷಣ ಪೂರೈಸಬೇಕು ಎನ್ನುತ್ತಿದ್ದಾಗಲೇ ಅವರ ಶಿಕ್ಷಣದ ಗುರಿ ದಿಕ್ಕು-ದೆಸೆ ತಪ್ಪಿತು. ಅತ್ಯಂತ ಬಿರುಸಿನಿಂದ ಆಗ ನಡೆಯುತ್ತಿದ್ದ 'ವಂದೇ ಮಾತರಂ' ಚಳವಳಿ ಅವರನ್ನು ಕೈಬೀಸಿ ಕರೆಯಿತು. ನಾಡಿನ, ದೇಶದ ಹಿತಾಸಕ್ತಿಯ ಎದುರು ಅವರಿಗೆ ವೈಯಕ್ತಿಕ ಹಿತಾಸಕ್ತಿ ಮುಖ್ಯವೆಂದು ಕಾಣಿಸಲೇ ಇಲ್ಲ. ಅಂತೆಯೇ ಅವರು ಮ್ಯಾಟ್ರಿಕ್ ಶಿಕ್ಷಣವನ್ನು ಮೊಟಕುಗೊಳಿಸಿ ಸ್ವಾತಂತ್ರ್ಯ ಚಳವಳಿಗೆ ಧುಮುಕಿದರು.

ಸ್ವಾತಂತ್ರ್ಯದ ಹಂಬಲದಿಂದ ಬಳಲುತ್ತಿದ್ದ ದೇಶದ ಅಂದಿನ ಅವಶ್ಯಕತೆಗೆ ಕಾಗಲಕರ್ ತಮ್ಮ ಕಾಣಿಕೆಯನ್ನು ನೀಡಿದರು. ಅದಕ್ಕಾಗಿ ಅವರು ತಮ್ಮ ಶಿಕ್ಷಣವನ್ನೇ ತ್ಯಾಗ ಮಾಡಿದರು. ಕಾಗಲಕರ್ ಏನಾದರೂ ಮ್ಯಾಟ್ರಿಕ್ ಪಾಸಾಗಿದ್ದಲ್ಲಿ ಒಬ್ಬ ಉನ್ನತ ಅಧಿಕಾರಿಯಾಗಿ ನಿವೃತ್ತರಾಗಬಹುದಿತ್ತು. ಹಾಗಾಗಿದ್ದಲ್ಲಿ ಅವರು ಹತ್ತರಲ್ಲಿ ಹನ್ನೊಂದನೆಯವರಾಗುತ್ತಿದ್ದರು. ಅದೃಷ್ಟವಶಾತ್ ಹಾಗಾಗಲಿಲ್ಲ. ಪ್ರೌಢ ಶಿಕ್ಷಣವನ್ನು ಪೂರೈಸದ ವ್ಯಕ್ತಿಯೊಬ್ಬ ಕನ್ನಡ ಮತ್ತು ಇಂಗ್ಲಿಷ್ ಪತ್ರಿಕೋದ್ಯಮದಲ್ಲಿ ಅನನ್ಯ ಸೇವೆ ಸಲ್ಲಿಸಿ ತಮ್ಮದೇ ಆದ ಛಾಪನ್ನು ಬಿಟ್ಟು ಹೋಗುವಂತಹ ಶ್ರೇಯಸ್ಸಿಗೆ ಪಾತ್ರರಾಗುತ್ತಿರಲಿಲ್ಲ. 'ಓದು ಒಕ್ಕಾಲು ಬುದ್ಧಿ ಮುಕ್ಕಾಲು' ಎನ್ನುವ ಕನ್ನಡ ಗಾದೆ ಮಾತಿನ ಮಹತ್ವವನ್ನು ಅವರು ತಮ್ಮ ಜೀವನದ ಮೂಲ ತತ್ವವನ್ನಾಗಿ ಅಂಗೀಕರಿಸಿ ಅಳವಡಿಸಿಕೊಂಡರು.

ದಿಗ್ಗಜರ ಒಡನಾಟ

ಹೈದ್ರಾಬಾದಿನಲ್ಲಿ ವಿದ್ಯಾರ್ಥಿ ದೆಸೆಯಲ್ಲಿದ್ದಾಗಲೇ ಅವರ ಭವಿಷ್ಯ ಅವರಿಗೇ ಅರಿವಿಲ್ಲದಂತೆ ಕಾಗಲಕರ್ ಅವರನ್ನು ರೂಪಿಸತೊಡಗಿತು. ಕನ್ನಡ ಭಾಷೆ, ಶಿಕ್ಷಣ, ಸಾಹಿತ್ಯ, ಸಂಸ್ಕೃತಿ ಮುಂತಾದುವುಗಳ ಸಾಂಸ್ಕೃತಿಕ ಲೋಕ ಒಂದೆಡೆಯಾದರೆ; ಸ್ವಾತಂತ್ರ್ಯ ಚಳವಳಿ ಮತ್ತು ನಿಜಾಂಶಾಹಿಯ ದಬ್ಬಾಳಿಕೆ ವಿರುದ್ಧ ನಡೆದ ಚಳವಳಿ

ಇನ್ನೊಂದೆಡೆ ಅವರನ್ನು ಪ್ರಭಾವಿಸುತ್ತಲೇ ನಡೆದವು. ಹೆಣ್ಣು ಮಕ್ಕಳಿಗಾಗಿಯೇ ಶಿಕ್ಷಣ ನೀಡುವ ಉದ್ದೇಶದಿಂದ ಮೈದಳೆದ ಶಾರದಾ ಕನ್ಯಾಶಾಲೆ, ತದನಂತರ ಕರ್ನಾಟಕ ಸಾಹಿತ್ಯ ಮಂದಿರದಡಿಯಲ್ಲಿ ಆರಂಭವಾದ ನೃಪತುಂಗ ಪ್ರೌಢಶಾಲೆ ಹೈದ್ರಾಬಾದಿನಲ್ಲಿ ಕನ್ನಡ ವಾತಾವರಣ ಸೃಷ್ಟಿಸಿ ಗಟ್ಟಿಗೊಳಿಸುವಲ್ಲಿ ಪ್ರಮುಖ ಪಾತ್ರವಹಿಸಿವೆ. ಉರ್ದು ಆಡಳಿತ ಭಾಷೆಯಾಗಿದ್ದರೂ ಮತ್ತು ಶಿಕ್ಷಣ ಮಾಧ್ಯಮವಾಗಿದ್ದರೂ ಕನ್ನಡ ಮಾಧ್ಯಮದಲ್ಲಿ ಕಲಿಯುವುದಕ್ಕೆ ನಿರ್ಬಂಧವೇನೂ ಇರಲಿಲ್ಲ. ಆದರೆ ಕನ್ನಡ ಶಾಲೆಗಳೇ ತೀರಾ ಅಪರೂಪ! ನಿಜಾಂ ಪ್ರಭುತ್ವದ ಶಾಲೆಗಳಲ್ಲಿ ಉರ್ದು ಮಾಧ್ಯಮದಲ್ಲೇ ಶಿಕ್ಷಣ. ಕನ್ನಡದ ದುರವಸ್ಥೆ ತಾರಕಕ್ಕೇರಿದ್ದ ದಿನಗಳು ಅವು.

ಆಗಿನ ಕಾಲದ ಅತಿರಥ-ಮಹಾರಥರೆನಿಸಿದ ವಿವಿಧ ಕ್ಷೇತ್ರಗಳ ಗಣ್ಯರ ಒಡನಾಟ, ಪರಿಚಯ, ಸ್ನೇಹ, ಕಾಗಲಕರ್ ಅವರಿಗೆ ಅಯಾಚಿತವಾಗಿ ಒದಗಿ ಬಂದಿತ್ತು. ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿ, ಶಿಕ್ಷಣ ಮತ್ತು ಎಲ್ಲಕ್ಕೂ ಮುಖ್ಯವಾಗಿ ಸ್ವಾತಂತ್ರ್ಯ ಚಳವಳಿಯ ಅತ್ಯಂತ ಪ್ರಮುಖ ತಾಣವಾಗಿತ್ತು. ಹೈದ್ರಾಬಾದ್‌ನಲ್ಲಿ ಮೊದಲು ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಟ, ಸ್ವಾತಂತ್ರ್ಯ ಬಂದ ಮೇಲೂ ಮೇಲೂ ಸ್ವಾತಂತ್ರ್ಯಕ್ಕಾಗಿ ಹೋರಾಟ! ನಿಜಾಂನ ಸುಪರ್ದಿನಲ್ಲಿದ್ದ ಹೈದ್ರಾಬಾದ್ ಸಂಸ್ಥಾನ ಭಾರತದ 'ಒಕ್ಕೂಟದಲ್ಲಿ ವಿಲೀನಗೊಳ್ಳಲು ನಿರಾಕರಿಸಿದ್ದರಿಂದ ಸುಮಾರು ಹದಿಮೂರು ತಿಂಗಳ ಕಾಲ ನಡೆದ ಹೈದ್ರಾಬಾದ್ ವಿಮೋಚನಾ ಚಳವಳಿ ಕಾಗಲಕರ್ ಅವರು ಮೇಲೆ ವಿಶೇಷ ಪರಿಣಾಮ ಬೀರಿದ್ದವು. ನೃಪತುಂಗ ಶಾಲೆಯ ಕನ್ನಡದ ವಾತಾವರಣ, ರಾಷ್ಟ್ರೀಯ ಚಳವಳಿಯ ದಿಗ್ಗಜರಾದ ಸ್ವಾಮಿ ರಮಾನಂದತೀರ್ಥ, ಜಿ.ಎಸ್. ಮೇಲ್ಕೋಟೆ, ಪಿ.ಜಿ. ಬಿಂದು, ಜನಾರ್ಧನರಾವ್ ದೇಸಾಯಿ, ಇಟಗಿ ರಾಘವೇಂದ್ರರಾವ್, ಸಿದ್ದಯ್ಯ ಪುರಾಣಿಕ, ಮಾನ್ವಿ ನರಸಿಂಗರಾವ್, ವಿ.ಎಚ್. ದೇಸಾಯಿ, ಜಯತೀರ್ಥ ರಾಜಪುರೋಹಿತ, ಗುಡುಗುಂಟಿ ರಾಮಾಚಾರ್ಯ ಮೊದಲಾದವರ ಸಂಪರ್ಕದಲ್ಲಿ ರಾಷ್ಟ್ರೀಯ ಮನೋಭಾವನೆ, ಕನ್ನಡದ ಕೈಂಕರ್ಯ ಕಾಗಲಕಲ್ ಅವರಲ್ಲಿ ದೃಢವಾಗಿ ಗಟ್ಟಿಗೊಳ್ಳುತ್ತ ನಡೆದಿದ್ದವು.

ಏತನ್ಮಧ್ಯೆ, ರಾಯಚೂರು ಜಿಲ್ಲೆಯ ಸಿಂಧನೂರು ತಾಲೂಕಿನ ದಿದ್ದಗಿಯವರಾದ ಡಿ.ಕೆ. ಭೀಮಸೇನರಾಯರು ತಮ್ಮ ಪದವಿ ಶಿಕ್ಷಣವನ್ನು ಕನ್ನಡದಲ್ಲಿ ಪೂರೈಸಿದ್ದರು. ಅವರು ತಮ್ಮ ಸ್ನಾತಕೋತ್ತರ ಕನ್ನಡ ಅಧ್ಯಯನ ಮುಂದುವರೆಸಲು ನಿಜಾಂ ಸರಕಾರದಲ್ಲಿ ಅವಕಾಶವೇ ಇರಲಿಲ್ಲ! ಒಸ್ಮಾನಿಯಾ ವಿಶ್ವವಿದ್ಯಾಲಯದಲ್ಲಿ

ಕನ್ನಡ ವಿಭಾಗ ಇರಲಿಲ್ಲ. ಈ ಕಾರಣದಿಂದಾಗಿ ನಿಜಾಂ ಸರಕಾರವೇ ತನ್ನ ವೆಚ್ಚದಲ್ಲಿ ಭೀಮಸೇನ ರಾಯರನ್ನು ಕನ್ನಡ ಸ್ನಾತಕೋತ್ತರ ಶಿಕ್ಷಣಕ್ಕಾಗಿ ಮೈಸೂರು ವಿಶ್ವವಿದ್ಯಾಲಯ, ಮೈಸೂರಿಗೆ ಕಳುಹಿಸಿಕೊಟ್ಟಿತ್ತು. ಭೀಮಸೇನ ರಾಯರು ಮೈಸೂರಿ -ನಲ್ಲಿ ಕನ್ನಡ ಎಂ.ಎ. ಪೂರೈಸಿ ಬಂದ ಮೇಲೆ ಓಸ್ಮಾನಿಯಾ ವಿಶ್ವವಿದ್ಯಾಲಯದಲ್ಲಿ ಕನ್ನಡ ಸ್ನಾತಕೋತ್ತರ ವಿಭಾಗವನ್ನು ಆರಂಭಿಸಲಾಯಿತು. ಕನ್ನಡ ಉನ್ನತ ಶಿಕ್ಷಣದಲ್ಲಿ ಹೈದ್ರಾಬಾದ್ ಪ್ರಾಂತ್ಯದಲ್ಲೇ ಇದೊಂದು ಮಹತ್ವದ ಮೈಲಿಗಲ್ಲಾಗಿತ್ತು.

ಕರ್ನಾಟಕ ಏಕೀಕರಣ ಚಳವಳಿ ಆಲೂರು ವೆಂಕಟರಾಯರು, ಬಿ.ಎಂ. ಶ್ರೀಕಂಠಯ್ಯ ಮುಂತಾದವರಿಂದ ಮುಂಬೈ, ಮೈಸೂರು ಹಾಗೂ ಮದರಾಸು ಪ್ರಾಂತ್ಯಗಳಲ್ಲಿ ಆರಂಭಗೊಂಡಿದ್ದು ಅದರ ಗಾಳಿ ಹೈದ್ರಾಬಾದಿಗೂ ಸೋಕಿತು. ಇವೆಲ್ಲವೂಗಳಿಂದಾಗಿ ಕನ್ನಡಕ್ಕೆ ನಿಜಾಂ ರಾಜಧಾನಿಯಲ್ಲಿ ಒಂದು ಗಟ್ಟಿಯಾದ ನೆಲೆ ದೊರಕಲು ಕಾರಣವಾಯಿತು. ವಿದ್ಯಾರ್ಥಿಯಾಗಿದ್ದ ಕಾಗಲಕರ್ ಅವರಿಗೆ ಕನ್ನಡ ಸಂಸ್ಕೃತಿಯ ಸುಗಂಧದ ಸೋಂಕು ತಗುಲದೆ ಇರಲು ಸಾಧ್ಯವಿರಲಿಲ್ಲ. ಅವರು ಈ ಎಲ್ಲ ಬೆಳವಣಿಗೆಗಳೊಂದಿಗೆ ತಮ್ಮನ್ನು ಪ್ರತ್ಯಕ್ಷವಾಗಿ, ಪರೋಕ್ಷವಾಗಿ ಗುರುತಿಸಿಕೊಳ್ಳಲು ಆರಂಭಿಸಿದರು.

ಸಂಯುಕ್ತ ಕರ್ನಾಟಕದ ಸೋಂಕು!

ಆಗಿನ ದಿನಗಳಲ್ಲಿ ಹೈದ್ರಾಬಾದಿನಲ್ಲಿ ಉರ್ದು ಮತ್ತು ಆಂಗ್ಲ ಪತ್ರಿಕೆಗಳು ಮಾತ್ರ ದೊರೆಯುತ್ತಿದ್ದವು. ಕನ್ನಡ ಪತ್ರಿಕೆಗಳಿಗೆ ಅಲ್ಲಿ ಸ್ಥಾನವೇ ಇರಲಿಲ್ಲ. ಹುಬ್ಬಳ್ಳಿಯಿಂದ ಪ್ರಕಟವಾಗುತ್ತಿದ್ದ 'ಸಂಯುಕ್ತ ಕರ್ನಾಟಕ' ಪತ್ರಿಕೆ ಮಾತ್ರ ಆಗಾಗ ಹೈದ್ರಾಬಾದ್ ಕನ್ನಡಿಗರಿಗೆ ತನ್ನ ದರ್ಶನ ಭಾಗ್ಯ ನೀಡುತ್ತಿತ್ತು. ಪತ್ರಿಕೆ ಚಂದಾದಾರರಿಗೆ ಅಂಚೆಯಲ್ಲಿ ಬರುತ್ತಿದ್ದುದರಿಂದ ಪ್ರಕಟವಾದ ನಾಲ್ಕು ದಿನಗಳ ನಂತರ ಅದು ದೊರೆಯುತ್ತಿತ್ತು! ಆ ಪತ್ರಿಕೆಯನ್ನು ಓದುವದೆಂದರೆ ಕಾಗಲಕರ್ ಅವರಿಗೆ ಅತ್ಯಂತ ಅಪ್ಯಾಯಮಾನವಾದ ಸಂಗತಿ. ಪತ್ರಿಕೆ ಕೈಗೆ ಸಿಕ್ಕರೆ ಸಾಕು ಯಾವುದನ್ನು ಬಿಡದಂತೆ ಓದಿ ಮುಗಿಸುತ್ತಿದ್ದರು. ಇದು ಅವರಲ್ಲಿ ಮನೆ ಮಾಡಿದ್ದ ಓದಿನ ಹಾಗೂ ಜ್ಞಾನದ ದಾಹಕ್ಕೆ ಒಂದು ನಿದರ್ಶನ. ಅವರು ಶಾಲೆಯಲ್ಲಿ ಕಲಿತುದಕ್ಕಿಂತಲೂ 'ಸಂಯುಕ್ತ ಕರ್ನಾಟಕ' ದಿಂದ ಕಲಿತಿದ್ದೇ ಹೆಚ್ಚು! ಅವರು ಬರೀ ಅದನ್ನು ಓದಿ ತೃಪ್ತಿ ಪಟ್ಟುಗೊಳ್ಳುತ್ತಿರಲಿಲ್ಲ. ಪತ್ರಿಕೆಯೊಂದಿಗೆ ತನ್ಮಯತೆಯನ್ನು ಸಾಧಿಸಿಕೊಳ್ಳುತ್ತಿದ್ದರು.

ಹೈದರಾಬಾದಿನ ಬೆಳವಣಿಗೆಗಳಿಗೆ ಸಂಬಂಧಿಸಿದಂತೆ ಸಣ್ಣಪುಟ್ಟ ವರದಿಗಳನ್ನು ಬರೆದು ಅಂಚೆ ಮೂಲಕ 'ಸಂಯುಕ್ತ ಕರ್ನಾಟಕ'ಕ್ಕೆ ರವಾನಿಸಲು

ಆರಂಭಿಸಿದರು. ಈ ಹವ್ಯಾಸವನ್ನು ಅವರು ಸುಮಾರು ೧೯೪೫ ರಿಂದಲೇ ರೂಢಿಸಿಕೊಂಡಿದ್ದರು. ಅವರ ಕೆಲವಾರು ವರದಿಗಳು ಪತ್ರಿಕೆಯಲ್ಲಿ ಪ್ರಕಟವೂ ಆಗುತ್ತಿದ್ದವು! ಕಾಗಲಕರ್ ಅವರಲ್ಲಿ ಅಂತರ್ಗತನಾಗಿದ್ದ ಪತ್ರಕರ್ತ ಸಮಯ, ಅವಕಾಶ ಸಿಕ್ಕಾಗಲೆಲ್ಲ ಜಾಗೃತಗೊಳ್ಳುತ್ತಿದ್ದ. ಪತ್ರಿಕಾ ಬರವಣಿಗೆ ಕ್ಷೇತ್ರದಲ್ಲಿ ಅವರಿಗೆ ವಿದ್ಯಾರ್ಥಿ ದೆಸೆಯಿಂದಲೇ ಆಸಕ್ತಿ ಇದ್ದುದರಿಂದ ಅವರು ಪ್ರಾಯಃ ತಮಗೇ ಅರಿವಿಲ್ಲದಂತೆ ಒಬ್ಬ ಪತ್ರಕರ್ತನಾಗಿ ರೂಪುಗೊಳ್ಳುತ್ತಿದ್ದರು.

ಕರ್ನಾಟಕ ಸಾಹಿತ್ಯ ಮಂದಿರದಿಂದ ಸರಿ ಸುಮಾರು ಅದೇ ಹೊತ್ತಿಗೆ ಕೈಬರಹದ ಪತ್ರಿಕೆಯೊಂದು ಆರಂಭವಾಯಿತು. ಕಾಗಲಕರ್ ಅವರು ಅದರಲ್ಲೂ ಬರೆಯುತ್ತಿದ್ದರು. ಹೈದ್ರಾಬಾದಿನಿಂದ ಆಗ ಹೊರಡುತ್ತಿದ್ದ 'ಪ್ರಜಾ', 'ಸಾಧನಾ' ಮುಂತಾದ ಪತ್ರಿಕೆಗಳಲ್ಲಿ ಸುದ್ದಿಗಳನ್ನು ಬರೆಯುವ ಹವ್ಯಾಸವನ್ನು ಅವರು ರೂಢಿಸಿಕೊಂಡರು. ತಮ್ಮ ಪತ್ರಿಕಾ ವೃತ್ತಿಯ ಭವಿಷ್ಯದ ಮಾರ್ಗವನ್ನು ಕಾಗಲಕರ್ ತಮಗರಿವಿಲ್ಲದಂತೆಯೇ ತಮ್ಮ ವಿದ್ಯಾರ್ಥಿ ಹಾಗೂ ತಾರುಣ್ಯದ ದಿನಗಳಲ್ಲಿ ರೂಪಿಸಿಕೊಂಡಿದ್ದರು. ಅವರೊಬ್ಬ ಸದ್ಗುಣಶೀಲ ಪತ್ರಕರ್ತನಾಗಿ ರೂಪುಗೊಳ್ಳಲು ಅಗತ್ಯವಿರುವ ಭೂಮಿಕೆಯನ್ನು ಹೈದ್ರಾಬಾದ ಅವರಿಗೆ ಒದಗಿಸಿಕೊಟ್ಟಿತ್ತು. ಹೈದ್ರಾಬಾದಿನಲ್ಲಿ ಅವರು ನಡೆಸಿದ ರಂಗತಾಲೀಮು ಪ್ರಾಯಃ ಅವರ ಸುದೀರ್ಘ ಪತ್ರಿಕಾ ಜೀವನದುದ್ದಕ್ಕೂ ಕಾಯ್ದುಕೊಂಡು ಬರಲು ನೆರವಾಯಿತು.

ಕಾಗಲಕರ್ ಅವರದು ಪಾದರಸದಂತಹ ವ್ಯಕ್ತಿತ್ವ. ಕಾಲುಗಳಲ್ಲಿ ಚಕ್ರಗಳನ್ನು ಹೊಂದಿದ್ದವರ ಹಾಗೆ ಅತ್ಯಂತ ಚುರುಕಾಗಿ ನಡೆಯುತ್ತಿದ್ದರು. ಅವರದು ಪಂಚ ಕಲ್ಯಾಣಿ ಕುದುರೆ ನಡಿಗೆಯ ಹಾಗೆ. ನಿರಂತರ ನಡಗೆಯನ್ನು ಅವರು ತಮ್ಮ ಬದುಕಿನುದ್ದಕ್ಕೂ ಪಾಲಿಸಿಕೊಂಡು ಬಂದರು. ಜೀವನದ ಎಲ್ಲ ಬೆಡಗನ್ನು ಅವರು ನಡಿಗೆಯಿಂದಲೇ ಕಂಡವರು. ಅವರು ಕುಶಾಗ್ರಮತಿ. ಅವರ ಕಾಲುಗಳು ಎಷ್ಟು ಚುರುಕಾಗಿದ್ದವೋ ಅವರ ಬುದ್ಧಿ ಅದಕ್ಕಿಂತಲೂ ಚುರುಕು. ಬುದ್ಧಿಯ ಬಲದಿಂದಲೇ ಅವರು ಬಾಳನ್ನು ಬೆಳಗಿದವರು. ಶಕ್ತಿಯಿಂದ ಆಗಲಾರದ್ದನ್ನು ಯುಕ್ತಿಯಿಂದ ಸಾಧಿಸಬಲ್ಲವರಾಗಿದ್ದರು. ಅವರ ಸಮಯಪ್ರಜ್ಞೆ ಮತ್ತು ಕರ್ತೃತ್ವಶಾಲಿ ಗುಣಕ್ಕೆ ಒಂದು ನಿದರ್ಶನ ವಿಶೇಷವಾಗಿ ಉಲ್ಲೇಖನೀಯ.

ತಪ್ಪಿದ ಹುತಾತ್ಮ ಪಟ್ಟ!

ನಿಜಾಂ ಸರಕಾರದಲ್ಲಿ ರಜಾಕಾರರ ಹಾವಳಿಯಿಂದ ಹಿಂದುಗಳು ತತ್ತರಿಸಿ ಹೋಗಿದ್ದರು. ರಜಾಕಾರರು ನಿಜಾಂನ ಖಾಸಗಿ ಪುಂಡು ಸೇನೆಯೇ ಆಗಿತ್ತು.

ನಿಜಾಮರು ಅವರ ಕಪಿಮುಷ್ಟಿಯಲ್ಲಿ ಬಂಧಿತರಾಗಿದ್ದರು. ಅವರಿಗೆ ಹಿಂದುಗಳ ಮೇಲೆ ದ್ವೇಷ ಇಲ್ಲದಿದ್ದರೂ ರಜಾಕಾರರು ತಮ್ಮ ಧಾರ್ಮಿಕ ಮತಾಂಧತೆಯ ಕುಕೃತ್ಯಗಳಿಂದ ನಿಜಾಮರನ್ನು ಹಿಂದು ದ್ವೇಷಿಯನ್ನಾಗಿ ಮಾರ್ಪಡಿಸುವಲ್ಲಿ ಯಶಸ್ವಿಯಾಗಿದ್ದರು, ರಜಾಕಾರರು ಆಡಳಿತದ ಎಲ್ಲ ಕ್ಷೇತ್ರಗಳಲ್ಲಿ ತಮ್ಮ ಪ್ರಭಾವವನ್ನು ಬೆಳೆಸಿಕೊಂಡಿದ್ದರು. ಪೊಲೀಸರ ಮೇಲೂ ಅವರ ಪ್ರಭಾವ ಗಟ್ಟಿಯಾಗಿತ್ತು. ಅನೇಕ ಸಂದರ್ಭಗಳಲ್ಲಿ ಪೊಲೀಸರೂ ರಜಾಕಾರರಂತೆ ವರ್ತಿಸುತ್ತಿದ್ದರು!

ಒಬ್ಬ ಪೊಲೀಸ್ ಪೇದೆ ತನ್ನ ಅತಿರೇಕದ ವರ್ತನೆಯಿಂದ ಹಿಂದುಗಳಲ್ಲಿ ಆತಂಕವನ್ನುಂಟು ಮಾಡಿದ್ದ. ಹಿಂದುಗಳ ಮೇಲೆ ಎಲ್ಲ ರೀತಿಯ ದಬ್ಬಾಳಿಕೆ ನಡೆಸುವುದು ಅವನಿಗೆ ಮಾಮೂಲಿಯಾಗಿತ್ತು. ಅವನು ಒಂದು ರೀತಿಯಲ್ಲಿ ಖಾಕಿ ಸಮವಸ್ತ್ರದಲ್ಲಿನ ರಜಾಕಾರನಂತಿದ್ದ. ಹಿಂದುಗಳನ್ನು ಹಿಂಸಿಸುವುದು, ಹೆಣ್ಣು ಮಕ್ಕಳನ್ನು ಕೆಣಕುವುದು, ಅವರನ್ನು ಕೀಟಲೆ ಮಾಡುವುದನ್ನು ಮಾಡುತ್ತಿದ್ದ. ಆ ಪೊಲೀಸನ ದುಷ್ಟ ಕೃತ್ಯದಿಂದ ಎಲ್ಲರೂ ರೋಸಿ ಹೋಗಿದ್ದರು.

ಅವನಿಗೆ ತಕ್ಕ ಪಾಠ ಕಲಿಸಬೇಕೆಂದು ಕಾಗಲಕರ್ ನೇತೃತ್ವದ ಗೆಳೆಯರ ಗುಂಪು ನಿರ್ಧರಿಸಿತು. ಆ ಗುಂಪಿನಲ್ಲಿದ್ದವರಲ್ಲಿ ಜಯತೀರ್ಥ ರಾಜಪುರೋಹಿತ, ಸಿದ್ಧಯ್ಯ ಪುರಾಣಿಕ, ಆರ್.ಜೆ. ದೇಸಾಯಿ ಅವರೂ ಸೇರಿದ್ದರು. ಅವರೆಲ್ಲರೂ ಸೇರಿ ಒಂದು ಯೋಜನೆಯನ್ನು ರೂಪಿಸಿದರು. ಯೋಜನೆಯ ಪ್ರಕಾರ ಅವರಲ್ಲಿ ಒಬ್ಬರು ಪೊಲೀಸನ ಮೇಲೆ ಬಡಿಗೆಯಿಂದ ಬಲವಾಗಿ ಹೊಡೆದು ಎಲ್ಲರೂ ಅವನಿಗೆ ಸಿಕ್ಕದಂತೆ ಓಡಿ ಹೋಗಬೇಕು.

ಸುಮಾರು ದಿನಗಳ ಕಾಲ ಸೂಕ್ತ ಅವಕಾಶಕ್ಕಾಗಿ ಕಾದರು. ಕೊನೆಗೂ ಒಂದು ದಿನ ಕೂಡಿ ಬಂತು. ಆ ಪೊಲೀಸು ದರ್ಪದಿಂದ ನಡೆಯುತ್ತಿರುವಾಗಲೇ ಕಾಗಲಕರ್ ಕ್ಲಬ್ಬಿನ ಸದಸ್ಯನೊಬ್ಬ ಹಿಂದಿನಿಂದ ತನ್ನೆಲ್ಲ ಶಕ್ತಿಯನ್ನು ಕ್ರೋಢೀಕರಿಸಿ ದೊಣ್ಣೆಯಿಂದ ಬಲವಾಗಿ ಪೊಲೀಸನ ತಲೆಯ ಮೇಲೆ ಹೊಡೆದೇ ಬಿಟ್ಟ! ಅನಿರೀಕ್ಷಿತ ಮತ್ತು ಭಯಂಕರ ಹೊಡೆತಕ್ಕೆ ಪೊಲೀಸ ಪೇದೆ ಕೆಳಗೆ ಕುಸಿದು ಬಿದ್ದ. ಎಷ್ಟೊತ್ತಾದರೂ ಆತ ಮಿಸುಗಾಡಲೇ ಇಲ್ಲ. ಅಲ್ಲೇ ಒಂದು ಕಡೆ ಅವಿತುಕೊಂಡಿದ್ದ ಆಕ್ರಮಣಕಾರರು ಒಬ್ಬರ ಮುಖವನ್ನು ಒಬ್ಬರು ನೋಡಿಕೊಂಡರು. ಯುವಕರ ಮಿಶನ್ ಅವರ ನಿರೀಕ್ಷೆಗೂ ಮೀರಿ ಯಶಸ್ವಿಯಾಗಿತ್ತು. ಪೊಲೀಸ್ ಪೇದೆ ಸತ್ತು ಹೋಗಿದ್ದ!!

ಅವನನ್ನು ಸಾಯಿಸಬೇಕೆಂಬ ಕಿಂಚಿತ್ ಯೋಚನೆಯೂ ಕಾಗಲಕರ್ ಕೂಟಕ್ಕೆ ಇರಲಿಲ್ಲ. ಅವನಿಗೊಂದು ಪೆಟ್ಟು ನೀಡಿ ಪಾಠ ಕಲಿಸುವ ಬಯಕೆ ಮಾತ್ರ

ಅವರದಾಗಿತ್ತು. ಆದರೆ ಅವರ ಯೋಜನೆ ಅನಿರೀಕ್ಷಿತವಾದ ಆದರೆ ಅಪಾಯಕಾರಿಯಾದ ತಿರುವು ಪಡೆದುಕೊಂಡಿತ್ತು!

ಪೊಲೀಸ್ ಪೇದೆ ಕೊಲೆಗೀಡಾಗಿದ್ದಾನೆ! ನಿಜಾಂ ಪೊಲೀಸು ಕರ್ತವ್ಯನಿರತನಾಗಿದ್ದಾಗಲೇ ಕೊಲೆಗೀಡಾಗುವುದೆಂದರೆ ಸಾಮಾನ್ಯ ಮಾತೇನು? ಅದು ಒಂದು ರೀತಿಯಲ್ಲಿ ನಿಜಾಂ ಪ್ರಭುತ್ವದ ಮೇಲೆ ಸಾಂಕೇತಿಕ ದಾಳಿಯೇ ಆಗಿತ್ತು. ಹುಡುಗಾಟಕ್ಕೆಂದು ಹೂಡಿದ್ದ ತಂತ್ರ ಕೊಲೆಯಲ್ಲಿ ಪರ್ಯವಸಾನಗೊಂಡಿದ್ದರಿಂದ ಕಾಗಲಕರ್ ಮತ್ತು ಸ್ನೇಹಿತರು ಸಹಜವಾಗಿಯೇ ವಿಚಲಿತರಾಗಿದ್ದರು.

ಆದರೆ ಕಾಗಲಕರ್ ಧೈರ್ಯಗುಂದಲಿಲ್ಲ. ಅವರು ಒಂದು ಪ್ಲಾನ್ ಹೂಡಿದರು. ಎಲ್ಲರೂ ಒಟ್ಟಾಗಿ ಮಾತನಾಡಿಕೊಂಡರು. ಅಲ್ಲೇ ಸಮೀಪದಲ್ಲಿದ್ದ ಮಸೂತಿಯೊಂದರಿಂದ 'ಪಿಂಜರಿ'ಯನ್ನು (ಶವ ಸಾಗಿಸುವ ಪೆಟ್ಟಿಗೆ) ಹೊತ್ತುಕೊಂಡು ಬಂದರು. ಬಿಳಿ ಬಟ್ಟೆ, ಮತ್ತಿತರ ವಸ್ತುಗಳನ್ನು ಕೊಂಡುತಂದರು. ಪೊಲೀಸನ ಶವವನ್ನು 'ಕಫನ್' ನಿಂದ (ಬಿಳಿ ಬಟ್ಟೆ) ಕಟ್ಟಿ ಶವಪೆಟ್ಟಿಗೆಯಲ್ಲಿಟ್ಟರು. ಸ್ನೇಹಿತರೆಲ್ಲರೂ ತಮ್ಮ ತಲೆ ಮೇಲೆ ಬಟ್ಟೆ ಸುತ್ತಿಕೊಂಡು ಶವ ಪೆಟ್ಟಿಗೆಯನ್ನು ಹೊತ್ತುಕೊಂಡು ಕಬರಸ್ಥಾನದತ್ತ ನಡೆದೇ ಬಿಟ್ಟರು!

ಶವಯಾತ್ರೆ ಮುಸ್ಲಿಂ ಕೇರಿಗಳಲ್ಲಿ ಸಾಗಿ ಬಂದಾಗ ಹತ್ತಾರು ಮುಸಲ್ಮಾನರು ಬಂದು ಸೇರಿದರು. ಸ್ವಯಂ ಪ್ರೇರಣೆಯಿಂದ ಬಂದವರು ಶವಪೆಟ್ಟಿಗೆಗೆ ಹೆಗಲು ಕೊಟ್ಟ ಮುನ್ನಡೆದರು. ಹೆಗಲು ಬದಲಾದ ಸಂದರ್ಭದಲ್ಲೆಲ್ಲ ಒಬ್ಬೊಬ್ಬರಾಗಿ ಹಿಂದೆ ಸರಿಯುತ್ತಿದ್ದರು. ಶವಪೆಟ್ಟಿಗೆಯನ್ನು ಕಬರಸ್ಥಾನದಲ್ಲಿ ಇಳಿಸಿ ಅದರೊಂದಿಗಿದ್ದವರು ಸತ್ತ ವ್ಯಕ್ತಿಯ ಸಂಬಂಧಿಕರಿಗಾಗಿ ಹುಡುಕಾಡತೊಡಗಿದರು. ಸ್ವಲ್ಪ ಹೊತ್ತು ಕಾದರೂ ಯಾರೂ ಬರಲಿಲ್ಲ. ಯಾವೊಬ್ಬನೂ ಮುಂದೆ ಬಾರದಿದ್ದಾಗ ಶವಯಾತ್ರೆಯಲ್ಲಿ ಸ್ವಯಂ ಪ್ರೇರಣೆಯಿಂದ ಬಂದವರು 'ಪಿಂಜರಾ'ವನ್ನು ಬಿಚ್ಚಿ ನೋಡುತ್ತಾರೆ, ಸಮವಸ್ತ್ರಧಾರಿ ಪೊಲೀಸ್!

ಮೊದಲು ಶವ ಹೊತ್ತುಕೊಂಡು ಬಂದ ಮುಸ್ಲಿಂ ಕೇರಿಯನ್ನು ಪ್ರವೇಶಿಸಿದವರಿಗಾಗಿ ತೀವ್ರ ಶೋಧ ನಡೆಯಿತು. ಆ ಕ್ಷಣಕ್ಕೆ ಯಾರೊಬ್ಬರೂ ಸಿಕ್ಕಲಿಲ್ಲ. ಪೊಲೀಸರಿಗೆ ದೂರು ನೀಡಲಾಯಿತು. ಪಂಚನಾಮ, ಶವ ಪರೀಕ್ಷೆ ಇತ್ಯಾದಿ ಎಲ್ಲ ನಡೆದವು. ಗೊತ್ತಿಲ್ಲದ ಆರೋಪಿಗಳ ಮೇಲೆ ಕೊಲೆ ಪ್ರಕರಣವನ್ನು ದಾಖಲು ಮಾಡಿಕೊಳ್ಳಲಾಯಿತು.

ಶವಯಾತ್ರೆಯ ಸಂದರ್ಭದಲ್ಲಿ ಎಲ್ಲವೂ ಕಾಗಲಕರ್ ಯೋಜನೆಯಂತೆಯೇ ನಡೆದಿತ್ತು. ಹೆಗಲು ಬದಲಾಯಿಸುವ ಸಂದರ್ಭ ಬಂದಾಗಲೆಲ್ಲ ಹೆಗಲನ್ನು ಬೇರೆಯವರಿಗೆ ವರ್ಗಾಯಿಸಿ ಒಬ್ಬೊಬ್ಬರೆ, ಮೆಲ್ಲನೆ ಯಾರಿಗೂ ಅನುಮಾನ ಬಾರದಂತೆ ಪಾರಾಗಿ ಬಿಡುವುದು! ಎಲ್ಲ ಸ್ನೇಹಿತರು ಅದನ್ನು ಕರಾರುವಾಕ್ಕಾಗಿ ಪಾಲಿಸಿದರು. ಹೀಗೆ ಒಬ್ಬೊಬ್ಬರಾಗಿ ಅದೃಶ್ಯರಾಗುತ್ತಿದ್ದಂತೆ ಶವಯಾತ್ರೆಯ ಮಾರ್ಗಮಧ್ಯದಲ್ಲಿಯೇ ಕಾಗಲಕರ್ ಕೂಟ ಕರಗಿ ಹೋಗಿತ್ತು!

ಕೊಲೆ ಪ್ರಕರಣದ ತನಿಖೆ ಆರಂಭವಾಯಿತು. ತನಿಖೆಯ ಸಂದರ್ಭದಲ್ಲಿ ಕೆಲವು ಮಹತ್ವದ ಸುಳಿವು ನಿಜಾಂ ಪೊಲೀಸರಿಗೆ ದೊರೆತವು.

ಏತನ್ಮಧ್ಯೆ ರಜಾಕಾರ ಹಾವಳಿ ತಾರಕ್ಕೇರಿತು. ಹೈದ್ರಾಬಾದ ವಿಮೋಚನಾ ಚಳವಳಿಯು ತೀವ್ರಗೊಂಡಿತ್ತು. ಎಲ್ಲೆಲ್ಲೂ ಹಿಂಸೆ, ಅನಾಚಾರ, ದೌರ್ಜನ್ಯ ಸಾಮಾನ್ಯವಾದವು. ಶಾಂತಿ-ಸುವ್ಯವಸ್ಥೆ ಸಂಪೂರ್ಣ ಕುಸಿದು ಬಿತ್ತು.

ಹೈದ್ರಾಬಾದ್ ಪ್ರಾಂತ್ಯವನ್ನು ಭಾರತೀಯ ಒಕ್ಕೂಟಕ್ಕೆ ಸೇರಿಸುವಂತೆ ಕೇಂದ್ರದ ನಾಯಕರು ಮಾಡಿದ ಪ್ರಯತ್ನಗಳೆಲ್ಲ ವಿಫಲವಾದವು. ಕೊನೆಗೆ ಗೃಹ ಮಂತ್ರಿ ಸರದಾರ ವಲ್ಲಭಭಾಯಿ ಪಟೇಲ ಅವರು ಹೈದ್ರಾಬಾದ ರಾಜ್ಯದ ವಿರುದ್ಧ ಸೈನಿಕ ಕಾರ್ಯಾಚರಣೆಗೆ (ಪೊಲೀಸ್ ಕಾರ್ಯಾಚರಣೆ ಎಂತಲೂ ಕರೆಯುತ್ತಾರೆ) ಆದೇಶ ನೀಡಿದರು. ಭಾರತದ ಸೈನಿಕ ಪಡೆಗಳು ಹೈದ್ರಾಬಾದು ಸುತ್ತುವರೆದು ಎಲ್ಲ ಮಹತ್ವದ ಸ್ಥಾನಗಳನ್ನು ತಮ್ಮ ನಿಯಂತ್ರಣಕ್ಕೆ ತೆಗೆದುಕೊಂಡವು. ಗತ್ಯಂತರವಿಲ್ಲದೆ ನಿಜಾಂ ಶರಣಾದ. ಹೈದ್ರಾಬಾದ ಸ್ವಾತಂತ್ರ್ಯದ ಪ್ರಮುಖ ಫಲಾನುಭವಿಗಳೆಂದರೆ ಕೊಲೆ ಪ್ರಕರಣದಲ್ಲಿ ಸಿಕ್ಕಿ ಹಾಕಿಕೊಳ್ಳಬಹುದಾಗಿದ್ದ ಕಾಗಲಕರ್ ಮತ್ತು ಅವರ ಗೆಳೆಯರು. ನಿಜಾಂ ಸರಕಾರದ ಪತನದ ನಂತರ ಕೊಲೆ ಪ್ರಕರಣ ತನ್ನಿಂತಾನೇ ಬಿದ್ದು ಹೋಯಿತು. ಕಾಗಲಕರ್ 'ಶಹೀದ್' ಆಗುವ ಅವಕಾಶವೂ ತಪ್ಪಿ ಹೋಯಿತು! ❐

ಅಧ್ಯಾಯ - ೨

ದಾಸಾನುದಾಸ

ಪತ್ರಕರ್ತರು ಸಾಮಾನ್ಯವಾಗಿ ಪತ್ರಿಕೋದ್ಯಮವನ್ನು ಬಿಟ್ಟು ಅದರಾಚೆ ತಮ್ಮ ಆಸಕ್ತಿಗಳನ್ನು ವಿಸ್ತರಿಸಿಕೊಳ್ಳಲು ಇಚ್ಛಿಸುವದಿಲ್ಲ. ಸೂರ್ಯನಡಿ ಬರುವ ಎಲ್ಲ ವಿಷಯಗಳ ಕುರಿತಾಗಿ ಸ್ವಲ್ಪ ಸ್ವಲ್ಪ ಆಸಕ್ತಿ ವಹಿಸುವುದು ಅವರ ಕಾರ್ಯಕ್ಷೇತ್ರದ ಅಗತ್ಯವಾಗಿದ್ದರೂ ಬಹುತೇಕ ಸಂದರ್ಭಗಳಲ್ಲಿ ಪತ್ರಕರ್ತರು ಆಯಾ ಸಂದರ್ಭಕ್ಕೆ ಸೀಮಿತಗೊಳಿಸಿ ಕೈತೊಳೆದುಕೊಳ್ಳುವುದುಂಟು. ಅವರು ಕಡೆಯ ಪಕ್ಷ ಒಂದೆರೆಡು ವಿಷಯಗಳಲ್ಲಾದರೂ ಪರಿಣಿತಿಯನ್ನು ಸಾಧಿಸಿಕೊಳ್ಳುವುದು ಒಳ್ಳೆಯದು. ಇದರಿಂದ ಪತ್ರಕರ್ತರ ಪ್ರಭಾವಲಯ ಬೆಳೆಯುವುದಷ್ಟೇ ಅಲ್ಲ ಸಮಾಜದಲ್ಲಿ ಅವರಿಗೊಂದು ವಿಶಿಷ್ಟ ಸ್ಥಾನಮಾನ ಪ್ರಾಪ್ತಿಯಾದೀತು.

ಕಾಗಲಕಲ್ ಪತ್ರಿಕೋದ್ಯಮದ ಆಚೆ ತಮ್ಮ ಆಸಕ್ತಿಗಳನ್ನು ವಿಸ್ತರಿಸಿಕೊಂಡಿದ್ದು ಪ್ರಜ್ಞಾ ಪೂರ್ವಕವಾಗಿರಲಿಲ್ಲ. ಅಂತಹ ಆಸಕ್ತಿಗಳು ಅವರಲ್ಲಿ ಅಂತರ್ಗತವಾಗಿದ್ದವು. ಸಾಹಿತ್ಯ, ಸಂಸ್ಕೃತಿ, ಕಲೆ, ಸಂಗೀತ, ಇತಿಹಾಸ, ಪರಂಪರೆ, ಜನಪದ ಇತ್ಯಾದಿ ವಿಷಯಗಳಲ್ಲಿ ಅವರು ಸಮಾನ ಆಸಕ್ತರಾಗಿದ್ದರು. ಅಂತೆಯೇ ಅವರ ಪತ್ರಿಕಾ ಬರವಣಿಗೆ ಸಹಜವಾಗಿಯೇ ವೈವಿಧ್ಯತೆಯಿಂದ ಕೂಡಿತ್ತು. ರಾಜಕಾರಣವನ್ನು ವರದಿ ಮಾಡುವುದೇ ತಮ್ಮ ಮುಖ್ಯ ಧ್ಯೇಯವೆಂದು ಅನೇಕ ಪತ್ರಕರ್ತರು ಭಾವಿಸಿರುತ್ತಾರೆ. ಪತ್ರಿಕಾಗೋಷ್ಠಿಗಳು, ಪತ್ರಿಕಾ ಪ್ರಕಟಣೆಗಳು ಮತ್ತು ಕಾರ್ಯಕ್ರಮಗಳನ್ನು ವರದಿ ಮಾಡುವುದರಲ್ಲೇ ಅವರಿಗೆ ಆಸಕ್ತಿ, ಸಂತೃಪ್ತಿ. ಸ್ವಾತಂತ್ರ್ಯೋತ್ತರದ ಭಾರತೀಯ ಪತ್ರಿಕೋದ್ಯಮ ದಾರಿ ತಪ್ಪಿದ್ದು ಇಲ್ಲಿಯೇ. ರಾಜಕಾರಣಿಗಳನ್ನು ಸರ್ವ ಶ್ರೇಷ್ಠ ಪ್ರಭೃತಿಗಳನ್ನಾಗಿ ಮಾಡಿದ ಶ್ರೇಯಸ್ಸು ಈ ದೇಶದ ಪತ್ರಿಕೋದ್ಯಮಕ್ಕೆ ಸಲ್ಲುತ್ತದೆ. ರಾಜಕಾರಣಿಗಳು, ಅದರಲ್ಲೂ ಅಧಿಕಾರಿದಲ್ಲಿರುವವರು ಉಲಿದದ್ದೇ ಪತ್ರಿಕೆಗಳಿಗೆ ವೇದವಾಕ್ಯ. ಪತ್ರಿಕೆಗಳು ವಾಸ್ತವವಾಗಿ ರಾಜಕೀಯ ಕ್ಷೇತ್ರದ ಮುಖವಾಣಿಗಳಾಗಿಯೇ ಮೈದಳೆದಿವೆ. ರಾಜಕಾರಣ ಬಿಟ್ಟು ನಮ್ಮ ಬಹುತೇಕ ಪತ್ರಕರ್ತರಿಗೆ ಬೇರಾವುದೇ

ವಿಷಯ ಮಹತ್ವದ್ದಾಗಿ ಕಾಣುವುದೇ ಇಲ್ಲ! ಆದರೆ ಕಾಗಲಕಲ್ ಇದಕ್ಕೆ ತೀರಾ ಅಪವಾದವಾಗಿದ್ದರು.

ಸ್ವಾತಂತ್ರ್ಯೋತ್ತರದ ಮೊದಲ ದಶಕದಲ್ಲೇ ಅವರು ಪತ್ರಿಕಾ ವೃತ್ತಿಯನ್ನು ಕೈಕೊಂಡರೂ ಅವರಿಗೆ ರಾಜಕಾರಣವೊಂದೇ ಪ್ರಧಾನವಾಗಿ ಕಾಣದಿದ್ದುದು ಅವರ ಚಿಂತನಾಶೀಲ ಪತ್ರಿಕೋದ್ಯಮಕ್ಕೆ ಒಂದು ಸಾಕ್ಷಿಯಾಗಿದೆ. ಅವರ ಕಾರ್ಯಕ್ಷೇತ್ರ ಕಲಬುರಗಿ ಮತ್ತು ಸುತ್ತಮುತ್ತಲ ಪ್ರದೇಶಕ್ಕೆ ಸೀಮಿತವಾಗಿದ್ದರೂ ಕಲಬುರಗಿಯ ಐತಿಹಾಸಿಕ ಮತ್ತು ಸಾಂಸ್ಕೃತಿಕ ವೈಭವವನ್ನು ವಿಶ್ವಕ್ಕೆ ಪರಿಚಯಿಸಿದ ಶ್ರೇಯಸ್ಸಿಗೆ ಅವರು ಭಾಜನರಾಗಿದ್ದಾರೆ. ಹರಿದಾಸ ಸಾಹಿತ್ಯ ಅವರ ಪ್ರಧಾನ ಆಸಕ್ತಿಗಳಲ್ಲಿ ಒಂದಾಗಿತ್ತು.

ಸಮಯ, ಸಂದರ್ಭ ಮತ್ತು ಅವಕಾಶ ದೊರೆತಾಗಲೆಲ್ಲ ದಾಸಸಾಹಿತ್ಯ ಕುರಿತು ಆಸಕ್ತರು, ತಜ್ಞರೊಡನೆ ಚರ್ಚೆ, ಜಿಜ್ಞಾಸೆಯಲ್ಲಿ ತೊಡಗುವುದು ಅವರಿಗೆ ಆಪ್ಯಾಯಮಾನವಾಗಿತ್ತು. ದಾಸಸಾಹಿತ್ಯ ಅಧ್ಯಯನ ಮತ್ತು ಸಂಶೋಧನೆಯಲ್ಲಿ ಯಾರಾದರೂ ನಿರತವಾಗಿದ್ದಾರೆ ಎಂಬುದು ಗೊತ್ತಾದರೆ ಸಾಕು ಕಾಗಲಕರ್ ಅಂತಹವರನ್ನು ಬಿಡುತ್ತಲೇ ಇರಲಿಲ್ಲ, ಅವರ ದುಂಬಾಲು ಬಿದ್ದು ಅವರು ಕೈಕೊಂಡ ಕಾರ್ಯ ಒಂದು ತಾರ್ಕಿಕ ನೆಲೆ ಕಂಡುಕೊಳ್ಳುವವರೆಗೂ ಅವರಿಗೆ ಸಮಾಧಾನ, ತೃಪ್ತಿ ಇರುತ್ತಿರಲಿಲ್ಲ.

ಹೈದ್ರಾಬಾದ ಕರ್ನಾಟಕ ಪ್ರದೇಶ ಅದರಲ್ಲೂ ಮುಖ್ಯವಾಗಿ ರಾಯಚೂರು ಜಿಲ್ಲೆ ದಾಸಸಾಹಿತ್ಯದ ಕಣಜವೇ ಆಗಿದೆ. ಹರಿದಾಸ ಸಾಹಿತ್ಯವನ್ನು ಸ್ವತಃ ತನ್ಮಯತೆ -ಯಿಂದ ಅಧ್ಯಯನ ಮಾಡುತ್ತಿದ್ದ ಕಾಗಲಕರ್ ಅವರು ದಾಸರ ಪದಗಳನ್ನು, ಕೀರ್ತನೆ -ಗಳನ್ನು ಹಾಡುವುದರಲ್ಲಿ ನಿಷ್ಣಾತರು. ಬರೀ ಹಾಡುವುದಷ್ಟೇ ಅಲ್ಲ ಕಾಲಿಗೆ ಗೆಜ್ಜೆ ಕಟ್ಟಿ ಕೈಯಲ್ಲಿ ತಾಳ ಹಿಡಿದು ದಾಸರ ಪದಗಳಿಗೆ ನೃತ್ಯರೂಪವನ್ನೂ ಕೊಡುತ್ತಿದ್ದರು! ದಾಸ ಸಾಹಿತ್ಯ ಪ್ರಸಾರಕ್ಕೆ ತಮ್ಮಿಂದ ಏನೆಲ್ಲ ಸಾಧ್ಯವೋ ಅದನ್ನು ಬಹು ನಿಷ್ಠೆಯಿಂದ, ಪ್ರೀತಿಯಿಂದ ಮತ್ತು ಕಾಳಜಿಯಿಂದ ಮಾಡಿದವರು ಕಾಗಲಕರ್.

ದಾಸ ಪೀಠದ ಕನಸು

೧೯೮೦ರಲ್ಲಿ ಕಲಬುರಗಿಯಲ್ಲಿ ಗುಲ್ಬರ್ಗ ವಿಶ್ವವಿದ್ಯಾಲಯ ಸ್ಥಾಪನೆಯಾದಾಗ ಹೆಸರಾಂತ ಸಾಹಿತಿ ಮತ್ತು ಆಡಳಿತಗಾರ ಜಯತೀರ್ಥ ರಾಜಪುರೋಹಿತ ಅವರು ವಿಶ್ವವಿದ್ಯಾಲಯದ ಪ್ರಥಮ ಕುಲಸಚಿವರಾಗಿ ನೇಮಕಗೊಂಡಿದ್ದರು. ತಮ್ಮ

ವಿದ್ಯಾರ್ಥಿ ದಿನಗಳಲ್ಲೇ ಹೈದ್ರಾಬಾದಿನಲ್ಲಿ ರಾಜಪುರೋಹಿತರೊಂದಿಗೆ ನಿಕಟ ಸ್ನೇಹ ಹೊಂದಿದ್ದ ಕಾಗಲಕರ್ ಅವರಿಗೆ ಈ ಒಂದು ಅವಕಾಶ ವರದಾನವಾಗಿಯೇ ಬಂದಿತ್ತು. ಹಿರಿಯ ಕವಿ, ಲೇಖಕ ಮತ್ತು ವಿಶ್ವವಿದ್ಯಾಲಯದ ಪ್ರಸಾರಾಂಗದ ಮೊದಲ ನಿರ್ದೇಶಕರಾಗಿದ್ದ ವಸಂತ ಕುಷ್ಟಗಿ ಅವರೊಂದಿಗೆ ಸೇರಿಕೊಂಡು ದಾಸಸಾಹಿತ್ಯ ಅಧ್ಯಯನ, ಸಂಶೋಧನೆ ಮತ್ತು ಪ್ರಸಾರ ಕುರಿತಾಗಿ ವಿಶ್ವವಿದ್ಯಾಲಯ ಕೈಕೊಳ್ಳಬೇಕಾದ ಕಾರ್ಯದ ಮತ್ತು ಈ ನಿಟ್ಟಿನಲ್ಲಿ ನಿಭಾಯಿಸಬೇಕಾದ ಸಾಮಾಜಿಕ ಜವಾಬ್ದಾರಿ ಕುರಿತು ವಿಶ್ವವಿದ್ಯಾಲಯದಲ್ಲಿ ದಾಸ ಸಾಹಿತ್ಯ ಪೀಠ ಸ್ಥಾಪನೆಗೆ ಮೊಟ್ಟಮೊದಲ ಪ್ರಯತ್ನ ಮಾಡಿದವರಲ್ಲಿ ಕಾಗಲಕರ್ ಪ್ರಮುಖರು.

ದಾಸ ಸಾಹಿತ್ಯ ಪೀಠ ಸ್ಥಾಪನೆಯ ಕುರಿತು ಒಂದು ವರದಿಯನ್ನು ಸಿದ್ಧಪಡಿಸಲಾಯಿತು. ಈ ಸಂಬಂಧ ಶೈಕ್ಷಣಿಕ ಪರಿಷತ್ತು ಮತ್ತು ಸೆನೆಟ್‌ಗಳಲ್ಲಿ ವಿಷಯ ಪ್ರಸ್ತಾಪಕ್ಕೆ ಬಂದಾಗಲೆಲ್ಲ ಅವರ ಬಗ್ಗೆ ಜನಸ್ಪಂದಿಸುವ ರೀತಿಯಲ್ಲಿ 'ಹಿಂದು' ಪತ್ರಿಕೆಯಲ್ಲಿ ವರದಿ ಮಾಡುತ್ತಿದ್ದರು. ದಾಸಸಾಹಿತ್ಯ ಅಧ್ಯಯನವನ್ನು ವಿಶ್ವವಿದ್ಯಾಲಯದಂತಹ ಉನ್ನತ ಶಿಕ್ಷಣ ಸಂಸ್ಥೆಯ ಕಾರ್ಯಸೂಚಿಯಲ್ಲಿ ಸೇರುವಂತೆ ಮಾಡಿ ಅದಕ್ಕೆ ಅಕಾಡೆಮಿಕ್ ಮನ್ನಣೆಯನ್ನು ತಂದುಕೊಟ್ಟರು ಕಾಗಲಕರ್.

ನಮ್ಮ ಶೈಕ್ಷಣಿಕ ವ್ಯವಸ್ಥೆಯಲ್ಲಿ ಯಾವ ಪ್ರಸ್ತಾವನೆಯೂ ಕೂಡ ಮೂರ್ತ ಸ್ವರೂಪ ಪಡೆಯುವುದಕ್ಕೆ ತನ್ನದೇ ಆದ ಸಮಯ ಹಿಡಿಯುತ್ತದೆ. ಅದರಲ್ಲೂ ಹತ್ತು ಹಲವು ವ್ಯತಿರಿಕ್ತ ಹಿತಾಸಕ್ತಿಗಳು ಸೇರಿಕೊಂಡರೆ ಪ್ರಸ್ತಾವನೆ ಒಂದು ಹೆಜ್ಜೆ ಮುಂದಕ್ಕೆ ಬಂದು ಎರಡು ಹೆಜ್ಜೆ ಹಿಂದಕ್ಕೆ ಹೋಗುತ್ತಿತ್ತು! ದಾಸಸಾಹಿತ್ಯ ಪೀಠ ಸ್ಥಾಪನೆಯ ವಿಷಯದಲ್ಲೂ ಆದದ್ದೂ ಹೀಗೆಯೇ. ಆದರೆ ಕಾಗಲಕರ್ ಅವರ ಪ್ರಯತ್ನ ಹುಸಿ ಹೋಗಲಿಲ್ಲ. ಅವರು ಊರಿದ ಬೀಜ ಮೊಳಕೆ ಒಡೆಯಲು ಕಾಲು ಶತಮಾನವೇ ಬೇಕಾಯಿತು. ದಾಸಸಾಹಿತ್ಯ ಪೀಠ ಸ್ಥಾಪನೆ ವಿಷಯ ನಿಶ್ಚಿತ ರೂಪ ಪಡೆದದ್ದು ವಿಶ್ವವಿದ್ಯಾಲಯದ ರಜತ ಮಹೋತ್ಸವದ ವರ್ಷವಾದ ೨೦೦೫ರಲ್ಲಿ! ಆ ವರ್ಷದಲ್ಲೇ ದಾಸ ಸಾಹಿತ್ಯ ಅಧ್ಯಯನ ಹಾಗೂ ಸಂಶೋಧನಾ ಪೀಠ ಸ್ಥಾಪನೆಗೆ ವಿಶ್ವವಿದ್ಯಾಲಯ ಕಾರ್ಯ ಸಾಧುವಾದ ಅಧಿಕೃತ ನಿರ್ಣಯ ಕೈಕೊಂಡಿತು. ಕುಲಪತಿ ವಿ.ಬಿ. ಕುಟ್ಟಿನೊ ಅವರು ದಾಸಸಾಹಿತ್ಯ ಪೀಠವನ್ನು ವಿಶ್ವವಿದ್ಯಾಲಯದ ಬೆಳ್ಳಿ ಹಬ್ಬದ ಕೊಡುಗೆ ಎಂದು ವರ್ಣಿಸಿದರು.

ಹಲವು ಮಹನೀಯರ ನಿರಂತರ ಪ್ರಯತ್ನದ ಫಲವಾಗಿ ವರ್ಷ ೨೦೦೬ರ ಏಪ್ರಿಲ್‌ನಲ್ಲಿ ದಾಸಸಾಹಿತ್ಯ ಪೀಠ, ದಾಸಸಾಹಿತ್ಯದ ಆಡೊಂಬುಲವಾದ

ರಾಯಚೂರಿನ ಸ್ನಾತಕೋತ್ತರ ಕೇಂದ್ರದಲ್ಲಿ ವಿದ್ಯುಕ್ತವಾಗಿ ಉದ್ಘಾಟನೆಗೊಂಡಿತು. ಅದನ್ನು ಕಣ್ಣಾರೆ ಕಂಡು ಸಂತೋಷಿಸಿ, ಸಂಭ್ರಮಿಸಲು ಕಾಗಲಕರ್ ಅವರೇ ಇರಲಿಲ್ಲ. ಅವರಾಗಲೇ ಇಹಲೋಕದ ಯಾತ್ರೆಯನ್ನು ಮುಗಿಸಿದ್ದರು. ತೆರೆಯ ಮರೆಯಲ್ಲಿ ದಾಸಸಾಹಿತ್ಯ ಪೀಠ ಸ್ಥಾಪನೆಗೆ ಅವಿರತವಾಗಿ ಶ್ರಮಿಸಿದ್ದ ಕಾಗಲಕರ್ ಅವರು ಕೊನೆಗೂ ತಮ್ಮ ಅನುಪಸ್ಥಿತಿಯಲ್ಲಿ ತಮ್ಮ ಕನಸನ್ನು ನನಸು ಮಾಡಿಕೊಂಡಿದ್ದರು.

ಹರಿದಾಸ ಸಾಹಿತ್ಯ ಪ್ರತಿಪಾದಿಸುವ ಮಾನವೀಯ ಮೌಲ್ಯಗಳಿಗೆ ಕಾಗಲಕರ್ ಮಾರು ಹೋಗಿದ್ದರು. ದಾಸ ಸಾಹಿತ್ಯದ ವಿವಿಧ ಆಯಾಮ, ಸಾಧ್ಯತೆಗಳನ್ನು ಕುರಿತಾಗಿ ಅಧ್ಯಯನ, ಸಂಶೋಧನೆ ನಡೆಸುವಂತೆ ಅವರು ಹಲವು ಆಸಕ್ತರನ್ನು ಪ್ರೇರೇಪಿಸುತ್ತಿದ್ದರು. ದಾಸ ಸಾಹಿತ್ಯದ ಮಾನವೀಯ ಮೌಲ್ಯ ಮತ್ತು ಅದರ ವಿಶ್ವ ಕುಟುಂಬ ಕಲ್ಪನೆ ಮೇಲೆ ಹೆಚ್ಚಿನ ಅಧ್ಯಯನ ಸಂಶೋಧನೆ ಕೈಕೊಳ್ಳಲು ಅವರು ಆಸಕ್ತರ ಮೇಲೆ ನಿರಂತರ ಒತ್ತಡ ಹೇರುತ್ತಿದ್ದರು.

ಸಮಗ್ರ ದಾಸ ಸಾಹಿತ್ಯ ಯೋಜನೆ

ಕರ್ನಾಟಕ ಸರಕಾರ ಸಮಗ್ರ ದಾಸ ಸಾಹಿತ್ಯ ಸಂಪುಟಗಳ ಪ್ರಕಟಣೆಗೆ ಒತ್ತಾಯಿಸಲು ಆಗ ಕಲಬುರಗಿಯಲ್ಲಿ ಚಳವಳಿ ನಡೆದಿತ್ತು. ಪೇಜಾವರ ಮಠದ ಶ್ರೀ ವಿಶ್ವೇಶ್ವರತೀರ್ಥ ಸ್ವಾಮಿಗಳು ಕಲಬುರಗಿಗೆ ಆಗಮಿಸಿದಾಗಲೆಲ್ಲ ಕಾಗಲಕರ್ ಮತ್ತು ವಸಂತ ಕುಷ್ಟಗಿ ಶ್ರೀಗಳವರನ್ನು ಕಂಡು ಚರ್ಚೆ ನಡೆಸುತ್ತಿದ್ದರು. ಅದರ ರೂಪು-ರೇಷೆಗಳ ಕುರಿತಾಗಿ ವಿಸ್ತೃತ ಚಿಂತನೆಯೂ ನಡೆಯುತ್ತಿತ್ತು. ಶರಣ ಚಳವಳಿಯ ನಂತರ ಜನಸಾಮಾನ್ಯರನ್ನು ಅತಿಯಾಗಿ ಪ್ರಭಾವಿಸಿದ್ದೆಂದರೆ ದಾಸ ಚಳವಳಿ ಸಂಸ್ಕೃತ ಭೂಯಿಷ್ಠವಾಗಿದ್ದ ಕನ್ನಡ ಸಾಹಿತ್ಯಕ್ಕೆ ವಚನಕಾರರು ಮತ್ತು ಹರಿದಾಸರು ಕನ್ನಡದ ಮೆರುಗನ್ನು ತಂದುಕೊಟ್ಟರು.

ಜನಸಾಮಾನ್ಯರು ಮಾತನಾಡುವ ತಿಳಿಗನ್ನಡದಲ್ಲಿ ರಚಿಸಲಾದ ಹನ್ನೆರಡನೆಯ ಶತಮಾನದ ಶಿವಶರಣರ ವಚನಗಳು ಮತ್ತು ನಂತರದ ಹರಿದಾಸರ ಕೀರ್ತನೆ, ಪದ, ಸುಳಾದಿ, ಉಗಾಭೋಗ, ಮುಂಡಿಗೆಗಳು ಕನ್ನಡ ಸಾರಸ್ವತ ಲೋಕವನ್ನು ಶ್ರೀಮಂತ ಗೊಳಿಸಿವೆ. ದಾಸಸಾಹಿತ್ಯ ಚಳವಳಿ ಎಷ್ಟೊಂದು ಪ್ರಭಾವಶಾಲಿಯಾಗಿತ್ತೆಂದರೆ ಅದು ಜಾತಿ, ಮತ, ಪಂಥಗಳನ್ನು ಮೀರಿ ಮಾನವ ಅಂತಃಕರಣವನ್ನು ಕಲಕುವ ಶಕ್ತಿ ಪಡೆದುಕೊಂಡಿತ್ತು. ಅಂತೆಯೇ ಮುಸ್ಲಿಂ ಕೋಮಿಗೆ ಸೇರಿದ ಮಹನೀಯರು ಕೂಡ ದಾಸ ದೀಕ್ಷೆ ಪಡೆದು ದಾಸ ಸಾಹಿತ್ಯ ಕೃಷಿಯಲ್ಲಿ ತೊಡಗಿದ ಉದಾಹರಣೆಗಳೂ ಇವೆ. ಇದೆಲ್ಲವನ್ನು ಚೆನ್ನಾಗಿ ಮನಗಂಡಿದ್ದ ಕಾಗಲಕರ್ ಅಧಯ್ಯನ ಮತ್ತು

ಸಂಶೋಧನೆಯಿಂದ ತನ್ನೆಲ್ಲ ಸಾಧ್ಯತೆಗಳನ್ನು ತೆರೆದಿಟ್ಟುಕೊಳ್ಳಬೇಕೆಂದು ಹಂಬಲಿಸಿದ್ದರು.

ಪೇಜಾವರ ಶ್ರೀಗಳೊಂದಿಗೆ ಕಾಗಲಕರ್ ಮತ್ತು ವಸಂತ ಕುಷ್ಟಗಿ ಅವರು ನಡೆಸಿದ ಪ್ರಯತ್ನ ಫಲ ಕೊಡಲಾರಂಭಿಸಿದವು. ಶ್ರೀ ವಿಶ್ವೇಶ್ವರತೀರ್ಥ ಸ್ವಾಮಿಗಳು ಒಂದು ಯೋಜನೆಯನ್ನು ಸಿದ್ಧಪಡಿಸಿ ಬೆಂಗಳೂರಿನ ವಿದ್ಯಾ ಪಾಠದಲ್ಲಿ ಸಭೆಯೊಂದನ್ನು ಕರೆದು ಅದರ ಕುರಿತಾಗಿ ವ್ಯಾಪಕ ಚರ್ಚೆ ನಡೆಸಿದರು. ಸಮಗ್ರ ದಾಸ ಸಾಹಿತ್ಯ ಪ್ರಕಟಿಸಬೇಕೆಂದು ಅವರು ಸರಕಾರದ ಮೇಲೆ ಮೊದಲ ಬಾರಿಗೆ ವಿಧ್ಯುಕ್ತವಾಗಿ ಒತ್ತಡ ತಂದರು.

ಈ ಎಲ್ಲ ಪ್ರಯತ್ನಗಳ ಫಲವಾಗಿ ಕರ್ನಾಟಕ ಸರಕಾರ ಸಮಗ್ರ ದಾಸ ಸಾಹಿತ್ಯವನ್ನು ೩೫ ಸಂಪುಟಗಳಲ್ಲಿ ಈಚೆಗೆ ಪ್ರಕಟಿಸಲು ಸಾಧ್ಯವಾಯಿತು. ಕಾಗಲಕರ್ ಅವರ ಮತ್ತೊಂದು ಕನಸು ನನಸಾಯಿತು. ಆದರೆ ಆ ನನಸನ್ನು ಸವಿಯಲು ಕಾಗಲಕರ್ ಇರಲಿಲ್ಲ. ಸಮಾಜಮುಖಿ ಪತ್ರಕರ್ತರಾಗಿದ್ದ ಅವರು ಎಲ್ಲ ಪ್ರಯತ್ನಗಳು ಅವರ ನಂತರ ಸಮಾಜಕ್ಕಾಗಿಯೇ ಮಾಡಲಾಯಿತೆಂದು ಕಾಣುತ್ತದೆ. ಈ ದೃಷ್ಟಿಯಿಂದ ಕಾಗಲಕರ್ ಅವರೊಬ್ಬ ಮುತ್ಸದ್ದಿ ಪತ್ರಕರ್ತರೇ ಆಗಿದ್ದರು. ನಿಶ್ಚಲವಾಗಿದ್ದ ದಾಸಸಾಹಿತ್ಯ ಚಾಲನೆಗೆ ಕಾಗಲಕರ್ ಒಂದು ಪ್ರಮುಖ ಪ್ರೇರಣಾ ಶಕ್ತಿಯಾಗಿದ್ದರು.

ಕಲಬುರಗಿಯ ಕನ್ನಡ ಸಾಹಿತ್ಯ ಸಂಘ ೧೯೭೯ರಲ್ಲಿ ವಸಂತ ಕುಷ್ಟಗಿ ಅವರ ಸಂಪಾದಕತ್ವದಲ್ಲಿ "ಕನಕದಾಸರ ಗೀತೆಗಳು" ಎಂಬ ಪುಸ್ತಕವನ್ನು ಪ್ರಕಟಿಸಿತು. ಈ ಪುಸ್ತಕದ ಹಿಂದಿನ ಪರಿಶ್ರಮವೆಲ್ಲ ಕಾಗಲಕರ್ ಅವರದೇ ಇದ್ದಿತ್ತು. ಈ ಕುರಿತು ಕುಷ್ಟಗಿ ಅವರು ತಮ್ಮ ಪುಸ್ತಕದ ಉಪಕಾರ ಸ್ಮರಣೆಯಲ್ಲಿ ಹೀಗೆ ಹೇಳಿದ್ದಾರೆ. "ನನ್ನ ಹಿರಿಯ ಮಿತ್ರರೂ, ದಾಸ ಸಾಹಿತ್ಯದ ಆಮೂಲಾಗ್ರ ಅಭ್ಯಾಸವನ್ನು ಮಾಡಿ ದಾಸ ಪ್ರವೃತ್ತಿಯನ್ನು ಬೆಳೆಸಿಕೊಂಡಿರುವವರೂ ಆದ ಶ್ರೀ ವೆಂಕಟರಾಮ್ ಕಾಗಲಕರ್ ಅವರು ಈ ಕಾರ್ಯದಲ್ಲಿ ನನಗೆ ಮರೆಯಲಾರದಷ್ಟು ನೆರವು ನೀಡಿದ್ದಾರೆ. ಸಂಬಂಧ ಪಟ್ಟ ಪ್ರಮಾಣ ಗ್ರಂಥಗಳನ್ನು ಒದಗಿಸುವುದರಿಂದ ಹಿಡಿದು ಅಚ್ಚುಕೂಟಕ್ಕೆ ಅಡ್ಡಾಡಿ 'ಪ್ರೊಫ' ತಿದ್ದಿಕೊಟ್ಟು ಪುಸ್ತಕ ಬಿಡುಗಡೆಯಾಗುವವರೆಗೆ ನನ್ನನ್ನು ಕೈ ಹಿಡಿದು ನಡೆಸಿದ್ದಾರೆ. ಅವರಿಗೆ ಈ ಕಾರ್ಯದ ಶ್ರೇಯಸ್ಸಿನ ಬಹುಪಾಲು ಮೀಸಲು".

ಕಾಗಲಕರ್ ಅವರು ತೆರೆಯಮರೆಯಲ್ಲಿ ಪಟ್ಟ ಅವಿರತ ಪರಿಶ್ರಮದ ಫಲವಾಗಿ "ಕನಕದಾಸರ ಗೀತೆಗಳು" ಒಂದು ಮಹತ್ವದ ಕೃತಿಯಾಗಿ

ಹೊರಹೊಮ್ಮಿತ್ತು. ಕರ್ನಾಟಕ ವಿಶ್ವವಿದ್ಯಾಲಯ ೧೯೭೯-೮೦ ರಿಂದ ಎರಡು ವರುಷಗಳ ವರೆಗೆ ಬಿ.ಎ. ತರಗತಿಯ ದ್ವಿತೀಯ ವರ್ಷದ ಕನ್ನಡ ಪ್ರಧಾನ ವಿಷಯಕ್ಕೆ ಪಠ್ಯ ಪುಸ್ತಕವನ್ನಾಗಿ ಮಾಡಿತು. ಪುಸ್ತಕ ಜನ್ಮ ತಳೆದ ಹೊಸತರಲ್ಲೇ ಅದು ಸಾರ್ಥಕತೆ ಪಡೆದಿತ್ತು.

ದಾಸ ಸಾಹಿತ್ಯ ಅವರ ಜೀವನದ ಧ್ಯೇಯವಾಗಿತ್ತು. ಅವರು ಅದರ ಬಗ್ಗೆ ಒಂದು ರೀತಿಯ ಗೀಳನ್ನೇ ಬೆಳೆಸಿಕೊಂಡಿದ್ದರು. ದಾಸಸಾಹಿತ್ಯದ ವಿಷಯದಲ್ಲಿ ಯಾರಾದರೂ ಒಂದು ಕಾರ್ಯವನ್ನು ಕೈಕೊಂಡು ಅದನ್ನು ಪೂರ್ಣಗೊಳಿಸದೆ ಹೋದರೆ, ಅಸಡ್ಡೆ ಅಲಸ್ಯ ತೋರಿದರೆ ಅವರಿಗೆ ಎಲ್ಲಿಲ್ಲದ ಕೋಪ ಬರುತ್ತಿತ್ತು.

ಗೋಪಾಲದಾಸರನ್ನು ಕುರಿತು ಒಂದು ಸಂಶೋಧನಾ ಪ್ರಬಂಧ ಸಿದ್ಧಪಡಿಸುವಂತೆ ಕಾಗಲಕರ್ ಅವರು ವಸಂತ ಕುಷ್ಟಗಿ ಅವರನ್ನು ಆಗ್ರಹಿಸಿದರು. ಕುಷ್ಟಗಿ ಅವರು 'ಆಗಲಿ' ಎಂದರು. ಆದರೆ ಯಾವುದೋ ಕಾರಣದಿಂದ ಅದನ್ನು ನೆರವೇರಿಸಲು ಕುಷ್ಟಗಿ ಅವರಿಂದ ಆಗಲಿಲ್ಲ. ಕಾಗಲಕರ್, ಕುಷ್ಟಗಿ ಅವರ ಮೇಲೆ ಭಯಂಕರವಾಗಿ ಮುನಿಸಿಕೊಂಡರು. ಅವರಿಗೆ ತಪಃಶಕ್ತಿ ಏನಾದರೂ ಇದ್ದಿದ್ದಲ್ಲಿ ಕುಷ್ಟಗಿ ಅವರಿಗೆ ಶಾಪವನ್ನೇ ಕೊಡುತ್ತಿದ್ದರೇನೋ! ಕುಷ್ಟಗಿ ಅವರ ಜೊತೆಗೆ ಮಾತನಾಡುವುದನ್ನೇ ನಿಲ್ಲಿಸಿದರು! ಅವರ ಕೋಪ ದಿನಗಳೆದಂತೆ ಶಮನವಾಗುವುದರ ಬದಲು ವೃದ್ಧಿಸುತ್ತಲೇ ಹೋಯಿತು. ಎಷ್ಟರ ಮಟ್ಟಿಗೆ ಎಂದರೆ ವಸಂತ ಕುಷ್ಟಗಿ ಅವರ ತಂದೆಯವರು ತೀರಿ ಕೊಂಡಾಗಲೂ ಅವರ ಮನೆಗೆ ಕಾಗಲಕರ್ ಹೋಗಲೆ ಇಲ್ಲ! ಸಾತ್ವಿಕ ಕೋಪವೂ ಎಷ್ಟೊಂದು ಉಗ್ರವಾಗಿರಲು ಸಾಧ್ಯ ಎಂಬುದನ್ನು ಕಾಗಲಕರ್ ತೋರಿಸಿಕೊಟ್ಟರು.

ಹಾವನೂರರ ಸಂಪರ್ಕ

ಕಾಗಲಕರ್ ಅವರಿಗೆ ಖ್ಯಾತ ದಾಸ ಸಾಹಿತ್ಯ ತಜ್ಞ ಡಾ।। ಶ್ರೀನಿವಾಸ ಹಾವನೂರ ಅವರ ಪರಿಚಯವಾಗಿ ಅದು ದಾಸ ಸಾಹಿತ್ಯ ಸಂಗ್ರಹ ಕ್ರಿಯೆಯಲ್ಲಿ ಅತ್ಯಂತ ಪ್ರಮುಖ ಬೆಳವಣಿಗೆಯಾಗಿ ಪರಿಣಿಸಿತು. ಕರ್ನಾಟಕ ಸರಕಾರದ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ಅತ್ಯಂತ ಮಹತ್ವಾಕಾಂಕ್ಷೆ "ಸಮಗ್ರ ದಾಸ ವಾಙ್ಮಯ ಪ್ರಕಟಣಾ ಯೋಜನೆ" ರೂಪಿಸಿತು. ಆ ಯೋಜನೆಗೆ ಹಾವನೂರ ಅವರು ಕಾರ್ಯನಿರ್ವಾಹಕ ಸಂಪಾದಕರಾಗಿ ನಿಯುಕ್ತಿಗೊಂಡರು. ಅವರ ಜೊತೆಗೆ ಪ್ರೊ. ವಸಂತ ಕುಷ್ಟಗಿ ಅವರೂ ಇನ್ನೋರ್ವ ಕಾರ್ಯ ನಿರ್ವಾಹಕ ಸಂಪಾದಕರಾಗಿದ್ದರು. ಕರ್ನಾಟಕ ಸರಕಾರ ಈ ಯೋಜನೆಯನ್ನು ಕೈಗೆತ್ತಿಕೊಳ್ಳುವ

ಮುಂಚಿನಿಂದಲೂ ಕಾಗಲಕರ್ ಅವರು ಹಾವನೂರ ಅವರೊಂದಿಗೆ ಸಂಪರ್ಕ ಹೊಂದಿದ್ದರು. ದಾಸ ಸಾಹಿತ್ಯ ಕುರಿತಾಗಿಯೇ ಅವರಿಬ್ಬರ ಮಧ್ಯೆ ದೀರ್ಘ ಅವಧಿ ವರೆಗೆ ಪತ್ರವ್ಯವಹಾರ ನಡೆದಿತ್ತು. ದಾಸ ಸಾಹಿತ್ಯ ಕುರಿತಾಗಿ ಕಾಗಲಕರ್ ಅವರ ಚಿಕಿತ್ಸಕ ಬುದ್ಧಿ ಹಾವನೂರ ಅವರನ್ನು ಆಕರ್ಷಿಸಿತ್ತು. ಅಂತೆಯೇ ಅವರು ದಾಸ ಸಾಹಿತ್ಯ ಪ್ರಕಟಣಾ ಯೋಜನೆಗೆ ಸಂಬಂಧಿಸಿದಂತೆ ಸಂಪರ್ಕ ಇಟ್ಟುಕೊಂಡಿದ್ದ ಕೆಲವೇ ವ್ಯಕ್ತಿಗಳ ಪೈಕಿ ಕಾಗಲಕರ್ ಅವರೂ ಒಬ್ಬರಾಗಿದ್ದರು.

ದಾಸ ಸಾಹಿತ್ಯ ಸಂಗ್ರಹ ಕಾಗಲಕರ್ ಅವರಿಗೆ ಒಂದು ಆಪ್ಯಾಯಮಾನವಾದ ಹವ್ಯಾಸವೇ ಆಗಿತ್ತು. ತಮ್ಮ ಜ್ಞಾನದ ಪರಿಧಿಯಲ್ಲಿ ಅವರು ಕೂಡ ಈ ವಿಷಯದಲ್ಲಿ ಒಂದು ರೀತಿಯ ಹವ್ಯಾಸಿ ಸಂಶೋಧನೆಯನ್ನು ಕೈಕೊಂಡಿದ್ದರು. ಪತ್ರಕರ್ತರಲ್ಲಿ ಅಗತ್ಯವಾಗಿ ಇರಬೇಕಾದ ಸಂಶೋಧನಾ ಬುದ್ಧಿ ಕಾಗಲಕರ್ ಅವರಲ್ಲಿ ಸಾಕಷ್ಟಿತ್ತು. ಅಂತೆಯೇ ಅದು ದಾಸ ಸಾಹಿತ್ಯ ಸಂಗ್ರಹ, ಅಧ್ಯಯನ, ಸಂಶೋಧನೆ, ವಿಶ್ಲೇಷಣೆ ಇತ್ಯಾದಿಗಳಲ್ಲೆದರ ಉಪಯೋಗಕ್ಕೆ ಬಂದಿತ್ತು.

ಸಮಗ್ರ ದಾಸ ಸಾಹಿತ್ಯ ಪ್ರಕಟಣಾ ಯೋಜನೆ ಸಂದರ್ಭದಲ್ಲಿ ಕಾಗಲಕರ್ ಅವರು ಶ್ರೀನಿವಾಸ ಹಾವನೂರ ಅವರಿಗೆ ನೀಡಿದ ನೆರವು, ಸಹಕಾರ ಅತಿ ಮುಖ್ಯವಾದದ್ದು ಅನೇಕ ಸಂದರ್ಭಗಳಲ್ಲಿ ಹಾವನೂರ ಅವರು ಕಾಗಲಕರ್ ಅವರನ್ನು ಪ್ರಶಂಸಿಸಿದ್ದಾರೆ.

ದಿನಾಂಕ ೨-೭-೧೯೯೬ ರಂದು ಡಾ|| ಹಾವನೂರ ಅವರು ಕಾಗಲಕರ್ ಅವರಿಗೆ ಬರೆದ ಪತ್ರ ಹೀಗಿದೆ.

ಪ್ರಿಯ ಶ್ರೀ ಕಾಗಲಕಾರರೇ,

ನಿಮ್ಮ ಪತ್ರ ಸಂತೋಷವನ್ನು ಕೊಟ್ಟಿತು. ಮುಖ್ಯತಃ ದಾಸರ ಹಾಡುಗಳ ಹಳೆಯ ಮುದ್ರಣಗಳು ನಿಮ್ಮಲ್ಲಿದ್ದುದು ಅನುಕೂಲಕರ -ವಾದದ್ದು. ಅವುಗಳ ಜೆರಾಕ್ಸ್ ಪ್ರತಿಗಳನ್ನು ನಾವು ಇಲ್ಲಿ ಇಡೋಣ. ಗುಬಲರ್ಗಕ್ಕೆ ಮುಖ್ಯತಃ ಇಂತಹ ಕೆಲಸಕ್ಕಾಗಿಯೇ ನಾನು ಬರಬೇಕು ಎನಿಸುತ್ತದೆ. ಹೇಗೂ ಅಲ್ಲಿ ಪ್ರೊ. ಕುಪ್ಪಗಿ ಇದ್ದಾರೆ. ಅವರೂ ನನ್ನ ಹಾಗೆ ಕಾರ್ಯನಿರ್ವಾಹಕ ಸಂಪಾದಕರೇ. ನಿಮ್ಮಲ್ಲಿ ಇದ್ದಂತೆ ಗುಲ್ಬರ್ಗದಲ್ಲಿ ಇನ್ನಾರ ಮನೆಗಳಲ್ಲಿ ಹಾಡಿನ ಪುಸ್ತಕಗಳು (ವಿಶೇಷತಃ ಹಸ್ತ ಪ್ರತಿಯನ್ನು) ಇದ್ದರೆ ವಿಚಾರಿಸಿ ಇಟ್ಟಿರಿ. ನೀವೆಂದಂತೆ ಕೆಲವು ಹಾಡುಗಳು ಮುದ್ರಿತವಾಗಿವೆ. ಇನ್ನೂ ಅನೇಕವು ಹಾಗೆಯೇ ಉಳಿಯುತ್ತವೆ.

ಈ ಮಧ್ಯೆ ಬಿಡುವು ಮಾಡಿಕೊಂಡು ನಿಮ್ಮಲ್ಲಿರುವ ಪುಸ್ತಕಗಳ ಶೀರ್ಷಿಕೆ, ದಾಸರು, ಸಂಪಾದಕರು, ಪ್ರಕಾಶಕ ಮತ್ತು ಮುದ್ರಿತ ವರ್ಷ - ಇವುಗಳ ಸಹಿತ ಪಟ್ಟಿ ಮಾಡಿಕಳಿಸಲು ಸಾಧ್ಯವೇ? ಪ್ಲೀಸ್.

ನಿಮ್ಮವ
ಶ್ರೀನಿವಾಸ ಹಾವನೂರ

ಉ.ಪಾ. : 'ಹಿಂದು'ದಲ್ಲಿ ನೀವು ಪ್ರಕಟಿಸಿದ್ದನ್ನು ನೋಡಿದೆ. ಒಳ್ಳೆಯದಾಯಿತು.

ಕಾಗಲಕರ್ ಅವರ ವೈಯಕ್ತಿಕ ಪುಸ್ತಕ ಭಂಡಾರದಲ್ಲಿ ದಾಸ ಸಾಹಿತ್ಯಕ್ಕೆ ಸಂಬಂಧಿಸಿದ ಹಲವು ಅಪರೂಪದ ಮಹತ್ವದ ಪುಸ್ತಕ, ಸಂಗ್ರಹ, ದಾಖಲೆ, ಮಾಹಿತಿ ಇತ್ಯಾದಿ ಇದ್ದವೆಂಬುದು ಹಾವನೂರ ಅವರ ಈ ಪತ್ರದಿಂದ ವೇದ್ಯವಾಗುತ್ತದೆ. ಹಾವನೂರ ಅವರು ದಾಸ ಸಾಹಿತ್ಯ ಪ್ರಾಜೆಕ್ಟಿಗೆ ನೇರವಾಗಿ ಸಂಬಂಧಿಸಿದ್ದರಿಂದ ಅವರೊಂದಿಗೆ ದೀರ್ಘಕಾಲೀನ ಸಂಪರ್ಕ ಹೊಂದುವುದು ಕಾಗಲಕರ್ ಅವರ ಜಾಯಮಾನಕ್ಕೆ ಪೂರಕವೇ ಆಗಿತ್ತು. ದಾಸ ಸಾಹಿತ್ಯದ ಬಗ್ಗೆ ಯಾರೇ ಆಸಕ್ತಿ ತೋರಿದರೂ ಕಾಗಲಕರ್ ಅವರನ್ನು ಬಿಡುವವರೇ ಅಲ್ಲ. ಅವರ ಬೆನ್ನು ಬಿದ್ದು ಅವರಿಂದ ಯಾವುದಾದರೂ ಮಹತ್ವದ ಕಾರ್ಯ ಆಗುವವರೆಗೆ ಕಾಗಲಕರ್ ತೃಪ್ತಿಯೇ ಇರುತ್ತಿರಲಿಲ್ಲ.

ಶ್ರೀನಿವಾಸ ಹಾವನೂರ ಆಗಲಿ, ಮತ್ತಾರೇ ದಾಸ ಸಾಹಿತ್ಯ ಸಂಪನ್ಮೂಲ ವ್ಯಕ್ತಿ ಸಂಪರ್ಕಕ್ಕೆ ಬಂದರೆ ಕಾಗಲಕರ್ ಆ ಅವಕಾಶವನ್ನು ಬಹಳ ನಿಯತ್ತಿನಿಂದ ತಮ್ಮ ಪತ್ರಿಕಾ ಬರವಣಿಗೆಗೆ ಉಪಯೋಗಿಸಿಕೊಳ್ಳುತ್ತಿದ್ದರು. ಪ್ರಾಯಃ ಯಾವುದೋ ಒಂದು ಹಂತದಲ್ಲಿ ದಾಸ ಸಾಹಿತ್ಯ ಸಂಗ್ರಹ ಮತ್ತು ಪ್ರಚಾರ ಕಾಗಲಕರ್ ಅವರ ಒಂದು ಪ್ರಮುಖ ಪ್ರವೃತ್ತಿ ಆಗಿತ್ತೆಂದು ಕಾಣುತ್ತದೆ.

ದಿನಾಂಕ ೯.೭.೧೯೯೬ ರಂದು ಹಾವನೂರ ಅವರು ಕಾಗಲಕರ್ ಅವರಿಗೆ ಬರೆದ ಪತ್ರ ಈ ರೀತಿ ಇದೆ.

ಪ್ರಿಯ ಶ್ರೀ ಕಾಗಲಕರರೇ,

ನಿಮ್ಮ ಪತ್ರ ಇಲ್ಲಿಗೆ ಬಂದ ದಿನವೇ ನಾನು ಧಾಕೆ ಹೋಗಿದ್ದೆ. (ಧಾ - ಎಂದರೆ ಧಾರವಾಡ ಇರಬಹುದೆ? - ಲೇಖಕ). ಇವತ್ತು ಬಂದೆ, ಆದ್ದರಿಂದ ಉತ್ತರ ತಡವಾಯಿತು. ನಿಮ್ಮ ಪತ್ರದ ವಿಷಯ ಸಂಭ್ರಮವನ್ನುಂಟು ಮಾಡಿತು. ದಾಸ ವಾಙ್ಮಯ ಲಭ್ಯತೆಯ ಬಗ್ಗೆ

ವಿಚಾರಿಸಿದಾಗ ಹೆಚ್ಚಿನವರು 'ಅಲ್ಲಿ ಕೊಳ್ಳಿರಿ; ಇಲ್ಲಿ ಹೋಗಿರಿ' ಎಂದು ತೇಲು ಮೇಲಿನ ರೀತಿಯಲ್ಲಿ ಹೇಳುವವರಾಗಿದ್ದಾರೆ. ನಾವುಗಳು ವಿಚಾರಿಸದಿದ್ದರೂ ನೀವಾಗಿ ಮುಂದೆ ಬಂದಿದ್ದೀರಿ.

ಪ್ರೊ. ವಸಂತ ಕುಷ್ಟಗಿ ಅವರ ಮೂಲಕ ತುಸು ಮಾಹಿತಿ ಪಡೆದು 'ಹಿಂದು'ನಲ್ಲಿ ಪ್ರಕಟಿಸಿದ್ದನ್ನು ಆ ದಿನವೇ ಗಮನಿಸಿದ್ದೆ. ಹೇಗೂ ಕುಷ್ಟಗಿಯವರು ಅಲ್ಲೇ ಇದ್ದಾರೆ. ಅವರು ನನ್ನಂತೆಯು ಕಾರ್ಯನಿರ್ವಾಹಕ ಸಂಪಾದಕರು. ನಿಮ್ಮಲ್ಲಿರುವ ಸಾಮಗ್ರಿಯನ್ನು ಅವರ ಕಣ್ಣಿಗೂ ಹಾಕಿರಿ. ಪ್ರಕೃತ, ನಿಮ್ಮ ಬಿಡುವಿನ ವೇಳೆಯಲ್ಲಿ ನಿಮ್ಮಲ್ಲಿರುವ ಪುಸ್ತಕಗಳ ಬಗ್ಗೆ ಪುಸ್ತಕದ ಲೇಖಕರು / ದಾಸರು ಸಂಪಾದಕರು, ಪುಸ್ತಕ ಶೀರ್ಷಿಕೆ, ಪ್ರಕಾಶನ ವಿವರ ಹಾಗೂ ಪ್ರಕಟಿತ ವರ್ಷ ಇವಿಷ್ಟನ್ನು ಪಟ್ಟಿ ಮಾಡಿ ಕಳಿಸುವಿರಾ? ನೀವೇನೋ ಪತ್ರದಲ್ಲಿ ಕೆಲವನ್ನು ಕಾಣಿಸಿದ್ದೀರಿ. ಆದರೆ ಈ ವಿವರಗಳನ್ನು ಕಂಪ್ಯೂಟರಿನಲ್ಲಿ ಶೇಖರಿಸಿಬೇಕಾಗಿದೆ. ದಯಮಾಡಿ ಒದಗಿಸಿರಿ.

ಶ್ರೀದ ವಿಠ್ಠಲ ಹಾಗೂ ಐಜ ವ್ಯಾಸ ವಿಠ್ಠಲರ ಹಾಡುಗಳು ನಿಮ್ಮಲ್ಲಿರುವುದು ತಿಳಿಯಿತು. ಆ ಒಬ್ಬೊಬ್ಬರ ಹಾಡುಗಳು ನಿಮ್ಮ ಸಂಗ್ರಹದಲ್ಲಿ ಎಷ್ಟೆಷ್ಟು ಇವೆ? ಅದರಂತೆ ಮೋಹನದಾಸರವು ಸುಬೋಧದಲ್ಲಿ ಎಷ್ಟು ಇವೆ ತಿಳಿಸಿರಿ. ನನಗೆ ತಿಳಿದು ಬಂದ ಪ್ರಕಾರ ಅವರ ಹಾಡುಗಳು ಹೆಚ್ಚಿಗೆ ದೊರೆತಿಲ್ಲವೆಂದೇ ಪ್ರತೀತಿ ಇದೆ. ಆದ ಕಾರಣ ಈ ವಿವರವನ್ನು (ಸಂಖ್ಯೆ ಮಾತ್ರ) ತಿಳಿಸಿರಿ.

ನಮ್ಮ ಯೋಜನೆಯಲ್ಲಿ ಯಾವ ಯಾವ ದಾಸರ ಪ್ರಸಕ್ತಿ ಇದೆ ಎಂಬುದರ ಪಟ್ಟಿಯನ್ನು ಇದರ ಜೊತೆಗೆ ಇರಿಸಿದ್ದೇನೆ. ಮೊದಲಿನ, ಪ್ರಾಣೇಶ ದಾಸರ ವರೆಗಿನ ನಿಶ್ಚಿತ ವಿವರಗಳು ಇದ್ದೇ ಇವೆ. ಆನಂತರದವರ ಹಾಡುಗಳನ್ನು ಹುಡುಕಬೇಕಾಗಿದೆ. ಈ ಕುರಿತು ಯಾವ ಸಣ್ಣ-ದೊಡ್ಡ ಮಾಹಿತಿ ದೊರೆತರೂ ನಮೂದಿಸಿ ಇಟ್ಟುಕೊಳ್ಳಿರಿ.

ಅಂದ ಹಾಗೆ ಗುಲ್ಬರ್ಗಕ್ಕೆ ಒಮ್ಮೆ ಬರುವ ವಿಚಾರ ಇದೆ. ಆವಾಗ ಭೇಟಿಯಾಗೇ ಆಗುತ್ತೇನೆ.

ನಿಮ್ಮವ,
ಶ್ರೀನಿವಾಸ ಹಾವನೂರ

ದಾಸ ಸಾಹಿತ್ಯ ಯೋಜನೆಯಲ್ಲಿ ಕಾಗಲಕರ್ ಅವರ ಪಾತ್ರ ಎಷ್ಟೊಂದು ಉಪಯುಕ್ತಕಾರಿಯಾಗಿತ್ತೆಂಬುದನ್ನು ಈ ಪತ್ರದಿಂದ ವೇದ್ಯವಾಗುತ್ತದೆ. ಕಾಗಲಕರ್ ಅವರು ಸ್ವಯಂ ಪ್ರೇರಣೆಯಿಂದಲೇ ತಮ್ಮಲ್ಲಿದ್ದ ಎಲ್ಲ ಮಾಹಿತಿ, ದಾಖಲೆಗಳನ್ನು

ಅಧ್ಯಯನಶೀಲರಿಗೆ, ಸಂಶೋಧಕರಿಗೆ ಒದಗಿಸುವ ಸ್ವಭಾವದವರಾಗಿದ್ದರು. ಅದು ದಾಸ ಸಾಹಿತ್ಯದ ವ್ಯವಸ್ಥಿತ ಅಧ್ಯಯನ, ಸಂಶೋಧನೆಗೆ ನೆರವಾಗಲೆಂಬುದೇ ಅವರ ಆಶಯ, ಉದ್ದೇಶ.

ದಿನಗಳೆದಂತೆ ಕಾಗಲಕರ್ ಮತ್ತು ಹಾವನೂರ ಅವರ ಮಧ್ಯೆ ಅನ್ಯೋನ್ಯತೆ ಹೆಚ್ಚುತ್ತ ಹೋಯಿತು. ಸಮಗ್ರ ದಾಸ ಸಾಹಿತ್ಯ ಪ್ರಕಟನ ಕಾರ್ಯ ಮುಂದೆ ಸಾಗಿದಂತೆಲ್ಲ ಕಾಗಲಕರ್ ಅವರ ತೆರೆಮರೆಯ ಪಾತ್ರ ವೃದ್ಧಿಸುತ್ತಲೇ ಹೋಗುತ್ತದೆ. ಈ ಮಹತ್ವಾಕಾಂಕ್ಷಿ ಯೋಜನೆಯಲ್ಲಿ ಅವರೊಬ್ಬ ಉಪಯುಕ್ತ ಸಂಪನ್ಮೂಲ ವ್ಯಕ್ತಿ ಆಗಿದ್ದರೆಂಬುದರಲ್ಲಿ ಯಾವುದೇ ಸಂಶಯವಿಲ್ಲ. ಇದು ಹಾವನೂರ ಅವರ ಪತ್ರಗಳಲ್ಲೇ ಸಾಕಷ್ಟು ಪ್ರತಿಫಲಿತವಾಗಿದೆ. ದಾಸ ಸಾಹಿತ್ಯ ಸೇವೆ ಪ್ರಾಯಃ ಕಾಗಲಕರ್ ಅವರ ಜೀವನದ ಒಂದು ಮುಖ್ಯ ಉದ್ದೇಶವೇ ಆಗಿತ್ತು. ಅದಕ್ಕಾಗಿಯೇ ತಮ್ಮನ್ನು ತಾವು ಪ್ರೀತಿ-ಭಕ್ತಿಯಿಂದ ಅದರಲ್ಲಿ ತೊಡಗಿಸಿಕೊಂಡಿದ್ದರು.

ಶ್ರೀನಿವಾಸ ಹಾವನೂರ ಅವರು ದಿನಾಂಕ ೧೩-೫-೧೯೯೭ ರಂದು ಕಾಗಲಕರ್ ಅವರಿಗೆ ಬರೆದ ಈ ಕೆಳಗಿನ ಪತ್ರ ದಾಸ ಸಾಹಿತ್ಯ ಯೋಜನೆಯಲ್ಲಿ ಕಾಗಲಕರ್ ಅವರು ತಮ್ಮ ರೀತಿಯಲ್ಲೇ ನೀಡಿದ ಕೊಡುಗೆಯನ್ನು ಅರಹುತ್ತದೆ.

ಪ್ರಿಯ ಶ್ರೀ ಕಾಗಲಕರರೇ,

ನಿಮ್ಮ ಪತ್ರ, ಈ ಹಿಂದೆ ನೀವು ಕಳಿಸಿದ ಜೆರಾಕ್ಸ್ ಪತ್ರಿ ಬಂದಾಗ ಅದನ್ನು ACK ಮಾಡಿದ ಹಾಗೆ ನೆನಪು. ಮಾಡಬೇಕು ಎಂದು ಕೊಂಡವ ಮಾಡಿರಲಿಕ್ಕೂ ಇಲ್ಲ. ಪತ್ರ ವ್ಯವಹಾರದಲ್ಲಿ ನಾನು ಸಾಕಷ್ಟು ನಿಯಮವಂತ ಎಂಬ ಖ್ಯಾತಿ ಇದೆ. ಬಹುಮಟ್ಟಿಗೆ ನಿಜವೂ ಹೌದು. ಕೆಲವೇಳೆ ತಪ್ಪುತ್ತವೆ, ಇರಲಿ.

ದಾಸ ವಾಙ್ಮಯ ಪ್ರಕಟನೆಯ ಕೆಲಸ ಸುಸೂತ್ರ, ಆದರೆ ಅತ್ಯಂತ ನಿಧಾನವಾಗಿ ಸಾಗಿ ಬಂದಿದೆ. ೩೦ ಸಂಪುಟಗಳಿಗೆ ಸಂಪಾದಕರನ್ನು ಗೊತ್ತು ಮಾಡಿದೆ. ಹಾಗೆ ಇವರು ೩೫-೩೬ ಜನರಲ್ಲಿ ಅನನುಭವಿಕರೇ ಜಾಸ್ತಿ. ಹೀಗಾಗಿ ಅವರ ಕೆಲಸದ ಮೇಲ್ವಿಚಾರಣೆ, ತಿದ್ದುವ ಕೆಲಸಗಳ ಹೊಣೆ ನಾವು ಕಾರ್ಯನಿರ್ವಹಕ ಸಂಪಾದಕರುಗಳ ಮೇಲೆ ಇದೆ. ಮುಖ್ಯ ಎಂದರೆ ಎಲ್ಲ ಸಂಪುಟಗಳಲ್ಲಿ Uniformity ಕಾಯ್ದುಕೊಳ್ಳಬೇಕಾಗಿದೆ.

ನೀವು ನನಗೆ ಕೊಟ್ಟಿದ್ದ ಪುಸ್ತಕಗಳೆಲ್ಲ ಸುರಕ್ಷಿತವಾಗಿವೆ. ಆದರೆ ನಿಮ್ಮ ಉಪಾಸನೆಗೆ ಅಡ್ಡಿಯಾಗಬಾರದು! ಅದಕ್ಕಾಗಿಯೇ ಕೆಳಗಿನ

*ಪುಸ್ತಕಗಳನ್ನು**
ನಿಮಗೆ ಕಳಿಸಬೇಕೆಂದು ತೆಗೆದಿರಿಸಿದ್ದೇನೆ. ಯಾವುವು ಬೇಕು? ಯಾವುವು ಬೇಡ ಎಂಬುದನ್ನು ತಿಳಿಸಿರಿ. ಕಳಿಸುವೆ.

ನೀವು ಇನ್ನೂ ಹಲವಾರು ದಾಸರ ಹಾಡುಗಳನ್ನು ಸಂಗ್ರಹಿಸಿರುವುದು ತಿಳಿದು ಸಂತೋಷವಾಯಿತು. ಅವುಗಳಲ್ಲಿ ನನಗೆ ತುರ್ತಾಗಿ ಶ್ರೀದ ವಿಠ್ಠಲರ ಹಾಡುಗಳಷ್ಟೇ ಬೇಕು. ಅವುಗಳ ಜೆರಾಕ್ಸ್ ಪ್ರತಿ ಕಳಿಸಿದರೆ ತುಂಬಾ ಉಪಕಾರವಾಗುವುದು. ಉಳಿದವುಗಳ ಬಗ್ಗೆ ವಿನಂತಿ :

ಅಂಕಿತ
ಹಾಡಿನ ಮೊದಲ ಚರಣ
Source *(ಅರ್ಥಾತ್ ನೀವೇ 'ಕಾಗಲಕರ್' ಎಂದು ಬರೆಯುವುದು)*

ಈ ಕ್ರಮದಲ್ಲಿ ಪಟ್ಟಿಕೆಗಳನ್ನು ಸಿದ್ಧಪಡಿಸುವಿರಾ? ಆದ ಆದ ಹಾಗೆ ಸಾದಾ ಅಂಚೆಯಿಂದ ಕಳಿಸಿರಿ. ಪಟ್ಟಿಕೆಯ ಸೈಜಿನ ಮಾದರಿ ಕಳಿಸಿರುವೆ.

ನಿಮ್ಮ ಮಗನ ಕೆಲಸ ಸರಿಯಾಗಿ ನಡೆದಿದೆ ಎಂದು ನಂಬುವೆ. ಮುಗಿಸಲೆ? ಉತ್ತರ ತಡವಾದುದಕ್ಕೆ ಮತ್ತೊಮ್ಮೆ ಕ್ಷಮೆ ಕೇಳುವೆ.

ವಂದನೆಯೊಡನೆ
ಶ್ರೀನಿವಾಸ ಹಾವನೂರ

ದಾಸ ಸಾಹಿತ್ಯಕ್ಕೆ ಸಂಬಂಧಿಸಿದಂತೆ ತಮ್ಮ ಬಳಿ ಇದ್ದ ಮತ್ತು ಇತರರ ಕಡೆಯಿಂದ ಸಂಪಾದಿಸಿರಬಹುದಾದ ಸಾಕಷ್ಟು ಸಾಮಗ್ರಿಯನ್ನು ಕಾಗಲಕರ್ ಅವರು ಯಾವುದೇ ಏಚು-ಪೇಚಿಲ್ಲದೆ ಡಾ।। ಹಾವನೂರ ಅವರಿಗೆ ಒದಗಿಸಿದ್ದರು. ಹಾವನೂರ ಅವರಾದರೂ ಅತ್ಯಂತ ನಿಸ್ಪೃಹತೆಯಿಂದ ಅವೆಲ್ಲವನ್ನೂ ಸ್ವೀಕರಿಸಿ ಈ

---

* *- ವೆಂಕಟೇಶ ಮಹಾತ್ಮ್ಯ - ಗೊರಾಬಾಳ ಕೃತ*
- ತಾರತಮ್ಯಯುಕ್ತ ಭಜನ ಮಾಲಾ, ವಿಜಾಪುರ ಪ್ರಕಟಣೆ
- ಶ್ರೀಗುರುರಾಘವೇಂದ್ರರಿಗೆ ಸಂಬಂಧಿಸಿದ ಮೂರು ಕೃತಿಗಳು
- ಮಣಿಪುರದ ಮಣಿಮಾಲೆಯು (ನಿಮ್ಮದೇ ಪುಸ್ತಕ)
- ಧಾರವಾಡದ ಬೆಟಗೇರಿ ಕೃಷ್ಣಶರ್ಮರು ಸಂಪಾದಿಸಿದ ೬, ಪುರಂದರದಾಸ ಸಂಪುಟಗಳಲ್ಲಿ ೪, ೫, ೬ ಈ ಸಂಪುಟಗಳು.

ಕಾರ್ಯದಲ್ಲಿ ಕಾಗಲಕರ್ ಅವರನ್ನು ಇನ್ನಷ್ಟು ತನ್ಮಯರಾಗುವಂತೆ ಪ್ರೇರೇಪಿಸಿದ್ದರೆ ಆಶ್ಚರ್ಯವೇನಿಲ್ಲ.

ದಿನಾಂಕ ೧೯-೭-೧೯೯೭ ರಂದು ಡಾ॥ ಹಾವನೂರ ಅವರು ಕಾಗಲಕರ್ ಅವರಿಗೆ ಬರೆದ ಅಂಚೆ ಕಾರ್ಡಿನ ಸಂಕ್ಷಿಪ್ತ ಪತ್ರ ಈ ರೀತಿ ಇವೆ.

ಪ್ರಿಯ ಶ್ರೀ ಕಾಗಲಕರರೇ,

೧೦-೧೫ ದಿನಗಳ ಹಿಂದೆ ಕೆಲ ದಾಸ ಪುಸ್ತಕಗಳನ್ನು ಕಳಿಸಿದ್ದೆ. ಮುಟ್ಟಲಿಲ್ಲವೆ? (ಸಾದಾ ಅಂಚೆಯಿಂದ) ಪ್ರಕೃತ ರಿಜಿಸ್ಟರ್ಡ್ ಅಂಚೆಯಿಂದ "ಹರಿದಾಸರ ಜನಪ್ರಿಯ ಹಾಡುಗಳು" ಕಳಿಸಿರುವೆ. ನಿಮ್ಮ ದಿನನಿತ್ಯದ ಭಜನೆಗೆ ಉಪಯೋಗ ಇದ್ದೀತು.

ಸದ್ಯ ನನಗೆ ತುರ್ತಾಗಿ ಈ ಕೆಳಗಿನ ದಾಸವರ್ಯರ ಹಾಡುಗಳು ಬೇಕಾಗಿವೆ. ಶ್ರೀದ ವಿಠ್ಠಲ, ಇಂದಿರೇಶ (ಬೆಟ್ಟದ ಹುಚ್ಚಾಚಾರ್ಯ), ದೀಪದ ಅಣ್ಣಯ್ಯ ಮತ್ತು ಜಯೇಶ ವಿಠ್ಠಲ (ಮೈಸೂರು ಅಟ್ಟಾರೆ ಅವರು).

ಇವರುಗಳ ಹಾಡುಗಳಿದ್ದರೆ ಜೆರಾಕ್ಸ್, ಕೈ ಬರಹದ ಪ್ರತಿ, ಮುದ್ರಿತ ಪುಸ್ತಕ ಇವಾವ ಸ್ವರೂಪದಲ್ಲಿದ್ದರೂ ಕಳಿಸುವ ಕೃಪೆ ಮಾಡುವಿರ?

ನಿಮ್ಮವ
ಶ್ರೀನಿವಾಸ ಹಾವನೂರ

ಇದಕ್ಕೆ ಪ್ರತಿಯಾಗಿ ಕಾಗಲಕರ್ ಅವರು ಶ್ರೀದ ವಿಠ್ಠಲರು ರಚಿಸಿದ ೨೧ ಹಾಡುಗಳನ್ನು ವಿವಿಧ ಮೂಲಗಳಿಂದ ಸಂಗ್ರಹಿಸಿ ಹಾವನೂರ ಅವರಿಗೆ ಕಳಿಸಿಕೊಟ್ಟಿದ್ದರು.

ದಿನಾಂಕ ೨೮-೭-೧೯೯೭ ಹಾವನೂರ ಅವರು ಕಾರ್ಡಿನಲ್ಲಿ ಬರೆದ ಈ ಕೆಳಗಿನ ಪತ್ರ ಕಾಗಲಕರ್ ಅವರ ಮನೋಧರ್ಮವನ್ನು ಪ್ರಶಂಸಿಸುವ ಒಂದು ಸ್ಯಾಂಪಲ್ ಆಗಿದೆ. ಈ ಪತ್ರವನ್ನು ಹಾವನೂರ ಅವರು ಉಡುಪಿಯಿಂದ ಬರೆದದ್ದು.

ಪ್ರಿಯ ಕಾಗಲಕರರೇ,

ನಿಮ್ಮ ಪತ್ರ, ಅದರ ಜೊತೆಗೆ ಬಂದ ಶ್ರೀದ ವಿಠ್ಠಲರ ಹಾಡುಗಳ ಪ್ರತಿ ಮೊನ್ನೆ ತಲುಪಿದವು. ತುಂಬಾ ಸಂತೋಷವಾಯಿತು. 'ಅದು ಕಳಿಸುತ್ತೇನೆ, ಇದು ಬೇಕಿದ್ದರೆ ಕಳಿಸುತ್ತೇನೆ' ಎನ್ನುವ ನಿಮ್ಮ

ಮನೋಧರ್ಮ ತೀರಾ ಅಪರೂಪವಾಗಿ ಕಂಡು ಬರುವಂತಹದು. ನೀವು ಪತ್ರದಲ್ಲಿ ಕಾಣಿಸಿರುವ ಹಾಡುಗಳ / ದಾಸರ note *ಮಾಡಿ ಕೊಂಡಿದ್ದೇನೆ. ಬೇಕಾದಾಗ ಕಳಿಸುವೆ. ಪ್ರಕೃತ ಹಿಂದಿನ ಪತ್ರದಲ್ಲಿ ತಿಳಿಸಿದ ದಾಸರುಗಳ ಪ್ರಕಟಣೆಗೆ ಹಸ್ತಪ್ರತಿ ಸಿದ್ಧಮಾಡಬೇಕಾಗಿ-ರುವುದರಿಂದ ಅವು ವಿಶೇಷತಃ ಇಂದಿರೇಶ (ಬೆಟ್ಟದ ಹುಚ್ಚಾಚಾರ್ಯ), ಶ್ರೀನಿಧಿ ವಿಠ್ಠಲ, ತಂದೆ ವರದ ವಿಠ್ಠಲ ಮತ್ತು ತಂದೆ ವರದ ಗೋಪಾಲ ವಿಠ್ಠಲ ಇವರುಗಳ ಹಾಡುಗಳು ನಿಮ್ಮ ಸಂಗ್ರಹದಲ್ಲಿದ್ದರೆ ಮರು ಟಪಾಲಿಗೆ ಕಳಿಸುವಿರ? ನಾನು ಶ್ರೀವಾದಿರಾಜರ ಸ್ತುತಿ ಪದ ಇತರ ದಾಸರ ಹಾಡುಗಳನ್ನು ಸಂಗ್ರಹಿಸಿದ್ದು ಇದುವರೆಗೆ ೧೪೫ ಹಾಡುಗಳು ದೊರೆತಿವೆ. ಸುಮಾರು ೫೦ ವರ್ಷಗಳ ಹಿಂದೆ ಉತ್ತರ ಕರ್ನಾಟಕದಲ್ಲಿ 'ಶ್ರೀವಾದಿರಾಜ ಗುರುಭಜನ ಮಾಲಾ' ಎಂಬೊಂದು ಸಂಗ್ರಹ ಪ್ರಕಟವಾಗಿದೆ. ಚಿಕ್ಕದು. ಅದು ಎಲ್ಲಿಯೂ ಸಿಗಲೊಲ್ಲದು. ಅಕಸ್ಮಾತ್ ಕಣ್ಣಿಗೆ ಬಿದ್ದರೆ ನೋಡಿರಿ.*

ಈ ಮಧ್ಯೇ ನಿಮಗೆ 'ಹರಿದಾಸರ ಜನಪ್ರಿಯ ಹಾಡುಗಳು' ಮತ್ತು ನೀವು ಕೇಳಿದ ನಿಮ್ಮ ಎರಡು ಪುಸ್ತಕಗಳನ್ನು ಕಳಿಸಿರುವೆ. ಮುಟ್ಟಿದ ಬಗ್ಗೆ ಒಂದು ಸಾಲು ಬರೆಯಿರಿ. ಈ ಹಿಂದೆ ನೀವು Mico Layout *ವಿಳಾಸಕ್ಕೆ ಕಳಿಸಿದ್ದು* 'Returned to Sender' *ಆಗಿದೆ. ಸದರಿನಲ್ಲಿ ನನ್ನ ಹೊಸ ವಿಳಾಸ* Stamp *ಗಮನಿಸದೆ ವಾಪಾಸಾಗಿದೆ.*

ನಿಮ್ಮ ವ

ಶ್ರೀನಿವಾಸ ಹಾವನೂರ

ದಿನಾಂಕ ೨೭.೧೨.೧೯೯೭ ರಂದು ಹಾವನೂರ ಅವರು ಬರೆದ ಈ ಕೆಳಗಿನ ಪತ್ರದಲ್ಲಿ ಕಾಗಲಕರ್ ಅವರ ಸಹಾಯ ತತ್ಪರತೆಯನ್ನು ಅತ್ಯಂತ ಕೃತಜ್ಞತೆಯಿಂದ ಸ್ಮರಿಸಲಾಗಿದೆ.

ಪ್ರಿಯ ಕಾಗಲಕರರೇ,

ನೀವು ಕಳುಹಿಸಿದ ಗುರು ಶ್ರೀಶ ವಿಠ್ಠಲರ ಹಾಡುಗಳ ಸಂಕಲನ ತಲುಪಿದೆ. ಅದು ಹಸ್ತಪ್ರತಿ ಇರಬೇಕೆಂದು ತಿಳಿದಿದ್ದೆ. ಅದರಂತೆ ವ್ಯಾಸ ವಿಠ್ಠಲ, ಶ್ರೀದ ವಿಠ್ಠಲ, ಜನಾರ್ದನ ಕೃತಿಗಳನ್ನು ಬರೆದು ಕಳಿಸುವೆ ಎಂದಿದ್ದೀರಿ. ಇದು ಹಸ್ತಪ್ರತಿ ಇರಬೇಕು. ಮುದ್ರಿತ ಯಾವುದೇ ಸಂಕಲನವಿದ್ದರೂ ಬೇಕಾಗುವುದು. ಯಾಕೆಂದರೆ ಸಮಸ್ತ ಹಾಡುಗಳ

ಸೂಚಿಯುನ್ನು ತಯಾರಿಸುವ ಕೆಲಸಕ್ಕೆ ಅದೆಲ್ಲ ಉಪಯೋಗ ಬೀಳುವುದು. ನಿಮ್ಮ ಸಹಾಯ ತತ್ಪರತೆಗೆ ಎಷ್ಟು ಉಪಕಾರ ಸ್ಮರಿಸಿದರೂ ಕಡಿಮೆಯೇ.

ನಿಮ್ಮವ

ಶ್ರೀನಿವಾಸ ಹಾವನೂರ

ಆದರೆ ದುರ್ದೈವದ ಸಂಗತಿ ಎಂದರೆ ಹಾವನೂರ ಅವರು ಬರೆದ ಈ ಪತ್ರ ಓದಲು ಕಾಗಲಕರ್ ಅವರೇ ಇರಲಿಲ್ಲ. ಅವರಾಗಲೇ ಇಹಲೋಕ ಯಾತ್ರೆಯನ್ನು ಮುಗಿಸಿಬಿಟ್ಟಿದ್ದರು. ಇನ್ನೂ ವಿಪರ್ಯಾಸದ ಸಂಗತಿ ಎಂದರೆ ಕಾಗಲಕರ್ ಅವರು ನಿಧನರಾಗಿ ನಾಲ್ಕು ತಿಂಗಳು ಸಂದಿದ್ದರೂ ಆ ವಿಷಯ ಹಾವನೂರ ಅವರಿಗೆ ಗೊತ್ತೇ ಇರಲಿಲ್ಲ! ಕಾಗಲಕರ್ ಅವರು ಶ್ರೀನಿಧಿಯ ಪಾದ ಸೇರಿದ್ದು ೧೯.೮.೧೯೯೭ ರಂದು. ಹಾವನೂರ ಅವರು ಬರೆದ ಈ ಪತ್ರದ ಮೇಲಿನ ತಾರೀಕು ೨೭.೧೨.೧೯೯೭ ಎಂಬುದಾಗಿದೆ. ವಿಧಿಯ ವೈಚಿತ್ರ ಎಂದರೆ ಇದಕ್ಕೇ ಅನ್ನುತ್ತಾರೇನೋ! ಹಾವನೂರ ಅವರು ಕಾಗಲಕರ್ ಅವರಿಗೆ ಬರೆದ ಪತ್ರಗಳ ಸರಣಿಯಲ್ಲಿ ಪ್ರಾಯಃ ಇದೇ ಕೊನೆಯದಾಗಿರಬೇಕು.

ಶ್ರೀನಿವಾಸ ಹಾವನೂರ ಅವರು ಸಮಗ್ರ ದಾಸ ವಾಙ್ಮಯ ಪ್ರಕಟನ ಯೋಜನೆಯ ಉದ್ದೇಶ ಕುರಿತಾಗಿ ಒಂದು ಚಿಕ್ಕ ಕರಪತ್ರ ಸ್ವರೂಪದ ಪತ್ರವನ್ನು ಸಿದ್ಧಪಡಿಸಿದ್ದರು. ಸಮಗ್ರ ದಾಸರ ಸಾಹಿತ್ಯ ಪ್ರಕಟಣೆಯ ಮಹತ್ವಾಕಾಂಕ್ಷಿ ಯೋಜನೆ ಯಶಸ್ವಿಯಾಗಬೇಕಾದರೆ ದಾಸ ಸಾಹಿತ್ಯ ಕ್ಷೇತ್ರದ ಎಲ್ಲ ವಿದ್ವಾಂಸರು, ಅಕಡೆಮಿಕ್ ಸಂಶೋಧಕರು, ಹವ್ಯಾಸಿ ಸಂಶೋಧಕರು, ಸಂಗ್ರಹಕಾರರು, ಅಧ್ಯಯನ ನಿರತರು, ಪಂಡಿತರು, ಪಾಮರರು ಮುಂತಾದ ಸಂಬಂಧ ಪಟ್ಟವರೆಲ್ಲರ ನೆರವು, ಸಹಕಾರ ದೊರೆಯಬೇಕಾಗುತ್ತದೆ. ಅವರ ಹಸ್ತಾಕ್ಷರದಲ್ಲೇ ಇರುವ ಈ ಪತ್ರವನ್ನು "ದಾಸ ಸಾಹಿತ್ಯದಲ್ಲಿ ಆಸ್ಥೆ ಶ್ರದ್ಧೆಗಳಿರುವ ಮತ್ತು ನನಗೆ ವಿಶೇಷ ಪರಿಚಯವಿರುವ ಕೆಲವೇ ಜನರಿಗೆ ಕಳಿಸುತ್ತಿದ್ದೇನೆ. ಅವರಲ್ಲಿ ನೀವೊಬ್ಬರು" ಎಂದು ಹಾವನೂರ ಹೇಳಿದ್ದಾರೆ. ಆ ಪತ್ರದ ಒಕ್ಕಣೆ ಈ ರೀತಿ ಇದೆ.

"ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯವು ಸಮಗ್ರವಾಗಿ ದಾಸರ ಹಾಡುಗಳನ್ನು ಮೂವತ್ತು ಸಂಪುಟಗಳಲ್ಲಿ ಸಂಪಾದಿಸಿ ಪ್ರಕಟಿಸುವ ಬೃಹತ್ ಯೋಜನೆಯುನ್ನು ಹಮ್ಮಿಕೊಂಡಿದ್ದು ನಿಮಗೆ ತಿಳಿದೇ ಇದೆ. ಕಳೆದ ಆರು ಶತಮಾನಗಳ ದಾಸ ವಾಙ್ಮಯವೆಲ್ಲ ಹೀಗೆ ಒಂದೆಡೆ ಲಭ್ಯವಾದರೆ, ನಾಡಿನ ಒಂದು

ಹಿರಿಯ ಸಾಂಸ್ಕೃತಿಕ ತವನಿಧಿಯನ್ನು ಉಳಿಸಿಕೊಳ್ಳುವುದು ಮಾತ್ರವಲ್ಲ, ಯಾವುದೇ ಬಗೆಯ ಅಭ್ಯಾಸ, ಅನುಷ್ಠಾನಗಳಿಗೆ ಎಷ್ಟೊಂದು ಚಾಲನೆ ದೊರೆಯುವುದೆಂಬುದನ್ನು ನಿಮಗೆ ಮನಗಾಣಿಸುವ ಅಗತ್ಯವಿಲ್ಲ - ಎಂದು ಬಗೆಯುತ್ತೇನೆ.

ಇದನ್ನು ಸಾಧಿಸುವಲ್ಲಿ ಹಲವು ಅಡಚಣೆಗಳಿವೆ. ಅವುಗಳಲ್ಲಿ ಮುಖ್ಯವಾದದ್ದು ಅನೇಕ ದಾಸರು ರಚಿಸಿದ ಹಾಡುಗಳು ಅಜ್ಞಾತವಾಗಿವೆ. ವೈದಿಕ ಪರಂಪರೆಯ ಹಾಗೂ ಮುದ್ರಿಕೆ ಇರುವ ಯಾವ ಬಿಡಿ ಹಾಡೂ ಉಳಿಯಲಾಗದು.

ಎರಡನೆಯ ಅಡಚಣೆ ಎಂದರೆ ದಾಸ ವಾಙ್ಮಯದಲ್ಲಿಯ ಕಠಿಣವೆನಿಸುವ ಪ್ರಮೇಯಗಳನ್ನು ಅಧಿಕಾರಯುತವಾಗಿ ತಿಳಿಸಿ ಹೇಳಬಲ್ಲವರನ್ನು ಗುರುತಿಸುವುದು ಈ ದಿಸೆಯಲ್ಲಿ ಆಗಬೇಕಾದ ಇನ್ನೊಂದು ಕೆಲಸವೆಂದರೆ ದಾಸರ ಹಾಡುಗಳನ್ನು ಅರ್ಥಪೂರ್ಣವಾಗಿ ಮತ್ತು ಸಂಗೀತ ಶಾಸ್ತ್ರಕ್ಕೆ ಅನುಗುಣವಾಗಿ ಹಾಡುವವರು ಯಾರೆಂದು, ಅವರ ಹಾಡುಗಾರಿಕೆಯನ್ನು ರೆಕಾರ್ಡ್ ಮಾಡಿಕೊಳ್ಳುವುದು. ಈ ಹಿನ್ನೆಲೆಯಲ್ಲಿ ಕೆಲವೊಂದು ವಿಚಾರಗಳ ಬಗ್ಗೆ ನಿಮ್ಮ ನೆರವನ್ನು ಅಪೇಕ್ಷಿಸಲೆ?

(ಅ) ದಾಸರ ಹಾಡುಗಳ ಹಸ್ತ ಪ್ರತಿಗಳನ್ನು, ಅದರಂತೆ ಹಾಡುಗಳ ವಹಿ / ನೋಟ್ ಬುಕ್‌ಗಳನ್ನು ಇರಿಸಿಕೊಂಡವರು, (ಆ) ದಾಸ ವಾಙ್ಮಯದ ಮುದ್ರಿತ ಪುಸ್ತಕಗಳನ್ನು, ಪತ್ರಿಕಾ ಸಂಪುಟಗಳನ್ನಿಟ್ಟುಕೊಂಡವರು, (ಇ) ದಾಸ ಸಾಹಿತ್ಯವನ್ನು ಆಳವಾಗಿ ಅಭ್ಯಸಿಸಿದವರು. ಸುಳಾದಿ ಮುಂತಾದವುಗಳಲ್ಲಿಯ ಪ್ರಮೇಯಗಳನ್ನು ಪ್ರತಿಪಾದಿಸಲಾದ ಸಿದ್ಧಾಂತಗಳನ್ನು ವಿವರಿಸಬಲ್ಲವರು, (ಈ) ಅಪ್ರಕಟಿತ ಹಾಡುಗಳನ್ನು ಕಲೆ ಹಾಕಿ, ಸಂಪಾದಿಸಿ ಪ್ರಕಟಿಸಲಾಗದೆ ಉಳಿಸಿಕೊಂಡವರು, (ಉ) ಕೀರ್ತನೆಗಳನ್ನು ಶಾಸ್ತ್ರ, ಶುದ್ಧವಾಗಿ ಹಾಡಬಲ್ಲವರು.

ಮೇಲಿನ ಅಂಶಗಳ ವಿಚಾರವಾಗಿ ನಿಮಗೆ ಗೊತ್ತಿರುವ ಹೆಸರು, ಅವರ ವಿಳಾಸ ತಿಳಿಸುವಿರ?"

ಈ ಪತ್ರಕ್ಕೂ ಮುಂಚೆ ಡಾ।। ಹಾವನೂರ ಅವರು 'ಸಮಗ್ರ ದಾಸ ವಾಙ್ಮಯ ಪ್ರಕಟನ ಯೋಜನೆ' ಎಂಬ ಶೀರ್ಷಿಕೆಯ ಕರಪತ್ರವನ್ನು ಸಿದ್ಧಪಡಿಸಿದ್ದು ಅದನ್ನು ಕೂಡ ಅವರು ಕಾಗಲಕರ್ ಅವರಿಗೆ ಕಳುಹಿಸಿ ಕೊಟ್ಟಿದ್ದರು. ಅದರ ಒಕ್ಕಣೆ ಈ ರೀತಿ ಇದೆ.

"ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯವು ಸಮಗ್ರ ದಾಸ ಸಾಹಿತ್ಯವನ್ನು ಹೊರತರುವ ಬೃಹತ್ ಯೋಜನೆಯನ್ನು ಹಮ್ಮಿಕೊಂಡಿದೆ. ಅದಕ್ಕಾಗಿ ಸರಕಾರವು

ಒಂದು ಸಲಹಾ ಸಮಿತಿಯನ್ನು ರಚಿಸಿದ್ದು ಸದಸ್ಯರಲ್ಲಿ ಈರ್ವರು ಕಾರ್ಯನಿರ್ವಾಹಕ ಸಂಪಾದಕರಾಗಿಯು, ನಿರ್ದೇಶಕರು ಸದಸ್ಯ ಕಾರ್ಯದರ್ಶಿಯಾಗಿಯೂ ಕಾರ್ಯನಿರ್ವಹಿಸುತ್ತಿದ್ದಾರೆ."

೧೪ನೆಯ ಶತಮಾನದ ನರಹರಿತೀರ್ಥರಿಂದ ಆರಂಭವಾದ ದಾಸ ಸಾಹಿತ್ಯವು ಇಂದಿಗೂ ಅವಿಚ್ಛಿನ್ನವಾಗಿ ಸಾಗಿ ಬಂದಿದೆಯಷ್ಟೇ, ಈ ಪ್ರಕಟನ ಯೋಜನೆಯಲ್ಲಿ ೧೯ನೆಯ ಶತಮಾನದ ಕೆನೆಯ ವರ್ಷ (೧೮೯೯)ರ ವರೆಗೆ ಜನ್ಮ ತಾಳಿದ ಎಲ್ಲ ದಾಸರನ್ನು ಗಣನೆಗೆ ತೆಗೆದುಕೊಳ್ಳಲಾಗುವುದು.

ಆದರೆ ಈ ವರೆಗೆ ಎಷ್ಟು ಜನ ದಾಸರು ಆಗಿ ಹೋಗಿದ್ದಾರೆ? ರಚಿಸಿದ ಹಾಡುಗಳು ಎಷ್ಟಿವೆ? ಇದನ್ನು ನಿಶ್ಚಿತವಾಗಿ ಹೇಳಲು ಸಾಧ್ಯವೇ ಇಲ್ಲ. ಏಕೆಂದರೆ ಎಷ್ಟೋ ಜನ ದಾಸರು ಅಜ್ಞಾತವಾಗಿ ಉಳಿದಿದ್ದಾರೆ. ಅದರಂತೆ ಇಂಥವರ ಅನೇಕಾನೇಕ ಹಾಡುಗಳು ಹಸ್ತಪ್ರತಿ ರೂಪದಲ್ಲೇ ಉಳಿದಿದ್ದು ಅದನ್ನು ಕಂಡು ಹಿಡಿಯ -ಬೇಕಿದೆ. ಈ ಶೋಧ ಕಾರ್ಯವು ಯೋಜನೆಯ ಒಂದು ಮಹತ್ವದ ಭಾಗವಾಗಿದೆ.

ಸದ್ಯದ ಅಂದಾಜಿನ ಪ್ರಕಾರ ಮುನ್ನೂರಕ್ಕೂ ಮೇಲ್ಪಟ್ಟು ದಾಸರು ಆಗಿ ಹೋಗಿದ್ದು ಅವರ ಒಟ್ಟಿನ ರಚನೆ ೧೫ ಸಾವಿರದಷ್ಟು ಇದ್ದಿರಬಹುದು. ಇಷ್ಟೆಲ್ಲ ಸಾಹಿತ್ಯವನ್ನು ಐದೈದು ನೂರು ಪುಟಗಳ ೩೦ ಸಂಪುಟಗಳಲ್ಲಿ ಸಂಕಲಿಸಿ ಸಂಪಾದಿಸಿ ಹೊರತರುವುದೇ ಈ ಮಹಾನ್ ಯೋಜನೆಯ ಮುಖ್ಯ ಗುರಿಯಾಗಿದೆ. ಜೊತೆಗೆ ಐದು ಪೂರಕ ಸಂಪುಟಗಳನ್ನು (ಲೋಕ ನೀತಿ, ಗಮಕ, ಪಾರಿಭಾಷಿಕ ಪದಗಳು ಇತ್ಯಾದಿ) ಕ್ರಮೇಣ ಪ್ರಕಟಿಸಲಾಗುವುದು. ಈಗಾಗಲೇ ಬೇರೆ ಬೇರೆ ದಾಸರ ಹಾಡುಗಳ ಹತ್ತಾರು ಸಂಕಲನಗಳು ಪ್ರಕಟವಾಗಿದ್ದರೂ ಸಮಗ್ರ ದಾಸ ವಾಙ್ಮಯವು ಒಂದೇ ಕಡೆ ಲಭ್ಯವಾದರೆ ಅದರ ಪ್ರಯೋಜನವನ್ನು ಅನನ್ವಿತವಾಗಿ ಪಡೆಯಬಹುದು.

ಈ ದಾಸರೆಲ್ಲರೂ ವೈದಿಕ ಪರಂಪರೆಯಲ್ಲೇ ಬೆಳೆದು ಬಂದವರು. ಭಕ್ತಿ ಪ್ರಧಾನವಾದ ಹಾಡುಗಳನ್ನು ರಚಿಸಿ ಸ್ವಾಂತಸ್ಸುಖಾಯ ಹಾಡಿದವರು. ಈ ಹಾಡುಗಳು ಪಲ್ಲ, ಅನುಪಲ್ಲ, ಅಂಕಿತ ಇವುಗಳನ್ನೊಳಗೊಂಡ ಒಂದು ಸಂಪ್ರದಾಯವನ್ನು ಹಾಕಿಕೊಂಡವುಗಳು. ಈ ಕ್ರಮಗಳಲ್ಲಿ ಹಾಡುಗಳನ್ನು ರಚಿಸಿದವರು ಮಾಧ್ವ ಶಂಕರಾದಿ ಯಾವುದೇ ವೈದಿಕ ಪಂಥದವರಿರಬಹುದು. ಈಗಾಗಲೇ ಪ್ರಕಟಿತ ಹಾಗೂ ಹಸ್ತಪ್ರತಿ ರೂಪದಲ್ಲಿರುವ ಹಾಡುಗಳನ್ನು ಶಕ್ಯವಿದ್ದಷ್ಟು ಒಂದೂ ಬಿಡದೆ ಹೊರತರಬೇಕೆಂಬುದು ಯೋಜನೆಯ ಇಂಗಿತವಾಗಿದೆ.

ಸುದೈವಕ್ಕೆ ದಾಸ ಸಾಹಿತ್ಯದಲ್ಲಿ ಪರಿಶ್ರಮ ಪಟ್ಟ ಅನೇಕ ವಿದ್ವಾಂಸರು ನಮ್ಮಲ್ಲಿ ಇದ್ದಾರೆ. ಇವರ ವಿದ್ವತ್ತಿನ ಪ್ರಯೋಜನ ಪಡೆಯುವ ದೃಷ್ಟಿಯಿಂದ ಮೂವತ್ತು ಸಂಪುಟಗಳಿಗೂ ಪ್ರತ್ಯೇಕವಾಗಿ ಸಂಪಾದಕರು ಇರುತ್ತಾರೆ. ಅವರ ಸಂಪಾದನಾ ಕಾರ್ಯವು ಮುಗಿದ ನಂತರ ತಜ್ಞರಿಗೆ ತೋರಿಸಿ ಮುದ್ರಣವನ್ನು ಕೈಕೊಳ್ಳಲಾಗುವುದು. ಮೂರು ವರ್ಷಗಳ ಈ ಯೋಜನೆಯಲ್ಲಿ ಎಲ್ಲ ಸಂಪುಟಗಳು ಸಿದ್ಧವಾದಾಗ ಒಟ್ಟಿಗೇ ಸಂಪುಟ ಸಮೂಹವನ್ನು ಬಿಡುಗಡೆ ಮಾಡುವ ವಿಚಾರವಿದೆ.

ಸಮಗ್ರ ದಾಸ ಸಾಹಿತ್ಯ ವಾಙ್ಮಯ ಪ್ರಕಟನ ಯೋಜನೆ ಎಲ್ಲರೂ ಅಂದು ಕೊಂಡಂತೆ ಯೋಜನಾ ಬದ್ಧವಾಗಿ ೫೦ ಸಂಪುಟಗಳಲ್ಲಿ ವರ್ಷ ೨೦೦೩ರಲ್ಲಿ ಬಿಡುಗಡೆಗೊಂಡವು. ಇಂತಹ ಒಂದು ಮಹಾನ್ ಕಾರ್ಯ ಸಾಕಾರಗೊಳ್ಳುವ ಕನಸನ್ನು ಕಂಡವರು ಕಾಗಲಕರ್. ಅವರ ಕನಸು ನನಸೇನೋ ಆಯಿತು: ಆದರೆ ಅದನ್ನು ಸಾಕ್ಷಾತ್ಕರಿಸಿಕೊಳ್ಳಲು ಕಾಗಲಕರ್ ಅವರೇ ಇರಲಿಲ್ಲ. ಅವರು ಕಂಡ ಪ್ರತಿಯೊಂದು ಕನಸು ಸಾಕಾರಗೊಂಡದ್ದು ಅವರ ನಂತರದ ಪೀಳಿಗೆಯ ಸಮಾಜಕ್ಕಾಗಿಯೇ.

ಪತ್ರಿಕೆ ಮೂಲಕ ಪ್ರಸಾರ

ಸಮಯ, ಸಂದರ್ಭ ಒದಗಿ ಬಂದಾಗಲೆಲ್ಲ ಅಥವಾ ಸಮಯ ಸಂದರ್ಭವನ್ನು ಸೃಷ್ಟಿಸಿಕೊಂಡಾದರೂ ಅವರು ದಾಸ ಸಾಹಿತ್ಯ ಕುರಿತಾದ ಲೇಖನಗಳನ್ನು ನಿಯಮಿತವಾಗಿ ಬರೆಯುತ್ತಿದ್ದರು. ಸುಮಾರು ಎಂಟು ಶತಮಾನಗಳ ಭವ್ಯ ಪರಂಪರೆ ಹೊಂದಿರುವ ದಾಸ ಸಾಹಿತ್ಯ ಚಳುವಳಿಯ ಇತಿಹಾಸ, ಪ್ರಸ್ತುತ, ಶ್ರೇಷ್ಠತೆ, ಉಪಯುಕ್ತತೆ ಕುರಿತಂತೆ ಬರಹಗಳು, ಲೇಖನಗಳು, ವಿಶ್ಲೇಷಣೆಗಳು, ಅವರ ಲೇಖನಿಯಂದ ಓತಪ್ರೋತವಾಗಿ ಹರಿಯುತ್ತಿದ್ದವು. ಕಾಗಲಕರ್ ಅವರ ಪ್ರಕಾರ ಹರಿದಾಸರೆಲ್ಲರೂ ಸಾಮಾನ್ಯವಾಗಿ ವೈಷ್ಣವ ಪರಂಪರೆಯುಲ್ಲಿ ಬಂದವರಾಗಿದ್ದರು. ಮಧ್ವಾಚಾರ್ಯರು ಬೋಧಿಸಿದ ದ್ವೈತ ಸಿದ್ಧಾಂತವನ್ನು ತಮ್ಮ ಕೃತಿ ಮತ್ತು ಕೀರ್ತನೆಗಳ ಮೂಲಕ ಪ್ರಚುರ ಪಡಿಸಿದರು. ದಾಸ ಸಾಹಿತ್ಯ ಮೇಲ್ನೋಟಕ್ಕೆ ಮಧ್ವ ಸಮುದಾಯಕ್ಕೆ ಸೇರಿದ ಸಾಹಿತ್ಯ ಎಂದೆನಿಸಿದರೂ ಅದು ಪ್ರತಿಪಾದಿಸುವ ಸಾರ್ವತ್ರಿಕ ಸಾಮಾಜಿಕ ಮೌಲ್ಯಗಳಿಂದಾಗಿ ಅದು ಎಲ್ಲ ವರ್ಗದವರಿಗೂ ಪ್ರಸ್ತುತವೆನಿಸುವ ಸಾಹಿತ್ಯವಾಗಿದೆ. ಪ್ರಾರಂಭದಲ್ಲಿ ದಾಸರು ಕೆಲವು ಗದ್ಯ ಗ್ರಂಥಗಳನ್ನು ರಚಿಸಿರಬಹುದಾದರೂ ಅವರಿಗೆ ಸಂಪೂರ್ಣ ತೃಪ್ತಿ ತಂದು ಕೊಟ್ಟದ್ದು ಹಾಡು, ಕೀರ್ತನೆ, ಸುಳಾದಿ, ಉಗಾಭೋಗ, ಮುಂಡಿಗೆ ಇತ್ಯಾದಿ ಕಾವ್ಯದ ವಿವಿಧ ಪ್ರಾಕಾರಗಳಿಂದಲೇ. ಕಾವ್ಯಮಾಧ್ಯಮ ಮೂಲಕವೇ ಜನರ ಅಂತಃಕರಣವನ್ನು ಕಲಕುವ ಸಾಧ್ಯತೆಯನ್ನು ಹರಿದಾಸರೆಲ್ಲರೂ ಮನಗಂಡಿದ್ದರು.

ದಾಸ ಸಾಹಿತ್ಯ ಇತರ ಸಾಹಿತ್ಯ ಪ್ರಕಾರಗಳಿಗಿಂತ ಭಿನ್ನವೂ, ವೈಶಿಷ್ಟ್ಯವೂ ಆಗಿದೆ. ಜನರ ಭಾಷೆಯಾದ ಕನ್ನಡದಲ್ಲೇ ಸಾಹಿತ್ಯ ರಚನೆ ಮಾಡುವ ಧೀರ ಪ್ರಯತ್ನದ ಸರಣಿಯಲ್ಲಿ ವಚನ ಸಾಹಿತ್ಯದ ನಂತರದ ದಾಸ ಸಾಹಿತ್ಯ ಎರಡನೆಯದು. ವಚನಗಳು ಸಾಮಾನ್ಯವಾಗಿ ಗದ್ಯ ಸ್ವರೂಪದಲ್ಲಿದ್ದರೆ ದಾಸರ ಕೀರ್ತನೆಗಳು ಪದ್ಯರೂಪದಲ್ಲಿವೆ. ದಾಸರ ರಚನೆಗಳನ್ನು ಸಂಗೀತಕ್ಕೆ ಅಳವಡಿಸಿ ಹಾಡುವುದರಿಂದ ಅವು ಜನಮಾನಸದಲ್ಲಿ ಶಾಶ್ವತವಾಗಿ ಅಚ್ಚೊತ್ತುವಂತೆ ಮಾಡಲು ಸಾಧ್ಯವಾಯಿತು.

ಹೈದ್ರಾಬಾದ ಕರ್ನಾಟಕ ಪ್ರದೇಶ ಅದರಲ್ಲೂ ಮುಖ್ಯವಾಗಿ ರಾಯಚೂರು ಜಿಲ್ಲೆ ಹರಿದಾಸರ ತವರೂರು. ದಾಸ ಚತುಷ್ಟಯರೆಂದೇ ಪ್ರಸಿದ್ಧರಾದ ಪುರಂದರದಾಸ, ವಿಜಯದಾಸ, ಗೋಪಾಲದಾಸ ಮತ್ತು ಜಗನ್ನಾಥದಾಸರ ಕೊನೆಯ ಮೂವರು ರಾಯಚೂರು ಜಿಲ್ಲೆಗೆ ಸೇರಿದವರು. ಈ ಮೂವರ ಪರಂಪರೆಯ ನಂತರ ನೂರಾರು ದಾಸರು ರಾಯಚೂರು ಜಿಲ್ಲೆಯಲ್ಲಿ ಆಗಿ ಹೋಗಿದ್ದಾರೆ. ಕಾಗಲಕರ್ ಅವರು ಮೂಲಭೂತವಾಗಿ ಹೈದ್ರಾಬಾದ ಕರ್ನಾಟಕ ಪ್ರದೇಶಕ್ಕೆ ಸೇರಿದವರಲ್ಲ. ಅವರು ಕಲಬುರಗಿಗೆ ಬಂದದ್ದು ಕೇವಲ ಒಂದು ಆಕಸ್ಮಿಕ. ಆದಾಗ್ಯೂ ಅವರಲ್ಲಿ ಈ ಪ್ರದೇಶದ ಶ್ರೀಮಂತ ಹರಿದಾಸ ಪರಂಪರೆಯ ಬಗ್ಗೆ ಇದ್ದ ಹೆಮ್ಮೆ, ಪ್ರೀತಿ ಇದೇ ಪ್ರದೇಶದವರಿಗಿಂತಲೂ ಕಡಿಮೆಯೇನೂ ಇರಲಿಲ್ಲ. ಕಲಬುರಗಿ ಅವರ ಜನ್ಮಸ್ಥಾನವಾಗಿಲ್ಲದಿದ್ದರೂ ಸುಮಾರು ಐದು ದಶಕಗಳ ಕಾಲ ಅವರ ಕರ್ಮಭೂಮಿ ಇದೇ ಆಗಿತ್ತಾದ್ದರಿಂದ ಅವರು ಅಪ್ಪಟ ಕಲಬುರಗಿಯವರೇ ಆಗಿದ್ದರು. ದಾಸ ಸಾಹಿತ್ಯವನ್ನು ಕನ್ನಡ ಹಾಗೂ ಇಂಗ್ಲೀಷ ಬರವಣಿಗೆಗಳ ಮೂಲಕ ಕನ್ನಡವೇ ಅಲ್ಪಸಂಖ್ಯಾತ ಭಾಷೆಯಾಗಿದ್ದ ದುರ್ದಿನಗಳಲ್ಲಿ ಕಲಬುರಗಿಯ ಓದುಗರಿಗೆ ಪರಿಚಯಿಸಿದ ಕೀರ್ತಿ ಕಾಗಲಕರ್ ಅವರಿಗೇ ಸಲ್ಲಬೇಕು.

ಬರವಣಿಗೆಯೊಂದೇ ಅಲ್ಲ ದಾಸರ ರಚನೆಗಳನ್ನು ಸುಶ್ರಾವ್ಯವಾಗಿ ಹಾಡುವುದರಲ್ಲಿಯೂ ಕಾಗಲಕರ್ ನಿಷ್ಣಾತರು. ಅನೇಕ ಸಂದರ್ಭಗಳಲ್ಲಿ ಅವರು ಕಾಲಿಗೆ ಗೆಜ್ಜೆ ಕಟ್ಟಿಕೊಂಡು ಕುಣಿದಿದ್ದಾರೆ ಕೂಡ. ಹರಿದಾಸರ ಪರಮದಾಸರಾಗಿದ್ದ ಕಾಗಲಕರ್ ಅವರು ಕಲಬುರಗಿಯಲ್ಲಿ ಪ್ರಮುಖವಾಗಿ ಮತ್ತು ರಾಜ್ಯದ ಇತರೆಡೆ ಸಾಮಾನ್ಯವಾಗಿ ದಾಸ ಸಾಹಿತ್ಯ ಚಳುವಳಿಯನ್ನು ತಮ್ಮದೇ ಆದ ರೀತಿಯಲ್ಲಿ ಮುಂದುವರೆಸಿಕೊಂಡು ಹೋಗಿದ್ದಾರೆ.

ಹರಿದಾಸರು ಕಾಲಿಗೆ ಗೆಜ್ಜೆ ಕಟ್ಟಿಕೊಂಡು ಹಳ್ಳಿ ಹಳ್ಳಿಗೆ, ಕೇರಿ ಕೇರಿಗೆ, ಮನೆ ಮನೆಗೆ ಹೋಗಿ ಯಾಯಿವಾರದ ಮೂಲಕ ಭಕ್ತಿ ಚಳುವಳಿಯನ್ನು ವ್ಯಾಪಿಸುವುದರ

ಮೂಲಕ ಜನರನ್ನು ಶಿಕ್ಷಿತರನಾಗಿ ಮಾಡಲು ಶ್ರಮಿಸಿದರು. ಸಮಾಜ ಸುಧಾರಣೆ ಹರಿದಾಸರ ಪ್ರಜ್ಞಾಪೂರ್ಣ ಉದ್ದೇಶವಾಗಿರಲಿಲ್ಲ. ಅದು ಸಹಜವಾಗಿ ಒದಗಿಬಂದ ಒಂದು ಲಾಭಕಾರಿ ಪ್ರಯೋಜನ. ಕಾಗಲಕರ್ ಅವರ ಪ್ರಕಾರ ಹರಿದಾಸ ಕೀರ್ತನೆಗಳ ಮೂಲಕ ಜನ ಸಾಮಾನ್ಯರು ವೇದ, ಉಪನಿಷತ್ತು, ಪುರಾಣ ಇತ್ಯಾದಿ ಸನಾತನ ಗ್ರಂಥಗಳಲ್ಲಿ ಅಡಗಿದ ಜೀವನದ ಉದಾತ್ತ ಮೌಲ್ಯಗಳನ್ನು, ರಹಸ್ಯವನ್ನು ಮನುಷ್ಯ ಜನ್ಮದ ಹಿರಿಮೆಯನ್ನು ಅರ್ಥಮಾಡಿಕೊಳ್ಳಲು ಸಾಧ್ಯವಾಗಿದೆ. ಜೊತೆಗೆ ಆಧ್ಯಾತ್ಮದ ಸಿಂಚನವನ್ನು ಅದು ಜನಸಾಮಾನ್ಯರಿಗೆ ನೀಡವುಲ್ಲಿ ಯಶಸ್ವಿಯಾಗಿದೆ. ಸಂಸ್ಕೃತ ಭೂಯಿಷ್ಠವಾದ ವೇದ ಸಾಹಿತ್ಯವೆಲ್ಲವೂ ಕೆಲವೇ ಪಂಡಿತರ ಸೊತ್ತಾಗಿ ಉಳಿದಿದ್ದ ಸಂದರ್ಭದಲ್ಲಿ ಅದು ಜನರಾಡುವ ಸುಲಭ ಕನ್ನಡದ ಮೂಲಕ ಜನಸಾಮಾನ್ಯರಿಗೆ ತಲುಪಿ ವೈದಿಕ ಸಾಹಿತ್ಯ ಪಾಮರರಿಗೂ ಲಭ್ಯವಾಗುವಂತೆ ಮಾಡಿದ ಶ್ರೇಯಸ್ಸು ಪ್ರಧಾನವಾಗಿ ಹರಿದಾಸರಿಗೆ ಸಲ್ಲುತ್ತದೆ. ಅಷ್ಟೇ ಏಕೆ, ಕನ್ನಡವನ್ನು ಅಸಡ್ಡೆಯಿಂದ ಕಂಡ ಉದ್ದಾಮ ಸಂಸ್ಕೃತ ಪಂಡಿತರಾಗಿದ್ದ ಜಗನ್ನಾಥ ದಾಸರು ತಮಗುಂಟಾದ ಜ್ಞಾನೋದಯದ ಫಲವಾಗಿ ಭಾಷಾ ಮಡಿವಂತಿಕೆಯನ್ನು ತ್ಯಜಿಸಿ ಜನರ ಭಾಷೆಯಾದ ಸುಂದರ ಕನ್ನಡದಲ್ಲಿ ಭಾಮಿನಿ ಷಟ್ಪದಿಯಲ್ಲಿ "ಹರಿಕಥಾಮೃತಸಾರ" ಎಂಬ ಶ್ರೇಷ್ಠ ಕಾವ್ಯ ಗ್ರಂಥವನ್ನು ರಚಿಸಿ ಅಜರಾಮರರಾಗಿ ಉಳಿದಿದ್ದಾರೆ. ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿಯನ್ನು ಉದ್ದೀಪಗೊಳಿಸುವಲ್ಲಿ 'ಹರಿಕಥಾಮೃತಸಾರ' ವಹಿಸಿದ ಪಾತ್ರ ಅತ್ಯಂತ ಹಿರಿಯದಾದದ್ದು. ಈ ಗ್ರಂಥ ತೆಲುಗು, ತಮಿಳು ಮತ್ತು ಮರಾಠಿ ಭಾಷೆಗಳಿಗೂ ಅನುವಾದಗೊಂಡಿರುವುದನ್ನು ಕಾಗಲಕರ್ ಗುರುತಿಸುತ್ತಾರೆ. ಇಂತಹ ಹತ್ತಾರು ಕೃತಿಗಳು ಇತರ ಹರಿದಾಸರ ಜ್ಞಾನವಾಹಿನಿಯಿಂದ ಹರಿದು ಬಂದು ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿವೆ, ಅದಕ್ಕೆ ಜಾಗತಿಕ ಮನ್ನಣೆಯನ್ನು ತಂದುಕೊಟ್ಟಿವೆ.

ಕಾಗಲಕರ್ ಅವರ ಅಂದಾಜಿನ ಪ್ರಕಾರ ಸುಮಾರು ಒಂದು ನೂರು ದಾಸರು ಕರ್ನಾಟಕದಲ್ಲಿ ಆಗಿ ಹೋಗಿದ್ದು ಅವರಲ್ಲಿ ಪುರಂದರದಾಸರು, ಕನಕದಾಸರು, ಪ್ರಸನ್ನ ವೆಂಕಟದಾಸರು, ಮಹಿಪತಿದಾಸರು, ಮತ್ತಿತರ ಕೆಲವೇ ದಾಸರನ್ನು ಬಿಟ್ಟರೆ ಇತರ ಎಲ್ಲ ಹರಿದಾಸರು ರಾಯಚೂರು ಜಿಲ್ಲೆಗೆ ಸೇರಿದವರು. ಆನಂದದಾಸ ಎಂಬ ಕಾವ್ಯ ನಾಮದಿಂದ ಪ್ರಸಿದ್ಧರಾದ ಕಮಲೇಶ ವಿಠ್ಠಲರು ವಿಜಯದಾಸರ ಜನ್ಮಸ್ಥಾನವಾದ ರಾಯಚೂರು ಜಿಲ್ಲೆಯ ಮಾನವಿ ತಾಲೂಕಿನ ಬೇಕಲ ಪರವಿಯಲ್ಲಿ ಜನಿಸಿದರೂ ಅವರು ಕಲಬುರಗಿ ಜಿಲ್ಲೆಯ ಸುರಪುರಕ್ಕೆ ವಲಸೆ ಹೋದರು. ಸುರಪುರದ ನಾಯಕ ರಾಜರ ದರಬಾರಿನಲ್ಲಿ ಅವರೊಬ್ಬ ಪ್ರಮುಖ ಸದಸ್ಯರಾಗಿದ್ದರು.

ಕ್ಷೀಣವಾಗುತ್ತಿದ್ದ ದಾಸಸಾಹಿತ್ಯ ಪರಂಪರೆಯನ್ನು ಆಧುನಿಕ ಸಮಾಜದ ಸಂದರ್ಭದಲ್ಲಿ ಗಟ್ಟಿಗೊಳಿಸಿದ ಶ್ರೇಯಸ್ಸು ಗೊರೇಬಾಳ ಹನುಮಂತರಾಯರಿಗೆ ಸಲ್ಲಬೇಕೆಂದು ಕಾಗಲಕರ್ ಹೇಳುತ್ತಾರೆ. ರಾಯಚೂರು ಜಿಲ್ಲೆಯಲ್ಲಿ ದಾಸಸಾಹಿತ್ಯ ಪರಂಪರೆಯನ್ನು ಜೀವಂತವಾಗಿಡಲು ಅವರು ಬಹುವಾಗಿ ಶ್ರಮಿಸಿದರು. ಲಿಂಗಸುಗೂರಿನಲ್ಲಿ ಶ್ರೀವರದೇಂದ್ರ ಹರಿದಾಸ ಸಾಹಿತ್ಯ ಮಂಡಳಿಯನ್ನು ಸ್ಥಾಪಿಸಿ ಅದರ ಮೂಲಕ ಶ್ರೀಪಾದರಿಂದ ಮೊದಲಾಗಿ ಪ್ರಾಣೇಶದಾಸರ ವರೆಗೆ ಹಲವಾರು ಕೃತಿಗಳನ್ನು ಪ್ರಕಟಿಸುವಲ್ಲಿ ಗೋರೆಬಾಳ ಹನುಮಂತರಾಯರು ಸಾಕಷ್ಟು ಶ್ರಮಿಸಿದ್ದಾರೆ. ಹೀಗೆ ಸಂಗ್ರಹಿಸಿ ಪ್ರಕಟಿಸಿದ ಹಾಡು ಕೀರ್ತನೆಗಳಿಗಿಂತಲೂ ಹೆಚ್ಚಿನ ಕೃತಿಗಳು ಸಂಗ್ರಹಕ್ಕೆ ಬಾರದೆ ಹೋಗಿರುವುದರ ಬಗ್ಗೆ ಕಳವಳಗೊಳ್ಳುವ ಕಾಗಲಕರ್ ಕರ್ನಾಟಕ ಸರಕಾರ ೧೯೮೬ರಲ್ಲಿ ಕೈಕೊಂಡ ಸಮಗ್ರ ದಾಸ ಸಾಹಿತ್ಯ ಪ್ರಕಟನ ಯೋಜನೆ ತೆರೆಮರೆಯಲ್ಲಿರುವ ಎಲ್ಲ ದಾಸರ ಸಾಹಿತ್ಯವನ್ನು ಬೆಳಕಿಗೆ ತರಬಹುದೆಂಬ ವಿಶ್ವಾಸವನ್ನು ತಾಳಿದ್ದರು. ಈ ಯೋಜನೆಯ ನಿರ್ಧಾರವೇ ಅವರಲ್ಲಿ ಹರ್ಷವನ್ನುಂಟು ಮಾಡಿತ್ತು. ಅಂತೆಯೇ ಅವರು ಅದರ ಯಶಸ್ಸಿಗಾಗಿ ಟೊಂಕಕಟ್ಟಿ ನಿಂತರು.

ಮುಸ್ಲಿಂ ಹರಿದಾಸ

ಕನಕದಾಸರೊಬ್ಬರನ್ನು ಹೊರತು ಪಡಿಸಿದರೆ ಹರಿದಾಸ ಚಳವಳಿಯಲ್ಲಿ ತೊಡಗಿಸಿಕೊಂಡವರೆಲ್ಲರೂ ಬ್ರಾಹ್ಮಣ ಸಮುದಾಯದಿಂದ ಬಂದವರು. ಜನ್ಮತಃ ಹಿಂದುಳಿದ ಕುರುಬ ಜನಾಂಗಕ್ಕೆ ಸೇರಿದರೂ ಕನಕದಾಸರು ದಾಸ ಸಾಹಿತ್ಯ ಪ್ರಪಂಚದಲ್ಲಿ ಧ್ರುವತಾರೆಯಾಗಿಯೇ ವಿಜೃಂಭಿಸುತ್ತಾರೆ. ಅವರ ಸಾಹಿತ್ಯ ಕೃತಿಗಳು ಗುಣಾತ್ಮಕತೆಯ ದೃಷ್ಟಿಯಿಂದ ಉತ್ಕೃಷ್ಟವಾಗಿವೆ. ಕುರುಬರಾದರೂ ಮಾಧ್ವ ಸಿದ್ಧಾಂತಕ್ಕೆ ಮಾರು ಹೋಗಿ ತಾಳ-ತಂಬೂರಿ ಹಿಡಿದು ಕಾಲಿಗೆ ಗೆಜ್ಜೆ ಕಟ್ಟಿಕೊಂಡು ಶ್ರೀಹರಿಯನ್ನು ಸ್ತುತಿಸುತ್ತಲೇ ಸಮಾಜವನ್ನು ಚಾಟಿಯಿಂದ ಹೊಡೆದು, ಬಡಿದೆಬ್ಬಿಸಿದವರು ಕನಕದಾಸರು.

ವಿಜಯನಗರ ಸಾಮ್ರಾಜ್ಯದ ರಾಜಗುರುಗಳಾಗಿದ್ದ ವ್ಯಾಸರಾಯತೀರ್ಥರ ಅತ್ಯಂತ ಪ್ರೀತಿ ಶಿಷ್ಯರಾಗಿದ್ದ ಕನಕದಾಸರು, ದಾಸ ಶ್ರೇಷ್ಠರೆಂದೇ ಪ್ರಖ್ಯಾತರಾದ ಪುರಂದರದಾಸರ ಸಮಕಾಲೀನರು. ವ್ಯಾಸತೀರ್ಥರ ಶಿಷ್ಯ ಬಳಗದಲ್ಲಿ ಪುರಂದರರ ಸಹಚರರು ಕೂಡ. ಶ್ರೀಹರಿಯಲ್ಲಿ ಅನನ್ಯ ಭಕ್ತಿ, ಅಪ್ರತಿಮ ಪ್ರತಿಭೆ, ಅಸಾಮಾನ್ಯ ಸಾಮಾಜಿಕ ಕಳಕಳಿ, ಅಸಾಧಾರಣ ಆಧ್ಯಾತ್ಮ ಜೀವಿಯಾಗಿದ್ದ ಕನಕದಾಸರು ನೂರಾರು ಕೀರ್ತನೆಗಳನ್ನು ರಚಿಸಿ ಅಜರಾಮರರಾಗಿದ್ದಾರೆ. ಅವರ ಮೋಹನ ತರಂಗಿಣಿ,

ನಳಚರಿತ್ರೆ, ರಾಮಧಾನ್ಯಚರಿತ್ರ ಇತ್ಯಾದಿ ಗ್ರಂಥಗಳು ಕನ್ನಡ ಭಕ್ತಿ ಸಾಹಿತ್ಯ ಲೋಕದಲ್ಲೇ ಅತ್ಯಂತ ವಿಶಿಷ್ಟ, ವಿನೂತನ ಕೃತಿಗಳಾಗಿವೆ.

ದಾಸ ಚಳವಳಿಗೆ ಬ್ರಾಹ್ಮಣೇತರ ಹಿಂದು ಆದ ಕನಕದಾಸರು ಧುಮುಕಿ ತಮ್ಮದೇ ಆದ ಅಚ್ಚಳಿಯದ ಛಾಪನ್ನು ಬಿಟ್ಟು ಹೋಗಿದ್ದಾರೆ. ಆದರೆ ಹಿಂದುಗಳಲ್ಲದವರು ಅದರಲ್ಲೂ ಹಿಂದು ಪೂಜಾ ವಿಧಿ-ವಿಧಾನಗಳಿಗೆ ಪ್ರತಿಕ್ರಿಯಾತ್ಮಕ ಧೋರಣೆ ತಾಳುವ ಇಸ್ಲಾಂ ಧರ್ಮಕ್ಕೆ ಸೇರಿದ ವ್ಯಕ್ತಿಗಳು, ಹರಿದಾಸರಾಗಿ ಪರಿವರ್ತನೆ ಹೊಂದಿ ಮಾಧ್ವರ ದ್ವೈತ ಸಿದ್ಧಾಂತವನ್ನು ಪ್ರಚುರ ಪಡಿಸಿದ ದೃಷ್ಟಾಂತ ಪ್ರಾಯಃ ಊಹಿಸಲಿಕ್ಕೂ ಬಾರದು. ಆದರೆ ಹರಿದಾಸ ಪರಂಪರೆಯಲ್ಲಿ ಇಂತಹ ಒಂದು ಅನೂಹ್ಯ ಸಾಧ್ಯತೆಯೂ ಸಾಕಾರಗೊಂಡಿದೆ. ಪಿಂಜಾರ ಬಡೆ ಸಾಹೇಬ ರಾಮದಾಸನಾಗಿ ನೂರಾರು ಕೀರ್ತನೆ, ಸಂಕೀರ್ತನೆಗಳನ್ನು ರಚಿಸಿ ದಾಸ ಸಾಹಿತ್ಯವನ್ನು ಶ್ರೀಮಂತಗೊಳಿಸಿದ್ದು ರೋಚಕವೂ ರೋಮಾಂಚಕವೂ ಆಗಿದೆ.

ಪ್ರಾಯಃ ಕಾಗಲಕರ್ ಅವರೇ ರಾಮದಾಸರನ್ನು ಕುರಿತು ವಿಸ್ತೃತವಾಗಿ ಬರೆದು ಅವರನ್ನು ಜನಸಾಮಾನ್ಯರಿಗೆ ಪರಿಚಯ ಮಾಡಿಸಿದವರೆಂದು ಕಾಣುತ್ತದೆ. ಎಲೆ ಮರೆಯ ಕಾಯಿಯಂತೆಯೇ ಇದ್ದ ರಾಮದಾಸರು ಅಷ್ಟಾಗಿ ಬೆಳಕಿಗೆ ಬಾರದಿರುವುದು ಒಂದು ಆಶ್ಚರ್ಯವೇ ಸರಿ. ಖ್ಯಾತ ಲೇಖಕರೂ, ರಂಗಾಸಕ್ತರೂ ಮತ್ತು ಕಲಬುರಗಿ ನೂತನ ವಿದ್ಯಾಲಯ ಪದವಿ ಕಾಲೇಜಿನ ಪ್ರಾಚಾರ್ಯರೂ ಆದ ಸ್ವಾಮಿರಾವ್ ಕುಲಕರ್ಣಿ ಅವರು ರಾಮದಾಸರ ಬಗ್ಗೆ ನಡೆಸಿದ ಸಂಶೋಧನೆಯ ಫಲವಾಗಿ ರಾಮದಾಸರು ಸಮಾಜದ ಮುಖ್ಯವಾಹಿನಿಗೆ ಪರಿಚಯವಾಗಲು ಸಾಧ್ಯವಾಯಿತು. ಕುಲಕರ್ಣಿ ಅವರಿಗೆ ಗುಲಬರ್ಗಾ ವಿಶ್ವವಿದ್ಯಾಲಯದಿಂದ ಡಾಕ್ಟರೇಟ್ ಪದವಿ ದೊರಕಿತಷ್ಟೇ. ಕುಲಕರ್ಣಿ ಅವರು ಹಲವಾರು ಕಡೆ ಕ್ಷೇತ್ರಕಾರ್ಯ ಕೈಕೊಂಡು ಎಲ್ಲೆಲ್ಲೋ ಚದುರಿ ಹೋಗಿದ್ದ ರಾಮದಾಸರ ಕೀರ್ತನೆಗಳನ್ನು ಸಂಗ್ರಹಿಸಿ, ವಿಸ್ತೃತವಾದ ಸಂಶೋಧನಾ ಪ್ರಬಂಧ ಬರೆದು ಒಂದು ಉತ್ತಮ ಕೆಲಸ ಮಾಡಿದ್ದಾರೆ.

ಆದರೆ ಅವರು ಮಾಡಿದ ಉತ್ತಮ ಕೆಲಸ ವಿಶ್ವವಿದ್ಯಾಲಯದ ಕಪಾಟುಗಳಲ್ಲಿ ಧೂಳು ತಿನ್ನುತ್ತ ಕುಳಿತರೆ ಹೇಗೆ? ಅದನ್ನು 'ಹಿಂದು' ಪತ್ರಿಕೆಯಲ್ಲಿ ಒಂದು ವಿಸ್ತೃತ ಲೇಖನದ ಮೂಲಕ ಪ್ರಕಟಿಸಿದ ಕಾಗಲಕರ್ ಅವರು ಒಬ್ಬ ಮುಸ್ಲಿಂ ಭಕ್ತ 'ರಾಮದಾಸ'ನಾದ ಬಗೆಯನ್ನು ಸಮಾಜಕ್ಕೆ ಪರಿಚಯಿಸಿದರು. ಈ ಸಂದರ್ಭದಲ್ಲಿ

ಅವರಿಗೆ ಉಂಟಾದ ವ್ಯಥೆ ಎಂದರೆ ಪಿಂಜಾರ ಬಡೇ ಸಾಬ ದಾಸ ದೀಕ್ಷೆ ಪಡೆದು ನೂರಾರು ಕೀರ್ತನೆಗಳನ್ನು ರಚಿಸಿ, ಹಲವು ಕೃತಿಗಳನ್ನು ಬರೆದಿದ್ದರೂ ಅವರ ಹೆಸರು ಪ್ರಮುಖ ಹರಿದಾಸರ ಪಟ್ಟಿಯಲ್ಲಾಗಲೀ ಪುಸ್ತಕಗಳಲ್ಲಾಗಲೀ ಕಾಣದಿರುವುದು. ರಾಮದಾಸರ ಶ್ರೇಷ್ಠತೆಯ ಪರಿಚಯ ಅವರ ತಿಳಿವಳಿಕೆಯ ಪರಿಧಿಗೆ ಬರುತ್ತಲೇ ಕಾಗಲಕರ್ ಅವರು ರಾಮದಾಸರ ಕುರಿತು ವಿವರವಾದ ಲೇಖನ ಬರೆದರು. ಇದರಿಂದಾಗಿ ರಾಮದಾಸರು ಕನ್ನಡ ಬಲ್ಲವರಿಗಷ್ಟೇ ಅಲ್ಲ ಕನ್ನಡೇತರರಿಗೂ ಪರಿಚಿತರಾದರು. ರಾಮದಾಸರ ಕುರಿತಾಗಿ ಅಧ್ಯಯನ ನಡೆಸಿ, ಸಂಶೋಧನೆ ಕೈಕೊಂಡು ಮಹಾಪ್ರಬಂಧವನ್ನು ರಚಿಸಿದ ಡಾ|| ಸ್ವಾಮಿರಾವ್ ಕುಲಕರ್ಣಿ ಅವರನ್ನು ಮುಕ್ತಕಂಠದಿಂದ ಪ್ರಶಂಸಿಸಿದ್ದಾರೆ. ಈ ಮಹಾಪ್ರಬಂಧ ಬೆಳಕಿಗೆ ಬಂದ ನಂತರ ಗುಲಬರ್ಗ ದೂರದರ್ಶನ ಕೇಂದ್ರವು ರಾಮದಾಸರ ಕುರಿತು ಒಂದು ಸಾಕ್ಷ್ಯ ಚಿತ್ರವನ್ನು ತಯಾರಿಸಿ ಪ್ರಸಾರ ಮಾಡಿತು.

ಕಾಗಲಕರ್ ಅವರ ಲೇಖನ ಪ್ರಕಟವಾಗುತ್ತಲೇ ಪುಳಕಿತಗೊಂಡ ಕುಲಕರ್ಣಿ ಅವರು ಅತ್ಯಂತ ಕೃತಜ್ಞತಾ ಭಾವದಿಂದ ಕಾಗಲಕರ್ ಅವರಿಗೆ ಒಂದು ಪತ್ರ ಬರೆದರು.

ದಿನಾಂಕ : ೧೫.೧೧.೧೯೯೬

ಸನ್ಮಾನ್ಯ ವಿ.ಎನ್. ಕಾಗಲಕರ್ ಅವರಿಗೆ
ಸವಿನಯ ನಮನಗಳು

ಇಂದಿನ 'ಹಿಂದು' ಪತ್ರಿಕೆಯಲ್ಲಿ ತಾವು ಶ್ರೀರಾಮದಾಸರ ಬಗೆಗೆ ಬರೆದ ಲೇಖನ ಓದಿದೆ. ತುಂಬಾ ಆನಂದವಾಯಿತು. ಸಕಲ ಪ್ರಮುಖ ವಿಷಯವನ್ನೊಳಗೊಂಡು ಲೇಖನ ಅತ್ಯಂತ ಆಕರ್ಷಕವೂ, ಉಪಯುಕ್ತವೂ ಆಗಿದೆ.

ನನ್ನ ಸಂಶೋಧನೆ ಕುರಿತಂತೆ ತಾವು ಅತ್ಯುತ್ತಮ ವಿಚಾರಗಳನ್ನು ವ್ಯಕ್ತಪಡಿಸಿದ್ದೀರಿ. ನನ್ನ ಮೂರು ವರ್ಷಗಳ ಶ್ರಮ ಸಾರ್ಥಕವಾದ ಭಾವನೆ ನನಗಾಗಿದೆ. ಶ್ರೀ ರಾಮದಾಸರ ಬದುಕು-ಸಾಹಿತ್ಯಕ್ಕೆ ತಮ್ಮ ಲೇಖನ ಮತ್ತೊಂದು ಕಿರೀಟ ಇಟ್ಟಿದೆ. ಹರಿದಾಸ ಸಾಹಿತ್ಯದ ಅಪರೂಪದ ವ್ಯಕ್ತಿಯನ್ನು ರಾಜ್ಯದ ಒಳ-ಹೊರಗಿನವರಿಗೆ ಪರಿಚಯಿಸುವುದರೊಂದಿಗೆ, ದಾಸ ಸಾಹಿತ್ಯದ ಮೇಲಿದ್ದ ಜಾತಿಯ ಆಪಾದನೆಯೂ ದೂರ ಆದಂತಾಗಿದೆ. ತಮಗೆ ಹೃತ್ಪೂರ್ವಕ ಕೃತಜ್ಞತೆಗಳು. ಮಾಡಿದ ಕಾರ್ಯವನ್ನು ಗುರುತಿಸಿ, ಮೆಚ್ಚುಗೆ ವ್ಯಕ್ತ

ಪಡಿಸಿದಾಗ, ಆ ಕಾರ್ಯ ಮಾಡಿದ ವ್ಯಕ್ತಿಗೆ ಆಗುವ ಅವ್ಯಕ್ತ ಆನಂದವನ್ನು ನಾನು ಶಬ್ದಗಳ ಮೂಲಕ ಹಿಡಿದಿಡಲು ಅಸಮರ್ಥ.

ತಮ್ಮ ಪ್ರೀತಿ, ಅಂತಃಕರಣ ಇದೇ ರೀತಿ ನನ್ನ ಮೇಲೆ ನಿರಂತರವಾಗಿರಲಿ ಎಂಬುದೇ ನನ್ನ ಬಯಕೆ. ಆ ಶ್ರೀರಾಮ ನಿಮಗೆ ಸನ್ಮಂಗಳವನ್ನುಂಟು ಮಾಡಲಿ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸದ
ಸ್ವಾಮಿರಾವ್ ಕುಲಕರ್ಣಿ

ಕಾಗಲಕರ್ ಅವರು ಬರೆದ ಲೇಖನವೊಂದು ಒಬ್ಬ ವ್ಯಕ್ತಿಗೆ ತನ್ನ ಪರಿಶ್ರಮದ ಕುರಿತು ಸಾರ್ಥಕ ಭಾವನೆ ಉಂಟಾಗಬೇಕಾದರೆ ಆ ಲೇಖನದ ಮಹತ್ವವನ್ನು ಯಾರಾದರೂ ಊಹಿಸಿಕೊಳ್ಳಬಹುದು.

ಇದೆಲ್ಲದಕ್ಕೂ ಮೂಲಕ ಕಾರಣ ಮಹ್ಮದೀಯ ಪಂಥದ ಆಧ್ಯಾತ್ಮಿಕ ಜೀವಿಯೊಬ್ಬ ಮಾಧ್ವನಾಗಿ ಪರಿವರ್ತಿತನಾದ ರೋಚಕ ಪ್ರಸಂಗ. ಇದು ನಿಜಕ್ಕೂ ದಾಸ ಪರಂಪರೆಯಲ್ಲಿ ಒಂದು ಅಪರೂಪದ, ವಿಶಿಷ್ಟ ಬೆಳವಣಿಗೆ. ಸಂತ ಶಿಶುನಾಳ ಶರೀಫರು ಗೋವಿಂದ ಭಟ್ಟರಿಂದ ಯಜ್ಞೋಪವೀತಧಾರಣೆ ಮಾಡಿಸಿಕೊಂಡು ಶೈವ ಸಿದ್ಧಾಂತಕ್ಕೆ ಹೋದ ಪ್ರಾಯಃ ಪ್ರಥಮ ಮುಸ್ಲಿಂ ಆಧ್ಯಾತ್ಮ ಜೀವಿ. ಹಲವಾರು ತತ್ವ ಪದಗಳ ಮೂಲಕ ಮನೆ ಮಾತಾಗಿರುವ ಶರೀಫ ಸಾಹೇಬರ ನಂತರ ವೈದಿಕ ಸಿದ್ಧಾಂತಕ್ಕೆ ಮಾರು ಹೋದ ಪ್ರಾಯಃ ಎರಡನೆಯ ಮುಸ್ಲಿಂ ಆಧ್ಯಾತ್ಮ ಜೀವಿ ಎಂದರೆ ರಾಮದಾಸ ಖ್ಯಾತಿಯ ಪಿಂಜಾರ ಬಡೇ ಸಾಹೇಬ, ಶರೀಫ ಸಾಹೇಬರು ಅದ್ವೈತ ಸಿದ್ಧಾಂತಕ್ಕೆ ಮಾರು ಹೋದರೆ ಬಡೇ ಸಾಹೇಬ ದ್ವೈತ ಸಿದ್ಧಾಂತವನ್ನು ನೆಚ್ಚಿಕೊಂಡರು.

ಕ್ರಿ.ಶ. ೧೮೮೨ರಲ್ಲಿ ರಾಯಚೂರು ಜಿಲ್ಲೆಯ ದೇವದುರ್ಗ ತಾಲೂಕಿನ ಜೋಳದ ಹೆಡಿಗೆ ಗ್ರಾಮದಲ್ಲಿ ಖಾಜಾಸಾಬ ಮತ್ತು ಪೀರಮ್ಮ ದಂಪತಿಗಳಿಗೆ ಮುಸ್ಲಿಂ ಸಮುದಾಯದ ಪಿಂಜಾರ ಉಪಜಾತಿಯಲ್ಲಿ ಅತ್ಯಂತ ಕಡುಬಡತನದಲ್ಲಿ ಜನಿಸಿದ ಬಡೇಸಾಬ ಖಾಸಗಿ ಶಾಲೆಯೊಂದರಲ್ಲಿ ಕನ್ನಡ ಕಲಿತು ಅದನ್ನೇ ತಮ್ಮ ಆಧ್ಯಾತ್ಮಿಕ ಮತ್ತು ಸಾಹಿತ್ಯ ಜೀವನದ ಉಸಿರಾಗಿಸಿಕೊಂಡವರು. ಹರಿದು ತಿನ್ನುವ ಬಡತನ ಅವರನ್ನು ಅನೇಕ ಕಡೆ ಅಲೆದಾಡುವಂತೆ ಮಾಡಿತು. ಕೆಲಕಾಲ ಶಾಲಾ ಶಿಕ್ಷಕರಾಗಿ ಕೆಲಸ ಮಾಡಿದರು. ಆದರೆ ಅವರಲ್ಲಿ ಹುದುಗಿದ್ದ ಆಧ್ಯಾತ್ಮ ಚೇತನ

ಅವರನ್ನು ಪದೇ ಪದೇ ಜಾಗೃತಗೊಳಿಸಿ ತಕ್ಕ ಗುರುವಿಗಾಗಿ ಹುಡುಕಾಟ ನಡೆಸುವಂತೆ ಮಾಡಿತು.

ಗೋನವಾರದಲ್ಲಿ ಖ್ಯಾತ ವೇದಶಾಸ್ತ್ರ ಪರಿಣಿತರಾಗಿದ್ದ ವೆಂಕಟ ಭೀಮಾಚಾರ ಮತ್ತು ಹನುಮಂತಾಚಾರ ಅವರ ಸಂಪರ್ಕಕ್ಕೆ ಬಂದರು. ವೆಂಕಟಭೀಮಾಚಾರ ಆಗಿನ ಕಾಲದ ಸುಪ್ರಸಿದ್ಧ ಕೀರ್ತನಕಾರರಾಗಿದ್ದರು. ವೇದಾಂತಿದ್ವಯರ ಸಂಪರ್ಕದಿಂದಾಗಿ ಬಡೇಸಾಬ ತನ್ನ ಜ್ಞಾನದ ದಾಹವನ್ನು ತಕ್ಕ ಮಟ್ಟಿಗೆ ತೀರಿಸಿಕೊಳ್ಳಲು ನೆರವಾಯಿತು.

ಒಂದು ಬಾರಿ ರಾಯಚೂರು ರೇಲ್ವೆ ನಿಲ್ದಾಣದಲ್ಲಿ ಬಡೇಸಾಬ ಒಬ್ಬ ನಿಗೂಢ ಸ್ವಾಮಿಯ ಸಂಪರ್ಕಕ್ಕೆ ಬಂದರು. ತನ್ನ ಹಿಂದೆ ಬರುವ ಇಚ್ಛೆ ಇದೆಯೆ? ಎಂದು ವಿಚಾರಿಸಿದಾಗ ಬಡೇಸಾಬ 'ಹೂಂ' ಅಂದರು. ಅವರಿಬ್ಬರು ಹಂಪಿಗೆ ಬಂದರು. ವಿಜಯನಗರ ಸಾಮ್ರಾಜ್ಯದ ವೈಭವದ ಕಾಲದಲ್ಲಿ ಹರಿದಾಸರ ಆಡೊಂಬಲವೇ ಆಗಿದ್ದ ಹಂಪಿಯಲ್ಲಿ ಬಡೇಸಾಬರಿಗೆ ಶಾಂತಿ - ನೆಮ್ಮದಿ ದೊರಕಿತು. ಬಡೇಸಾಬನನ್ನು ಹಂಪಿಗೆ ಕರೆತಂದಿದ್ದ ಸ್ವಾಮೀಜಿ ಇದ್ದಕ್ಕಿದ್ದ ಹಾಗೆ ಅದೃಶ್ಯರಾದರು!

ಕೆಲದಿನಗಳ ನಂತರ ರಾಮಾವಧೂತ ಎಂಬ ಮತ್ತೊಬ್ಬ ಸತ್ಪುರಷರು ಹಂಪಿಯ ಗುಹೆಯೊಂದರಲ್ಲಿ ವಾಸಿಸುತ್ತಿದ್ದ ಬಡೇಸಾಬನನ್ನು ತಮ್ಮ ಗುಹೆಗೆ ಕರೆದೊಯ್ದರು. ಕೆಲವು ಕಾಲ ಅಲ್ಲಿ ಅವರು ಒಟ್ಟಾಗಿಯೇ ಇದ್ದರು. ಐದು ವರುಷಗಳ ನಂತರ ಬಡೇಸಾಬ ಗೋನವಾರಕ್ಕೆ ಮರಳಿ ಬಂದನು. ತಾವು ನಿಗದಿಪಡಿಸಿದ ದಿನದೊಳಗೆ ಮರಳಿ ಬರಬೇಕೆಂದು ರಾಮಾವಧೂತರು ಬಡೇಸಾಬನಿಗೆ ತಾಕೀತು ಮಾಡಿದ್ದರು. ಬಡೇಸಾಬ ಹಂಪಿಗೆ ಮರಳಿ ಬಂದನು ನಿಜ. ಆದರೆ ಒಂದು ದಿವಸ ವಿಳಂಬವಾಗಿತ್ತು. ರಾಮಾವಧೂತರ ಗುಹೆ ಬರಿದಾಗಿತ್ತು. ಇದರಿಂದ ವಿಚಲಿತನಾಗಿ, ಜೀವನಾಸಕ್ತಿಯನ್ನು ಕಳೆದುಕೊಂಡ ಬಡೇಸಾಬ ಚಕ್ರತೀರ್ಥದಲ್ಲಿ ಹಾರಿ ಪ್ರಾಣಾರ್ಪಣೆ ಮಾಡಿಕೊಳ್ಳಲು ನಿರ್ಧರಿಸಿದ. ತುಂಗಭದ್ರೆಯ ಚಕ್ರತೀರ್ಥ ಒಂದು ಭಯಾನಕ ಮಡು. ಅದರಲ್ಲಿ ಸಿಲುಕಿಕೊಂಡವರು ಜೀವಂತವಾಗಿ ಉಳಿಯುವುದಿಲ್ಲ. ಬಡೇಸಾಬ ಚಕ್ರತೀರ್ಥಕ್ಕೆ ಬಂದಾಗ ಮಡುವಿನ ಆಳದಿಂದ ಅವರಿಗೆ 'ಶ್ರೀರಾಮ' 'ಶ್ರೀರಾಮ' ಎಂಬ ಶಬ್ದ ಕೇಳಿ ಬಂತು. ತನ್ನ ಮನದಲ್ಲಿ ಶ್ರೀರಾಮ ಬೀಜ ಬಿತ್ತಿದ ಅನುಭವ ಬಡೇಸಾಬನಿಗೆ. ಅಂದಿನಿಂದ ಪಿಂಜಾರ ಬಡೇಸಾಬ ರಾಮದಾಸರಾದರು.

ರಾಮದಾಸರಾಗಿ ಅತ್ಯುನ್ನತ ಸಂಸ್ಕೃತ ಸಂಭೂತರಾದ ಬಡೇಸಾಬ ಸುಮಾರು ೭೦೦ ಹಾಡುಗಳನ್ನು, ಕೀರ್ತನೆಗಳನ್ನು ಪಂಚಶತಾಷ್ಟಗಳನ್ನೂ ರಚಿಸಿದ್ದಾರೆ. ಸುಮಾರು

೪೬೦ ಶ್ಲೋಕಗಳುಳ್ಳ 'ಶ್ರೀರಾಮ ಭಜನೆ'ಯನ್ನು ಅವರು ರಚಿಸಿದ್ದಾರೆ. ಅವರ ಪಂಚ ಶತಾಷ್ಟಕಗಳೆಂದರೆ : ಶಿವ ಶತಾಷ್ಟಕ, ಆಂಜನೇಯ ಶತಾಷ್ಟಕ, ಶ್ರೀಗೋವಿಂದ ಶತಾಷ್ಟಕ, ಶ್ರೀ ವಿಠ್ಠಲ ಶತಾಷ್ಟಕ ಮತ್ತು ಶ್ರೀರಾಮಶತಾಷ್ಟಕ.

ವರ್ಷ ೧೯೩೨ರಲ್ಲಿ ತನ್ನ ಐವತ್ತನೆ ವಯಸ್ಸಿನಲ್ಲಿ ನಿಧನರಾದ ರಾಮದಾಸರ ಸಮಾಧಿಯನ್ನು ಲಿಂಗದಹಳ್ಳಿಯಲ್ಲಿ ನಿರ್ಮಿಸಲಾಗಿದ್ದು ಪ್ರತಿ ವರ್ಷವೂ ಉತ್ಸವ ನೆರವೇರುತ್ತದೆ.

ರಾಮದಾಸರ ವೃತ್ತಾಂತವನ್ನು ಸಾಮಾನ್ಯ ಜನರಿಗೆ ಪರಿಚಯ ಮಾಡಿಕೊಟ್ಟ ಕಾಗಲಕರ್ ಅವರು ಮಹದುಪಕಾರಮಾಡಿದ್ದಾರೆ. ❒

ಅಧ್ಯಾಯ-೩

ಸಾಂಸ್ಕೃತಿಕ ಸಂಪನ್ನ

ಹತ್ತೊಂಬತ್ತು ನೂರಾ ಐವತ್ತರ ಮಾತೆಂದು ಕಾಣುತ್ತದೆ. ಕಲಬುರಗಿಯಲ್ಲಿ ನಾಡ ಹಬ್ಬವನ್ನು ಅತ್ಯಂತ ವಿಜೃಂಭಣೆಯಿಂದ ಆಚರಿಸಲಾಗುತ್ತಿತ್ತು. ನಾಡಹಬ್ಬವೆಂದರೆ ಆಗ ಕಲಬುರಗಿಯ ಕನ್ನಡಿಗರಿಗೆ ಸಾಹಿತ್ಯ, ಸಂಗೀತ, ಸಂಸ್ಕೃತಿಯ ರಸದೂತಣದ ಹಬ್ಬವೇ ಆಗಿತ್ತು. ಕನ್ನಡ ನಾಡಿನ ಸಾಹಿತ್ಯ ದಿಗ್ಗಜರೆಲ್ಲ ಕಲಬುರಗಿಗೆ ಆಗಮಿಸಿ ನಾಡಹಬ್ಬದ ಸಾಂಸ್ಕೃತಿಕ ಸಿರಿವಂತಿಕೆಗೆ ಮೆರುಗನ್ನು ನೀಡುತ್ತಿದ್ದರು. ಉರ್ದು, ಮರಾಠಿ, ತೆಲುಗು ಭಾಷೆಗಳ ಒತ್ತಡದಲ್ಲಿ ಅಪ್ಪಚ್ಚಿಯಾಗಿದ್ದ ಕನ್ನಡ ನಾಡಹಬ್ಬದಂತಹ ಅಪರೂಪದ ಸಂದರ್ಭದಲ್ಲಿ ಪುಟಿದೇಳುತ್ತಿತ್ತು.

ಆ ವರ್ಷದ ನಾಡಹಬ್ಬಕ್ಕೆ ವರಕವಿ ದ.ರಾ. ಬೇಂದ್ರೆಯವರ ಆಗಮನ -ವಾಗಿತ್ತು. ಈ ಮುಂಚೆಯೂ ಕೂಡ ಅವರು ಕಲಬುರಗಿಗೆ ಬಂದು ಹೋಗಿದ್ದರು. ಕಾವ್ಯಗಾರುಡಿಗ ಬೇಂದ್ರೆಯವರ ಕಂಠದಿಂದ ಭಾವಗೀತೆಗಳು ಓತಪ್ರೋತನಾಗಿ ಹರಿದು ಬಂದವು. ಗಂಗಾವತರಣ, ನಾದಲೀಲೆ, ಸಖೀಗೀತ ಮುಂತಾದ ಅವರ ಪ್ರಖ್ಯಾತ ಕವನ ಸಂಕಲಗಳಿಂದ ಆಯ್ದ ಪದಗಳನ್ನು ಬೇಂದ್ರೆ ಹಾಡಿದರೆಂದರೆ ನೆರೆದಿದ್ದ ಜನ ಮಂತ್ರ ಮುಗ್ಧರಾಗಬೇಕು. ಕನ್ನಡ ಸಾಹಿತ್ಯ ಸಂಘದಲ್ಲಿ ನಡೆದ ಆ ಕಾರ್ಯಕ್ರಮದಲ್ಲಿ ಕನ್ನಡ ರಸಿಕರು ಬೇಂದ್ರೆಯವರ ಮೋಡಿಯ ಗಾಯನಕ್ಕೆ, ಕಾವ್ಯಾತ್ಮಕ ಮಾತುಗಾರಿಕೆಗೆ, ಭಾವಪರವಶರಾಗಿ ಸನ್ನಿಹಿಡಿದವರಂತೆ ಕುಳಿತಿದ್ದರು.

ಸಭೆ ನಡೆಯುತ್ತಿದ್ದ ಆವರಣದ ಕೊನೆಯ ಸಾಲಿನಲ್ಲಿ ವಿಲಕ್ಷಣ ವ್ಯಕ್ತಿಯೊಬ್ಬ ಕುಳಿತಿದ್ದ. ಇಪ್ಪತ್ತರ ಏರು ತಾರುಣ್ಯದ, ಮಿರಿ ಮಿರಿ ಮಿಂಚುವ ತೇಜಸ್ಸಿನ ಸಾಲಿಗ್ರಾಮ ವರ್ಣ ಮತ್ತು ಗಾತ್ರೋಪಾದಿಯ, ಹಣೆಯಲ್ಲಿ ಕಪ್ಪು ಸಾದುಬೊಟ್ಟಿನ, ನಕ್ಕರೆ ನಗೆ ಮಿಂಚು ಚೆಲ್ಲುವ ಈ ಯುವಕ ತನ್ನ ಪಾಡಿಗೆ ತಾನು ಕುಳಿತುಕೊಂಡಿದ್ದರೆ ಹತ್ತರಲ್ಲಿ ಹನ್ನೊಂದನೆಯವನಾಗಿ ಯಾರ ಗಮನಕ್ಕೂ ಬಾರದೆ ಉಪೇಕ್ಷಿತನಾಗಿಯೇ ಉಳಿಯುತ್ತಿದ್ದ. ಆದರೆ, ಆತ ಸಾಧಾರಣ ಯುವಕನಾಗಿರಲಿಲ್ಲ.

ಇದ್ದಕ್ಕಿದ್ದ ಹಾಗೆ ಆ ಯುವಕ ತನ್ನೊಂದಿಗೆ ತಂದಿದ್ದ ಕೊಡದ ಮೇಲೆ ತಾಳ ಹಾಕಿ ನಾದವನ್ನು ಹೊರಡಿಸುತ್ತ ಹಾಡಲು ಶುರು ಮಾಡಿದ. "ಇಳಿದು ಬಾ ತಾಯಿ ಇಳಿದು ಬಾ....." ಪ್ರಾರಂಭಿಸಿದ. ಅದಾದ ನಂತರ "ತುಮ್ ತುಮ್ ತುಮ್ ತುಮ್ ತುಂಬಿ ಬಂದಿತ್ತ ತಂಗೀ ತುಂಬಿ ಬಂದಿತ್ತ....." ಯುವಕನ ವಿಲಕ್ಷಣ ಗಾಯನಕ್ಕೆ ಮಾರು ಹೋದ ಶ್ರೋತೃಗಳು ಬೇಂದ್ರೆ ಕಡೆಗೆ ಬೆನ್ನು ಮಾಡಿ, ಆ ಯುವಕನತ್ತ ಮುಖ ಮಾಡಿ ಆತನ ಗಾಯನವನ್ನು ಸವಿಯತೊಡಗಿದರು.

ಆ ಯುವಕನಿಗೆ ತಾನೇನು ಮಾಡುತ್ತಿದ್ದನೇ ಎಂಬ ಅರಿವೇ ಇರಲಿಲ್ಲ! ಬೇಂದ್ರೆ ಗಾಯನದಿಂದ ದಿಢೀರ್ ಪ್ರೇರಿತನಾಗಿದ್ದ ಆತನಿಗೆ ಶಿಷ್ಟಾಚಾರ, ಸಭಾ ಗಾಂಭೀರ್ಯ, ಮುಂತಾದುವುಗಳಿಗೆ ಭಂಗ ಉಂಟು ಮಾಡುತ್ತಿದ್ದೇನೆಂಬ ಅಳುಕೂ ಇರಲಿಲ್ಲ. ಆತನ ಉದ್ಧಟತನದ ಮಧ್ಯ ಪ್ರವೇಶಕ್ಕೆ ಯಾರೂ ಆಕ್ಷೇಪ ಎತ್ತಲಿಲ್ಲ! ಯಾಕೆಂದರೆ ಅಲ್ಲಿ ರಸಭಂಗವಾಗಿರಲಿಲ್ಲ. ಬದಲಿಗೆ ಹೊಸದೊಂದು ರಸೋತ್ಪತ್ತಿಯಾಗಿತ್ತು! ಕಾರ್ಯಕ್ರಮ ಸಂಘಟಕರೂ ಆತನ ಗಾಯನಕ್ಕೆ ತಲೆದೂಗಿದರು. ಅಷ್ಟೇ ಏಕೆ ಸ್ವತಃ ಅಂಬಿಕಾತನಯ ದತ್ತರೇ ಆತನ ಗಾಯನಕ್ಕೆ ಮನಸೋತರು!

"ಬೇಂದ್ರೆನ ಮೋಡಿ ಹಿಂದ್ಹೋತು, ಮುಖ ಅತ್ತಾತು. ಏ ತಮ್ಮಾ, ವೇದಿಕೆ ಮ್ಯಾಗ ಬಾ. ಕೊಡ ಬಡಬಡದು ತಾಳ ಹಾಕು, ತುಂಬತದೇಳು ತಂತಾನ ಕೊಡು" ಎಂದ ಬೇಂದ್ರೆಯವರು ಆ ಪರಿಚಿತ ಯುವಕನನ್ನು ವಿದ್ಯುಕ್ತವಾಗಿ ವೇದಿಕೆಗೆ ಆಹ್ವಾನಿಸಿದರು. ಪ್ರಾಯಃ ಈ ಸಂದರ್ಭ ಮತ್ತು ಅವಕಾಶಕ್ಕಾಗಿಯೇ ಕಾಯುತ್ತಿದ್ದಿರಬಹುದಾದ ಕೃಷ್ಣವರ್ಣದ ಕುಳ್ಳನೆಯ ಯುವಕ ಪಂಚಕಲ್ಯಾಣ ಕುದರೆ ಪುಟ ನಡಗೆಯಂದದೊಂದಿಗೆ ವೇದಿಕೆ ಹತ್ತಿಯೇ ಬಿಟ್ಟ! ಮತ್ತೆ ನಾಲ್ಕಾರು ಹಾಡುಗಳನ್ನು ಹಾಡಿ ಜನರನ್ನು ರಂಜಿಸಿದ. ವರಕವಿಗಳೂ ಅವನ ಹಾಡುಗಾರಿಕೆಯನ್ನು ಸವಿದರು. ಯುವಕ ತನ್ನ ಗಾಯನ ಮೋಡಿಯಿಂದ ಶ್ರೋತೃಗಳ ಹೃನ್ಮನಗಳನ್ನು ಸೂರೆಗೊಂಡಿದ್ದ.

"ಹೊತ್ತಾತು ನಾ ಇನ್ನ ಹೊರಡತೀನಿ, ಹುಟ್ಟಿ ಮ್ಯಾಲ ಚಹದ ಜುಟ್ಗಿ ಸಿಗತದ. ಭಾಳ ಛಲೋ ಹಾಡಿ ತಮ್ಮ, ಹಾಡು, ಹಾಡು!" ಯುವಕನ ತಲೆಯ ಮೇಲೆ ಕೈಯಾಡಿಸಿ, ಬೆನ್ನು ನೇವರಿಸಿ ಸೊಲ್ಲಾಪುರದ ಗಾಡಿ ಹತ್ತಿದರು ಬೇಂದ್ರೆಯವರು.

ಬೇಂದ್ರೆಯವರಿಂದ ಶಹಬ್ಬಾಸಗಿರಿ ಗಿಟ್ಟಿಸಿದ ಆ ವ್ಯಕ್ತಿ ಯಾರು? ಅವರೇ ನಮ್ಮ ವಿ.ಎನ್. ಕಾಗಲಕರ್! ತಮ್ಮಲ್ಲಿ ಹುದುಗಿದ್ದ ಗಾಯನ ಪ್ರತಿಭೆಯ ತುಡಿತಕ್ಕೆ

ಒಳಗಾಗಿ ಸಭಾ ಮರ್ಯಾದೆಯನ್ನು ಲೆಕ್ಕಿಸದೆ ತಮ್ಮ ಹಾಡುಗಾರಿಕೆಯನ್ನು ಮೊಳಗಿದ್ದ ಕಾಗಲಕರ್ ಆ ಒಂದು ಪ್ರಸಂಗದಿಂದ ದಿಢೀರ್ ಪ್ರಸಿದ್ಧಿಗೆ ಬಂದರು. ಕಲಬುರಗಿಯ ಸಾಂಸ್ಕೃತಿಕ ವಲಯದಲ್ಲಿ ಅವರು ಮನೆ ಮಾತಾದರು. ಅಷ್ಟೇ ಅಲ್ಲ ಭವಿಷ್ಯದ ಸಾಂಸ್ಕೃತಿಕ ನೂತನ ಬೆಳವಣಿಗೆಗೂ ತಮಗರಿವಿಲ್ಲದಂತೆಯೇ ಅವರು ಅಸ್ತಿವಾರ ಹಾಕಿದ್ದರು.

ಕಾಗಲಕರ್ ಅವರು ಪತ್ರಕರ್ತರಾಗಿರದಿದ್ದರೆ ಏನಾಗುತ್ತಿದ್ದರು? ಬಹು ಕುತೂಹಲದ ಪ್ರಶ್ನೆ. ಅವರ ವೈವಿಧ್ಯಮಯ ಸಾಂಸ್ಕೃತಿಕ ಆಸಕ್ತಿಗಳನ್ನು ಗಮನಿಸಿದರೆ ಅವರು ಏನಾಗಬಹುದಿತ್ತು ಎಂದು ಖಚಿತವಾಗಿ ಹೇಳುವುದು ಕಷ್ಟ. ಅವರು ಗಾಯಕನಾಗಬಹುದಿತ್ತು, ನಟನಾಗಬಹುದಿತ್ತು; ಆಧುನಿಕ ಹರಿದಾಸನೇ ಆಗಬಹುದಿತ್ತು! ಸಾಹಿತಿಯಾಗಬಹುದಿತ್ತು, ಸಂಶೋಧಕನೂ ಆಗಬಹುದಿತ್ತು. ಒಳ್ಳೆಯ ತರಬೇತು ದೊರೆತಿದ್ದರೆ ನರ್ತನ ಪಟುವೂ ಆಗಬಹುದಿತ್ತು. ಹೀಗೆ ಹತ್ತಾರು ಸಾಂಸ್ಕೃತಿಕ ಸಾಧ್ಯತೆಗಳನ್ನು ತಮ್ಮೊಳಗೆ ಅಡಗಿಸಿಕೊಂಡಿದ್ದ ಕಾಗಲಕರ್ ವಿಧಿ ಲಿಖಿತದಂತೆ ಕೊನೆಗೂ ಆದದ್ದು ಜವಳಿ ಗಿರಣಿಯೊಂದರಲ್ಲಿ ಕಾರಕೂನ!

ಉದರಂಭರಣಕ್ಕಾಗಿ ಅವರು ಯಾವುದೇ ವೃತ್ತಿಯನ್ನು ಕೈಕೊಂಡಿದ್ದರೂ ಪ್ರವೃತ್ತಿಯಿಂದ ಅವರು ಅಪರೂಪದ ಪತ್ರಕರ್ತರಾಗಿದ್ದರು. ವ್ಯಕ್ತಿಯೊಬ್ಬನ ಸಾಂಸ್ಕೃತಿಕ, ಸೃಜನಶೀಲಾ ಸಾಧ್ಯತೆಗಳು ಪ್ರಾಯಃ ಓರ್ವ ಪತ್ರಕರ್ತನಲ್ಲಿಯೇ ಮೈದಳೆಯಲು ಸಾಧ್ಯವೇನೋ. ಪ್ರದರ್ಶನ ಕಲೆಗಳಲ್ಲಿ ಆಸಕ್ತಿ ಇದ್ದರೂ ಜೀವನದ ಒತ್ತಡಗಳಿಂದಾಗಿ, ಅನಿವಾರ್ಯತೆಗಳಿಂದಾಗಿ ಅವುಗಳನ್ನು ಪೂರ್ಣಾವಧಿ ನೆಲೆಯಲ್ಲಿ ಸಾಕಾರಗೊಳಿಸಲು ಅನೇಕರಿಗೆ ಸಾಧ್ಯವಾಗಲಾರದು. ಇದಕ್ಕೆ ಕಾಗಲಕರ್ ಅವರೂ ಹೊರತಾಗಿರಲಿಲ್ಲ. ಆದರೆ ಪತ್ರಿಕೆ, ಒಂದು ಪರಿಣಾಮಕಾರಿಯಾದ ಅಭಿವ್ಯಕ್ತಿ ಮಾಧ್ಯಮವಾಗಿರುವುದರಿಂದ ಆತ ತನ್ನ ಬರವಣಿಗೆಯ ಮೂಲಕ ತನ್ನೊಳಗಿನ ಎಲ್ಲ ಆಸಕ್ತಿಗಳಿಗೆ ಅಭಿವ್ಯಕ್ತಿ ನೀಡುವ ಸಂದರ್ಭಗಳು ವಿಫುಲವಾಗಿರುವುದರಿಂದ ಬಹುಮುಖ ಪ್ರತಿಭೆಯ ವ್ಯಕ್ತಿಗಳು ಪತ್ರಕರ್ತರಾಗುವುದೇ ಯೋಗ್ಯವೇನೋ!

ಆತಂಕದಲ್ಲಿ ಕನ್ನಡ ಸಂಸ್ಕೃತಿ

ನಿಜಾಂಶಾಹಿಯ ರಾಜಧಾನಿ ಹೈದ್ರಾಬಾದಿನಲ್ಲಿ ಕನ್ನಡ ಕ್ರಾಂತಿಯನ್ನು ಹುಟ್ಟು ಹಾಕಿದ ಹುಮ್ಮಸ್ಸಿನಲ್ಲೇ ಕಾಗಲಕರ್ ಕಲಬುರಗಿಗೆ ಪಾದಾರ್ಪಣ ಮಾಡಿದ್ದರು. ಹೈದ್ರಾಬಾದ ಸಂಸ್ಥಾನ ಆಡಳಿತ ಭಾಗವೇ ಆಗಿದ್ದ ಕಲಬುರಗಿಯಲ್ಲಿ ಸಾಂಸ್ಕೃತಿಕ ವಾತಾವರಣ ಹೈದ್ರಾಬಾದಿಗಿಂತಲೂ ಭಿನ್ನವಾಗೇನೂ ಇರಲಿಲ್ಲ. ಇಲ್ಲಿ ಒಂದು

ರೀತಿಯ ಸಾಂಸ್ಕೃತಿಕ ಜಡತ್ವವೇ ನಿರ್ಮಾಣವಾಗಿತ್ತು. ತಮ್ಮ ಮಾತೃ ಭಾಷೆಯಲ್ಲಿ ಶಿಕ್ಷಣದಿಂದ ವಂಚಿತರಾಗಿದ್ದ ಕನ್ನಡ ಜನತೆ ಉರ್ದು, ಮರಾಠಿ, ಇಂಗ್ಲಿಷ್ ಮಾಧ್ಯಮದಲ್ಲಿ ಶಿಕ್ಷಣ ಪಡೆಯುವುದು ಅನಿವಾರ್ಯವಾಗಿತ್ತು. ನಿಜಾಂಶಾಹಿಯ ಕೊನೆಯ ದಿನಗಳಲ್ಲಿ ಕನ್ನಡ ಮತ್ತಷ್ಟು ಅವಕೃಪೆಗೆ ಒಳಗಾಗಿತ್ತು. ರಜಾಕಾರರ ಹಿಡಿತ ಆಡಳಿತದ ಮೇಲೆ ಬಿಗಿಗೊಳ್ಳುತ್ತ ನಡೆದಿತ್ತು.

ಸ್ವಾತಂತ್ರ್ಯದ ನಂತರವೂ ಭಾರತ ಒಕ್ಕೂಟದ ಸಾರ್ವಭೌಮತ್ವ, ಪಾರಮ್ಯವನ್ನು ಗುರುತಿಸಲು ನಿರಾಕರಿಸಿದ ನಿಜಾಂ ತನ್ನ ಪ್ರತ್ಯೇಕತೆಯನ್ನು ಉಳಿಸಿಕೊಂಡು ಬಂದಿದ್ದ. ಹೈದ್ರಾಬಾದ ರಾಜ್ಯದ ಜನತೆ ಅದರಲ್ಲೂ ಮುಖ್ಯವಾಗಿ ಕನ್ನಡ ಭಾಷೆಯ ಪ್ರದೇಶಗಳಾದ ಕಲಬುರಗಿ, ಬೀದರ, ರಾಯಚೂರು, ಕೊಪ್ಪಳ ಭಾಗಗಳಲ್ಲಿ ಜನತೆಗೆ ಸ್ವಾತಂತ್ರ್ಯ ಕೈಗೆಟುಕದ ಕುಸುಮವಾಗಿ ಉಳಿದಿತ್ತು. ಭಾರತದ ಇತರ ಎಲ್ಲ ಕಡೆಗಳಲ್ಲಿ ಹರಡಿದ ಸ್ವಾತಂತ್ರ್ಯದ ಗಾಳಿಯ ಸುಗಂಧ ಹೈದ್ರಾಬಾದ ರಾಜ್ಯವನ್ನು ತಟ್ಟಲೇ ಇಲ್ಲ. ಹೈದ್ರಾಬಾದ ರಾಜ್ಯವನ್ನು ನಿಜಾಮನ ದುರಾಡಳಿತದಿಂದ ಬಿಡುಗಡೆಗೊಳಿಸುವ ಚಳವಳಿ ದಿನೇ ದಿನೇ ಬಲಗೊಳ್ಳುತ್ತ ಹೊರಟಿತ್ತು. ಹೈದ್ರಾಬಾದ ವಿಮೋಚನೆಗೆ ಮತ್ತೊಂದು ಸ್ವಾತಂತ್ರ್ಯ ಚಳವಳಿಯೇ ರೂಪುಗೊಂಡಿತು. ನಿಜಾಮನ ಉದ್ಧಟತನದಿಂದ ಚಿಂತಿತರಾಗಿದ್ದ ಮಹಾತ್ಮ ಗಾಂಧೀಜಿ ಹೈದ್ರಾಬಾದ ವಿಮೋಚನಾ ಚಳವಳಿಯನ್ನು ಭಾರತ ಸ್ವಾತಂತ್ರ್ಯ ಸಂಗ್ರಾಮದ ಕೊನೆಯ ಚಳವಳಿ ಎಂದು ಬಣ್ಣಿಸಿದ್ದರು.

ನಿಜಾಂ ಆಡಳಿತದಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯ ಎಷ್ಟೊಂದು ಅಪಾಯಕಾರಿ ಹಂತ ತಲುಪಿತ್ತೆಂದರೆ ಸಾಹಿತ್ಯ, ಕಲೆ, ಸಾಂಸ್ಕೃತಿಕ ಚಟುವಟಿಕೆಗಳನ್ನು ಸ್ವಾತಂತ್ರ್ಯ ಚಳವಳಿಯ ಭಾಗವೆಂದೇ ಬಗೆದಿತ್ತು! ಹೀಗಾಗಿ ಸಾಂಸ್ಕೃತಿಕ ಸಂಘಟನೆಗಳನ್ನು, ಚಟುವಟಿಕೆಗಳನ್ನು ನಡೆಸಿಕೊಂಡು ಹೋಗುವುದು ಅನೇಕ ಕಡೆ ದುಸ್ತರವಾಗಿತ್ತು. ಇಂತಹ ಎಲ್ಲ ಚಟುವಟಿಕೆಗಳ ಮೇಲೆ ಆಡಳಿತದ ಹದ್ದಿನ ಕಣ್ಣು ಯಾವಾಗಲೂ ಇದ್ದೇ ಇತ್ತು.

ಆದರೆ ಅಭಿವ್ಯಕ್ತಿ ಸ್ವಾತಂತ್ರ್ಯದ ಒತ್ತಾಸೆಯ ಸಾಂಸ್ಕೃತಿಯ ಚಳವಳಿಗಳು ಒತ್ತಡಗಳಿಗೆ ಮಣಿಯುವುದಿಲ್ಲ, ದಮನಕ್ಕೆ ಬಾಗುವುದಿಲ್ಲ. ಅವುಗಳನ್ನು ಅದುಮಿದಷ್ಟೂ ಅವು ಹಿಗ್ಗುವ ಸಾಮರ್ಥ್ಯವನ್ನು ಪಡೆದುಕೊಂಡಿರುತ್ತವೆ. ನಿಜಾಂ ಶಾಹಿ ವಿರುದ್ಧ ನಡೆದ ಚಳವಳಿಯೂ ಇದಕ್ಕೆ ಹೊರತಾಗಿರಲಿಲ್ಲ. ಇಡೀ ಹೈದ್ರಾಬಾದ ಪ್ರಾಂತದಾದ್ಯಂತ ಸ್ವಾತಂತ್ರ್ಯ, ಸ್ವದೇಶಿ, ಭಾಷೆ, ಸಾಹಿತ್ಯ, ಸಂಸ್ಕೃತಿ, ಕಲೆ

ಮುಂತಾದುವುಗಳಿಂದ ಪ್ರೇರಿತವಾದ ಚಟುವಟಿಕೆಗಳು ವಾಸ್ತವವಾಗಿ ಪ್ರತ್ಯಕ್ಷವಾಗಿ ಇಲ್ಲವೆ ಪರೋಕ್ಷವಾಗಿ ರಾಜಕೀಯ ಚಳುವಳಿ ಆಗಿರಲಿಲ್ಲ ಎಂದು ಹೇಳುವುದಕ್ಕೆ ಆಗುವುದಿಲ್ಲ. ಅಂದಿನ ವಾತಾವರಣದ ಮೂಲ ಉದ್ದೇಶ ಮತ್ತು ಗುರಿ ಸ್ವಾತಂತ್ರ್ಯವೊಂದೇ ಆಗಿದ್ದುದರಿಂದ ಎಲ್ಲ ಚಳುವಳಿ, ಚಟುವಟಿಕೆಗಳು ಅದಕ್ಕೆ ಪೂರಕವಾಗಿಯೇ ಇರುತ್ತಿದ್ದವು.

ಹೈದ್ರಾಬಾದಿನಲ್ಲಿ ಇಂತಹ ಅನೇಕ ಚಟುವಟಿಕೆಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು ಅದರಿಂದ ತೀವ್ರವಾಗಿ ಪ್ರಭಾವಿತರಾಗಿದ್ದ ಕಾಗಲಕರ್ ಅವರು ಕಲಬುರಗಿಯಲ್ಲಿ ಅದನ್ನು ಮುಂದುವರೆಸಿಕೊಂಡು ಬಂದಿದ್ದರಲ್ಲಿ, ಆಶ್ಚರ್ಯವೇನೂ ಇರಲಾರದು. ನೃಪತುಂಗ ಕನ್ನಡ ಶಾಲೆಯ ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಪ್ರಭಾವ ಹಾಗೂ ವಿವಿಧ ಕ್ಷೇತ್ರಗಳಲ್ಲಿನ ಕನ್ನಡ ದಿಗ್ಗಜರ ನಿರಂತರ ಸಂಪರ್ಕ, ದಿನೇ ದಿನೇ ಬಲಿಯುತ್ತಿದ್ದ ಸ್ವಾತಂತ್ರ್ಯದ ಹಂಬಲ ಇತ್ಯಾದಿಗಳ ಪ್ರಭಾವದಿಂದಾಗಿ ಕಾಗಲಕರ್ ರಾಷ್ಟ್ರೀಯ ಮನೋಭಾವವನ್ನು, ಕನ್ನಡ ಕೈಂಕರ್ಯವನ್ನು ಸ್ವೀಕರಿಸಿದ್ದರು. ಅವರ ಪ್ರಾರಂಭಿಕ ಹವ್ಯಾಸಿ ಬರವಣಿಗೆಯಲ್ಲಿ ಅದು ಹಾಸುಹೊಕ್ಕಾಗಿತ್ತು. ಅಭಿನಯ, ನೃತ್ಯ ಮುಂತಾದ ಪ್ರದರ್ಶನ ಕಲೆಗಳಲ್ಲಿಯೂ ಅವರು ತಮ್ಮನ್ನು ತಾವು ತೊಡಗಿಸಿಕೊಂಡಿದ್ದರು.

ಸೀರೆ ಉಟ್ಟು, ಕಚ್ಚೆ ಹಾಕಿ ಸುಂದರ ಹೆಣ್ಣಿನ ಪಾತ್ರ ನಿರ್ವಹಿಸುವಲ್ಲಿಯೂ ಅವರು ಸೈ ಎನ್ನಿಸಿಕೊಂಡಿದ್ದರು.

ಕಲಬುರಗಿಗೆ ಬಂದಾದ ಮೇಲೆ ಅವರ ಸಾಂಸ್ಕೃತಿಕ ಆಸಕ್ತಿಗಳು ಮತ್ತಷ್ಟು ಉಲ್ಬಣಗೊಂಡವು. ಸಾಂಸ್ಕೃತಿಕ ಲೋಕದಲ್ಲಿ ಸ್ವಚ್ಛಂದ ಹಕ್ಕಿಯಂತೆ ಅವರು ಹಾರಾಡತೊಡಗಿದರು, ಹಾಡತೊಡಗಿದರು. ತಮ್ಮ ಸಾಂಸ್ಕೃತಿಕ ಸಾಧ್ಯತೆಗಳನ್ನು ತೆರೆದುಕೊಳ್ಳಲು ಅವರಿಗೆ ಕಲಬುರಗಿ ಹೈದ್ರಾಬಾದಿಗಿಂತಲೂ ಪ್ರಶಸ್ತವಾಗಿತ್ತು. ಸಾಂಸ್ಕೃತಿಕ ಕಲಾವಂತಿಕೆಯ ನೂತನ ಕೃಷಿಗೆ ಕಲಬುರಗಿ ಫಲವತ್ತಾದ ಭೂಮಿಕೆಯೇ ಆಗಿತ್ತು.

ಸಾಹಿತ್ಯ ಸಂಘದ ನಾಡಹಬ್ಬದ ಕಾರ್ಯಕ್ರಮದಲ್ಲಿ ತಮ್ಮ ವಿಶಿಷ್ಟ ಶೈಲಿಯ ಸುಮಧುರ ಗಾಯನದಿಂದ ಬೇಂದ್ರೆ ಅವರಿಂದಲೇ 'ಭೇಶ್!' ಎನಿಸಿಕೊಂಡಿದ್ದ ಕಾಗಲಕರ್ ಕಲಬುರಗಿಯ ಸಾಂಸ್ಕೃತಿಕ ವಲಯದಲ್ಲಿ ಜನಪ್ರಿಯರಾಗತೊಡಗಿದರು. ಬ್ರಹ್ಮಪುರದ ಸಬೇಶಾನಂದ ಮಂದಿರದಲ್ಲಿ ನಡೆದ ನಾಡಹಬ್ಬ ಸಮಾರಂಭಕ್ಕೆ ಅವರನ್ನು ಮುಖ್ಯ ಅತಿಥಿ ಎಂದು ಆಹ್ವಾನಿಸಲಾಗಿತ್ತು. ಭಾಷಣ

ಮಾಡುವುದರಲ್ಲಿಯೂ ಪ್ರವೀಣರಾಗಿದ್ದ ಕಾಗಲಕರ್ ಭಾಷಣ ಮಾಡಿ ಸುಮ್ಮನಾಗಲಿಲ್ಲ. ದಿಢೀರ್ ಪ್ರೇರಣೆಗೆ ಒಳಗಾದ ಅವರು ಅಂದು ತಮ್ಮಲ್ಲಿ ಹುದುಗಿದ್ದ ಹಾಡುಗಾರನಿಗೆ ವಿಶೇಷ ಚಾಲನೆ ನೀಡಿ ಬೇಂದ್ರೆಯವರ ಹಲವಾರು ಕವನಗಳನ್ನು ಸುಶ್ರಾವ್ಯವಾಗಿ ಅಭಿನಯ ಸಮೇತ ಗಾಡಿ ನೆರೆದಿದ್ದವರನ್ನು ಓತಪ್ರೋತವಾಗಿ ರಂಜಿಸಿದರು. ಅದಾದ ನಂತರ ಅವಕಾಶ ಸಿಕ್ಕಾಗಲೆಲ್ಲ, ಸಂದರ್ಭಗಳು ಪ್ರಾಪ್ತವಾದಾಗಲೆಲ್ಲ ಕಾಗಲಕರ್ ಹಾಡುವುದನ್ನು ಮರೆಯುತ್ತಿರಲಿಲ್ಲ. ಗಾಯನಕ್ಕೆ ಅವರ ಪ್ರಥಮ ಆಯ್ಕೆ ಬೇಂದ್ರೆಯವರ ಕವನಗಳೇ. ಅಂತೆಯೇ ಅವರು ಬೇಂದ್ರೆ ಕವನಗಳ ಗಾಯನ ಪರಿಣಿತನೆಂಬ ಖ್ಯಾತಿಗೆ ಭಾಜನರಾದರು.

ಹರಿದಾಸ ಸಾಹಿತ್ಯವೆಂದರೆ ಹಸಿವೆ - ನೀರಡಿಕೆಗಳನ್ನು ಮರೆಯುತ್ತಿದ್ದ ಕಾಗಲಕರ್ ತಾವು ಕಲಿತ ಪದ, ಕೀರ್ತನೆ, ಸುಳಾದಿ, ಉಗಾಭೋಗಗಳನ್ನು ಸುಶ್ರಾವ್ಯವಾಗಿ ಹಾಡುತ್ತಿದ್ದರಷ್ಟೇ ಅಲ್ಲ ಇತರರಿಗೂ ಹಾಡಲು ಕಲಿಸುತ್ತಿದ್ದರು. ತಮಗೆ ಅತ್ಯಂತ ಆಪ್ಯಾಯಮಾನವಾಗಿದ್ದ ಮಳಖೇಡ ಪುಣ್ಯಕ್ಷೇತ್ರ ಅವರ ಅಚ್ಚುಮೆಚ್ಚಿನ ಧಾರ್ಮಿಕ ಕೇಂದ್ರವಾಗಿತ್ತು. ತಮ್ಮ ಗಾಯನವನ್ನು ಅವರು ಮಳಖೇಡದ ಯತಿವರೇಣ್ಯ ಜಯತೀರ್ಥರಿಗೆ ಸಮರ್ಪಿಸುತ್ತಿದ್ದರು. ಕಾಗಿಣಾ ನದಿ ತಟದ ಟೀಕಾಚಾರ್ಯರ ಸನ್ನಿಧಾನದಲ್ಲಿ ಗಂಟೆಗಟ್ಟಲೆ ಗಾಯನದಲ್ಲಿ ತೊಡಗುತ್ತಿದ್ದರು. ಒಂದು ಬಾರಿ ಟೀಕಾಚಾರ್ಯರ ದರ್ಶನವಾದರೆ ಸಾಕು ಅವರ ಸಾಂಸ್ಕೃತಿಕ ಹುಮ್ಮಸ್ಸು ಮತ್ತಷ್ಟು ಗರಿಗೆದರಿಕೊಂಡು ನಲಿಯುತ್ತಿತ್ತು. ಕಣ್ಣುಮುಚ್ಚಿ, ಮನವನ್ನು ತದೇಕಗೊಳಿಸಿ ದಾಸರ ಪದಗಳನ್ನು ಹಾಡಲು ಪ್ರಾರಂಭಿಸಿದರೆ ಸಾಕು ಸುತ್ತಮುತ್ತಲಿನವರೆಲ್ಲ ತಮಗೆ ಅರಿವಿಲ್ಲದಂತೆ ಅವರ ಬಳಿ ಬಂದು ಕುಳಿತು ಆಲಿಸುತ್ತಿದ್ದರು. ತಮ್ಮ ಅನನ್ಯ ವೈಶಿಷ್ಟ್ಯಪೂರ್ಣ ಹಾಡುಗಾರಿಕೆಯಿಂದ ತಾವಿದ್ದ ತಾಣದಲ್ಲಿಯೇ ಭಕ್ತಿಯ ವಾತಾವರಣ ಉಂಟು ಮಾಡಿ ತಮ್ಮ ಸುತ್ತಲಿನ ಪರಿಸರವೂ ಭಕ್ತಿಯ ಕರುಣಾಸಾಗರದಲ್ಲಿ ಮೀಯುವಂತೆ ಮಾಡುತ್ತಿದ್ದರು. ಮೂಲತಃ ಆಧ್ಯಾತ್ಮ ಜೀವಿಯಾಗಿದ್ದ ಕಾಗಲಕರ್ ಭಕ್ತಿ - ವೈರಾಗ್ಯದ ತತ್ವಗಳಿಗೆ ತಮ್ಮನ್ನು ಸಮರ್ಪಿಸಿಕೊಂಡಿದ್ದರು, ಅಂತೆಯೇ ಅವರು ತಮ್ಮ ಬದುಕಿನ ಉದ್ದಕ್ಕೂ ಶುದ್ಧ ಹಸ್ತ - ಚಿತ್ತರಾಗಿ ಉಳಿದು ಇತರರಿಗೆ ಮಾದರಿಯಾಗುವಂತೆ ಬಾಳಿದರು. ಅವರಲ್ಲಿನ ಅಗಾಧ ಮತ್ತು ಅನನ್ಯ ಸಾಂಸ್ಕೃತಿಕ ಕಾಳಜಿಗಳು ಅವರನ್ನು ಶುದ್ಧ ಸಂಸ್ಕರಿತ ಮನುಷ್ಯನನ್ನಾಗಿ ಮಾಡಿದ್ದರಿಂದಲೇ ಅವರು ಅತ್ಯುತ್ತಮ ಪತ್ರಕರ್ತರಾಗಲು ಸಾಧ್ಯವಾಯಿತು.

ಕಾಗಲಕರ್ ಅವರು ಬರೀ ದಾಸ ಸಾಹಿತ್ಯಕ್ಕಷ್ಟೇ ಅಂಟಿಕೊಂಡಿದ್ದರೆಂದು ಹೇಳಿದರೆ ಅಪಚಾರವಾದೀತು. ಮಾನವತೆಯ ಗಣಿಯೇ ಆಗಿರುವ ವಚನ

ಸಾಹಿತ್ಯದಲ್ಲೂ ಅವರು ಆಸಕ್ತಿ ತಳೆದಿದ್ದರು. ಹರಿದಾಸ ಸಾಹಿತ್ಯದ ಮಹತಿಯನ್ನು, ಸ್ವಾವಲಂಬನ ದರ್ಶನವನ್ನು ಅರಿತಿದ್ದ ಕಾಗಲಕರ್ ಶರಣರ ವಚನಗಳಲ್ಲಿನ ಷಟ್‌ಸ್ಥಳಗಳ ಸಾರವು ಕೇಳುಗರ ಹೃದಯಕ್ಕೆ ನಾಟುವಂತೆ ವಚನಗಳನ್ನು ಹಾಡುತ್ತಿದ್ದರು. ಸುಪ್ರಸಿದ್ಧ ಹಿಂದುಸ್ಥಾನ ಶಾಸ್ತ್ರೀಯ ಸಂಗೀತಕಾರರಾದ ಮಲ್ಲಿಕಾರ್ಜುನ ಮನ್ಸೂರ, ಬಸವರಾಜ ರಾಜಗುರು, ಸಿದ್ಧರಾಮ ಜಂಬಲದಿನ್ನಿ ಮುಂತಾದವರು ವಚನಗಳನ್ನು ಸಂಗೀತಕ್ಕೆ ಅಳವಡಿಸಿ ಸುಶ್ರಾವ್ಯವಾಗಿ ಹಾಡುವ ಹೊಸದೊಂದು ಬಗೆಯ ವಚನ ಗಾಯನ ಚಳವಳಿಗೆ ನಾಂದಿ ಹಾಡಿದ್ದನ್ನು ಅವರು ಬಹುವಾಗಿ ಮೆಚ್ಚಿಕೊಂಡಿದ್ದರು. ವಚನಗಳಿಗೆ ಸಂಗೀತಾಭಿವ್ಯಕ್ತಿ ನೀಡುವ ಸಾಧ್ಯತೆಗಳನ್ನು ಅವರು ವಿಶೇಷವಾಗಿ ಚರ್ಚಿಸುತ್ತಿದ್ದರು. ಶರಣರ ವಚನಗಳು ಮನೆ-ಮನ ತಲುಪಬೇಕಾದರೆ ಅದು ಸಂಗೀತ ಮಾಧ್ಯಮದಿಂದ ಸುಲಭ ಸಾಧ್ಯ ಎಂದು ಅವರು ನಂಬಿದ್ದರು. ದಾಸರ ಪದಗಳಾಗಲೀ, ಶರಣರ ವಚನಗಳಾಗಲೀ ಕರ್ನಾಟಕ ಸಂಗೀತಕ್ಕಿಂತಲೂ ಹಿಂದುಸ್ತಾನಿ ಸಂಗೀತಕ್ಕೆ ಚೆನ್ನಾಗಿ ಹೊಂದಿಕೊಳ್ಳುತ್ತವೆ ಎಂಬುದನ್ನು ಅವರು ಬಲವಾಗಿ ನಂಬಿದ್ದರು.

ಶಾಯರಿ ಹೇಳುವುದರಲ್ಲಿ ಮತ್ತು ಕವ್ವಾಲಿಗಳನ್ನು ಹಾಡುವುದರಲ್ಲಿಯೂ ಅವರು ಮುಂಚೂಣಿಯಲ್ಲೇ ಇರುತ್ತಿದ್ದರು. ಉರ್ದು ಭಾಷೆಯ ಗಾಢ ಪ್ರಭಾವ ಅವರ ಮೇಲೆ ಆಗಿದ್ದರ ಪರಿಣಾಮವಾಗಿಯೇ ಅವರು ಉರ್ದು ಸಾಂಸ್ಕೃತಿಕ ಲೋಕದಲ್ಲಿ ವಿಹರಿಸಿ ಸೂಫಿ ತತ್ವದ ರಸಸ್ವಾದವನ್ನು ಉಣಬಡಿಸುತ್ತಿದ್ದರು.

ಅನುಭಾವ ಸಾಹಿತ್ಯದಲ್ಲೂ ಅವರು ಸಮಾನ ಆಸಕ್ತರು. ತತ್ವ ಪದಕಾರರ ನೆಲೆವೀಡಾದ ಕಲಬುರಗಿಯ ತತ್ವ ಪದಕಾರರ ಸಮಗ್ರ ಪರಿಚಯ ಅವರಿಗಿತ್ತು. ತತ್ವ ಪದಗಳನ್ನು ಅವುಗಳ ತಾತ್ವಿಕ ಭಾವದೊಂದಿಗೆ ಹಾಡುವುದರಲ್ಲಿ ಅವರು ಸಿದ್ಧ ಹಸ್ತರು. ಕಡಕೋಳ ಮಡಿವಾಳಪ್ಪ, ಶಿಶುನಾಳ ಶರೀಫ ಅವರಿಗೆ ಅತ್ಯಂತ ಆಪ್ತ ತತ್ವಪದಕಾರರಾಗಿದ್ದರೆ ಜೇಡರ ದಾಸಿಮಯ್ಯ ಅವರ ಮೆಚ್ಚಿನ ವಚನಕಾರ.

ಜನಪದ ಸಾಹಿತ್ಯ ಅವರ ಸಾಂಸ್ಕೃತಿಕ ಕಾರ್ಯಸೂಚಿಯಲ್ಲಿ ಪ್ರಮುಖ ಸ್ಥಾನ ಪಡೆದಿತ್ತು. ಉತ್ತರ ಕರ್ನಾಟಕದ ಪ್ರಮುಖ ಪ್ರದರ್ಶನ ಕಲೆಯಾದ ಬಯಲಾಟವನ್ನು ಸೂಕ್ತವಾಗಿ ಸಂಸ್ಕರಿಸುವ ಅಗತ್ಯದ ಬಗ್ಗೆ ಅವರು ಯಾವಾಗಲೂ ಪ್ರತಿಪಾದಿಸುತ್ತಿದ್ದರು. ಬೆಳತನಕ ಆಡಲಾಗುವ ಬಯಲಾಟವನ್ನು ಆಧುನಿಕ ಸಮಾಜದ ಅಗತ್ಯಕ್ಕೆ ತಕ್ಕಂತೆ ಎರಡು ತಾಸಿನ ಅವಧಿಗೆ ಸೀಮಿತಗೊಳಿಸಿ ಪ್ರದರ್ಶಿಸುವ ಅಗತ್ಯವನ್ನು ಅವರು ಬಲವಾಗಿ ಮನಗಂಡಿದ್ದರು.

ಕರಾವಳಿ ಕರ್ನಾಟಕದ ಎರಡು ಜಿಲ್ಲೆಗಳಿಗಷ್ಟೇ ಸೀಮಿತವಾದ ಯಕ್ಷಗಾನ ಕಲೆ ಅಂತರರಾಷ್ಟ್ರೀಯ ಮಟ್ಟಕ್ಕೆ ಏರುವುದಾದರೆ ಇಡೀ ಉತ್ತರ ಕರ್ನಾಟಕದ ಅತ್ಯಂತ ಪ್ರಮುಖ ಪಾರಂಪಾರಿಕ ಜನಪದ ಪ್ರದರ್ಶನ ಕಲೆಯಾದ ಬಯಲಾಟ - ದೊಡ್ಡಾಟಗಳಲ್ಲಿ ಗುಣಾತ್ಮಕ ಬದಲಾವಣೆಗಳನ್ನು ತಂದು ಅವು ರಾಷ್ಟ್ರೀಯ, ಅಂತಾರಾಷ್ಟ್ರೀಯ ಮನ್ನಣೆ ಪಡೆಯುವಂತಾಗಬೇಕೆಂದು ಹಂಬಲಿಸಿದ್ದರು. ದುರದೃಷ್ಟವಶಾತ್ ಈ ನಿಟ್ಟಿನಲ್ಲಿ ಯಾವ ಪ್ರಯತ್ನವೂ ನಡೆಯಲಿಲ್ಲ. ಪರಿಣಾಮ ಬಯಲಾಟ ಇಂದು ಅವಸಾನದ ಅಂಚಿಗೆ ಬಂದು ತಲುಪಿದೆ.

ಸಾಂಸ್ಕೃತಿಕ ಸಂಘಟಕ

ಕಾಗಲಕರೇ ಕಲಬುರಗಿಗೆ ಆಗಮಿಸಿದ ಹೊಸದರಲ್ಲಿ ಒಂದು ವಿನೂತನ ಸಾಹಿತ್ಯಿಕ ವಾತಾವರಣ ನಿರ್ಮಾಣವಾಗಿತ್ತು. ೧೯೪೯ರ ಮಾರ್ಚ್ ೫, ೬, ೭ ರಂದು ಅಖಿಲ ಭಾರತ ೩೨ನೇ ಕನ್ನಡ ಸಾಹಿತ್ಯ ಸಮ್ಮೇಳನ ಕಲಬುರಗಿಯಲ್ಲಿ ಆಯೋಜನಗೊಂಡಿತ್ತು. ಉತ್ತಂಗಿ ಚೆನ್ನಪ್ಪನವರು ಸಮ್ಮೇಳನದ ಅಧ್ಯಕ್ಷರಾಗಿ ಆಯ್ಕೆಯಾಗಿದ್ದರು. ಇದು ಈ ಐತಿಹಾಸಿಕ ನಗರದಲ್ಲಿ ನಡೆದ ಎರಡನೆಯ ಸಾಹಿತ್ಯ ಸಮ್ಮೇಳನವಾಗಿತ್ತು. ೧೯೨೮ರ ಜೂನ್‌ನಲ್ಲಿ ಇಲ್ಲಿ ನಡೆದ ೧೪ನೇ ಸಮ್ಮೇಳನಕ್ಕೆ ಬಿ.ಎಂ. ಶ್ರೀಕಂಠಯ್ಯನವರು ಅಧ್ಯಕ್ಷರಾಗಿದ್ದರು. ಸುಮಾರು ಎರಡು ದಶಕಗಳ ಕಾಲಾ ನಂತರ ಕನ್ನಡದ ಅಖಿಲ ಭಾರತ ಸಾಹಿತ್ಯ ಸಮ್ಮೇಳನ ಇಲ್ಲಿ ನಡೆಯುತ್ತಿದ್ದುದು ಸಾಹಿತ್ಯಕ ಹಾಗೂ ಸಾಂಸ್ಕೃತಿಕ ವಲಯದಲ್ಲಿ ವಿಶೇಷ ಸಂಭ್ರಮವನ್ನುಂಟುಮಾಡಿತ್ತು.

ದೇಶಾದ್ಯಂತ ಜನ ಸ್ವಾತಂತ್ರ್ಯದ ಗಾಳಿಯನ್ನು ಉಸಿರಾಡುತ್ತಿದ್ದರೆ ಹೈದ್ರಾಬಾದ ಪ್ರಾಂತ್ಯದಲ್ಲಿ ಮಾತ್ರ ಆ ಗಾಳಿ ಬೀಸಿರಲೇ ಇಲ್ಲ. ೧೫ನೇ ಆಗಸ್ಟ್ ೧೯೪೭ ರಂದು ಪರಕೀಯರ ಆಡಳಿತದಿಂದ ದೇಶ ಬಿಡುಗಡೆ ಹೊಂದಿದರೂ ಹೈದ್ರಾಬಾದ ಸಂಸ್ಥಾನ ಮಾತ್ರ ಭಾರತದಲ್ಲಿ ವಿಲೀನಗೊಳ್ಳಲು ನಿರಾಕರಿಸಿದ್ದರಿಂದ ನಿಜಾಂ ಸರಕಾರದ ವಿರುದ್ಧ ಭಾರತ ಸರಕಾರದ ಪೊಲೀಸು ಕಾರ್ಯಾಚರಣೆ ನಡೆದು ನಿಜಾಮ ಶರಣಾದ ಮೇಲೆ ೧೮ನೇ ಸೆಪ್ಟೆಂಬರ್ ೧೯೪೮ ರಂದು ಹೈದ್ರಾಬಾದ ರಾಜ್ಯದಲ್ಲಿ ಸ್ವಾತಂತ್ರ್ಯದ ರವಿ ಉದಯಿಸಿದ. ಸ್ವಾತಂತ್ರ್ಯ ಬಂದ ಹೊಸತರಲ್ಲಿ ಸಾಹಿತ್ಯ ಸಮ್ಮೇಳನ ನಡೆಯುತ್ತಿದ್ದುದು ಸಾಹಿತ್ಯ ಪ್ರೇಮಿಗಳಲ್ಲಿ ಅದರಲ್ಲೂ ವಿಶೇಷವಾಗಿ ಯುವಕರಲ್ಲಿ ಅತೀವ ಹುಮ್ಮಸ್ಸನ್ನುಂಟುಮಾಡಿತ್ತು.

"ಕನ್ನಡದ ಎಲ್ಲ ಜನತೆ ಒಂದೆಡೆ ಬಂದು ತನ್ನ ಸಾಂಸ್ಕೃತಿಕ ಬಲವನ್ನು ಹೆಚ್ಚಿಸಿಕೊಳ್ಳಬೇಕು. ಇದೇ ಕರ್ನಾಟಕ ಏಕೀಕರಣದ ಮುಖ್ಯ ಉದ್ದೇಶ" ಎಂದು ಸಮ್ಮೇಳನದ ಅಧ್ಯಕ್ಷ ಪೀಠದಿಂದ ಸಾರಿದ್ದರು ಉತ್ತಂಗಿ ಚೆನ್ನಪ್ಪನವರು.

"ಕನ್ನಡದ ಪ್ರಣತಿ ಒಡೆಯದೆ ಕನ್ನಡ ಜ್ಯೋತಿ ಕಳೆಯದೆ ಕನ್ನಡದ ಮುಂದಿನ ಪೀಳಿಗೆ ಪ್ರಭುದೇವರಂತೆ ಪ್ರಕಾಶಿಸಬೇಕಾದರೆ ಇಂದಿನ ನಾವು ಕೆಲವರು ಚೆನ್ನಬಸವಣ್ಣನಂತೆ ಬತ್ತಿಯಾಗಿ ಸುಡಬೇಕು. ಇನ್ನೂ ಕೆಲವರು ಬಸವಣ್ಣನವರಂತೆ ಎಣ್ಣೆಯಾಗಿಯೂ ಸುಡಬೇಕು, ಕೊನೆಯ ಹನಿಯವರೆಗೆ" ಉತ್ತಂಗಿ ಚೆನ್ನಪ್ಪನವರ ಈ ಆಶಯ ಕಾಗಲಕರ್ ಅವರಿಗೆ ಬಹಳ ಸೂಕ್ತವಾಗಿ ಅನ್ವಯಿಸುತ್ತದೆ.

ಈ ಕನ್ನಡ ಸಾಹಿತ್ಯ ಸಮ್ಮೇಳನದ ಸಂಘಟಕರೆಲ್ಲ ಅತಿರಥ ಮಹಾರಥರೇ ಆಗಿದ್ದರು. ಮಾನವಿ ನರಸಿಂಗರಾವ್, ತವಗ ಭೀಮಸೇನ ರಾವ್, ಕಪಟರಾಳ್ ಕೃಷ್ಣರಾವ್, ದೊಡ್ಡಪ್ಪ ಅಪ್ಪ, ಸಿದ್ಧಯ್ಯ ಪುರಾಣಿಕ, ಷಡಕ್ಷರಯ್ಯ, ಮಲ್ಲಾಪುರ ಮಠ, ಅನಿರುದ್ಧ ದೇಸಾಯಿ ಮುಂತಾದ ದಿಗ್ಗಜರೊಂದಿಗೆ ಭುಜಕ್ಕೆ ಭುಜಕೊಟ್ಟು ಕಾರ್ಯನಿರ್ವಹಿಸುವ ಸೌಭಾಗ್ಯ ಕಾಗಲಕರ್ ಅವರಿಗೆ ಪ್ರಾಪ್ತಿಯಾಗಿತ್ತು. ಆಗಿನ್ನೂ ಅವರು ಪತ್ರಿಕಾಲೋಕವನ್ನು ವಿದ್ಯುಕ್ತವಾಗಿ ಪ್ರವೇಶಿಸಿರಲಿಲ್ಲ.

ಸಾಹಿತ್ಯ ಸಮ್ಮೇಳನದ ಸಾಂಸ್ಕೃತಿಕ ಜವಾಬ್ದಾರಿಗಳನ್ನು ತಮ್ಮ ಮೇಲೆ ಹಾಕಿಕೊಂಡಿದ್ದವರಲ್ಲಿ ಒಬ್ಬರಾಗಿದ್ದ ಕಾಗಲಕರ್ - ವಸಂತ ಕುಷ್ಟಗಿ, ಅನಿರುದ್ಧ ದೇಸಾಯಿ ಮುಂತಾದವರೊಂದಿಗೆ ಸೇರಿ ಅ.ನ. ಕೃಷ್ಣರಾಯರ "ಮದುವೆಯೋ - ಮನೆಹಾಳೋ?" ನಾಟಕವನ್ನು ಪ್ರದರ್ಶಿಸಿದ್ದರು. ಶರಣ ಬಸವೇಶ್ವರ ದೇವಸ್ಥಾನದ ಆವರಣದಲ್ಲಿ ನಡೆದ ಸಾಹಿತ್ಯ ಸಮ್ಮೇಳನದಲ್ಲಿ ಪ್ರದರ್ಶಿತವಾದ ಈ ನಾಟಕದಲ್ಲಿ ಕಾಗಲಕರ್ ಪ್ರಮುಖ ಪಾತ್ರಧಾರಿಯಾಗಿದ್ದರು.

ತಾಮ್ರದ ಕೊಡಗಳನ್ನು ಡಬ್ಬು ಹಾಕಿ ತಾವೇ ಆವಿಷ್ಕರಿಸಿದ ವಿಶಿಷ್ಟ ಶೈಲಿಯಲ್ಲಿ ಬೋರಲು ಕೊಡದ ನಾದದೊಂದಿಗೆ ಭಾವಗೀತೆಗಳನ್ನು ಹಾಡುವುದರಲ್ಲಿ ಕಾಗಲಕರ್ ನಿಸ್ಸೀಮರು. ಬೇಂದ್ರೆ ಅವರ "ಇಳಿದು ಬಾ ತಾಯಿ ಇಳಿದು ಬಾ", "ಕುಣಿಯೋಣು ಬಾರಾ ಕುಣಿಯೋಣು ಬಾ....." ಮುಂತಾದುವು ಮತ್ತು ಕುವೆಂಪು ಅವರ "ಕುಮಾರವ್ಯಾಸನು ಹಾಡಿದನೆಂದರೆ ಕಲಿಯುಗ ದ್ವಾಪರವಾಗುವುದು....." ಹಾಡುಗಳನ್ನು ಹಾಡಿ ಕೇಳುಗರನ್ನು ಆನಂದದ ಉನ್ಮಾದಕ್ಕೆ ಒಯ್ಯುತ್ತಿದ್ದರು. ಕೆಲವಾರು ಹಾಡುಗಳನ್ನು ಅವರು ನೃತ್ಯ ಸಮೇತ ಪ್ರದರ್ಶಿಸುತ್ತಿದ್ದರು. ಜಿ.ಪಿ. ರಾಜರತ್ನಂ ಅವರ 'ಹೆಂಡ್‌ಕುಡ್ಕ ರತ್ನನ ಹಾಡುಗಳು' ಕಾಗಲಕರ್ ಕಂಠಶ್ರೀಯಿಂದ ಓತಪ್ರೋತವಾಗಿ ಹರಿದು ಬರುತ್ತಿದ್ದವು. ಕೆ.ಎಸ್. ನರಸಿಂಹಸ್ವಾಮಿ ಅವರ "ನಮ್ಮೂರ ಚೆಂದವೋ, ನಿಮ್ಮೂರ ಚೆಂದವೋ....." ಎಂಬ ದಾಂಪತ್ಯ ಪ್ರೇಮದ ಪರಾಕಾಷ್ಠೆಯ ಗೀತೆಯನ್ನಂತೂ ಅದರ ಭಾವದ ನೈಜ ನೆಲೆಯಲ್ಲಿ ಹಾಡುವಲ್ಲಿ ಅವರು ಪ್ರಖ್ಯಾತರು.

ಏಕಪಾತ್ರಾಭಿನಯ ಮತ್ತು ಅನುಕರಣ (ಮಿಮಿಕ್ರಿ) ನಿಪುಣ ಅವರಾಗಿದ್ದರು. ಖ್ಯಾತ ಕಲಾಕಾರರಾಗಿದ್ದ ಶ್ರೀಪಾದ ಹಾನಗಲ್ ಅವರು ಏಕಪಾತ್ರಾಭಿನಯ ಮಾಡುತ್ತಿದ್ದರು. ಅವರಿಂದ ಪ್ರೇರಿತರಾಗಿ ಮಿಮಿಕ್ರಿ ಕಲೆಯನ್ನು ರೂಢಿಸಿಕೊಂಡು ಅದನ್ನು ಪ್ರದರ್ಶಿಸಿ ಜನರನ್ನು ರಂಜಿಸುತ್ತಿದ್ದರು.

ಶಿಷ್ಟ ಶೈಲಿಯ ಹಾಡುಗಾರಿಕೆಯಲ್ಲಿ ಪಳಗಿದಷ್ಟೇ ಸಾಂಪ್ರದಾಯಿಕ ಹಾಡುಗಾರಿಕೆಯಲ್ಲೂ ಕಾಗಲಕರ್ ಸಮಾನವಾಗಿ ಮಿಂಚಿದ್ದರು.

ಮದುವೆಯಲ್ಲಿ ಬೀಗರ ಹಾಡು, ರುಕ್ಕೋತಿನ ಸಂದರ್ಭದ ಹಾಡುಗಳು, ಹಸೆ ಕರೆವ ಹಾಡು, ವರಮಹಾಲಕ್ಷ್ಮೀ, ಶುಕ್ರವಾರದ ಹಾಡು, ಶನಿವಾರದ ಹಾಡು, ಗೌರಿ ಹಾಡು, ಒಂದೇ, ಎರಡೇ, ನಾನಾ ನಮೂನೆಯ ಸಾಂಪ್ರದಾಯಿಕ ಹಾಡುಗಳನ್ನು ಅವರು ಸಂದರ್ಭಾನುಸಾರ ಹಾಡುತ್ತಿದ್ದರು. ಈಗ ಇಂತಹ ಹಾಡುಗಳೆಲ್ಲವೂ ಹೆಚ್ಚು ಕಡಿಮೆ ಮರೆಯಾಗಿರುವುದು ಸಾಂಸ್ಕೃತಿಕ ದುರಂತವೇ ಸರಿ. ಪ್ರಾಯಃ ಕಾಗಲಕರ್ ಅಂತಹವರು ಹಾಡುವವರಿದ್ದಾಗ ಅಷ್ಟೇ ಆಸಕ್ತಿಯಿಂದ ಆಲಿಸುವಂತಹ ಅವರ ಸಮಕಾಲೀನ ಸಹೃದಯ ಸಮಾಜವಿದ್ದಾಗ ಮಾತ್ರ ಸಾಂಸ್ಕೃತಿಕ ಬದುಕು ಶ್ರೀಮಂತವಾಗುತ್ತದೆ ಎಂದು ಕಾಣುತ್ತದೆ.

ಮದುವೆಯ ನಂತರ ನಡೆಯುವ ಉರುಟಣೆ ಸಮಾರಂಭ ಅತ್ಯಂತ ಸಂಭ್ರಮದ ಪ್ರಸಂಗ. ವಧು-ವರ ಪರಸ್ಪರ ಒಗಟುಗಳನ್ನು ಹೇಳಿ ನಾನಾ ಬಗೆಯ ತಿಂಡಿಗಳನ್ನು ಪರಸ್ಪರ ಹಂಚಿಕೊಳ್ಳುವುದು, ಪರಸ್ಪರ ತಿನ್ನಿಸುವುದು ಮತ್ತು ಆ ಮೂಲಕ ಹೆಂಡತಿ ಗಂಡನ ಹೆಸರು ಹೇಳುವುದು, ಗಂಡ ಹೆಂಡತಿಯ ಹೆಸರು ಹೇಳುವುದು ಮದುವೆಯ ಮನೆಯಲ್ಲಿ ಭಾರೀ ಮೋಜಿನ, ಸಂತಸದ, ಸಂಭ್ರಮದ ವಾತಾವರಣವನ್ನು ಉಂಟು ಮಾಡುತ್ತದೆ. ಈ ಸಂದರ್ಭದಲ್ಲಿ ಮದುಮಕ್ಕಳು ಹೇಳುವ ಒಗಟುಗಳ ರಾಶಿಯೇ ಕಾಗಲಕರ್ ಅವರ ಸಾಂಸ್ಕೃತಿಕ ಕಣಜದಲ್ಲಿತ್ತು.

ಕಲಬುರುಗಿಯ ಉದಯೋನ್ಮುಖ ಬರಹಗಾರರ ಬಳಗದ ಅಧ್ಯಕ್ಷ ವೀರಭದ್ರ ಸಿಂಪಿ ಮತ್ತು ಅವರ ಗೆಳೆಯರು ಕಾಗಲಕರ್ ಅವರ ಮನೆಯಲ್ಲೇ ಕಾಗಲಕರ್ ದಂಪತಿಗಳಿಗೆ ನೀಡಿದ 'ಗೃಹ ಸನ್ಮಾನ' ಅತ್ಯಂತ ಆಪ್ಯಾಯಮಾನವಾದ ಸಂದರ್ಭ. ಅಂದು ಎಪ್ಪತ್ತರ ಸಮೀಪದಲ್ಲಿದ್ದ ಕಾಗಲಕರ್ ತಮ್ಮ ಧರ್ಮಪತ್ನಿ ಶ್ರೀಮತಿ ಬಕುಲಾಬಾಯಿ ಅವರೊಡನೆ ಗೃಹ ಸನ್ಮಾನ ಸ್ವೀಕರಿಸಿದಾಗ ಅವರಿಗೆ ತಾರುಣ್ಯ ಮರುಕಳಿಸಿತ್ತು. ನವ ವಧು-ವರರಂತೆ ಉರುಟಣೆ ಸನ್ನಿವೇಶವನ್ನು ಅದು ನೆನಪಿಗೆ ತರುತ್ತಿತ್ತು. ಗಂಡ-ಹೆಂಡತಿ ಇಬ್ಬರೂ ಅಂದು ಸಾಕಷ್ಟು ಒಗಟುಗಳನ್ನು ಹಾಕಿ ಪರಸ್ಪರ ಹೆಸರು ಹೇಳಿದ್ದು ಗೃಹ ಸನ್ಮಾನಕ್ಕೆ ವಿಶೇಷ ಸಾಂಪ್ರದಾಯಿಕ ಕಳೆ ತಂದುಕೊಟ್ಟಿತ್ತು.

ಕರ್ನಾಟಕ ಏಕೀಕರಣದ ಪೂರ್ವದಲ್ಲಿ ಮತ್ತು ಏಕೀಕರಣದ ನಂತರ ಕನ್ನಡ ಕಟ್ಟುವಲ್ಲಿ ಕಲಬುರಗಿಯ ಕನ್ನಡ ಸಾಹಿತ್ಯ ಸಂಘ ಅದ್ಭುತವಾದ ಮೌಲಿಕ ಕೆಲಸವನ್ನು ಮಾಡಿತ್ತು. ಕನ್ನಡ ಸಾರಸ್ವತ ಲೋಕದ ದಿಗ್ಗಜರು ಮತ್ತು ಏಕೀಕರಣ ಚಳವಳಿಯ ಮುಂಚೂಣಿಯಲ್ಲಿದ್ದ ಅನೇಕ ಮಹಾನುಭಾವರು ಸಾಹಿತ್ಯ ಸಂಘದ ಆಮಂತ್ರಣದ ಮೇರೆಗೆ ಕಲಬುರುಗಿಗೆ ಆಗಮಿಸುತ್ತಿದ್ದರು. ಅವರಲ್ಲಿ ಪ್ರಮುಖರೆಂದರೆ ಆಲೂರು ವೆಂಕಟರಾಯರು, ಬಿ.ಎಂ.ಶ್ರೀಕಂಠಯ್ಯ, ಮಾಸ್ತಿವೆಂಕಟೇಶ ಅಯ್ಯಂಗಾರ, ದ.ರಾ. ಬೇಂದ್ರೆ, ರಂ.ಶ್ರೀ. ಮುಗಳಿ, ಬಿ. ಶಿವಮೂರ್ತಿಶಾಸ್ತ್ರೀ, ಜೋಳದರಾಶಿ ದೊಡ್ಡನಗೌಡರು, ಬೆಟಗೇರಿಕೃಷ್ಣಶರ್ಮ (ಆನಂದಕಂದ) ಮುಂತಾದವರು ಈ ಸಾಹಿತ್ಯ ದಿಗ್ಗಜರ ಭೇಟಿಯ ಸಂಪೂರ್ಣ ಲಾಭವನ್ನು ಕಾಗಲಕರ್ ಪಡೆಯುತ್ತಿದ್ದರು. ಕನ್ನಡ ಚಳವಳಿ ಕುರಿತಾಗಿ ಅವರೆಲ್ಲರೊಂದಿಗೆ ಸಂಪರ್ಕ ಬೆಳೆಸಿ ದೀರ್ಘ ಸಮಾಲೋಚನೆ ಮಾಡುತ್ತಿದ್ದರು. ಕನ್ನಡ ಚಳವಳಿಯನ್ನು ಬಲಗೊಳಿಸಲು ಪೂರಕವಾಗುವ ಹಿರಿಯ ಸಾಹಿತಿ ನೇತಾರರ ವಿಚಾರಗಳೆಲ್ಲವನ್ನು ಕೇಳಿ, ತಿಳಿದು ಅರಗಿಸಿಕೊಳ್ಳುತ್ತಿದ್ದರು. ಗುಲ್ಬರ್ಗ, ಬೀದರ ಭಾಗಗಳಲ್ಲಿ ಕನ್ನಡದ ಪುನಶ್ಚೇತನ ಕುರಿತಾದ ಕಾರ್ಯ ಯೋಜನೆಗಳ ಬಗ್ಗೆ ಚರ್ಚೆ ನಡೆಸುತ್ತಿದ್ದರು.

ಏತನ್ಮಧ್ಯೆ, ಹೈದ್ರಾಬಾದಿನಲ್ಲಿ ನಿಜಾಂ ಕರ್ನಾಟಕ ಸಾಹಿತ್ಯ ಪರಿಷತ್ತು ಅಸ್ತಿತ್ವಕ್ಕೆ ಬಂದಿತು. ಸಿದ್ಧಯ್ಯ ಪುರಾಣಿಕ, ಮಾನವಿ ನರಸಿಂಗರಾವ್ ಪರಿಷತ್ತಿನೊಂದಿಗೆ ನಿಕಟ ಸಂಪರ್ಕ ಇರಿಸಿಕೊಂಡಿದ್ದರು. ಮತ್ತು ಅವರ ಚಟುವಟಿಕೆಗಳಲ್ಲಿ ಸಕ್ರಿಯರಾಗಿ ಪಾಲ್ಗೊಳ್ಳುತ್ತಿದ್ದರು. ಪರಿಷತ್ತಿನ ಆಶ್ರಯದಲ್ಲಿ ಗುಲ್ಬರ್ಗ ಜಿಲ್ಲೆಯ ಸುರಪುರ ತಾಲೂಕಿನ ಯಾಳಗಿ ಮತ್ತು ಬೀದರ್ ಜಿಲ್ಲೆಯ ಭಾಲ್ಕಿ ತಾಲೂಕಿನ ಭಾತಂಬ್ರದಲ್ಲಿ ಕನ್ನಡ ಸಮ್ಮೇಳನಗಳು ಏರ್ಪಟ್ಟಾಗ ಕಾಗಲಕರ್ ಅವರು ಎರಡೂ ಸಮ್ಮೇಳನಗಳ ಸಾಂಸ್ಕೃತಿಕ ಸಂಘಟಕರಾಗಿ ಅನೇಕ ಕಾರ್ಯಕ್ರಮಗಳನ್ನು ನೇರವೇರಿಸಿಕೊಟ್ಟರು. ಬೀದರ ಮತ್ತು ಸುರಪುರ ಭಾಗದ ಅನೇಕ ಜನಪದ ಕಲಾವಿದರನ್ನು, ಯುವ ಕಲಾವಿದರನ್ನು ಗುರುತಿಸಿ ಅವರೆಲ್ಲ ಸಮ್ಮೇಳನದಲ್ಲಿ ಪಾಲ್ಗೊಳ್ಳುವಂತೆ ಮಾಡಿದರು. ಅವರು ಕೇವಲ ಕಲಾವಿದರ ಸಂಘಟನೆಯಲ್ಲಿ ತೊಡಗಲಿಲ್ಲ. ಅಲ್ಲೂ ಕೂಡ ಅವರು ತಮ್ಮ ಕೊಡಗಳ ತಾಳದೊಂದಿಗೆ ಅನೇಕ ಹಾಡುಗಳನ್ನು ಹಾಡಿ ಸಾಂಸ್ಕೃತಿಕ ಕಾರ್ಯಕ್ರಮಗಳು ರಂಗೇರುವಂತೆ ಮಾಡಿದರು.

ಕಲಬುರಗಿಯ ಕನ್ನಡ ಸಾಹಿತ್ಯ ಸಂಘದೊಂದಿಗೆ ನಿಕಟ ಸಂಪರ್ಕ ಹೊಂದಿದ್ದ ಕಾಗಲಕರ್ ಅದರ ಎಲ್ಲ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಸ್ವಯಂ ಪ್ರೇರಿತರಾಗಿ ತಮ್ಮನ್ನು ತೊಡಗಿಸಿಕೊಂಡಿದ್ದರು. ಸಾಹಿತ್ಯ ಸಂಘದ ಪುಸ್ತಕ ಭಂಡಾರದ ಸಂಪೂರ್ಣ

ಸದುಪಯೋಗವನ್ನು ಪಡಿಸಿಕೊಂಡರು. ದತ್ತಾತ್ರೇಯ ಹೇರೂರ ಅವರೊಂದಿಗೆ ಜತೆಗೂಡಿ ಸಾಂಸ್ಕೃತಿಕ ಚಟುವಟಿಕೆಗಳನ್ನು ಹಮ್ಮಿಕೊಳ್ಳುತ್ತಿದ್ದರು. ಈ ಚಟುವಟಿಕೆಗಳಿಗೆಲ್ಲ ಯುವಕರನ್ನು ಸೆಳೆಯುವ ಆಯಸ್ಕಾಂತೀಯ ಆಕರ್ಷಣಾಶಕ್ತಿ ಅವರಲ್ಲಿತ್ತು.

ಖ್ಯಾತ ಗಮಕ ಕಲಾವಿದರಾದ ಶಿವಮೊಗ್ಗದ ಭಾರತ ಬಿಂದುರಾಯರು ಕಲಬುರಗಿಗೆ ಬಂದಿದ್ದರು. ಕನ್ನಡ ಸಾಹಿತ್ಯ ಸಂಘದ ಆಶ್ರಯದಲ್ಲಿ ಸುಮಾರು ಒಂದು ತಿಂಗಳ ಕಾಲ ಬಂದು ರಾಯರಿಂದ ಕುಮಾರವ್ಯಾಸ ಭಾರತ ಗಾಯನ ನಡೆಯಿತು. ರಾಗಬದ್ಧವಾಗಿ, ಅರ್ಥಪೂರ್ಣವಾಗಿ ಕಾವ್ಯ ವಾಚನ ಮಾಡುವ ವಿಶಿಷ್ಟ ಶೈಲಿಯ ಕಲೆಯೇ ಗಮಕ. ಉತ್ತರ ಕರ್ನಾಟಕದಲ್ಲಿ ಗಮಕ ಅಂತಹ ಜನಪ್ರಿಯ ಕಲೆಯೇನೂ ಅಲ್ಲ. ಆದರೆ ದಕ್ಷಿಣ ಕರ್ನಾಟಕದಲ್ಲಿ ಅದು ತಕ್ಕ ಮಟ್ಟಿಗೆ ಜನಜನಿತ. ಹಲವಾರು ಪ್ರಸಿದ್ಧ ಗಮಕಿಗಳು ಆಗಿ ಹೋಗಿದ್ದಾರೆ. ಅವರಲ್ಲಿ ಭಾರತ ಬಿಂದುರಾಯರು ಪ್ರಮುಖರು. ಕುಮಾರವ್ಯಾಸ ಭಾರತವನ್ನು ಗಮಕ ಶೈಲಿಯಲ್ಲಿ ಗಾಯನ ಮಾಡುವುದು ಉತ್ತರ ಕರ್ನಾಟಕದಲ್ಲಿ ಅಪರೂಪವೇ ಆಗಿತ್ತು. ಬಿಂದುರಾಯರ ಸುಲಲಿತ ಗಮಕ ವಾಚನ ಕಲಬುರಗಿಯ ಸಾಹಿತ್ಯ ಪ್ರೇಮಿಗಳನ್ನು ಆಕರ್ಷಿಸಿತ್ತು. ಕಾಗಲಕರ್ ಅವರಂತೂ ಅದಕ್ಕೆ ಮಾರು ಹೋಗಿದ್ದರು.

ಗಮಕ ಗಾಯನ ಸಾಂಸ್ಕೃತಿಕ ಪ್ರಿಯರಲ್ಲಿ ಎಂತಹ ಮೋಡಿ ಮಾಡಿತ್ತೆಂದರೆ ಗಮಕವಾಚನಕ್ಕಾಗಿ ಅಭ್ಯಾಸ ಕೂಟವೊಂದನ್ನೇ ರಚಿಸಲಾಯಿತು. ತವಗ ಭೀಮಸೇನರಾಯರ ನೇತೃತ್ವದಲ್ಲಿ ರಚನೆಯಾದ ಈ ಅಭ್ಯಾಸ ಕೂಟದಲ್ಲಿ ನಾಯಕ ಮಾಸ್ತರ ಎಂದೇ ಖ್ಯಾತರಾಗಿದ್ದ ವಿ.ಆರ್. ನಾಯಕ, ಕಪಟರಾಳ ಕೃಷ್ಣರಾವ್, ವಾಜಪ್ಪ ಮಾಸ್ತರ, ಬಿ. ಅಶ್ವತ್ಥರಾಯರು, ಸಿ. ನರಸಿಂಗರಾವ್, ಗಾಂಧಿ ಪ್ರತಿಷ್ಠಾನದ ಪ್ರತಿನಿಧಿಯಾಗಿದ್ದ ಅನಂತರಂಗಾಚಾರ್, ಕಾನ್ನಾಳ ನಾರಾಯಣರಾವ್, ಸುಬ್ಬಾಚಾರ್ಯ ಕಟ್ಟಿ, ಷಡಕ್ಷರಯ್ಯ, ಮಲ್ಲಾಪುರಮಠ, ಭಾವುಸಾಹೇಬ ದೇವುಳಗಾಂವಕರ್ ಮುಂತಾದವರು ಅಭ್ಯಾಸ ಕೂಟದ ಸದಸ್ಯರು. ಇವರೆಲ್ಲರಿಗೂ ಮಿಗಿಲಾದ ಅತ್ಯಂತ ಸಕ್ರಿಯ ಸದಸ್ಯರೆಂದರೆ ಕಾಗಲಕರ್.

ಈ ಅಭ್ಯಾಸ ಕೂಟದ ಬೈಠಕ್‌ಗಳಲ್ಲಿ ತವಗ ಭೀಮಸೇನರಾಯರು ಪದ್ಯ ಓದಿ ಅರ್ಥ ಹೇಳುತ್ತಿದ್ದರು. ಮಧ್ಯೆ ಮಧ್ಯೆ ಕಾಗಲಕರ್ ಅವರು ಅದಕ್ಕೆ ತಕ್ಕಂತೆ ಗಮಕ ವಾಚನ ಮಾಡುತ್ತಿದ್ದರು. ಕುಮಾರವ್ಯಾಸ ಭಾರತ, ಜೈಮಿನಿ ಭಾರತಗಳನ್ನು ಷಟ್ಪದಿಗಳಲ್ಲಿ, ಗಮಕ ಮಾಧ್ಯಮದಲ್ಲಿ ವಾಚನ ಮಾಡುವ ಅಭ್ಯಾಸವನ್ನು ಕಾಗಲಕರ್

ನಿರಂತರವಾಗಿ ಶ್ರದ್ಧೆಯಿಂದ ಮುಂದುವರೆಸಿಕೊಂಡು ಹೋದರು. ಬರುಬರುತ್ತ ಅವರು ಗಮಕ ವಾಚನದಲ್ಲಿ ಪ್ರಾವೀಣ್ಯತೆಯನ್ನು ಸಿದ್ಧಿಸಿಕೊಂಡರು. ಭಾರತ ಬಿಂದುರಾಯರಿಗಿಂತಲೂ ಚೆನ್ನಾಗಿ ಗಮಕ ಗಾಯನ ಮಾಡಬಲ್ಲದವರಾದರು!

ಹೀಗೆ ಹೊಸದೊಂದು ಕಲೆಯನ್ನು ತೆಕ್ಕೆಗೆ ತೆಗೆದುಕೊಂಡು ಅದು ತನ್ನ ಕಲೆಯೇ ಎಂದು ಭಾವಿಸಿ ಪೋಷಿಸುವ ವಿಶಾಲಗುಣ ಅವರದಾಗಿತ್ತು.

ಕಾರಂತರಿಗೆ ಸನ್ಮಾನ

ಶಿವರಾಮ ಕಾರಂತರಿಗೆ ಜ್ಞಾನಪೀಠ ಪ್ರಶಸ್ತಿ ಬಂದಾಗ ಅವರನ್ನು ಗೌರವಿಸುವುದಕ್ಕಾಗಿ ಕಲಬುರಗಿಯಲ್ಲಿ ನಾಗರಿಕ ಸನ್ಮಾನ ಕಾರ್ಯಕ್ರಮವೊಂದನ್ನು ಆಯೋಜಿಸಲಾಗಿತ್ತು. ಆ ಇಡೀ ಕಾರ್ಯಕ್ರಮದ ಹಿಂದಿನ ಪ್ರೇರಣಾ ಶಕ್ತಿ ಕಾಗಲಕರ್ ಆಗಿದ್ದರು. ನಾಗರಿಕ ಸನ್ಮಾನ ಸಮಿತಿಯ ಮುಖ್ಯಸ್ಥರು ಆಗ ಕಲಬುರಗಿ ವಿಭಾಗಾಧಿಕಾರಿಗಳಾಗಿದ್ದ ಹಿರಿಯ ಐ.ಎ.ಎಸ್. ಅಧಿಕಾರಿ ಬಿ.ಆರ್. ಪ್ರಭಾಕರ್ ಆಗಿದ್ದರು. ಕಾರಂತರ ಸನ್ಮಾನ ಕಾರ್ಯಕ್ರಮವನ್ನು ಅದ್ದೂರಿಯಾಗಿ ನಡೆಸಲು ಕಾಗಲಕರ್ ಸರ್ವಪ್ರಯತ್ನ ನಡೆಸಿದರು. ಟೌನ್‌ಹಾಲಿನಲ್ಲಿ ಸ್ಥಳಾಭಾವ ಆಗುವ ಸಾಧ್ಯತೆ ಇದ್ದುದರಿಂದ ಈಗ ಸಾರ್ವಜನಿಕ ಉದ್ಯಾನವನದಲ್ಲಿ ನಿರ್ಮಾಣ ಗೊಂಡಿರುವ ರಂಗಮಂದಿರದ ಬಯಲು ಜಾಗೆಯಲ್ಲಿ ಸನ್ಮಾನ ಕಾರ್ಯಕ್ರಮ ಏರ್ಪಾಟಾಯಿತು.

ಈ ಕಾರ್ಯಕ್ರಮದ ಒಂದು ವೈಶಿಷ್ಟವೆಂದರೆ ಕಾರಂತರು ತಮಗೆ ಅತ್ಯಂತ ಪ್ರಿಯವಾದ ಯಕ್ಷಗಾನವನ್ನು ಸ್ವತಃ ಕಾಲಿಗೆ ಗೆಜ್ಜೆಕಟ್ಟಿಕೊಂಡು ಸುಮಾರು ೧೫ ನಿಮಿಷಗಳ ಕಾಲ ಪ್ರದರ್ಶಿಸಿದರು. ಅದೇ ಮೊದಲ ಬಾರಿಗೆ ಬಯಲು ಸೀಮೆಯ ಕಲಬುರಗಿ ಜನರಿಗೆ ಕರಾವಳಿಯ ವಿಶಿಷ್ಟ ಕಲೆಯಾದ ಯಕ್ಷಗಾನದ ಪರಿಚಯವಾದದ್ದು. ಯಕ್ಷಗಾನದಲ್ಲಿ ಕುತೂಹಲಕಾರಿ ಆಸಕ್ತಿ ತಳೆದಿದ್ದ ಕಾಗಲಕರ್ ಅದರ ಕುರಿತಾಗಿ ಅನೌಪಚಾರಿಕವಾಗಿ ಕಾರಂತರೊಂದಿಗೆ ಚರ್ಚಿಸಿ ತಿಳಿದು ಕೊಂಡರು. ಆಗಲೇ ಅವರಿಗೆ ಹೊಳೆದದ್ದು ಉತ್ತರ ಕರ್ನಾಟಕದ ಜನಪ್ರಿಯ ಜಾನಪದ ಪ್ರದರ್ಶನ ಕಲೆಯಾದ ಬಯಲಾಟವನ್ನು ಯಕ್ಷಗಾನದ ಮಟ್ಟಕ್ಕೆ ಕೊಂಡೊಯ್ಯುವ ಪ್ರಯತ್ನಗಳಾಬೇಕು ಎಂದು. ಇದಾದ ನಂತರ ಈ ಕುರಿತಾಗಿ ಅವರು ಅನೇಕ ಜನಪದ ಕಲಾವಿದರೊಂದಿಗೆ ಚರ್ಚಿಸಿದರು. ಆದರೆ ಈ ಭಾಗದ ಕಲಾವಿದರ ನಿರಾಸಕ್ತಿಯ ಫಲವಾಗಿ ಕಾಗಲಕರ್ ಅವರ ಬಯಕೆ ಈಡೇರಲಿಲ್ಲ.

ಕಾರಂತರಿಗೆ ನೀಡಿದ ನಾಗರಿಕ ಸನ್ಮಾನ ಸ್ಥಳದಲ್ಲಿಯೇ ಇಂದು ಭವ್ಯವಾದ ರಂಗಮಂದಿರ ತಲೆ ಎತ್ತಿರುವುದು ಕಾರಂತರ ಪಾದಸ್ಪರ್ಶದ ಫಲವೇ ಎಂದು ಕಲಬುರಗಿಯ ಅನೇಕ ಹಿರಿಯರು ಭಾವಿಸುತ್ತಾರೆ.

ವೆಂಕಟರಾವ್ ಕಾಗಲಕರ್ ಅವರಿಗೆ ವೆಂಕಟೇಶ ಎಂಬ ಆಪ್ತ ಸ್ನೇಹಿತರಿದ್ದರು. ಅವರ ತಂದೆ ವಿಠಲಾಚಾರ್ಯ ಸಂಗನಾಳ ಕಾಗಲಕರ್ ಅವರಿಗೆ ಪರಿಚಯವಾಗಿತ್ತು. ಮೊದಲು ಶಿಕ್ಷಕರಾಗಿದ್ದ ವಿಠಲಾಚಾರ್ಯರು ಮುಂದೆ ಅಧಿಕಾರಿಯಾಗಿ ನಿವೃತ್ತರಾದರು. ಅವರಿಬ್ಬರ ಕುಷ್ಟಗಿ ಹಿನ್ನೆಲೆ ಪ್ರಾಯಃ ಅವರಿಬ್ಬರನ್ನು ಹತ್ತಿರಕ್ಕೆ ಕರೆತಂದಿತ್ತು. ವಿಠಲಾಚಾರ್ಯರಿಗೆ ಇಬ್ಬರು ಹೆಂಡಿರು. ಮೊದಲ ಹೆಂಡತಿಯ ಪುತ್ರನೇ ವೆಂಕಟೇಶ. ಇವರು ಮುಂದೆ ಕೇಂದ್ರ ಸರಕಾರದಲ್ಲಿ ಮುಖ್ಯ ಇಂಜಿನಿಯರ್ ಆಗಿ ನಿವೃತ್ತಿ ಹೊಂದಿದರು. ಅವರಿಗೆ ಮಲತಾಯಿ ಕಾಟ ವಿಪರೀತವಾಗಿತ್ತು. ಕಾಗಲಕರ್ ತೀರಾ ಬಡತನದ ಹಿನ್ನೆಲೆಯಲ್ಲಿ ಬಂದವರಾದ್ದರಿಂದ ಅವರಿಗೆ ವೆಂಕಟೇಶರ ಸ್ನೇಹ ಆಪ್ಯಾಯಮಾನವಾಗಿತ್ತು.

ವೆಂಕಟೇಶನ ಬವಣೆ, ಕಷ್ಟ-ಸುಖಗಳನ್ನೆಲ್ಲ ಆಲಿಸುತ್ತಿದ್ದ ಕಾಲಗಕರ್, ಅವರಿಗೆ ಸಾಂತ್ವನ ಹೇಳುತ್ತಿದ್ದರು. ವೆಂಕಟೇಶನಿಗೂ ಗಾಯನದಲ್ಲಿ ಅಷ್ಟಿಷ್ಟು ಆಸಕ್ತಿ ಇತ್ತು. ಕಾಗಲಕರ್ ತಮ್ಮೆಲ್ಲ ದೈನಂದಿನ ಕೆಲಸ ಮುಗಿಸಿಕೊಂಡು ಸಂಗನಾಳ ಅವರ ಮನೆಗೆ ತೆರಳಿ ವೆಂಕಟೇಶನೊಂದಿಗೆ ಹಾಡಿನ ತಾಲೀಮು ನಡೆಸುತ್ತಿದ್ದರು. ಸಮಾನ ಆಸಕ್ತರು, ಸಮಾನ ಮನಸ್ಕರು ದೊರೆತರೆ ಅವರೊಡನೆ ಬಹಳ ಆಪ್ತವಾಗಿರುತ್ತಿದ್ದರು ಕಾಗಲಕರ್.

ಸಾಂಸ್ಕೃತಿಕ ಸಂಘಟನೆಯಲ್ಲಿ ಕಾಗಲಕರ್ ನಿಸ್ಸೀಮರು. ಹಲವಾರು ಸಂಘಟನೆಗಳ ಸಂಸ್ಥಾಪಕರಾಗಿದ್ದ ಕಾಗಲಕರ್ ಕಲಬುರಗಿಗೆ ನೀಡಿದ ಒಂದು ಪ್ರಮುಖ ಕೊಡುಗೆ ಎಂದರೆ ಭಜನಾ ಸಂಸ್ಕೃತಿಯನ್ನು ದಟ್ಟವಾಗಿ ಬೆಳೆಸಿದ್ದು. ಮರಾಠಿ ಹಾಗೂ ಮರಾಠಿಗಳ ಪ್ರಾಬಲ್ಯದಿಂದಾಗಿ ಮಹಾರಾಷ್ಟ್ರ ಸಂಸ್ಕೃತಿ ಹಿನ್ನೆಲೆಯ ಭಕ್ತಿ ಗಾಯನ ಚಟುವಟಿಕೆಗಳು ಅಲ್ಲಲ್ಲಿ ನಡೆಯುತ್ತಿದ್ದವು. ಆದರೆ ಕರ್ನಾಟಕ ಮೂಲದ ಭಜನಾ ಕಾರ್ಯಕ್ರಮಗಳು ಇರಲಿಲ್ಲ. ಕಾಗಲಕರ್ ಅವರು ಎಂ.ಎಸ್.ಕೆ. ಮಿಲ್ಲಿನಲ್ಲಿ ಉದ್ಯೋಗಕ್ಕೆ ಸೇರಿದ ಮೇಲೆ ಅಲ್ಲಿ ಸಮಾನ ಆಸಕ್ತರನ್ನು ಸೇರಿಸಿ ಒಂದು ಭಜನಾ ಮಂಡಳಿಯನ್ನು ನಿರ್ಮಿಸಿದರು.

ಕಲಬುರಗಿಯ ಬ್ರಹ್ಮಪುರದ ಮೇಲಿನ ಕೇರಿಯಲ್ಲಿ ಸೋನುಬಾಯಿ ಕಾಳನೂರ ಎಂಬುವವರ ಮನೆಯಲ್ಲಿ ರಾಘವೇಂದ್ರಸ್ವಾಮಿಗಳ ಒಂದು ವೃಂದಾವನ

ಇತ್ತು. ಅದು ಖಾಸಗಿ ವ್ಯಕ್ತಿಯೊಬ್ಬರಿಗೆ ಸೇರಿದ್ದರಿಂದ ಅಲ್ಲಿ ಸಾರ್ವಜನಿಕವಾಗಿ ಭಜನೆಗಳು ನಡೆಯುತ್ತಿರಲಿಲ್ಲ. ಆದರೆ ಕಾಗಲಕರ್ ಅವರು ತಮ್ಮ ಸಂಗಾತಿಗಳೊಂದಿಗೆ ಸೇರಿ ತಾವು ಸ್ಥಾಪಿಸಿದ ಭಜನ ಮಂಡಳಿಯ ನೇತೃತ್ವದಲ್ಲಿ ಪ್ರತಿ ಗುರುವಾರ ಸೋಮಬಾಯಿ ಮನೆಯ ರಾಯರ ಬೃಂದಾವನದ ಎದುರು ಭಜನೆ ಮಾಡಲು ಶುರುಮಾಡಿದರು. ಬರುಬರುತ್ತ ಗುರುವಾರದ ಭಜನೆಗೆ ಸೇರುವವರ ಸಂಖ್ಯೆ ಹೆಚ್ಚುತ್ತ ಹೋಯಿತು. ಪ್ರಾರಂಭದಲ್ಲಿ ಸುಸೂತ್ರವಾಗಿ ನಡೆಯುತ್ತಿದ್ದ ಭಜನೆ ಬರಬರುತ್ತ ವಿಶಾಲರೂಪ ತಳೆದಿದ್ದರಿಂದ ಅದು ಮನೆಯ ಮಾಲೀಕರಿಗೆ ಸ್ವಲ್ಪ ಕಿರಿಕಿರಿಯನ್ನುಂಟು ಮಾಡಿರಬೇಕು. ಪರಿಣಾಮ ಭಜನೆ ನಿಂತು ಹೋಯಿತು.

ಸಂತ್ರಸ್ತಗೊಂಡ ಕಾಗಲಕರ್ ಭಜನಾ ಮಂಡಳಿ ಸುಮ್ಮನೆ ಕೂತಿರಲು ಸಾಧ್ಯವೇನು? ಆದದ್ದೆಲ್ಲವೂ ಒಳ್ಳೆಯದಕ್ಕೆ ಆಗುತ್ತದೆ ಎನ್ನುವ ಮಾತಿನಂತೆ ಭಜನ ಪ್ರಿಯ ಕಾಗಲಕರ್ ಅವರು ಮತ್ತೊಂದು ಪರ್ಯಾಯ ವ್ಯವಸ್ಥೆಯನ್ನು ರೂಪಿಸಲು ತವಕಿಸುತ್ತಿದ್ದರು. ಈ ದಿಶೆಯಲ್ಲಿ ಹಲವು ಪ್ರಯತ್ನಗಳನ್ನು ಮಾಡಿದರು. ರಾಘವೇಂದ್ರಸ್ವಾಮಿಗಳ ಭಜನೆ ಪ್ರತಿ ಗುರುವಾರ ತಪ್ಪದೇ ನಡೆಯಬೇಕೆಂದು ಶಪಥ ಮಾಡಿದರು. ಕಾಗಲಕರ್ ಅವರ ಅವಿರತ ಶೋಧನೆ ಯತ್ನ ಕೊನೆಗೂ ಫಲ ನೀಡಿತು. ಬ್ರಹ್ಮಪುರದಲ್ಲಿ ವಿಠ್ಠಲರಾವ್ ದೇಶಮುಖ ಅವರ ತೋಟದ ಒಂದು ಪುಟ್ಟ ಜಾಗೆಯಲ್ಲಿ ರಾಘವೇಂದ್ರಸ್ವಾಮಿಗಳ ವೃಂದಾವನವನ್ನು ವಿದ್ಯುಕ್ತವಾಗಿ ಸ್ಥಾಪನೆ ಮಾಡಲಾಯಿತು. ಹೀಗೆ ಸ್ಥಾಪನೆಯಾದ ವೃಂದಾವನವೇ ಈಗ ರಾಘವೇಂದ್ರ ಕಾಲನಿಯಲ್ಲಿ ಭವ್ಯವಾಗಿ ಬೆಳೆದು ನಿಂತಿರುವ ರಾಘವೇಂದ್ರಸ್ವಾಮಿಗಳ ದೇವಸ್ಥಾನ. ಈ ದೇವಸ್ಥಾನಕ್ಕೆ ಕಾರಣರಾದ ಅತ್ಯಂತ ಪ್ರಮುಖ ವ್ಯಕ್ತಿ ಎಂದರೆ ಕಾಗಲಕರ್ ಬ್ರಹ್ಮಪುರದಲ್ಲಿ ರಾಯರ ಮಠ ಅಸ್ತಿತ್ವಕ್ಕೆ ಬಂದ ಮೇಲೆ ಕಾಗಲಕರ್ ಹಾಗೂ ಮಿತ್ರರ ಗುರುವಾರ ಭಜನೆ ಯಾವುದೇ ಅಡ್ಡಿ ಆತಂಕಗಳಿಲ್ಲದೆ ಮನ್ನಡೆಯಿತು.

ಕಾಗಲಕರ್ ನೇತೃತ್ವದ ಭಜನಾ ತಂಡವೇ ವರ್ಷಕ್ಕೊಮ್ಮೆ ಕಲಬುರಗಿ ನಗರದ ಎಂ.ಎಸ್.ಕೆ. ಮಿಲ್ಲಿನ ಹಿಂದುಗಡೆ ಇರುವ ಹೀರಾಪುರ ಗ್ರಾಮವನ್ನು ದಾಟಿ ಹೋದರೆ ಸಿಗುವ ಮಾದರಸನಹಳ್ಳಿಯಲ್ಲಿ ಮಹಾಭಜನೆಯನ್ನು ಅತ್ಯಂತ ಸಂಭ್ರಮದಿಂದ ನಡೆಸುತ್ತಿದ್ದರು.

ನಂತರ ರಾಘವೇಂದ್ರಸ್ವಾಮಿ ಆರಾಧನಾ ಸಮಿತಿಯನ್ನು ರಚಿಸಲಾಯಿತು. ಡಾ|| ರಂಗಾಚಾರ ಜಾಗೀರದಾರ ಸಮಿತಿಯ ಅಧ್ಯಕ್ಷರು ಮತ್ತು ವಿ.ಎನ್. ಕಾಗಲಕರ್ ಕಾರ್ಯದರ್ಶಿ. ಈ ಸಮಿತಿಯ ಆಶ್ರಯದಲ್ಲೇ ಪ್ರತಿ ಗುರುವಾರ ಭಜನಾ

ಕಾರ್ಯಕ್ರಮ ತಪ್ಪದೆ ನಡೆಯುತ್ತಿತ್ತು. ಪ್ರತಿವರ್ಷ ರಾಯರ ಆರಾಧನಾ ಮಹೋತ್ಸವ ನಡೆಯಲಾರಂಭಿಸಿತು. ಅನೇಕ ವರ್ಷಗಳ ಕಾಲ, ಬೃಹದಾಕಾರವಾಗಿ ಬೆಳೆಯುತ್ತಿದ್ದ ಕಲಬುರಗಿ ನಗರಕ್ಕೆ ಬ್ರಹ್ಮಪುರದ ರಾಯರ ಮಠವೊಂದೇ ಇದ್ದುದರಿಂದ ನಗರದ ಎಲ್ಲ ರಾಯರ ಭಕ್ತರು ಇಲ್ಲಿಗೇ ಬರುತ್ತಿದ್ದರು.

ಮುರುಗೋಡು ಕೃಷ್ಣದಾಸರ ಹಾಡುಗಾರಿಕೆಯಿಂದ ಪ್ರಭಾವಿತರಾಗಿದ್ದ ಕಾಗಲಕರ್ ಭಜನೆಯನ್ನು ತಾರತಮ್ಯೋಕ್ತಿಯಲ್ಲಿ ಮಾಡುವ ಕಲೆಯನ್ನು ಅರಿತುಕೊಂಡರು. ಹೀಗೆ ಕಲಬುರಗಿಯಲ್ಲಿ ಕನ್ನಡದ ನೆಲೆಯಲ್ಲಿ, ಕರ್ನಾಟಕದ ಸಂಸ್ಕೃತಿಯ ಹಿನ್ನೆಲೆಯಲ್ಲಿ ಭಕ್ತಿ ಚಳವಳಿಯನ್ನು ಹುಟ್ಟು ಹಾಕಿ ಭಜನಾ ಸಂಸ್ಕೃತಿಯ ಹರಿಕಾರರಾಗಿ ಹೊರಹೊಮ್ಮಿದರು ಕಾಗಲಕರ್. ❒

p

ಅಧ್ಯಾಯ-೪

ಕಾಗಲಕರ್‌ಗೊಲಿದ ಕಲಬುರಗಿ

ಹೈದ್ರಾಬಾದಿನಲ್ಲಿ ಒಂಭತ್ತನೆಯ ತರಗತಿಯವರೆಗೆ ಮಾತ್ರ ಶಿಕ್ಷಣವನ್ನು ಪೂರೈಸಿದ ವೆಂಕಣ್ಣನಿಗೆ ಭವಿಷ್ಯ ಧುತ್ತೆಂದು ಕಾಡಿತ್ತು. ಅದು ಅವರಿಗಿಂತಲೂ ಹೆಚ್ಚಾಗಿ ಅವರ ತಂದೆ ತಾಯಿಗೆ ಮತ್ತು ಅವರನ್ನು ನೋಡಿಕೊಳ್ಳುತ್ತಿದ್ದ ಅವರ ತಾತ ಅವರಿಗೆ ಕಾಡಿರಬೇಕು. ಸಾಧ್ಯವಾದಷ್ಟು ಓದಿ ಮುಂದೆ ಶಾಣೇ ಆಗಬೇಕಾಗಿದ್ದ ಹುಡುಗ ಸಾಹಿತ್ಯ, ಸಂಸ್ಕೃತಿ, ನಾಟಕ, ಚಳವಳಿ, ಬರವಣಿಗೆ, ರಾಜಕೀಯ, ಮುಂತಾದವುಗಳ ಗೀಳನ್ನು ಅಂಟಿಸಿಕೊಂಡು ಹಾಳಾಗುತ್ತಿರುವುದನ್ನು ಕಾಣುವುದು ಅವರಿಗೆ ಆತಂಕ ಉಂಟುಮಾಡಿತ್ತು. ಹಿರಿಯರ ಆತಂಕ ಕಾಳಜಿ ಸಹಜವಾದದ್ದೇ. ವೆಂಕಣ್ಣ, ತಾನು ತನ್ನ ಕಾಲಿನ ಮೇಲೆ ತಾನು ನಿಲ್ಲುವುದರ ಜೊತೆಗೆ ತನ್ನ ತಂದೆ-ತಾಯಿಯನ್ನು ನೋಡಿಕೊಳ್ಳಬೇಕಿತ್ತು. ಜೊತೆಯಲ್ಲಿ ತಂಗಿ ಮತ್ತು ತಮ್ಮ ಬಡತನದ ಕುಟುಂಬದಲ್ಲಿ ಹಿರಿಯ ಮಗನಾಗಿ ಜನಿಸುವ ವ್ಯಕ್ತಿಗೆ ಇರಬೇಕಾದ ಎಲ್ಲಾ ಜಂಜಾಟಗಳು, ಜವಾಬ್ದಾರಿಗಳು ವೆಂಕಣ್ಣನನ್ನು ಮುತ್ತಿಕೊಂಡಿದ್ದವು.

ವೆಂಕಣ್ಣ ಕಡೆಯು ಪಕ್ಷ ಮೆಟ್ರಿಕ್ ಆದರೂ ಪಾಸಾಗಿದ್ದರೆ ಯಾವುದಾದರೊಂದು ನೌಕರಿಯನ್ನು ಪಡೆದು ಜೀವನದ ಆರ್ಥಿಕ ಭದ್ರತೆಯನ್ನು ಸಾಧಿಸಬಹುದಿತ್ತು ಎಂಬ ಚಿಂತನೆ ಆತನ ಹಿರಿಯರದಾಗಿತ್ತು. ಉದ್ಯೋಗ ದೊರೆತು ಒಂದು ಕಡೆ ನೆಲೆನಿಂತ ಮೇಲೆ ಮದುವೆ ನಂತರ ವಿಸ್ತಾರಗೊಳ್ಳುವ ಹೆಂಡತಿ ಮಕ್ಕಳೊಂದಿಗಿನ ಕುಟುಂಬ, ಸಾಂಪ್ರದಾಯಿಕ ಶೈಲಿಯ ಈ ಚಿಂತನೆ ಎಲ್ಲಾ ಹಿರಿಯರಲ್ಲಿ ಹಾಸು ಹೊಕ್ಕಾಗಿರುತ್ತದೆ. ಅದರಲ್ಲಿ ಯಾರೂ ದೋಷವನ್ನು ಕಾಣಲು ಸಾಧ್ಯವಿಲ್ಲ, ದೋಷವನ್ನು ಕಾಣುವುದು ಸಾಧ್ಯವೂ ಅಲ್ಲ. ಮಕ್ಕಳ ಭವಿಷ್ಯದ ಚಿಂತನೆಯನ್ನು ತಂದೆ-ತಾಯಿಗಳು ಮಾಡದಿದ್ದರೆ ಮತ್ತಾರು ಮಾಡಲಾದೀತು?

ಸಾರ್ವಜನಿಕ ಕ್ಷೇತ್ರದ ವಿವಿಧ ಆಯಾಮುಗಳಲ್ಲಿ ತನ್ನನ್ನು ತಾನು ತೊಡಗಿಸಿಕೊಂಡಿದ್ದ ವೆಂಕಣ್ಣನಿಗೆ ಭವಿಷ್ಯದ ಚಿಂತೆ ಕಾಡಲಿಲ್ಲ. ಹಲವು ಕ್ಷೇತ್ರಗಳಲ್ಲಿನ

ಸಜ್ಜನರ ಸಂಪರ್ಕದಿಂದಾಗಿ ವೆಂಕಣ್ಣ ಒಬ್ಬ ವಿಶಿಷ್ಟ ವ್ಯಕ್ತಿಯಾಗಿ ಮಾರ್ಪಾಟು ಹೊಂದುತ್ತಿದ್ದು ವಿಭಿನ್ನ ಶೈಲಿಯಲ್ಲಿ ಆತನ ಚಿಂತನೆ ಸಾಗಿತ್ತು. ಮಹಾತ್ಮಗಾಂಧಿಯವರ ನೇತೃತ್ವದಲ್ಲಿ ನಡೆದ ಸ್ವಾತಂತ್ರ್ಯ ಚಳವಳಿ, ಸ್ವದೇಶಿ ಹಂಬಲ, ವಂದೇಮಾತರಂ ಚಳವಳಿ, ಕನ್ನಡ ಆಂದೋಲನ, ಸಾಹಿತ್ಯ-ಸಂಗೀತ, ನಾಟಕದ ಗೀಳು, ಬರವಣಿಗೆಯಲ್ಲಿದ್ದ ಅದಮ್ಯ ಆಸಕ್ತಿ, ಒಂದೇ ಎರಡೇ? ಇವೆಲ್ಲವುಗಳು ವೆಂಕಣ್ಣನನ್ನು ತನ್ನ ಭವಿಷ್ಯ ಕುರಿತು ಚಿಂತಿಸಲು ಅವಕಾಶವನ್ನೇ ಕೊಡುತ್ತಿರಲಿಲ್ಲ! ಅವನ ಬರವಣಿಗೆ ಹವ್ಯಾಸ ದಿನೇ ದಿನೇ ಹೆಚ್ಚುತ್ತಲೇ ಇತ್ತು. 'ಸಂಯುಕ್ತ ಕರ್ನಾಟಕ' ಪತ್ರಿಕೆ ವೆಂಕಣ್ಣನಲ್ಲಿ ಅಮೂರ್ತವಾಗಿ ಮನೆಮಾಡಿದ್ದ ಪತ್ರಕರ್ತನನ್ನು ಪ್ರಚೋದಿಸಿ, ಕೆಣಕುತ್ತಲೇ ಇತ್ತು.

೧೯೪೭ ಆಗಸ್ಟ್ ೧೫ ರಂದು ಭಾರತಕ್ಕೆ ಸ್ವಾತಂತ್ರ್ಯ ಬಂತು. ಸುಮಾರು ಎರಡು ಶತಮಾನಗಳ ಬ್ರಿಟಿಷ್ ದಾಸ್ಯದಿಂದ ದೇಶಕ್ಕೆ ಕೊನೆಗೂ ಮುಕ್ತಿ ದೊರಕಿತ್ತು. ಆದರೆ ಸ್ವಾತಂತ್ರ್ಯದ ಗಾಳಿ ಹೈದ್ರಾಬಾದಿಗೆ ಸೋಂಕಲೇ ಇಲ್ಲ. ದಿಲ್ಲಿಗೆ ಬಂದ ಸ್ವಾತಂತ್ರ್ಯ ಹೈದ್ರಾಬಾದಿಗೆ ಬರಲಿಲ್ಲ. ನಿಜಾಂ ಸರಕಾರದ ದಬ್ಬಾಳಿಕೆಯಿಂದ ತತ್ತರಿಸಿ ಹೋಗಿದ್ದ ಜನತೆ ಆತನ ತಾನಾಶಾಹಯುಲ್ಲಿ ನಲುಗಿ ನುಗ್ಗಾಗ್ಗಿದ್ದರು. ಭಾರತದ ಒಕ್ಕೂಟದೊಂದಿಗೆ ಸೇರಲೂ ನಿರಾಕರಿಸಿದ ನಿಜಾಮ ಒಂದು ಬೃಹತ್ ಸಮಸ್ಯೆಯ ಉದಯಕ್ಕೆ ಕಾರಣನಾದ. ಪ್ರತ್ಯೇಕ ಪಾಕಿಸ್ತಾನದಿಂದ ಪ್ರೇರಿತನಾಗಿದ್ದ ನಿಜಾಮ ತನ್ನದೇ ಆದ ಪ್ರತ್ಯೇಕ ದೇಶದ ಅಧಿಪತಿಯಾಗಿ ಮೆರೆಯಲು ನಿರ್ಧರಿಸಿದ್ದ. ರಜಾಕಾರರ ದೌರ್ಜನ್ಯ ತಾರಕ್ಕೇರಿದ ಪರಿಣಾಮ ಹಿಂದುಗಳು ತತ್ತರಿಸಿ ಹೋದರು. ಕೋಮು ಸೌಹಾರ್ದ ಶಾಂತಿ-ಸಹಬಾಳ್ವೆ ಮಣ್ಣು ಮುಕ್ಕಿದುವು. ಹಿಂದು-ಮುಸ್ಲಿಂ ವೈಷಮ್ಯ ತನ್ನ ಪರಾಕಾಷ್ಠೆಯ ಒಂದು ಹೊಸ ರೂಪವನ್ನೇ ಪಡೆಯಿತು.

ಕನ್ನಡ ಭಾಷೆ, ಸಂಸ್ಕೃತಿ ಕುರಿತ ಚಟುವಟಿಕೆಗಳನ್ನು ನಡೆಸುವುದೆಂದರೆ ಅದು ನಿಜಾಂ ಪ್ರಭುತ್ವದ ವಿರುದ್ಧ ನಡೆಸುವ ದ್ರೋಹವೆಂತಲೇ ನಿಜಾಂ ಸರಕಾರ ಭಾವಿಸಿತ್ತು. ನಿಜಾಂ ತನ್ನೆಲ್ಲಾ ಶಕ್ತಿಯನ್ನು ಕ್ರೋಢೀಕರಿಸಿ ತನ್ನ ಪ್ರಭುತ್ವದ ವಿರುದ್ಧ ನಡೆಯುವ ಯಾವುದೇ ಚಟುವಟಿಕೆಯನ್ನು, ಚಳವಳಿಯನ್ನು ಹೊಸಕಿ ಹಾಕುತ್ತಿದ್ದ. ಅದುಮಿದಷ್ಟೂ ಪುಟಿದೇಳುವ ಶಕ್ತಿ ಕೆಲವು ಚಳವಳಿಗೆ ಇರುತ್ತದೆ. ಅದರಲ್ಲೂ ಸ್ವಾತಂತ್ರ್ಯದ ಹಂಬಲದ ಹೋರಾಟವನ್ನು ಕೇಳಬೇಕೆ? ಹೈದ್ರಾಬಾದ್ ಪ್ರಾಂತದ ಜನತೆ ಎರಡನೇ ಸ್ವಾತಂತ್ರ್ಯ ಸಮರವನ್ನು ನಿಜಾಂಶಾಹಿಯ ವಿರುದ್ಧ ಪ್ರಾರಂಭಿಸುವುದು ಅನಿವಾರ್ಯವಾಯಿತು. ಇದರಿಂದಾಗಿ ಇಡೀ ಹೈದ್ರಾಬಾದ್ ರಾಜ್ಯದಲ್ಲಿ ದ್ವೇಷಮಯ ವಾತಾವರಣ ಸೃಷ್ಠಿಯಾಯಿತು. ಭಾರತದ ಒಕ್ಕೂಟದೊಂದಿಗೆ ಹೈದ್ರಾಬಾದ್ ರಾಜ್ಯವನ್ನು ವಿಲೀನಗೊಳಿಸಲು ಭಾರತದ ನಾಯಕರು ಅದರಲ್ಲೂ ಸರದಾರ ವಲ್ಲಭಭಾಯಿ

ಪಟೇಲರು ಮಾಡಿದ ಎಲ್ಲ ಶಾಂತಿಯುತ ಯತ್ನಗಳನ್ನು ನಿಜಾಂ ಧಿಕ್ಕರಿಸಿದ. ಪ್ರಧಾನ ಮಂತ್ರಿ ಜವಾಹರಲಾಲ್ ನೆಹರು ಅವರನ್ನು ರಣರಂಗದಲ್ಲೇ ಸಂಧಿಸುವುದಾಗಿ ಘೋಷಿಸಿದ!

ನಿಜಾಂ ಆಡಳಿತದಿಂದ ಮುಕ್ತಿ ಹೊಂದಲು ಹೈದ್ರಾಬಾದ ರಾಜ್ಯದಲ್ಲಿ ಹಿಂದುಗಳೆಲ್ಲರೂ ಸಂಘಟಿತ ಹೋರಾಟ ನಡೆಸುವುದು ಅನಿವಾರ್ಯವಾಯಿತು. ಕಾಂಗ್ರೆಸು ಪಕ್ಷ ಮತ್ತು ಅವರ ಮುಖಂಡರು ಹೈದ್ರಾಬಾದ ವಿಮೋಚನಾ ಆಂದೋಲನದ ಮುಂಚೂಣಿಯಲ್ಲಿದ್ದರು. ದುರದೃಷ್ಟವಶಾತ್ ಸ್ವಾತಂತ್ರ್ಯ ಚಳವಳಿ ಅನೇಕ ಕಡೆ ಕೋಮು ಸ್ವರೂಪ ಪಡೆದುಕೊಂಡು ರಾಜ್ಯಾದ್ಯಾಂತ ಕೋಮು ದಳ್ಳುರಿ ವ್ಯಾಪಕವಾಗಿ ಹಬ್ಬಿತು. ಹಿಂದುಗಳು ಯುದ್ದ ತರಬೇತು ಹೊಂದುವುದು ಅನಿವಾರ್ಯವಾಯಿತು. ನಿಜಾಂಶಾಹಿ ವಿರುದ್ಧದ ಚಳವಳಿ ದಿನೇ ದಿನೇ ಬಲಗೊಳ್ಳುತ್ತ ಹೋಯಿತು.

'ಉಡಾಳ' ವೆಂಕಣ್ಣ

ಈ ಎಲ್ಲ ತುಮುಲಮಯ ಬೆಳವಣಿಗೆಗಳಿಂದ ಅತ್ಯಂತ ಸಂವೇದನಾಶೀಲ ವ್ಯಕ್ತಿಯಾಗಿದ್ದ ವೆಂಕಣ್ಣ ಬಾಧಿತನಾಗಿರದೆ ಇರಲು ಸಾಧ್ಯವಿರಲಿಲ್ಲ. ಯಾವುದೇ ಗೊಡವೆಗೆ ಹೋಗದೆ ತನ್ನಷ್ಟಕ್ಕೆ ತಾನಿರುವುದು ಆತನ ಜಾಯಮಾನವಾಗಿರಲಿಲ್ಲ. ಮನೆಯವರ ವಿರೋಧ, ಆಕ್ಷೇಪಣೆಗಳನ್ನು ಧಿಕ್ಕರಿಸಿ ಆತನು ಎಲ್ಲ ಚಟುವಟಿಕೆಗಳಲ್ಲಿ ತನ್ನನ್ನು ತೊಡಗಿಸಿಕೊಳ್ಳುತ್ತಿದ್ದ. ಅಷ್ಟೇ ಏಕೆ ಯುವಕರ ಹಲವು ಚಟುವಟಿಕೆಗಳಿಗೆ ಆತನೇ ಪ್ರೇರಕಶಕ್ತಿ, ಆತನೇ ನಾಯಕ!

ಅನೇಕರು ತಮ್ಮ ಭವಿಷ್ಯದ ಬಗ್ಗೆ ಚಿಂತಿಸಿ ಸ್ವಾರ್ಥಲೋಲುಪರಾಗಿ ಚಳುವಳಿಗೆ ಪ್ರತ್ಯಕ್ಷವಾಗಲೀ, ಪರೋಕ್ಷವಾಗಲೀ ಅಂಟಿಕೊಳ್ಳದೆ ಇರಲು ಬಯಸುತ್ತಾರೆ. ಆದರೆ ವೆಂಕಣ್ಣನಿಗೆ ಮಾತ್ರ ಮೊದಲು ಸ್ವಾತಂತ್ರ್ಯ ನಂತರ ಉಳಿದ ವಿಚಾರಗಳ ಬಗ್ಗೆ ಚಿಂತೆ. ಮನೆಯಲ್ಲಿ ಹಿರಿಯರ ವಿರೋಧವನ್ನು ಲೆಕ್ಕಿಸದೆ ಎಲ್ಲ ರೀತಿಯ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದ ವೆಂಕಣ್ಣನ ಬಗ್ಗೆ ಕುಟುಂಬದಲ್ಲಿ ಕಾಳಜಿ, ಆತಂಕಗಳು ಹೆಚ್ಚುತ್ತಲೇ ಹೋದವು. ವೆಂಕಣ್ಣ ಉಡಾಳನಾಗಿ ತನ್ನ ಜೀವನ ಹಾಳುಮಾಡಿಕೊಳ್ಳುವುದನ್ನು ಅವರು ನೋಡದಾದರು. ಒಂಭತ್ತನೆ ಇಯತ್ತೆ ಪಾಸಾಗಿ ಮುಂದಿನ ಶಿಕ್ಷಣಕ್ಕೆ ತಿಲಾಂಜಲಿಯನ್ನಿತ್ತಿದ್ದ ವೆಂಕಣ್ಣ ಮತ್ತೆ ಶಿಕ್ಷಣವನ್ನು ಮುಂದುವರೆಸುವ ಸ್ಥಿತಿಯಲ್ಲಿರಲಿಲ್ಲ.

ವೆಂಕಣ್ಣನನ್ನು ಯಾವುದಾದರೊಂದು ನೌಕರಿಗೆ ಹಚ್ಚುವುದು ಕುಟುಂಬದ ಹಿರಿಯರ ಏಕೈಕ ಉದ್ದೇಶವಾಗಿತ್ತು. ಆತ ಹೈದ್ರಾಬಾದಿನಲ್ಲೇ ಇದ್ದರೆ ಅದು ಸಾಧ್ಯವಾಗಲಾರದೆಂದು ಹಿರಿಯರೆಲ್ಲ ನಂಬಿದ್ದರು. ಆತನನ್ನು ಹೈದ್ರಾಬಾದಿನಿಂದ ಬಿಡಿಸಿ ತನ್ನ ಕಾಲಿನ ಮೇಲೆ ತಾನು ನಿಲ್ಲುವ ಜವಾಬ್ದಾರಿ ಮನುಷ್ಯನನ್ನಾಗಿ ಮಾಡಬೇಕೆಂಬ ಹಿರಿಯರ ಹಂಬಲ ದಿನೇ ದಿನೇ ಬಲಗೊಳ್ಳುತ್ತಾ ಹೋಯಿತು. ಹೈದ್ರಾಬಾದಿನ ಹೊರಗಡೆ ವೆಂಕಣ್ಣನಿಗೆ ಕೆಲಸದ ಹುಡುಕಾಟ ತೀವ್ರಗೊಂಡಿತು. ಕೊನೆಗೂ ಒಂದು ದಾರಿ ಸಿಕ್ಕಿತು. ಮೆಹಬೂಬ ನಗರದ ಹತ್ತಿರ ಇರುವ ಜೆಡಚೆರ್ಲ ಎಂಬ ಊರಿನ ಸಿನೆಮಾ ಮಂದಿರದ ಮ್ಯಾನೇಜರನ ಒಂದು ಹುದ್ದೆ ಖಾಲಿ ಇದೆ ಎಂದು ಕುಟುಂಬದ ಹಿತಾಸಕ್ತಿ ಸ್ನೇಹಿತರಿಂದ ತಿಳಿದು ಬಂದು ವೆಂಕಣ್ಣನನ್ನು ಜೆಡಚೆರ್ಲಗೆ ಕಳುಹಿಸಲಾಯಿತು. ಒಲ್ಲದ ಮನಸ್ಸಿನಿಂದ ಆತ ಹೈದ್ರಾಬಾದಿನಿಂದ ಹೊರಬಿದ್ದು ತನ್ನ ಜೀವನದ ಮೊದಲ ಸ್ವತಂತ್ರ ಜವಾಬ್ದಾರಿಯನ್ನು ನಿರ್ವಹಿಸಲು ಜೆಡಚೆರ್ಲಗೆ ಪ್ರಯಾಣ ಬೆಳೆಸಿದ.

ಸಿನೆಮಾ ಥಿಯೇಟರನ ಮ್ಯಾನೇಜರಿಕೆಯನ್ನೇನೋ ಅಚ್ಚುಕಟ್ಟಾಗಿ ನಿರ್ವಹಿಸುತ್ತಿದ್ದ ವೆಂಕಣ್ಣ. ಆದರೆ ಅದರಲ್ಲಿ ಸಂತೃಪ್ತಿ ಇರಲಿಲ್ಲ. ಪಾದರಸದಂತೆ ಸದಾಕಾಲ ಲವಲವಿಕೆಯಿಂದ ಅನೇಕ ಚಟುವಟಿಕೆಗಳಲ್ಲಿ ತೊಡಗುತ್ತಿದ್ದ ವೆಂಕಣ್ಣನಿಗೆ ಸಿನೆಮಾ ಮಂದಿರದ ವ್ಯವಸ್ಥಾಪಕನಾಗಿ ಒಂದೇ ಸ್ಥಳದಲ್ಲಿ ಕುಳಿತು ಕಾರ್ಯನಿರ್ವಹಿಸುವುದು ದುಸ್ತರವಾಗಿತ್ತು. ಸ್ವಚ್ಛಂದ ಹಕ್ಕಿಯಾಗಿದ್ದ ವೆಂಕಣ್ಣ ಇದ್ದಕ್ಕಿದ್ದ ಹಾಗೆ ಪಂಜರದೊಳಗಿನ ಗಿಳಿಯಂತಾದ, ಜೀವನದ ಮೊದಲ ಬಂಧನದ ರುಚಿ ಆತ ಕಾಣಲಾರಂಭಿಸಿದ. ಯಾವಾಗಲೂ ಚಡಪಡಿಸುತ್ತಲೇ ಇದ್ದ. ತನ್ನ ಮನೋಧರ್ಮ, ಅಭಿರುಚಿಗೆ ಪೂರಕವಾದ ಅವಕಾಶ, ಸಂದರ್ಭಗಳಿಗಾಗಿ ಸದಾ ಹುಡುಕಾಟದಲ್ಲಿದ್ದ ವೆಂಕಣ್ಣನನ್ನು ಅದೃಷ್ಟ ಕೈ ಹಿಡಿದು ಆತನ ಭವಿಷ್ಯ ಜೀವನದ ಕರ್ಮಭೂಮಿಯಾಗಿದ್ದ ಕಲಬುರಗಿಗೆ ಕರೆತಂದಿತ್ತು.

ಕಲಬುರಗಿಗೆ ಆಗಮನ

೧೯೪೮-೪೯ ರ ಸುಮಾರಿಗೆ ಕಲಬುರಗಿಗೆ ವೆಂಕಣ್ಣ ಆಗಮಿಸಿದ್ದು ಕೇವಲ ಆಕಸ್ಮಿಕ. ಅದೂ ಜೀವನದ ನೆಲೆಯ ಹುಡುಕಾಡದ ಪ್ರಯತ್ನದ ಫಲವಾಗಿ ಕಲಬುರಗಿಗೆ ವೆಂಕಣ್ಣನಂತಹ ಬಹುಮುಖ ವ್ಯಕ್ತಿತ್ವದ ಕ್ರಿಯಾಶೀಲ ವ್ಯಕ್ತಿಯ ಅಗತ್ಯವಿದ್ದರೆ ವೆಂಕಣ್ಣನಿಗೆ ತನ್ನ ಕ್ರಿಯಾಶೀಲತೆಯನ್ನು, ಸೃಜನಶೀಲತೆಯನ್ನು ಪ್ರಾಯೋಗಿಕ ಒರೆಗಲ್ಲಿಗೆ ಹಚ್ಚಿ ತನ್ನ ಬದುಕಿನ ಸಾರ್ಥಕತೆಯನ್ನು ಕಂಡುಕೊಳ್ಳುವ

ಅಗತ್ಯವಿತ್ತು. ಸಾಂದರ್ಭಿಕ ಮತ್ತು ಚಾರಿತ್ರಿಕ ಅಗತ್ಯದ ದೃಷ್ಟಿಯಿಂದ ಕಾಗಲಕರ್ ಮತ್ತು ಕಲಬುರುಗಿ ಪರಸ್ಪರ ಪ್ರೇರಿತವಾಗಿದ್ದವು.

ಹೊಸ ಪ್ರದೇಶ, ಹೊಸ ಜನ, ಹೊಸ ಅವಕಾಶ, ಎಲ್ಲವೂ ಹೊಸತು. ಕನ್ನಡ ಭಾಷೆಯ ದೃಷ್ಟಿಯಿಂದ ಹೇಳುವುದಾದರೆ ಹೈದ್ರಾಬಾದ ಮತ್ತು ಕಲಬುರಗಿ ಮಧ್ಯೆ ಯಾವುದೇ ವ್ಯತ್ಯಾಸ ಇರಲಿಲ್ಲ. ಉರ್ದು ಮತ್ತು ಮರಾಠಿ ಭಾಷೆಗಳ ಪ್ರಾಬಲ್ಯದಿಂದ ಕನ್ನಡ ಕಮರಿ ಹೋಗುವ ವಾತಾವರಣ ಕಲಬುರಗಿಯಲ್ಲಿ. ಕನ್ನಡ ಪತ್ರಿಕೆಗಳಂತೂ ಇಲ್ಲಿ ಗಗನಕುಸುಮ. ಶರಣರ, ತತ್ವಪದಕಾರರ, ಅನುಭಾವಿಗಳ, ಹರಿದಾಸರ ನಾಡಾಗಿದ್ದರೂ ಕಲಬುರಗಿಯಲ್ಲಿ ಒಂದು ರೀತಿಯ ಸಾಂಸ್ಕೃತಿಕ ಜಡತ್ವ ಮನೆಮಾಡಿತ್ತು. ಆ ಜಡತ್ವವನ್ನು ದೂರ ಮಾಡಲೋ ಎಂಬಂತೆ ವೆಂಕಣ್ಣನ ಪ್ರವೇಶವಾಗಿತ್ತು ಕಲಬುರಗಿಗೆ.

ಕಾಗಲಕರ್ ಅವರ ವಿಭಿನ್ನ ಸಾಸ್ಕೃತಿಕ ಆಯಾಮಗಳನ್ನು ಸಾಕಾರಗೊಳಿಸಲು ಕಲಬುರಗಿಯಲ್ಲಿ ಫಲಪತ್ತಾದ ಭೂಮಿಕೆ ನಿರ್ಮಾಣವಾಗಿತ್ತು. ತಮ್ಮ ನಾಲ್ಕುವರೆ ದಶಕಗಳ ಸುದೀರ್ಘ ಬದುಕಿನಲ್ಲಿ ಸಾಂಸ್ಕೃತಿಕವಾಗಿ ತಾವು ಅರಳುವುದರ ಜೊತೆಗೆ ಇಡೀ ಕಲಬುರಗಿಗೆ ನವಚೇತನವನ್ನು ತುಂಬಿದರು. ಹಾಡು, ನೃತ್ಯ, ಭಜನೆ, ಸಂಗೀತ, ದಾಸರ ಕೀರ್ತನೆ, ಶರಣರ ವಚನ, ಸಾಹಿತ್ಯ, ಪತ್ರಿಕೋದ್ಯಮ, ಆಧ್ಯಾತ್ಮ, ಶಿಕ್ಷಣ, ರಾಜಕೀಯ, ಸಾಮಾಜಿಕ ಕ್ಷೇತ್ರ, ಅಭಿವೃದ್ಧಿ, ಸಂಶೋಧನೆ, ಕಾರ್ಮಿಕ ಚಳುವಳಿ - ಹೀಗೆ ಹತ್ತಾರು ಕ್ಷೇತ್ರಗಳನ್ನು ಶ್ರೀಮಂತಗೊಳಿಸಿದ ಶ್ರೇಯಸ್ಸು ಅವರಿಗೆ ಸಲ್ಲಬೇಕು. ಈ ಎಲ್ಲ ಕ್ಷೇತ್ರಗಳಲ್ಲಿ ಅವರ ಕೊಡುಗೆ ಅನನ್ಯವಾದದ್ದು. ವೃತ್ತಿಯಿಂದ ಪತ್ರಕರ್ತರಾದರೂ ಅವರ ವಿಭಿನ್ನ ಪ್ರವೃತ್ತಿಗಳ ಆಸಕ್ತಿ ಮತ್ತು ಪ್ರೀತಿಯಿಂದಾಗಿ ಅಭ್ಯುದಯಕ್ಕೆ ಕಾಗಲಕರ್ ನೀಡಿದ ಕೊಡುಗೆಯನ್ನೇ ಒಂದು ಅಧ್ಯಯನದ ವಸ್ತುವನ್ನಾಗಿಸಿಕೊಂಡು ಉತ್ತಮ ಸಂಶೋಧನೆಯನ್ನೇ ಮಾಡಬಹುದು!

ಪತ್ರಕರ್ತ ಸರಿ; ಉಪಜೀವನ?

ಹೈದ್ರಾಬಾದಿನಲ್ಲಿ ವಿದ್ಯಾರ್ಥಿ ದೆಸೆಯಲ್ಲಿದ್ದಾಗ ಮತ್ತು ನಂತರದ ತುಂಬು ತಾರುಣ್ಯದ ದಿನಗಳಲ್ಲಿ ಪತ್ರಿಕಾ ಬರವಣಿಗೆಯ ಗೀಳನ್ನು ಅಂಟಿಸಿಕೊಂಡಿದ್ದ ವೆಂಕಣ್ಣನಿಗೆ ಅದನ್ನು ಮುಂದುವರಿಸಿಕೊಂಡು ಹೋಗಲು ಗುಲ್ಬರ್ಗ ಪ್ರಶಸ್ತ ಸ್ಥಳವಾಗಿತ್ತು. ತನ್ನೊಳಗಿನ ಸಾಮಾಜಿಕ, ಸಾಂಸ್ಕೃತಿಕ ಕ್ರಿಯಾಶೀಲ ಸಾಮರ್ಥ್ಯವನ್ನೆಲ್ಲ ಪರಿಣಾಮಕಾರಿಯಾಗಿ ಅಭಿವ್ಯಕ್ತಿಗೊಳಿಸಲು ಆತನಿಗೆ ಪತ್ರಿಕಾಕರ್ತನ ವೃತ್ತಿ ಅತ್ಯಂತ ಸೂಕ್ತ ಹಾಗೂ ಪ್ರಭಾವಶಾಲಿಯಾಗಿತ್ತು. ಆದರೆ ಅಂದಿನ ದಿನಗಳಲ್ಲಿ

ಪತ್ರಕರ್ತನಾಗಿದ್ದವನು ಪತ್ರಿಕೋದ್ಯಮದ ಮೇಲೆಯೇ ಹೊಟ್ಟೆ ಹೊರೆಯುವುದು ಕಷ್ಟಸಾಧ್ಯವಿತ್ತು. ಯಾವುದಾದರೊಂದು ನಿಶ್ಚಿತ ಆದಾಯವಿದ್ದವರು ಮಾತ್ರ ಪತ್ರಿಕೆಯನ್ನು ಅವಲಂಬಿಸಬಹುದಾಗಿತ್ತು. ಪತ್ರಕರ್ತರಿಗೆ ಸೇವಾಭದ್ರತೆ, ಸೌಲಭ್ಯ, ಉತ್ತಮ ಸಂಬಳ, ಭತ್ಯೆ, ಇತ್ಯಾದಿಗಳನ್ನು ಒದಗಿಸಿಕೊಡುವ ಪರಿಪಾಠ ಆಗಿನ್ನೂ ಬೆಳೆದು ಬಂದಿರಲಿಲ್ಲ.

ಸ್ವಾತಂತ್ರ್ಯೋತ್ತರ ಭಾರತೀಯ ಪತ್ರಿಕೋದ್ಯಮ ಶೈಶವಾವಸ್ಥೆಯಲ್ಲಿತ್ತು. ಇಂಗ್ಲೀಷ್ ಪತ್ರಿಕೋದ್ಯಮದಲ್ಲಿ ಕಾರ್ಯನಿವಹಿಸುತ್ತಿದ್ದ ಪತ್ರಕರ್ತರಿಗೆ ಅದರಲ್ಲೂ ದೊಡ್ಡ ಶಹರುಗಳಲ್ಲಿ ಮತ್ತು ಪತ್ರಿಕಾ ಪ್ರಕಾಶನ ಕೇಂದ್ರಗಳಲ್ಲಿ ಮಾತ್ರ ಅಲ್ಪ ಸ್ವಲ್ಪ ಸಂಬಳ, ಭತ್ಯೆ, ದೊರೆಯುತ್ತಿದ್ದವು. ಆದರೆ ಇತರ ಪ್ರದೇಶಗಳಲ್ಲಿ ಅದರಲ್ಲೂ ಮುಖ್ಯವಾಗಿ ಜಿಲ್ಲಾಕೇಂದ್ರಗಳಲ್ಲಿ ಕೆಲಸ ಮಾಡುವ ಪತ್ರಕರ್ತರಿಗೆ ವೇತನ ನೀಡುವ ಪದ್ಧತಿಯೇ ಇರಲಿಲ್ಲ! ಎಲ್ಲ ಪತ್ರಿಕೆಗಳು, ಜಿಲ್ಲಾ ಕೇಂದ್ರಗಳಲ್ಲಿ ಬಿಡಿ ಸುದ್ದಿಗಾರರನ್ನು ಅರೆಕಾಲಿಕ ಆಧಾರದ ಮೇಲೆಯೇ ನೇಮಿಸಿಕೊಳ್ಳುತ್ತಿದ್ದವು. ಕೆಲವು ಪತ್ರಿಕೆಗಳು ಜಿಲ್ಲಾಕೇಂದ್ರಗಳಲ್ಲಿರುವ ಕೆಲವು ವರದಿಗಾರರಿಗೆ ಒಂದಿಷ್ಟು ಪೂರ್ವನಿಗದಿತ ಸಣ್ಣ ಮೊತ್ತದ ಮಾಸಿಕ ಗೌರವಧನ ನೀಡುತ್ತಿದ್ದವು. ಇದಕ್ಕೆ ರಿಟೇನರ್ (Retainer) ಎಂದು ಕರೆಯಲಾಗುತ್ತಿತ್ತು.

ಕೆಲವು ಪತ್ರಿಕೆಗಳು ಮಾಸಿಕ ಗೌರವಧನದ ಜೊತೆಗೆ ವರದಿಗಾರ ಕಳುಹಿಸುವ ಸುದ್ದಿಯ ಪ್ರಮಾಣಕ್ಕನುಗುಣವಾಗಿ ಪ್ರಕಟವಾದ ಒಂದು ಇಂಚು ಅಥವಾ ಒಂದು ಸೆಂಟಿಮೀಟರ್ ಸುದ್ದಿಗೆ ಇಂತಿಷ್ಟು ಎಂತಲೂ ಕೊಡುತ್ತಿದ್ದವು. ಇದಕ್ಕೆ ಲೈನೆಜ (Lineage) ಅಥವಾ ವರ್ಡೇಜ (Wordage) ಎಂದು ಕರೆಯಲಾಗುತ್ತದೆ. ಈ ಪದ್ಧತಿಯನ್ನು ಇಂದಿಗೂ ಕೆಲವು ಪತ್ರಿಕೆಗಳು ಮುಂದುವರೆಸಿಕೊಂಡು ಬಂದಿವೆ. ಇದು ಸಾಮಾನ್ಯವಾಗಿ ತಾಲೂಕು ಮತ್ತು ಹೋಬಳಿ ಕೇಂದ್ರಗಳಲ್ಲಿ ಕಾರ್ಯನಿರ್ವಹಿಸುವ ವರದಿಗಾರರಿಗೆ ಅನ್ವಯವಾಗುತ್ತದೆ. ಜಿಲ್ಲಾ ಕೇಂದ್ರದಲ್ಲಿ ಕೆಲಸ ಮಾಡುವ ವರದಿಗಾರರಿಗೂ ಅಲ್ಲಲ್ಲಿ ಇನ್ನೂ ಈ ಪದ್ಧತಿ ಜಾರಿಯಲ್ಲಿದ್ದರೂ ಇದ್ದೀತು.

ಪತ್ರಿಕೆಯ ವರದಿಗಾರನಾಗಿ ಕೆಲಸ ಮಾಡುವ ವ್ಯಕ್ತಿ ಪತ್ರಿಕೆ ಬರವಣಿಗೆಯ ಆಧಾರದ ಮೇಲೆಯೇ ತನ್ನ ಹಾಗೂ ತನ್ನ ಕುಟುಂಬದ ನಿರ್ವಹಣೆ ಮಾಡುತ್ತಾನೆಂಬುದೇ ಆಗಿನ ಕಾಲದಲ್ಲಿ ದುಸ್ಸಾಹಸದ ಮಾತು. ಅಂತೆಯೇ ಅನೇಕ ಕಡೆಗಳಲ್ಲಿ ಪತ್ರಿಕೆಗಳು ಆರ್ಥಿಕವಾಗಿ ಸದೃಢವಾಗಿರುವವರನ್ನೇ ಅರೆಕಾಲಿಕ

ವರದಿಗಾರನನ್ನಾಗಿ ನೇಮಕ ಮಾಡಿಕೊಳ್ಳುತ್ತವೆ. ಒಂದು ನಿರ್ದಿಷ್ಟ ಆದಾಯ ಇದ್ದವರು ಮತ್ತು ಪತ್ರಿಕಾ ಬರವಣಿಗೆಯಲ್ಲಿ ಆಸಕ್ತಿ ಇದ್ದವರು ಮಾತ್ರ ಈ ಕೆಲಸಕ್ಕೆ ಹೊಂದಿಕೊಂಡು ಹೋಗಲು ಸಾಧ್ಯ. ಹಲವಾರು ಕಡೆ ವಕೀಲಿ ವೃತ್ತಿ ಮಾಡುವವರು, ವೈದ್ಯರು, ಶಿಕ್ಷಕರು, ಮತ್ತು ಇತರ ಉದ್ಯೋಗದಲ್ಲಿದ್ದವರು ಪತ್ರಿಕಾ ವರದಿಗಾರನ ಕಾರ್ಯನಿರ್ವಹಿಸುತ್ತಿದ್ದರು ಮತ್ತು ಈಗಲೂ ಅದು ಮುಂದುವರೆದಿದೆ.

ಈ ಲೇಖಕ ೧೯೮೫ ರಲ್ಲಿ ರಾಯಚೂರಿನಲ್ಲಿ 'ಇಂಡಿಯನ್ ಎಕ್ಸ್‌ಪ್ರೆಸ್' ಪತ್ರಿಕೆಯ ವರದಿಗಾರನೆಂದು ನೇಮಕಗೊಂಡಾಗ ಆತನಿಗೆ ದೊರೆಯುತ್ತಿದ್ದ ಮಾಸಿಕ ರಿಟೇನರ್ ರೂ.೨೫೦. ಇದರ ಜೊತೆಗೆ ಪ್ರಕಟವಾದ ಒಂದು ಕಾಲಂ ಇಂಚು ಸುದ್ದಿಗೆ ಒಂದು ರೂಪಾಯಿ! ಕಾಗಲಕರ್ ಪತ್ರಿಕೋದ್ಯಮ ಪ್ರವೇಶ ಮಾಡಿದಾಗ ಅಂದರೆ ಇದಕ್ಕೂ ಮೂರು ದಶಕಗಳ ಹಿಂದಿನ ಪತ್ರಕರ್ತರ ಸೇವಾ ಪರಿಸ್ಥಿತಿ ಎಷ್ಟು ದುರ್ಭರವಾಗಿತ್ತೆಂಬುದನ್ನು ಯಾರಾದರೂ ಊಹಿಸಿಕೊಳ್ಳಬಹುದು. ೧೯೮೦ ರ ದಶಕದಿಂದೀಚೆಗೆ ಮಾತ್ರ ಪತ್ರಕರ್ತರ ವೇತನ, ಭತ್ಯೆ, ಸೌಲಭ್ಯ ಇತ್ಯಾದಿಗಳಲ್ಲಿ ಒಂದಿಷ್ಟು ಸುಧಾರಣೆ ಕಂಡುಬಂದವು.

ಪತ್ರಕರ್ತರನ್ನು ಸಮಾಜ ಒಂದು ವಿಶಿಷ್ಟ ದೃಷ್ಟಿಯಿಂದ ನೋಡುತ್ತಿತ್ತು. ಅವರ ಬಗ್ಗೆ ಏನೆಲ್ಲಾ ವಿಪರೀತ ಕಲ್ಪನೆಗಳು. ಅವರ ಶೋಚನೀಯ ಆರ್ಥಿಕ ಸ್ಥಿತಿಗತಿಗಳನ್ನು ಚೆನ್ನಾಗಿ ಅರಿತಿದ್ದ ಸಮಾಜ ಅವರನ್ನು ಒಂದು ರೀತಿಯ ಅನುಕಂಪದ ದೃಷ್ಟಿಯಿಂದಲೇ ನೋಡುತ್ತಿತ್ತು. ಇದು ಪತ್ರಕರ್ತರಿಗೆ ಮುಜುಗರ, ಕೀಳರಿಮೆ ಉಂಟುಮಾಡುವ ಸಂಗತಿಯಾಗಿತ್ತು.

"ನೀವೇನು ಮಾಡಿಕೊಂಡಿದ್ದೀರಿ?" ಎಂದು ಯಾರಾದರೂ ಕೇಳಿದರೆ "ನಾನು ಪತ್ರಕರ್ತನಾಗಿದ್ದೇನೆ!" ಎಂದು ಅಗದಿ ಹೆಮ್ಮೆಯಿಂದ ವರದಿಗಾರ/ ಉಪಸಂಪಾದಕ ಉತ್ತರಿಸುತ್ತಿದ್ದ. ಆದರೆ ಅವರಿಂದ ಬರುವ ಮರು ಪ್ರಶ್ನೆಗೆ ತತ್ತರಿಸುತ್ತಿದ್ದ. "ಹಾಗಾದರೆ ಉಪಜೀವನಕ್ಕೆ ಏನು ಮಾಡಿಕೊಂಡಿದ್ದೀರಿ?"

ಒಂದು ಕಾಲಕ್ಕೆ ಪತ್ರಕರ್ತರ ಬಗ್ಗೆ ಸಾಮಾಜಿಕ ನಿಕೃಷ್ಟ ಧೋರಣೆ ಎಷ್ಟೊಂದು ಕ್ರೂರವಾಗಿತ್ತೆಂದರೆ ಪತ್ರಕರ್ತನೊಂದಿಗೆ ತಮ್ಮ ಮಗಳನ್ನು ಮದುವೆ ಮಾಡಿಕೊಡಲು ಕನ್ಯಾಪಿತೃಗಳು ಹಿಂದೇಟು ಹಾಕುತ್ತಿದ್ದರು! ಪತ್ರಕರ್ತ ತಾನು ಉಪವಾಸಬೀಳುವುದರ ಜೊತೆಗೆ ತನ್ನ ಹೆಂಡತಿಯನ್ನು ಉಪವಾಸ ಕೆಡುವುದಕ್ಕೆ ಯಾವ ಕನ್ಯಾಪಿತೃ ತಾನೆ ಬಯಸಿಯಾನು?

ಸುದ್ದಿ ಸಂಸ್ಥೆಯ ಮೂಲಕ

ಇಂತಹ ದುರ್ಭರ ದಿನಗಳಲ್ಲಿ ಪತ್ರಿಕಾಲೋಕ ಪ್ರವೇಶಿಸಿದವರು ವಿ.ಎನ್.ಕಾಗಲಕರ್. ಆಗಿನ ಪರಿಸ್ಥಿತಿಗನುಗುಣವಾಗಿ ಅವರೊಂದು ನಿಶ್ಚಿತ ಆದಾಯ ತರುವ ಆರ್ಥಿಕ ನೆಲೆಯನ್ನು ಕಂಡುಕೊಳ್ಳುವುದು ಅಗತ್ಯವೂ, ಅನಿವಾರ್ಯವೂ ಆಗಿತ್ತು. ಎಂ.ಎಸ್.ಕೆ.ಮಿಲ್ಸ್ ಎಂದೇ ಖ್ಯಾತಿಯಾಗಿದ್ದ ಮೆಹಬೂಬ ಶಾಹಿ ಕುಲಬರ್ಗಾ ಜವಳಿ-ಗಿರಣಿಯ ಸುಂಕ ವಿಭಾಗದಲ್ಲಿ ೧೯೫೨-೫೩ ರಲ್ಲಿ ಕಾರಕೂನರೆಂದು ಸೇರಿದರು. ಸುಮಾರು ಮೂರುವರೆ ದಶಕಗಳ ಸೇವೆಯ ನಂತರ ಅದೇ ವಿಭಾಗದ ಮುಖ್ಯಸ್ಥರಾಗಿ ೧೯೮೭ ರಲ್ಲಿ ನಿವೃತ್ತಿ ಹೊಂದಿದರು. ಎಂ.ಎಸ್.ಕೆ. ಮಿಲ್ಲಿನ ಉದ್ಯೋಗದಿಂದ ಮಾಸಿಕ ವೇತನ ಬರುತ್ತಿದ್ದುದರಿಂದ ಅವರು ಅರೆಕಾಲಿಕ ಪತ್ರಕರ್ತರಾಗಿ ತಮ್ಮ ಜೀವನದ ಕೊನೆಯುಸಿರಿರುವವರೆಗೂ ೧೯.೮.೧೯೯೭ ರವರೆಗೆ ಪತ್ರಕರ್ತಕರಾಗಿಯೇ ಕಾರ್ಯಪ್ರವೃತ್ತರಾಗಿದ್ದರು. ನಿವೃತ್ತರಾದ ಒಂದು ದಶಕದ ನಂತರವೂ ಅವರು ಪತ್ರಿಕಾ ಸೇವೆಯನ್ನು ಮುಂದುವರೆಸಿದ್ದರು.

ವರ್ಷ ೧೯೫೩ರ ಫೆಬ್ರುವರಿಯಲ್ಲಿ ಪ್ರೆಸ್ ಟ್ರಸ್ಟ್ ಆಫ್ ಇಂಡಿಯಾ (Press Trust of India - PTI) ಸುದ್ದಿ ಸಂಸ್ಥೆಯ ವರದಿಗಾರರಾಗಿ ನೇಮಕಗೊಳ್ಳುವ ಮೂಲಕ ಕಾಗಲಕರ್ ತಮ್ಮ ಪತ್ರಿಕಾವ್ಯವಸಾಯಕ್ಕೆ ಶ್ರೀ ಗಣೇಶ ಹಾಡಿದರು. ರಾಷ್ಟ್ರದ ಪ್ರಮುಖ ಸುದ್ದಿ ಸಂಸ್ಥೆಯಾದ ಪಿ.ಟಿ.ಐ. ವರದಿಗಾರನಾಗಿ ಕೆಲಸ ಮಾಡುವುದೆಂದರೆ ಒಂದು ಪ್ರತಿಷ್ಠೆಯ ಸಂಗತಿಯೇ ಸರಿ. ಈ ಸುದ್ದಿ ಸಂಸ್ಥೆ ಅವರಿಗೆ ಕೊಡುತ್ತಿದ್ದ ಮಾಸಿಕ ಸಂಭಾವನೆ ರೂ. ೩೦! ಅದರಲ್ಲಿ ರೂ. ೨೫ ಸಂಭಾವನೆಯಾದರೆ ರೂ. ೫ ಸಾರಿಗೆ ಭತ್ಯೆ.

ಪಿ.ಟಿ.ಐ. ಸುದ್ದಿಗಾರರಾಗಿ ಸೇರಿದ ಕೆಲವೇ ದಿನಗಳಲ್ಲಿ ಅವರು ಎಂ.ಎಸ್.ಕೆ. ಮಿಲ್ಲಿನಲ್ಲಿ ಉದ್ಯೋಗಕ್ಕೆ ಸೇರಿಕೊಂಡರು.

ಪಿ.ಟಿ.ಐ. ರಾಷ್ಟ್ರೀಯ ಸುದ್ದಿ ಸಂಸ್ಥೆಯಾದರೂ ಅದಕ್ಕೆ ತನ್ನದೇ ಆದ ಇತಿ ಮಿತಿಗಳಿದ್ದವು. ರಾಜ್ಯ ಅಥವಾ ರಾಷ್ಟ್ರ ಮಟ್ಟದಲ್ಲಿ ಸುದ್ದಿ ಮಾಡಬಲ್ಲ ಅರ್ಹತೆಯುಳ್ಳ ವರದಿಗಳಿಗಷ್ಟೇ ಅಲ್ಲಿ ಪ್ರಾಶಸ್ತ್ಯ. ಸ್ಥಳೀಯ ಪ್ರಾಮುಖ್ಯದ ವರದಿಗಳಿಗೆ ಅಲ್ಲಿ ಅವಕಾಶವಿಲ್ಲ. ಉದಾಹರಣೆಗೆ ಐತಿಹಾಸಿಕ ಮಹತ್ವದ ವಿಚಾರ ಸಂಕಿರಣವೊಂದರಲ್ಲಿ ವ್ಯಕ್ತವಾಗುವ ಅಭಿಪ್ರಾಯ ಕುರಿತ ವರದಿಗಳನ್ನು ರಾಷ್ಟ್ರೀಯ ಸುದ್ದಿ ಸಂಸ್ಥೆಗಳು ಪ್ರಕಟಿಸುವುದು ತೀರಾ ಅಪರೂಪ. ಅಂತಹ ವಿಚಾರ ಸಂಕಿರಣಗಳು ರಾಜ್ಯ ಅಥವಾ

ರಾಷ್ಟ್ರ ಮಟ್ಟದಲ್ಲಿ ನಡೆದಿದ್ದಲ್ಲಿ ಮತ್ತು ಅದರಲ್ಲಿ ಮಂತ್ರಿಮಹೋದಯರು ಭಾಗವಹಿಸಿದ್ದಲ್ಲಿ ಮತ್ತು ಅದಕ್ಕೆ ಸುದ್ದಿಮೌಲ್ಯ ಬರುತ್ತದೆ.

ಆದರೆ ಕೆಲವು ದಿಢೀರ್ ಸುದ್ದಿಗಳಿಗೆ ಸುದ್ದಿ ಸಂಸ್ಥೆಗಳು ಪ್ರಮುಖ ಆದ್ಯತೆಯನ್ನು ನೀಡುತ್ತವೆ. ಉದಾಹರಣೆಗೆ ಕಲಬುರಗಿಯಲ್ಲಿ ರೈಲು ಅಪಘಾತವಾಗಿ ಹತ್ತಾರು ಜನ ಸತ್ತರೆ ಅದು ಖಂಡಿತವಾಗಿ ರಾಷ್ಟ್ರೀಯ ಪ್ರಾಮುಖ್ಯತೆಯನ್ನು ಪಡೆದುಕೊಳ್ಳುತ್ತದೆ. ರಾಜ್ಯದ ಮತ್ತು ರಾಷ್ಟ್ರ ಮಟ್ಟದ ಪ್ರಮುಖ ನಾಯಕರು ಪ್ರಮುಖವಾದ ಪ್ರಚಲಿತ ವಿದ್ಯಮಾನಗಳ ಬಗ್ಗೆ ಪ್ರತಿಕ್ರಿಯಿಸಿದಾಗಲೂ ಸುದ್ದಿ ಸಂಸ್ಥೆಗಳು ಅದನ್ನು ಗಣನೆಗೆ ತೆಗೆದುಕೊಳ್ಳುತ್ತವೆ. ಅಂತೆಯೇ ಪ್ರಮುಖ ಅಪರಾಧ ಸುದ್ದಿಗಳಿಗೂ ಅವು ಮನ್ನಣೆ ನೀಡುತ್ತವೆ. ಅಭಿವೃದ್ಧಿ, ಪ್ರಗತಿ, ಸಾಮಾಜಿಕ, ಶಿಕ್ಷಣ, ಸಾಹಿತ್ಯ, ಸಂಸ್ಕೃತಿ, ಆರೋಗ್ಯ, ಕೃಷಿ ಮುಂತಾದ ವಿಷಯಗಳಿಗೆ ಸುದ್ದಿ ಸಂಸ್ಥೆಗಳಲ್ಲಿ ಆಸ್ಪದವಿಲ್ಲದಿರುವುದು ಅವುಗಳ ಅಂತರ್ಗತ ದೌರ್ಬಲ್ಯ.

ಕಾಗಲಕರ್ ಅವರಂತಹ ಸೃಜನಶೀಲ, ಸಂವೇದನಾಶೀಲ ಮತ್ತು ಸಾಂಸ್ಕೃತಿಕ ವೈವಿಧ್ಯಗಳ ಚಿಂತನೆಯ ವರದಿಗಾರನಿಗೆ ಸುದ್ದಿ ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಿಸುವುದು ಕಷ್ಟವೇ ಆಗುತ್ತದೆ. ಪತ್ರಿಕೆಗಳ ಪ್ರಸಾರವೇ ಇಲ್ಲದಿದ್ದ ದಿನಗಳಲ್ಲಿ ಸುದ್ದಿಸಂಸ್ಥೆಯ ವರದಿಗಾರಿಕೆಯ ಅಸ್ತ್ರ ಕೈಯಲ್ಲಿದ್ದರೂ ಅದು ಪ್ರಯೋಜನಕ್ಕೆ ಬಾರದೆ ಹೋಗಬಹುದು. ಅದಕ್ಕೆಂತಲೆ ಸುದ್ದಿ ಸಂಸ್ಥೆಗಳ ವರದಿಗಾರರು ಯಾವಾಗಲೂ ರಾಜ್ಯ ಮಟ್ಟದ ಮತ್ತು ರಾಷ್ಟ್ರ ಮಟ್ಟದ ಸುದ್ದಿಗಳಿಗಾಗಿ ಹಾತೊರೆಯುತ್ತಲೇ ಇರುತ್ತಾರೆ. ಕೆಲವು ಚತುರಮತಿ ವರದಿಗಾರರು ಸ್ಥಳೀಯ ವಿಷಯಗಳಿಗೆ ಪ್ರಾಂತೀಯ ಅಥವಾ ರಾಷ್ಟ್ರೀಯ ಲೇಪ ನೀಡಿ ವರದಿಗಳನ್ನು ಬರೆದು ಮಿಂಚಲು ಯತ್ನಿಸುತ್ತಾರೆ. ಕೆಲವರು ಅತಿರಂಜಿತ, ರೋಚಕ ವರದಿಗಳನ್ನು ಮಾಡಿ ತಮ್ಮ ಅಸ್ತಿತ್ವವನ್ನು ಮೆರೆಯುತ್ತಾರೆ.

ಆದರೆ ಕಾಗಲಕರ್ ಜಾಯಮಾನ ಅಂತಹುದಲ್ಲ. ಅವರು ಸುದ್ದಿಗಾಗಿ ಸುದ್ದಿ ಬರೆದವರಲ್ಲ. ಸುದ್ದಿಯನ್ನು ರೋಚಕಗೊಳಿಸುವ ಯತ್ನಕ್ಕೆ ಎಂದೂ ಕೈ ಹಾಕಲಿಲ್ಲ. ಅವರು ಬರೆದ ಸುದ್ದಿ / ವರದಿ / ಲೇಖನಗಳಲ್ಲಿ ಒಂದು ನಿರ್ದಿಷ್ಟ ವಿಷಯ, ಧೋರಣೆ, ಉದ್ದೇಶ, ಇದ್ದೇ ಇರುತ್ತದೆ. ಮತ್ತು ಅವುಗಳಲ್ಲಿ ಅವರ ಕಾಳಜಿ-ಕಳ ಕಳಿ ಅಡಗಿರುವುದನ್ನು ಗುರುತಿಸಬಹುದು. ಪತ್ರಿಕಾ ವೃತ್ತಿಯನ್ನು ಅವರು ಮೂಲಭೂತವಾಗಿ ಅವರು ಪವಿತ್ರ ಧರ್ಮವೆಂದೇ ಭಾವಿಸಿದರು. ಹೊಟ್ಟೆ ಹೊರೆಯುವುದಕ್ಕಾಗಲೀ, ದುಡ್ಡು ಮಾಡುವುದಕ್ಕಾಗಲೀ, ಸಮಾಜದಲ್ಲಿ ಪ್ರತಿಷ್ಠೆಯನ್ನು ಬೆಳೆಸಿಕೊಳ್ಳುವುದಕ್ಕಾಗಲೀ, ಅವರು ಸುದ್ದಿ ಮಾಧ್ಯಮವನ್ನು ಎಂದೂ ಬಳಸಿಕೊಳ್ಳಲಿಲ್ಲ.

ಪತ್ರಿಕೆಗಳು, ಸಾಮಾಜಿಕ ಬದಲಾವಣೆಯ ಪರಿಣಾಮಕಾರಿ ಅಸ್ತ್ರಗಳೆಂದೇ ಭಾವಿಸಿದ್ದ ಕಾಗಲಕರ್ ಈ ಅಸ್ತ್ರವನ್ನು ಅವರು ಯಾವಾಗಲೂ ಅತ್ಯಂತ ಜವಾಬ್ದಾರಿಯಿಂದ, ಎಚ್ಚರಿಕೆಯಿಂದ ಬಳಸಿದರು.

ಸಂಯುಕ್ತ ಕರ್ನಾಟಕ!

ಪಿ.ಟಿ.ಐ. ಮೂಲಕ ಪತ್ರಿಕಾ ಲೋಕವನ್ನು ಪ್ರವೇಶ ಮಾಡಿದ ಕಾಗಲಕರ್ ಸುದ್ದಿ ಸಂಸ್ಥೆಯ ವರದಿಗಾರಿಕೆಯಿಂದಲೇ ವೃತ್ತಿ ಸಂತೃಪ್ತಿ ಹೊಂದಲಿಲ್ಲ. ಹೊಂದುವುದಕ್ಕೆ ಅವಕಾಶವೂ ಇರಲಿಲ್ಲ. ಈ ಮೊದಲೇ ಪ್ರಸ್ತಾಪಿಸಿದಂತೆ ಸುದ್ದಿ ಸಂಸ್ಥೆಯಲ್ಲಿ ವರದಿಗಾರನ ಅಭಿವ್ಯಕ್ತಿಗೆ ಅಂತರ್ಗತವಾಗಿರುವ ಅನೇಕ ಇತಿ ಮಿತಿಗಳಿಂದಾಗಿ ಪತ್ರಿಕಾ ಮಾಧ್ಯಮಕ್ಕೆ ತಮ್ಮನ್ನು ತಾವು ಸಂಪೂರ್ಣವಾಗಿ ತೊಡಗಿಸಿಕೊಳ್ಳಲು ಆಗಲಿಲ್ಲ.

ಎರಡನೆಯದಾಗಿ ಅವರು ಸುದ್ದಿಗಳನ್ನು ಇಂಗೀಷಿನಲ್ಲಿ ಬರೆಯಬೇಕಿತ್ತು. ಇಂಗ್ಲೀಷ್ ಪ್ರಾರಂಭದಲ್ಲಿ ಅವರಿಗೆ ಅಷ್ಟಿಷ್ಟು ಗೊತ್ತಿದ್ದಿರಬಹುದಾದರೂ ಅದನ್ನು ಅವರು ಪರಿಣಾಮಕಾರಿಯಾಗಿ ಉಪಯೋಗಿಸಿಕೊಳ್ಳಲು ಆಗುತ್ತಿರಲಿಲ್ಲ. ಇಂಗ್ಲೀಷ್ ಎಷ್ಟಾದರೂ ಪರಕೀಯ ಭಾಷೆ. ಅದರಲ್ಲಿ ಅಭಿವ್ಯಕ್ತಿ ಅನಿರ್ಬಂಧಿತವಾಗಿರುವುದಿಲ್ಲ. ಭಾಷೆ ಬಳಕೆಯಲ್ಲೂ ಹಲವಾರು ಇತಿ-ಮಿತಿಗಳು, ಕಟ್ಟು-ಪಾಡುಗಳಿದ್ದವು. ಈ ಎಲ್ಲ ಇತಿ-ಮಿತಿಗಳಿಂದಾಗಿ ಕಾಗಲಕರ್ ಚಡಪಡಿಸುತ್ತಲೇ ಇದ್ದರು.

ಅವರ ಮೊದಲ ಪ್ರೀತಿ ಸಹಜವಾಗಿಯೇ ಅವರ ಮಾತೃ ಭಾಷೆ ಕನ್ನಡಕ್ಕೇ. ಅವರು ಓದಿದ್ದು ಕನ್ನಡ ಮಾಧ್ಯಮದಲ್ಲೇ. ಅವರ ಮನಸ್ಸು ಮತ್ತು ಹೃದಯ ಕನ್ನಡದಲ್ಲೇ ಚಿಂತಿಸುವಂಥವು. ಬರವಣಿಗೆ ಓತ ಪ್ರೋತವಾಗಿ ನಿರರ್ಗಳವಾಗಿ ಬರುವುದು ಮಾತೃ ಭಾಷೆಯಲ್ಲಿಯೇ. ಮಾತೃಭಾಷೆಗಿಂತಲೂ ಪವಿತ್ರವಾದ, ಪ್ರೀತಿಯ ಭಾಷೆ ಬೇರೊಂದು ಇರಲಿಕ್ಕೆ ಸಾಧ್ಯವಿಲ್ಲ.

ಸುದ್ದಿ ಸಂಸ್ಥೆಯ ಮೂಲಕ ಪತ್ರಿಕಾ ಕ್ಷೇತ್ರಕ್ಕೆ ವಿದ್ಯುಕ್ತ ಪ್ರವೇಶ ಪಡೆದದ್ದಷ್ಟೇ ಅವರಿಗೆ ಲಾಭದಾಯಕವಾಗಿತ್ತು. ಕಲಬುರಗಿಯಂತಹ ಆಯಕಟ್ಟಿನ ಪ್ರದೇಶದಲ್ಲಿ ಐದು ದಶಕಗಳ ಹಿಂದೆ ಅವರು ರಾಜ್ಯ ಮಟ್ಟದ, ರಾಷ್ಟ್ರ ಮಟ್ಟದ ಸುದ್ದಿ ಮಾಡುವುದು ತೀರಾ ದುರ್ಲಭವಾಗಿತ್ತು. ಹೀಗಾಗಿ ಕನ್ನಡ ಪತ್ರಿಕೆಯೊಂದರಲ್ಲಿ ಕಾಲೂರುವುದು ಆಗ ಅವರ ಅಭಿಲಾಷೆಯೂ, ತುರ್ತು ಅಗತ್ಯವೂ ಆಗಿತ್ತು. ಆಗಿನ ಕಾಲದ ಏಕೈಕ ಪ್ರಭಾವಿ ಕನ್ನಡ ದಿನ ಪತ್ರಿಕೆ ಎಂದರೆ ಹುಬ್ಬಳ್ಳಿಯಿಂದ

ಪ್ರಕಟವಾಗುತ್ತಿದ್ದ 'ಸಂಯುಕ್ತ ಕರ್ನಾಟಕ'. ಅದು ಅವರಿಗೆ ಅತ್ಯಂತ ಪ್ರೀತಿಯ ಪತ್ರಿಕೆಯಾಗಿತ್ತು. ಹೈದ್ರಾಬಾದಿನಲ್ಲಿ ವಿದ್ಯಾರ್ಥಿ ದಿನಗಳಲ್ಲೇ ಅವರು ಆಗಾಗ 'ಸಂಯುಕ್ತ ಕರ್ನಾಟಕ'ಕ್ಕೆ ಸುದ್ದಿಗಳನ್ನು ಬರೆಯುತ್ತಿದ್ದರಲ್ಲವೆ? ಅವರು ಬರೆದಿದ್ದ ಕೆಲವಾರು ಸುದ್ದಿಗಳು ಆ ಪತ್ರಿಕೆಯಲ್ಲಿ ಅದಾಗಲೇ ಪ್ರಕಟಗೊಂಡಿದ್ದವು ಕೂಡ. ಇದರಿಂದಾಗಿ ಸುದ್ದಿ ಬರೆಯುವಲ್ಲಿ ಅವರ ಆತ್ಮ ವಿಶ್ವಾಸ ಇಮ್ಮಡಿಗೊಂಡಿತ್ತು. ಕೆಲಸ ಮಾಡಿದರೆ 'ಸಂಯುಕ್ತ ಕರ್ನಾಟಕ'ದಲ್ಲೇ ಕೆಲಸ ಮಾಡಬೇಕೆಂಬ ಒಂದು ಅದಮ್ಯ ಇಚ್ಛೆ ಅವರಲ್ಲಿ ಹೆಮ್ಮರವಾಗಿ ಬೆಳೆದಿತ್ತು. ಅವರ ಅಭಿಲಾಷೆ ಈಡೇರುವ ಕಾಲ ಬಂದಿತು. ರೊಟ್ಟಿ ಜಾರಿ ತುಪ್ಪದಲ್ಲಿ ಬಿದ್ದಿತ್ತು!

ಇದೇ ಸುಮಾರಿಗೆ 'ಸಂಯುಕ್ತ ಕರ್ನಾಟಕ'ದ ಸಂಸ್ಥಾಪಕರಾದ ಮೊಹರೆ ಹನುಮಂತರಾಯರು ಮತ್ತು ಪತ್ರಿಕೆಯ ಸಂಪಾದಕರಾಗಿದ್ದ ಆರ್.ಆರ್.ದಿವಾಕರ್ ಅವರು ಕಲಬುರಗಿಗೆ ಬಂದಿದ್ದರು. ಅವರಿಬ್ಬರನ್ನು ಕಂಡು ಭೇಟಿಯಾದ ಕಾಗಲಕರ್ ತಾವು 'ಸಂಯುಕ್ತ ಕರ್ನಾಟಕ' ಪತ್ರಿಕೆಯಲ್ಲಿ ವರದಿಗಾರನಾಗಿ ಕೆಲಸ ಮಾಡಲು ಇಚ್ಛಿಸುವುದಾಗಿ ಹೇಳಿ ತನಗೊಂದು ಅವಕಾಶ ಕೊಡಬೇಕೆಂದು ಕೇಳಿಕೊಂಡರು. ಆ ಸಂದರ್ಭದಲ್ಲಿ ಪತ್ರಿಕೆಗೆ ಯಾವ ವರದಿಗಾರನೂ ಕಲಬುರಗಿಯಲ್ಲಿ ಇರಲಿಲ್ಲ. ಪತ್ರಿಕೆಯ ದಿಗ್ಗಜದ್ವಯರು ಯುವಕನ ಆಸಕ್ತಿ, ನಿಷ್ಠೆ ಕಂಡು ಆತನಿಗೆ ಒಂದು ಅವಕಾಶ ಏಕೆ ಕೊಡಬಾರದೆಂದು ತಮ್ಮಲ್ಲೇ ನಿಶ್ಚಯಿಸಿಕೊಂಡರು. ಯುವಕನೊಬ್ಬ ತಾನಾಗಿಯೇ ಇಷ್ಟಪಟ್ಟು ಬಂದಿರುವಾಗ ಅದನ್ನು ಪರೀಶೀಲಿಸುವುದು ಸೂಕ್ತವೆಂದು ಅವರು ಭಾವಿಸಿದ್ದಿರಬಹುದು.

ಸಮಯ ಸಂಪೂರ್ಣವಾಗಿ ಕೂಡಿ ಬಂದಿತ್ತು. ಸೆಪ್ಟೆಂಬರ್ ೧೦, ೧೯೫೫ ರಂದು ವಿ.ಎನ್.ಕಾಗಲಕರ್ ಅವರು 'ಸಂಯುಕ್ತ ಕರ್ನಾಟಕ' ಪತ್ರಿಕೆಯ ಕಲಬುರಗಿ ವರದಿಗಾರರೆಂದು ವಿದ್ಯುಕ್ತವಾಗಿ ನೇಮಕಗೊಂಡರು. ಅವರಿಗೆ ನೇಮಕಾತಿ ಆದೇಶ ನೀಡಿದವರು ಪತ್ರಿಕೆಯ ಸಂಸ್ಥಾಪಕರೂ, ನಿರ್ವಹಣಾ ಸಂಪಾದಕರೂ ಆಗಿದ್ದ ಮೊಹರೆ ಹನುಮಂತರಾಯರು.

ಸ್ವಾತಂತ್ರ್ಯ ಪೂರ್ವಕಾಲದಿಂದಲೂ ಅಸ್ತಿತ್ವದಲ್ಲಿದ್ದು, ಸ್ವಾತಂತ್ರ್ಯ ಚಳವಳಿಯಲ್ಲಿ, ಕರ್ನಾಟಕ ಏಕೀಕರಣ ಆಂದೋಲನದಲ್ಲಿ ಅತ್ಯಂತ ಮಹತ್ವದ ಪಾತ್ರ ನಿರ್ವಹಿಸಿರುವ 'ಸಂಯುಕ್ತ ಕರ್ನಾಟಕ' ಈ ಭಾಗದಲ್ಲಿ ಪ್ರಸಾರದಲ್ಲಿದ್ದ ಏಕೈಕ ಮತ್ತು ಅತ್ಯಂತ ಪ್ರಭಾವೀ ದಿನಪತ್ರಿಕೆಯಾಗಿತ್ತು. ಅಂತಹ ಮಹತ್ವದ ಪತ್ರಿಕೆಗೆ ಕರ್ನಾಟಕ ಏಕೀಕರಣಕ್ಕೂ ಮುಂಚೆಯೇ ಕಲಬುರಗಿಯ ಮೊಟ್ಟ ಮೊದಲ ವರದಿಗಾರನಾಗುವ ವಿಶೇಷ ಹೆಗ್ಗಳಿಕೆ ಕಾಗಲಕರ್ ಅವರದಾಗಿತ್ತು.

ವಾಸ್ತವದಲ್ಲಿ ಕಾಗಲಕರ್ ಅವರಿಗೆ 'ಸಂಯುಕ್ತ ಕರ್ನಾಟಕ' ನೀಡಿದ ಮೊದಲ ನೇಮಕಾತಿ ಆದೇಶ ಖಚಿತವಾದ ನೇಮಕಾತಿ ಆದೇಶವಾಗಿರಲಿಲ್ಲ. ಅವರಿಗೆ ಮೊಹರೆ ಹನುಮಂತರಾಯರು ಕೊಟ್ಟದ್ದು 'ಅಧಿಕಾರ ಪತ್ರ' (Letter of Authority). ಈ ಅಧಿಕಾರ ಪತ್ರದಲ್ಲಿ ಕಾಗಲಕರ್ ಅವರನ್ನು ಗುಲ್ಬರ್ಗ ವರದಿಗಾರರೆಂದೇ, ನೇಮಕಮಾಡಲಾಗಿರುವುದನ್ನು ತಿಳಿಸಲಾಗಿತ್ತು. ಅಂದರೆ ಕಾಗಲಕರ್ ಅವರು ಪತ್ರಿಕೆಯ ನೈಜ ಹಾಗೂ ಅಧಿಕೃತ ಪ್ರತಿನಿಧಿ ಎಂದು ಸಾರುವುದು 'ಅಧಿಕೃತ ಪತ್ರದ' ಉದ್ದೇಶವಾಗಿರಬಹುದು. ಇನ್ನೊಬ್ಬರು 'ಸಂಯುಕ್ತ ಕರ್ನಾಟಕ'ದ ಹೆಸರು ಬಳಸಿಕೊಂಡು ದುರುಪಯೋಗ ಮಾಡಿಕೊಳ್ಳಬಾರದೆಂಬ ಉದ್ದೇಶವೂ ಇದ್ದಿರಬಹುದು. ಕಾಗಲಕರ್ ಅವರು ತಮ್ಮ ಪತ್ರಿಕಾ ವೃತ್ತಿ ನಿರ್ವಹಣೆಗೆ ಸಾರ್ವಜನಿಕರು ಮತ್ತು ಸರಕಾರ ನೀಡುವ ಸಹಕಾರಕ್ಕಾಗಿ ಪತ್ರಿಕೆಯ ಆಡಳಿತ ವರ್ಗ ಕೃತಜ್ಞರಾಗಿರುವುದಾಗಿ ಅಧಿಕಾರ ಪತ್ರದಲ್ಲಿ ತಿಳಿಸಲಾಗಿತ್ತು.

ಈ ಪತ್ರದಲ್ಲಿ ಕಾಗಲಕರ್ ಅವರ ಹುದ್ದೆಗೆ ಸಂಬಂಧಿಸಿದಂತೆ ಯಾವುದೇ ಸಂಭಾವನೆ, ಗೌರವಧನ, ಇತ್ಯಾದಿ ಆರ್ಥಿಕ ಸೌಕರ್ಯದ ಯಾವುದೇ ಪ್ರಸ್ತಾಪ ಇಲ್ಲದಿರುವುದು ಕುತೂಹಲಕರ. ಹೀಗಾಗಿ ಕಾಗಲಕರ್ ಅವರು ಪ್ರಾರಂಭದ ಕೆಲವು ವರ್ಷಗಳಲ್ಲಿ ಗೌರವ ಪ್ರತಿನಿಧಿಯಾಗಿ ಅರ್ಥಾತ್ ಪುಕ್ಕಟೆ ವರದಿಗಾರರಾಗಿ ಕೆಲಸ ಮಾಡಿರಬಹುದಾದ ಸಾಧ್ಯತೆಗಳೇ ಅಧಿಕವಾಗಿವೆ.

ದುರ್ಭರ ಸ್ಥಿತಿ

ಕಾಗಲಕರ್ ಅವರು 'ಸಂಯುಕ್ತ ಕರ್ನಾಟಕ' ಪ್ರವೇಶ ಮಾಡಿದಾಗ ಕಲಬುರಗಿಯಲ್ಲಿ ಮುದ್ರಣ ಮಾಧ್ಯಮದ ಸ್ಥಿತಿ ಅತ್ಯಂತ ದುರ್ಭರವಾಗಿತ್ತು. ಪತ್ರಿಕಾ ಜಾಗೃತಿಯೇ ಇರಲಿಲ್ಲ. ಪ್ರತಿನಿತ್ಯ ಸಂಜೆ ೪ ಗಂಟೆ ಸುಮಾರಿಗೆ ಪತ್ರಿಕೆ ಬರುತ್ತಿತ್ತು. ಇಂದಿನಂತೆ ಆಗ ವ್ಯಾನುಗಳಲ್ಲಿ ಪತ್ರಿಕೆಗಳು ಬರುತ್ತಿರಲಿಲ್ಲ. ಯಾಕೆಂದರೆ ಆಗ ಈ ಭಾಗದಲ್ಲಿ ರಸ್ತೆ-ಸೇತುವೆಗಳೇ ಇರಲಿಲ್ಲ! ಕೃಷ್ಣಾ ನದಿಗೆ ತಿಂಥಿಣಿ ಹತ್ತಿರ ಮತ್ತು ಭೀಮಾ ನದಿಗೆ ಜೇವರ್ಗಿ ಹತ್ತಿರ ೧೯೬೦ರ ದಶಕದಲ್ಲಿ ಸೇತುವೆ ನಿರ್ಮಾಣಗೊಂಡವು. ಜಿಲ್ಲೆಯ ಯಾವ ತಾಲೂಕಿಗೂ, ವಾಹನ ಸಂಚಾರಯೋಗ ಹಾಗೂ ಸರ್ವಋತು ರಸ್ತೆಗಳಿರಲಿಲ್ಲ. ಕರ್ನಾಟಕ ಏಕೀಕರಣವಾದಾಗ (೧೯೫೬) ರಸ್ತೆ ಅಭಿವೃದ್ಧಿಯಲ್ಲಿ ಕಲಬುರಗಿ ಜಿಲ್ಲೆ ಕೊನೆಯ ಸ್ಥಾನದಲ್ಲಿತ್ತು. ಪ್ರತಿ ನೂರು ಚ.ಕಿ.ಮೀ.ಗಳಿಗೆ ಕೇವಲ ಆರು ಕಿ.ಮೀ. ರಸ್ತೆಯಿದ್ದಿತ್ತು. ಜಿಲ್ಲೆಯ ಬಹುತೇಕ ಪ್ರದೇಶಗಳಲ್ಲಿ ಎರಡೆತ್ತಿನ ಬಂಡಿ, ಕುದುರೆ, ಎತ್ತು, ಕೋಣ, ಇತ್ಯಾದಿಗಳೇ ಸಾರಿಗೆಯ ಪ್ರಮುಖ ಸಾಧನಗಳಾಗಿದ್ದವು.

ಹೀಗಾಗಿ ಹುಬ್ಬಳ್ಳಿಯಲ್ಲಾಗಲೀ, ಬೆಂಗಳೂರಿನಲ್ಲಾಗಲೀ ಪ್ರಕಟವಾಗುತ್ತಿದ್ದ ಪತ್ರಿಕೆಗಳು ರಸ್ತೆ ಮಾರ್ಗದ ಮೂಲಕ ಕಲಬುರಗಿಗೆ ಬರಲು ಸಾಧ್ಯವೇ ಇರಲಿಲ್ಲ. ರಸ್ತೆ ಮತ್ತು ಸೇತುವೆಗಳ ತೀವ್ರ ಕೊರತೆಯಿಂದಾಗಿ ಪತ್ರಿಕೆಗಳು ರೈಲುಗಳಲ್ಲಿ ಬರುವುದೇ ಅನಿವಾರ್ಯವಾಗಿತ್ತು. ಹುಬ್ಬಳ್ಳಿಯಿಂದ 'ಸಂಯುಕ್ತ ಕರ್ನಾಟಕ'ದ ಬಂಡಲುಗಳು ರೈಲಿನಲ್ಲಿ ಗುಂತಕಲ್‌ಗೆ ಬಂದು ಅಲ್ಲಿಂದ ಮದರಾಸು-ಬಾಂಬೆ ಮೇಲಲ್ಲಿ ಕಲಬುರಗಿಗೆ ಬರುತ್ತಿದ್ದವು. ಸಂಜೆ ನಾಲ್ಕರ ಹೊತ್ತಿಗೆ ಮಾತ್ರ ಪತ್ರಿಕೆ ಓದುಗರ ಕೈ ಸೇರಲು ಸಾಧ್ಯವಿತ್ತು. ಅದು ಸಂಜೆಯ ಚಹ ಆಗಿದ್ದರೆ ಚಹದ ವೇಳೆಗೆ 'ಸಂಯುಕ್ತ ಕರ್ನಾಟಕ'ವನ್ನು ಸವಿಯಬಹುದಿತ್ತು! ಒಂದು ವೇಳೆ ರೈಲು ತಡವಾಗಿ ಬಂದರೆ ಮಾರನೇ ದಿನದ ಬೆಳಗಿನ ಚಹದ ವೇಳೆಗೆ ಪತ್ರಿಕೆಯ ದರ್ಶನವಾಗಲೂ ಸಾಧ್ಯ! ಅನೇಕ ಸಂದರ್ಭಗಳಲ್ಲಿ ಆಯಾ ದಿನದ ಪತ್ರಿಕೆ ಆಯಾ ದಿನವೇ ದೊರೆಯುವುದು ಸಾಧ್ಯವಾಗುತ್ತಿರಲಿಲ್ಲ. 'ಸಂಯುಕ್ತ ಕರ್ನಾಟಕ'ಕ್ಕೆ ಪ್ರತಿಸ್ಪರ್ಧಿಯಾಗಿ ಪೈಪೋಟಿ ನೀಡಬಲ್ಲ ಇನ್ನೊಂದು ಪತ್ರಿಕೆ ಇಲ್ಲವಾದ್ದರಿಂದ ಓದುಗರು 'ಸಂಯುಕ್ತ ಕರ್ನಾಟಕ' ಬರುವ ಸಮಯವೇ ಪತ್ರಿಕೆಯ ಸಮಯ ಎಂದು ಭಾವಿಸಿದ್ದರೆ ಆಶ್ಚರ್ಯವೇನಿಲ್ಲ.

ಕಲಬುರಗಿಯಲ್ಲಿ ಉರ್ದು ಮತ್ತು ಮರಾಠಿ ಭಾಷಿಕರದೇ ಮೇಲುಗೈ. ಕನ್ನಡ ಮಾತನಾಡುವವರು ಅಧಿಕ ಸಂಖ್ಯೆಯಲ್ಲಿದ್ದರೂ ಸಾಕ್ಷರತೆಯ ಪ್ರಮಾಣ ತೀರಾ ಕಡಿಮೆ ಇದ್ದುದರಿಂದ ಪತ್ರಿಕೆ ಓದುವವರ ಸಂಖ್ಯೆ ಸಹಜವಾಗಿಯೇ ವಿರಳವಾಗಿತ್ತು. ದುರ್ಬಲ ಆರ್ಥಿಕ ಪರಿಸ್ಥಿತಿಯಿಂದಾಗಿ ಪತ್ರಿಕೆಯನ್ನು ಕೊಂಡು ಓದುವವರ ಸಂಖ್ಯೆಯಂತೂ ಇನ್ನಷ್ಟು ವಿರಳ. ಯಾವುದಾದರೂ ಸುದ್ದಿ ಇದ್ದರೆ ಕಾಗಲಕರ್ ಅವರೇ ಅದನ್ನು ಬರೆದು, ಅಂಚೆಯಲ್ಲಿ ಕಳುಹಿಸಿ, ಪ್ರಕಟವಾಗಿ ಬಂದ ನಂತರ ಸಂಬಂಧಿಸಿದವರಿಗೆ ಸ್ವತಃ ಕಾಗಲಕರ್ ಅವರೇ ಓದಿ ಹೇಳಬೇಕಾಗಿತ್ತು!

ಕಲಬುರಗಿ ಕನ್ನಡ ಪ್ರದೇಶವಾಗಿದ್ದರೂ ಇಲ್ಲಿ ಪತ್ರಿಕೋದ್ಯಮದ ಇತಿಹಾಸ ಶುರುವಾದದ್ದು ಮರಾಠಿ ಪತ್ರಿಕೆಯಿಂದ. ಈ ವರೆಗಿನ ತಿಳುವಳಿಕೆಯ ಪ್ರಕಾರ ೧೮೯೩ ರಲ್ಲಿ ಮರಾಠಿಯಲ್ಲಿ ಪ್ರಕಟವಾದ 'ಗುಲಬರ್ಗ ಸಮಾಚಾರ' ಜಿಲ್ಲೆಯ ಮೊದಲ ಪತ್ರಿಕೆ. ೧೯೩೦ ರಲ್ಲಿ ಸುರಪುರ ತಾಲೂಕಿನ ರಂಗಂಪೇಟೆಯ ಗುರಯ್ಯ ಸುಗೂರು ಮಠ ಎಂಬುವವರು ಪ್ರಾರಂಭಿಸಿದ ಮಾಸ ಪತ್ರಿಕೆ 'ನೈಜಾಮ ನ್ಯಾಯ ತೀರ್ಪು' ಜಿಲ್ಲೆಯ ಮೊದಲ ಕನ್ನಡ ಪತ್ರಿಕೆ ಎಂದು ಭಾವಿಸಲಾಗಿದೆ.

ಕಾಗಲಕರ್ ಅವರು ಕಲಬುರಗಿಯನ್ನು ಕಾರ್ಯಕ್ಷೇತ್ರವನ್ನಾಗಿ ಆರಿಸಿಕೊಂಡಾಗ ಜಿಲ್ಲೆಯ ಸಾಮಾಜಿಕ - ಶೈಕ್ಷಣಿಕ ಸ್ಥಿತಿಗಳು ಬಹಳ

ಚಿಂತಾಜನಕವಾಗಿದ್ದವು. ೧೯೫೧ ರ ಜನಗಣನೆಯ ಪ್ರಕಾರ ಜಿಲ್ಲೆಯ ಸಾಕ್ಷರತಾ ಪ್ರಮಾಣ ಶೇ ೭.೫೯ ಆಗಿದ್ದು. ಪುರುಷ ಸಾಕ್ಷರತೆ ಶೇ ೬.೬ ಮತ್ತು ಮಹಿಳಾ ಸಾಕ್ಷರತೆ ಪ್ರತಿಶತ ಒಂದಕ್ಕಿಂತಲೂ ಕಡಿಮೆ ಅಂದರೆ ೦.೯೮! ಅಂದರೆ ಹೆಚ್ಚು ಕಡಿಮೆ ಮಹಿಳೆಯರೆಲ್ಲ ನಿರಕ್ಷರಕುಕ್ಷಿಗಳೇ ಆಗಿದ್ದರು.

೧೯೬೧ ರಲ್ಲಿ ಜಿಲ್ಲೆಯ ಸಾಕ್ಷರತೆ ಶೇ ೧೪.೭೨ ಕ್ಕೆ ಹೆಚ್ಚಿ ಪುರುಷ ಸಾಕ್ಷರತೆ ಶೇ ೧೨.೧೪ ಮತ್ತು ಮಹಿಳಾ ಸಾಕ್ಷರರೆ ಶೇ ೨.೫೮.

೧೯೭೧ ರ ಒಟ್ಟು ಸಾಕ್ಷರತೆ ಶೇ ೧೮.೭೪. ಅಕ್ಷರ ಬಲ್ಲ ಪುರುಷರ ಸಂಖ್ಯೆ ನೂರಕ್ಕೆ ೧೪.೫ ರಷ್ಟಿದ್ದರೆ ಅಕ್ಷರ ಜ್ಞಾನವಿದ್ದ ಮಹಿಳೆಯರ ಸಂಖ್ಯೆ ನೂರಕ್ಕೆ ೪.೨೪ ರಷ್ಟು ಮಾತ್ರ.

೧೯೮೧ ಮತ್ತು ೧೯೯೧ ಜಿಲ್ಲೆಯ ಒಟ್ಟು ಸಾಕ್ಷರತಾ ಪ್ರಮಾಣ ಕ್ರಮವಾಗಿ ಶೇ ೨೪.೯ ಮತ್ತು ಶೇ ೩೮.೫೪.

ಮಾನವ ಅಭಿವೃದ್ಧಿಯ ಅತ್ಯಂತ ಮೂಲಭೂತ ಅಳತೆಗೋಲಾಗಿರುವ ಸಾಕ್ಷರತೆ ಸ್ವಾತಂತ್ರ್ಯಾನಂತರದ ಮೊದಲ ಮೂರು ದಶಕಗಳಲ್ಲಿ ಅತ್ಯಂತ ಕಳವಳಕಾರಿಯೂ, ಆತಂಕಕಾರಿಯೂ ಆಗಿತ್ತು. ಇನ್ನು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಇತರ ಹಿಂದುಳಿದವರ ಸ್ಥಿತಿಗತಿ ಆ ದೇವರಿಗೇ ಪ್ರಿಯ! ಈ ವರ್ಗಗಳಲ್ಲಿ ಮಹಿಳೆಯರ ಸಾಕ್ಷರತೆ ಪ್ರಮಾಣ ಪ್ರಾಯಃ ಶೇಕಡಾವಾರು ಲೆಕ್ಕಕ್ಕೂ ಸಿಗಲಾರದು.

ಇಂತಹ ಒಂದು ಭಯಾನಕ ಸಾಮಾಜಿಕ ಶೈಕ್ಷಣಿಕ ವಾತಾವರಣದಲ್ಲಿ ಪತ್ರಿಕೆಗಳು ಓದುಗರ ಸಂಖ್ಯೆಯನ್ನು ನಿರೀಕ್ಷಿಸುವುದಾದರೂ ಹೇಗೆ? ಈ ಆತಂಕಕಾರಿ ಸನ್ನಿವೇಶದಲ್ಲೇ ಪತ್ರಕರ್ತನ ಪಾತ್ರ ಅತ್ಯಂತ ಮಹತ್ವದ್ದೂ, ಜವಾಬ್ದಾರಿ ಉಳ್ಳದ್ದೂ ಆಗುತ್ತದೆ. ಜನ ನಿರಕ್ಷಕರ ಕುಕ್ಷಿಗಳಾಗಿರಬಹುದು. ಪತ್ರಿಕೆಯಲ್ಲಿ ಏನು ಬಂದಿದೆ ಎಂಬುದನ್ನು ಓದಿ ತಿಳಿದುಕೊಳ್ಳುವ ಕನಿಷ್ಟ ಜ್ಞಾನವಾಗಲೀ, ಸಾಮರ್ಥ್ಯವಾಗಲೀ ಅವರಲ್ಲಿ ಇರಲಿಕ್ಕಿಲ್ಲ. ಆದರೆ ಪತ್ರಿಕೆಯಲ್ಲಿ ಬರುವ ಪ್ರಮುಖ ವರದಿಗಳು ಹುಸಿಯಾಗಿ ಹೋಗುವುದಿಲ್ಲ. ಅವುಗಳಲ್ಲಿ ಕೆಲವಾದರೂ ಸರಕಾರದ ಮಟ್ಟದಲ್ಲಿ, ರಾಜಕೀಯ ವಲಯಗಳಲ್ಲಿ ತಮ್ಮದೇ ಆದ ಪರಿಣಾಮ, ಜಾಗೃತಿ ಉಂಟುಮಾಡುತ್ತಲೇ ಇರುತ್ತವೆ. ಎಲ್ಲೋ ಒಂದು ಕಡೆ ಶೋಷಣೆಯ ವಿರುದ್ಧ ಅಷ್ಟಿಷ್ಟು ಪ್ರಯತ್ನಗಳು ನಡೆಯುತ್ತಲಿರುತ್ತವೆ. ಆಳುವವರ ಕಣ್ಣುಗಳನ್ನು ಆಗಾಗ

ತೆರೆಸುತ್ತಲೇ ಇರುತ್ತವೆ. ಕಾಗಲಕರ್ ವರದಿ ಮಾಡಿದ ರಾಮಸಮುದ್ರದ ದಲಿತರ ಕಣ್ಣು ಕಿತ್ತ ಪ್ರಕರಣ ಇದಕ್ಕೊಂದು ಅಭಿಜಾತ ನಿದರ್ಶನವಲ್ಲವೆ?

ಕಾಗಲಕರ್ ಕಾಲಕ್ಕೂ ಇಂದಿನ ಕಾಲಕ್ಕೂ ಇರುವ ಪ್ರಮುಖ ವ್ಯತ್ಯಾಸವೆಂದರೆ ಆಗ ಪತ್ರಕರ್ತರು ಸುದ್ದಿಯನ್ನು ಅರಸಿಕೊಂಡು ಹೋಗುತ್ತಿದ್ದರು. ಈಗ ಸುದ್ದಿಗಳೇ ಪತ್ರಕರ್ತರನ್ನು ಅರಸಿಕೊಂಡು ಬರುತ್ತವೆ! ಸುದ್ದಿಯ ಅರಸುವಿಕೆ, ಸುದ್ದಿಯನ್ನು ಬೆನ್ನಟ್ಟಿ ಹೋಗಿ ಅದನ್ನು ಹಿಡಿಯುವುದು ಅಷ್ಟೊಂದು ಸುಲಭದ ಕೆಲಸವಾಗಿರಲಿಲ್ಲ. ಆಗಿನ ಕಾಲದಲ್ಲಿ ಪತ್ರಿಕಾಗೋಷ್ಠಿಗಳನ್ನು ಏರ್ಪಡಿಸಿ ಸುದ್ದಿಗಳನ್ನು ಪತ್ರಕರ್ತರಿಗೆ ನೀಡುವ ಪದ್ಧತಿ ಪ್ರಚಲಿತದಲ್ಲಿರಲಿಲ್ಲ. ಯಾರಾದರು ಅತೀ ಗಣ್ಯ ವ್ಯಕ್ತಿಗಳು ಬಂದರೆ ಅವರನ್ನು ಹುಡುಕಿಕೊಂಡು ಹೋಗಿ ಮಾತನಾಡಿಸಬೇಕು. ಈಗಿನಂತೆ ಸಂಪರ್ಕ ಸೌಲಭ್ಯಗಳು ಆಗಿನ್ನೂ ಇರಲಿಲ್ಲವಷ್ಟೆ? ದೂರವಾಣಿಯ ಸೌಲಭ್ಯವೇ ಜನಸಾಮಾನ್ಯರಿಗೆ ಇರದಿದ್ದ ದಿನಗಳಲ್ಲಿ ಪತ್ರಕರ್ತನಾದವನು ದೂರವಾಣಿ ಸಾಧನವನ್ನು ಬಳಸುವ ಪ್ರಶ್ನೆಯೇ ಇರುತ್ತಿರಲಿಲ್ಲ. ಈಗ ಅಗತ್ಯವಿರುವ ಬಹುತೇಕ ಸುದ್ದಿಗಳೆಲ್ಲ ಕುಳಿತಲ್ಲಿಯೇ ದೂರವಾಣಿ ಮೂಲಕ ಯಾವುದೇ ತ್ರಾಸಿಲ್ಲದೆ ಪಡೆಯಬಹುದು. ಇಂದಿನ ಪತ್ರಕರ್ತನಿಗೆ ವೃತ್ತಿಗೆ ಸಂಬಂಧಿಸಿದ ಸಕಲ ಸೌಕರ್ಯಗಳು ಅವನ ಅಧೀನದಲ್ಲೇ ಇರುತ್ತವೆ. ಆದಾಗ್ಯೂ ಆಧುನಿಕ ಪತ್ರಕರ್ತ ಒಳ್ಳೆಯ ವರದಿಯೊಂದನ್ನು ಓದುಗರಿಗೆ ನೀಡಲು ಒದ್ದಾಡುತ್ತಾನೆ!

ಅಂಚೆ–ತಂತಿಯೊಂದೇ ಸಾಧನ

ಕಾಗಲಕರ್ ಕಾಲದ ಸುದ್ದಿ ರವಾನೆಯ ಸಾಧನಗಳೆಂದರೆ ಅಂಚೆ ಮತ್ತು ತಂತಿ. ಸಾಧಾರಣ ಮತ್ತು ಅಷ್ಟೇನೂ ಮಹತ್ವವಲ್ಲದ ಘಟನೆ, ಬೆಳವಣಿಗೆಗಳ ಸುದ್ದಿಗಳಿದ್ದರೆ ಅವುಗಳನ್ನು ಅಂಚೆಯಲ್ಲಿಯೇ ಕಳಿಸಬೇಕಿತ್ತು. ತುರ್ತು ಸುದ್ದಿಗಳಿದ್ದರೆ ಅವುಗಳನ್ನು ತಂತಿ ಮೂಲಕ ಕಳುಹಿಸಬೇಕಿತ್ತು. ಸುದ್ದಿಗಳು ಅದಕ್ಕಿಂತಲೂ ಮಹತ್ವದ್ದು, ತುರ್ತಿನದೂ ಆಗಿದ್ದರೆ ಟ್ರಂಕ್ ಕಾಲ್ ಮೂಲಕ ಫೋನಿನಲ್ಲಿ ಹೇಳಬಹುದಿತ್ತು.

ಆದರೆ ಅಂದಿನ ಕಾಲದ ಅಂಚೆ-ತಂತಿ ಸೇವೆ ತೀರಾ ಕಳಪೆ ಗುಣಮಟ್ಟದ್ದಾಗಿತ್ತು. ಮೇಲಾಗಿ ಕೇಂದ್ರ ಸರಕಾರದ ಒಡೆತನದ ಅಂಚೆ-ತಂತಿ ಇಲಾಖೆಯ ಸಂಪೂರ್ಣ ಸ್ವಾಮ್ಯತ್ವ ಈ ಎರಡು ಸಂಪರ್ಕ ಸೇವೆಗಳ ಮೇಲೆ. ಟೆಲಿಫೋನುಗಳು ಶ್ರೀಮಂತರ ಮತ್ತು ರಾಜಕೀಯ ಪ್ರಭಾವ ಉಳ್ಳವರಿಗೆ ಮಾತ್ರ ದೊರೆಯುತ್ತಿತ್ತು. ದೂರವಾಣಿ ಕರೆಗಳನ್ನು ಮಾಡಲು ಜನ ಅಂಚೆ ಕಛೇರಿಗೋ, ತಂತಿಕಛೇರಿಗೋ ಬರಬೇಕಿತ್ತು. ಅಲ್ಲಿ ಟ್ರಂಕ್ಕಾಲ್ ಬುಕ್ ಮಾಡಿ ಗಂಟೆಗಟ್ಟಲೆ

ಕಾಯಬೇಕಿತ್ತು. ಅನೇಕ ಸಂದರ್ಭಗಳಲ್ಲಿ ಗಂಟೆಗಳ ಕಾಲ ಕಾದರೆ ಕರೆ ಕೈಗೊಡುತ್ತಿರಲಿಲ್ಲ. ಆಗ ನೇರ ಡಯಲಿಂಗ್ ಸೌಕರ್ಯ ಅಂದರೆ ಎಸ್.ಟಿ.ಡಿ. ಕರೆಗಳ ಸೌಲಭ್ಯವೂ ಇರಲಿಲ್ಲ. ಎಸ್.ಟಿ.ಡಿ. ಬಂದದ್ದು ೧೯೮೦ ರ ದಶಕದಲ್ಲಿ.

೧೯೮೦ ರ ದಶಕದ ಪೂರ್ವಾರ್ಧದ ವರೆಗೂ ಕಲಬುರಗಿ ಜಿಲ್ಲೆಯಲ್ಲಿ ಸಂಪರ್ಕ ಸಾಧನ ವ್ಯವಸ್ಥೆ ತೀರಾ ಶೋಚನೀಯವಾಗಿತ್ತು. ಹೊಸ ಟೆಲಿಫೋನು ಸಂಪರ್ಕ ಪಡೆಯುವುದೆಂದರೆ ಒಂದು ಯಜ್ಞವನ್ನೇ ಮಾಡಿದಂತಾಗುತ್ತಿತ್ತು. ದೂರವಾಣಿ ಸೌಕರ್ಯಕ್ಕಾಗಿ ವರ್ಷಗಟ್ಟಲೇ ಕಾಯಬೇಕು ಹಾಗೂ ಹೀಗೂ ಮಾಡಿ ದೂರವಾಣಿ ಪಡೆದುಕೊಂಡರೆ ಸುಖವಿರಲಿಲ್ಲ. ಯಾಕೆಂದರೆ ಅವು ಕಲಬುರಗಿಯಲ್ಲಿ ಕಾರ್ಯನಿರ್ವಹಿಸುವುದೇ ಅಪರೂಪ!

ಜಿಲ್ಲೆಯಲ್ಲಿ ದೂರವಾಣಿ ಬಳಕೆ ಕಲಬುರಗಿ ನಗರದಲ್ಲಿ ೧೯೫೩ರಲ್ಲಿ ಆರಂಭವಾದರೂ, ಅದು ಕೇವಲ ಕೆಲವೇ ಬೆರಳೆಣಿಕೆಯ ವರ್ಗದ ಜನರಿಗಷ್ಟೇ ಸೀಮಿತವಾಗಿತ್ತು. ಕಲಬುರಗಿ ನಗರವನ್ನು ಹೊರತುಪಡಿಸಿ ದೂರವಾಣಿ ಸಂಪರ್ಕ ಬೇರೆಲ್ಲೂ ಇರಲಿಲ್ಲ. ನಂತರ ೧೯೬೧ರಲ್ಲಿ ಸೇಡಂ ಪಟ್ಟಣಕ್ಕೆ ಈ ಸೌಲಭ್ಯ ವಿಸ್ತರಿಸ-ಲಾಯಿತು. ಚಂದಾದಾರರ ನೇರ ಡಯಲಿಂಗ್ ವ್ಯವಸ್ಥೆ (ಎಸ್.ಟಿ.ಡಿ.) ಈ ಜಿಲ್ಲೆಯಲ್ಲಿ ಆರಂಭವಾದದ್ದು ೧೯೮೬ರಲ್ಲಿ, ಅದೇ ಕಲಬುರಗಿ ನಗರಕ್ಕೆ ಮಾತ್ರ ಸೀಮಿತ!

ತುರ್ತು ಸುದ್ದಿಗಳನ್ನು ದೂರವಾಣಿಯಲ್ಲಿ ಹೇಳಲು ಟ್ರಂಕ್ ಸೇವೆಯನ್ನೇ ಅವಲಂಬಿಸಬೇಕಿತ್ತು. ಅಂಚೆ ಕಛೇರಿಯಲ್ಲೋ, ತಂತಿ ಕಛೇರಿಯಲ್ಲೋ ಟ್ರಂಕ್ ಕರೆ ಬುಕ್ ಮಾಡಿ ಅದು ಕಾರ್ಯಗತಗೊಳ್ಳಲು ಸಾಕಷ್ಟು ಸಮಯ ಕಾಯಬೇಕಿತ್ತು. ಅನೇಕ ವೇಳೆ ಗಂಟೆ ಗಟ್ಟಲೆ ಕಾಯಲೂ ಬೇಕಿತ್ತು. ಕರೆ ಸ್ಪಷ್ಟವಾಗಿರದಿದ್ದಲ್ಲಿ ಗಂಟಲು ಹರಿಯುವ ಹಾಗೆ ವರದಿಗಾರ ಚೀರಿಕೊಳ್ಳಬೇಕು. ಇದರಿಂದ ಗುಪ್ತವಾಗಿರಬೇಕಿದ್ದ ಸುದ್ದಿ ಎಲ್ಲವೂ ಸುತ್ತ-ಮುತ್ತಲಿನವರಿಗೆ ಅಯಾಚಿತವಾಗಿ ಗೊತ್ತಾಗಿ ಬಿಡುತ್ತಿತ್ತು. ದಿನವೆಲ್ಲ ಕಷ್ಟಪಟ್ಟು ಗೌಪ್ಯತೆಯನ್ನು ಕಾಯ್ದುಕೊಂಡು ಸಂಗ್ರಹಿಸಿದ ಸುದ್ದಿ ಸಂಪರ್ಕ ಸೇವೆಯ ಅವಘಡದಿಂದಾಗಿ ಬಯಲಾಗಿ ಬಿಡುವುದು ಯಾವುದೇ ಪತ್ರಕರ್ತನಿಗೆ ಭಾರೀ ಬೇಸರದ ಸಂಗತಿ. 'ಕದ್ದು ಹೋಳಿಗೆ ಕೊಟ್ಟರೆ ಹೊಯ್ಕಂಡು ತುಪ್ಪ ಕೇಳಿದ' ಎನ್ನುವಂತಹ ಪಾಡು ಪತ್ರಕರ್ತನದು.

ಇನ್ನು ತಂತಿ (ಟೆಲಿಗ್ರಾಂ) ಮೂಲಕ ಸುದ್ದಿ ಕಳಿಸಬೇಕಾದರೆ ಸುದ್ದಿಗಳನ್ನು ಟೆಲಿಗ್ರಾಂ ಭಾಷೆಯಲ್ಲಯೆ ಬರೆಯಬೇಕಿತ್ತು. ತಂತಿ ಭಾಷೆಗೆ ತನ್ನದೇ ಆದ ಒಂದು ಮಿತಿ, ಶಿಸ್ತು, ಚೌಕಟ್ಟು ಇರುತ್ತದೆ. ತಂತಿ ಸಂದೇಶಗಳು ಸಾಮಾನ್ಯವಾಗಿ

ಸಂಕ್ಷಿಪ್ತವಾಗಿ ಇರುತ್ತವೆ. ಹತ್ತು-ಹದಿನೈದು ಶಬ್ದಗಳಲ್ಲಿ ತಂತಿ ಸಂದೇಶಗಳು ಮುಗಿದು ಹೋಗುತ್ತವೆ. ಆದರೆ ಪತ್ರಿಕಾ ಟೆಲಿಗ್ರಾಂಗಳು ನೂರಾರು ಶಬ್ದಗಳಲ್ಲಿರುತ್ತವೆ! ಬಳಸುವ ಭಾಷೆಯ ಶೈಲಿ ಟೆಲಿಗ್ರಾಂ ಭಾಷಾ ಶೈಲಿಯಾಗಿರಬಹುದಾದರೂ ಅವು ಮೂಲಭೂತವಾಗಿ ವರದಿಗಳಾಗಿರುವುದರಿಂದ ಅವುಗಳನ್ನು ಸಂಕ್ಷಿಪ್ತಗೊಳಿಸಲುಬಾರದು. ಈ ಲೇಖಕ ಸಾವಿರ ಶಬ್ದಗಳಿಗೆ ಮೀರಿದ ಅನೇಕ ವರದಿಗಳನ್ನು ತಂತಿ ಮಾಧ್ಯಮದ ಮೂಲಕವೇ ಕಳುಹಿಸಿದ್ದಾನೆ.

ತಂತಿ ಮೂಲಕ ಕಳುಹಿಸುವ ವರದಿಗಳ ಬರವಣಿಗೆ ಸ್ಫುಟವಾಗಿ, ದುಂಡಾಗಿಯೂ, ಇರಬೇಕಾದದ್ದು ಅನಿವಾರ್ಯ. ಯಾಕೆಂದರೆ ತಂತಿ ಸಂದೇಶವನ್ನು ರವಾನಿಸುವ ಟೆಲಿಗ್ರಾಫಿಸ್ಟ್‌ಗೆ ಸುಲಭವಾಗಿ ಅರ್ಥವಾಗುವಂತಿರಬೇಕು. ಅನೇಕ ವರದಿಗಾರರು ತಮ್ಮ ಕೈ ಬರಹ ಶುದ್ಧವಿಲ್ಲದವರು ಇಡೀ ವರದಿಯನ್ನು ಟೆಲಿಗ್ರಾಫಿಕ್ ಭಾಷೆಯಲ್ಲಿ ದೊಡ್ಡ ಅಕ್ಷರಗಳಲ್ಲಿ (Capital Letters) ಬರೆಯುತ್ತಾರೆ. ಹೀಗೆ ಬರೆದ ವರದಿಗಳ ಶಬ್ದಗಳನ್ನು ಎಣಿಕೆ ಮಾಡಿ ೫೦ ಶಬ್ದಗಳಿಗೆ ಒಂದು ಗುಂಪನ್ನಾಗಿ ಮಾಡಿ ಅಲ್ಲಿ '೫೦' ಎಂದು ಚಿಕ್ಕದಾಗಿ ಬರೆಯಬೇಕು. ತಂತಿ ಸಂದೇಶದ ಎಲ್ಲ ಶಬ್ದಗಳನ್ನು ಎಣಿಕೆ ಮಾಡಿ ಕೊನೆಯಲ್ಲಿ ಒಟ್ಟು ಶಬ್ದಗಳ ಸಂಖ್ಯೆಯನ್ನು ಬರೆಯಬೇಕು. ಈ ಎಲ್ಲ ಕಾರ್ಯ ತಂತಿ ಕಛೇರಿಯಲ್ಲಿ ತಂತಿ ಸಂದೇಶಗಳನ್ನು ಸ್ವೀಕರಿಸುವ ಗುಮಾಸ್ತ ಅಥವಾ ತಂತಿ ಸಂದೇಶವನ್ನು ರವಾನಿಸುವ ಟೆಲಿಗ್ರಾಫಿಷ್ಟ್‌ನದ್ದೇ ಆಗಿದ್ದರೆ, ಅವರಿಗೆ ತೊಂದರೆ ಕೊಡುವುದು ಸಲ್ಲದು ಎಂಬ ಮಾನವೀಯ ಧೋರಣೆಯಿಂದ ವರದಿಗಾರರೇ ಸಾಮಾನ್ಯವಾಗಿ ಈ ಕೆಲಸ ಮಾಡುತ್ತಿದ್ದರು. ತಂತಿ ಇಲಾಖೆ ಸಿಬ್ಬಂದಿಗೆ ನೆರವಾಗುವ ಉದ್ದೇಶ ಒಂದು ಕಡೆಯಾದರೆ ತಾವು ಬರೆದ ವರದಿಗಳು ಆದಷ್ಟು ಬೇಗ ಪತ್ರಿಕಾ ಕಚೇರಿ ತಲುಪಬೇಕೆಂಬ ಧಾವಂತ ವರದಿಗಾರರಿಗೆ ಇದ್ದೇ ಇರುತ್ತದೆ. ಅದಕ್ಕೆಂತಲೇ ಪತ್ರಕರ್ತರು ತಂತಿ ಕಚೇರಿಯ ಸಿಬ್ಬಂದಿಯೊಂದಿಗೆ ಅತ್ಯಂತ ಸೌಹಾರ್ದಯುತ ಸಂಬಂಧ ಹೊಂದಿರುವುದು ಅನಿವಾರ್ಯವಾಗುತ್ತಿತ್ತು. ಮತ್ತು ಆ ಕಾಲದ ತಂತಿ ಇಲಾಖೆಯ ಸಿಬ್ಬಂದಿಯಾದರೆ, ನಿಯತ್ತಿನಿಂದ ತಮ್ಮ ಕಾರ್ಯ ನಿರ್ವಹಿಸುತ್ತಿದ್ದರು. ಪತ್ರಿಕಾ ವರದಿಗಳನ್ನು ರವಾನಿಸುವುದೆಂದರೆ ಅವರಿಗೆ, ಒಂದು ರೀತಿಯ ಹೆಮ್ಮೆಯ ಕೆಲಸ. ಜಗತ್ತಿಗೆಲ್ಲ ಸುದ್ದಿ ನಾಳೆ ಗೊತ್ತಾದರೆ ಅವರಿಗೆ ಕುಳಿತಲ್ಲೇ, ಇಂದು ಈಗಲೇ ಗೊತ್ತಾಗುವ ವಿಶೇಷ ಗೌರವ!

ಪತ್ರಿಕಾ ವರದಿಗಳ ತಂತಿ ಸಂದೇಶಕ್ಕೆ ರಿಯಾಯ್ತಿ ದರಗಳನ್ನು ಇಲಾಖೆ ನಿಗದಿ ಮಾಡಿತ್ತು. ಮತ್ತು ಪತ್ರಿಕಾ ವರದಿಗಳ ತಂತಿಗಳನ್ನು ಆದ್ಯತೆಯ ಮೇಲೆ ಕಳುಹಿಸಬೇಕೆಂಬ ನಿಯಮವೂ ಜಾರಿಯಲ್ಲಿತ್ತು.

ಕನ್ನಡ ಪತ್ರಿಕೆಗಳ ವರದಿಗಾರು ತಂತಿ ಮಾಧ್ಯಮದ ಮೂಲಕ ತಮ್ಮ ವರದಿಗಳನ್ನು ಕಳಿಸಲು ಇಂಗ್ಲೀಷ್ ಪತ್ರಿಕೆಗಳ ವರದಿಗಾರರಿಗಲ್ಲದ ವಿಶೇಷ ಶ್ರಮ ವಹಿಸಬೇಕಿತ್ತು. ಅದೇನೆಂದರೆ ಅವರು ಕನ್ನಡವನ್ನು ಇಂಗೀಷಿನಲ್ಲಿ ಬರೆಯಬೇಕಿತ್ತು! ಅರ್ಥಾತ್ ಭಾಷೆ ಕನ್ನಡವಾದರೂ, ಲಿಪಿ ಇಂಗ್ಲೀಷ್ ಒಂದು ಸ್ಯಾಂಪಲ್ ಗಮನಿಸಿ :

'ಮುಖ್ಯಮಂತ್ರಿ ವಿರೇಂದ್ರ ಪಾಟೀಲರು ತಮ್ಮ ಸ್ವಂತ ಜಿಲ್ಲೆಯಲ್ಲಿ ಎರಡು ದಿನಗಳ ಪ್ರವಾಸ ಕೈಕೊಳ್ಳಲಿದ್ದಾರೆ. ಈ ಸಂದರ್ಭದಲ್ಲಿ ಅವರು ತಮ್ಮ ಕ್ಷೇತ್ರ ಚಿಂಚೋಳಿಯಲ್ಲಿ ಜಾರಿಯಾಗುತ್ತಿರುವ ಅನೇಕ ಅಭಿವೃದ್ಧಿ ಕಾರ್ಯಗಳ ಪ್ರಗತಿಯನ್ನು ಪರೀಶೀಲಿಸುವರಲ್ಲದೆ ಮುಲ್ಲಾಮಾರಿ ನೀರಾವರಿ ಯೋಜನೆಗೂ ಭೇಟಿ ನೀಡಲಿದ್ದಾರೆ.......'

ಇದನ್ನು ತಂತಿ ಭಾಷೆಯಲ್ಲಿ ಹೀಗೆ ಬರೆಯಬೇಕಾಗುತ್ತದೆ.

"Mukhya Mantri Veerendra Patilaru Thamma Swanta Zilleyalli Eradu Dinagala pravasa Kai Kollaliddare Stop EE Sandarabhadalli Avaru Thamma Kshetra Chincholiyalli Jariyaguttiruva Aneka Abhibriddhi Karyagala Pragatiyannu Parisheelisuvarallade Mullamari Neeravari Yojanegoo Bheti Needaliddare......"

ತಂತಿ ಭಾಷೆಯುಲ್ಲಿ ಪೂರ್ಣವಿರಾಮು (.), ಅಲ್ಪ ವಿರಾಮು (,) ಇತ್ಯಾದಿಗಳನ್ನು ಬಳಸುವದಿಲ್ಲ. ಪೂರ್ಣವಿರಾಮ ಇರುವೆಡೆ STOP ಎಂತಲೂ ಅಲ್ಪವಿರಾಮ ಇರುವಡೆ COMMA ಎಂತಲೂ ಶಬ್ದರೂಪದಿಂದಲೇ ಬರೆಯಬೇಕು. ಅಂಕಿ-ಸಂಖ್ಯೆಗಳನ್ನು ಅಕ್ಷರದಲ್ಲಿಯೇ ಬರೆಯಬೇಕು.

ತಂತಿಯೊಂದೇ ಪ್ರಧಾನ ಸಂವಹನ ಸಾಧನವಾಗಿದ್ದ ದಿನಗಳಲ್ಲಿ ಕನ್ನಡ ಪತ್ರಕರ್ತರು ಬರೀ ಒಳ್ಳೆಯ ವರದಿಗಳನ್ನು ಬರೆದರಷ್ಟೇ ಸಾಲದು. ಒಳ್ಳೆಯ ತಂತಿ ಭಾಷೆಯಲ್ಲಿ ಬರೆಯಬೇಕು. ಅದಕ್ಕಾಗಿ ಅಗತ್ಯ ಪರಿಣಿತಿಯನ್ನು ಸಂಪಾದಿಸಬೇಕಿತ್ತು. ನೂರಾರು ಶಬ್ದಗಳಲ್ಲಿ ಬರೆಯಬೇಕಾದ ತಂತಿ ಭಾಷೆಯ ವರದಿಗಳನ್ನು ಬರೆಯುವಾಗ ಅಥವಾ ಟೈಪು ಮಾಡುವಾಗ ಅಗಾಧವಾದ ತಾಳ್ಮೆ ಪತ್ರಕರ್ತನಿಗೆ ಇರಬೇಕಾದದ್ದು ಅನಿವಾರ್ಯವಾಗಿತ್ತು. ಒಂದು ರೀತಿಯಲ್ಲಿ ಅಂದಿನ ಪತ್ರಿಕೋದ್ಯಮ ಪತ್ರಕರ್ತರಿಗೆ ತಾಳ್ಮೆಯನ್ನು ಕಲಿಸಿಕೊಡುತ್ತಿತ್ತು.

ವಿ.ಎನ್.ಕಾಗಲ್ಕರ್ ಅವರು ಸುಮಾರು ಎರಡು ದಶಕಗಳ ಕಾಲ 'ಸಂಯುಕ್ತ ಕರ್ನಾಟಕ'ದಲ್ಲಿ ವರದಿಗಾರರಾಗಿ ಕಾರ್ಯ ನಿರ್ವಹಿಸುವ ಸಂದರ್ಭದಲ್ಲಿ ಅವರು ಸಾಮಾನ್ಯವಾಗಿ ತಂತಿ ಮಾಧ್ಯಮದ ಮೂಲಕವೇ ಸುದ್ದಿಯನ್ನು ಕಳುಹಿಸುತ್ತಿದ್ದರು. ಅವರು ಪಟ್ಟ ಪರಿಶ್ರಮದ ಗಂಭೀರತೆಯನ್ನು ಯಾರಾದರೂ ಅರ್ಥಮಾಡಿಕೊಳ್ಳಬಹುದು.

ಗೌರವ ಬಂದೇ ಬಂತು

೧೯೫೫ ರಲ್ಲಿ ಕಾಗಲ್ಕರ್ 'ಸಂಯುಕ್ತ ಕರ್ನಾಟಕ'ದ ವರದಿಗಾರರೆಂದು ನೇಮಕಗೊಂಡಾಗ ಅವರ ಮಾಸಿಕ ಗೌರವಧನ/ಸಂಭಾವನೆ ಎಷ್ಟೆಂಬುದು ನಿಖರವಾಗಿ ಗೊತ್ತಿಲ್ಲ. ಸ್ವಂತ ಸುದ್ದಿಗಾರ, ಬಿಡಿ ಸುದ್ದಿಗಾರ, ಗೌರವ ಬಿಡಿ ಸುದ್ದಿಗಾರ, ಎಂಬೆಲ್ಲ ವಿವಿಧ ನಾಮಾವಳಿಗಳು ವರದಿಗಾರನಿಗೆ ಇದ್ದವು. ನಾಮಾವಳಿಗಳು ಏನೇ ಇದ್ದರೂ ಅವರೆಲ್ಲರೂ ಮಾಡುವ ಕಾರ್ಯ ಒಂದೆ. ಸುದ್ದಿಗಳನ್ನು ಬರೆಯವುದು ಅದರ ಜೊತೆಗೆ ವಿಶ್ಲೇಷಣೆ, ಲೇಖನ, ವಿಶೇಷ ವರದಿ, ರೂಪಕ, ವಾರ್ತಾಪತ್ರ ಇತ್ಯಾದಿಗಳನ್ನು ಬರೆಯಬೇಕಿತ್ತು.

ಸುಮಾರು ಹನ್ನೊಂದು ವರ್ಷಗಳ ನಂತರ ಪತ್ರಿಕೆ ಅವರಿಗೆ ಬಡ್ತಿ ನೀಡಿ ಜಿಲ್ಲಾ ವರದಿಗಾರನೆಂದು ನೇಮಕ ಮಾಡಿಕೊಂಡಿತು. ಆಗ ಪತ್ರಿಕೆಯ ಸಹಾಯಕ ಸಂಪಾದಕರಾಗಿದ್ದ ಕೆ. ಶಾಮರಾವ್ ನೇಮಕಾತಿ ಆದೇಶ ನೀಡಿದ್ದರು. ೧.೫.೧೯೬೬ ರಿಂದ ಜಿಲ್ಲಾ ವರದಿಗಾರನೆಂದು ನೇಮಕವಾದ ಕಾಗಲಕರ್ ಅವರಿಗೆ ನಿಗದಿಯಾಗಿದ್ದ ಮಾಸಿಕ ವೇತನ ರೂ. ೫೦. ಅಂದರೆ, ಅವರು ೧೯೫೫ ರಲ್ಲಿ ಮೊದಲ ಬಾರಿ ನೇಮಕಗೊಂಡಾಗ ಅವರಿಗೆ ನೀಡಲಾಗುತ್ತಿದ್ದ ಸಂಭಾವನೆ / ವೇತನ ತೀರಾ ಕಡಿಮೆ ಇದ್ದಿರಬೇಕು ಅಥವಾ ಅವರಿಗೆ ವೇತನವನ್ನೇ ನೀಡುತ್ತಿರಲಿಲ್ಲವೇನೋ! ಇದಕ್ಕೂ ಎರಡು ವರ್ಷಗಳ ಹಿಂದೆ ಪಿ.ಟಿ.ಐ. ಸುದ್ದಿ ಸಂಸ್ಥೆ ಅವರನ್ನು ನೇಮಕ ಮಾಡಿಕೊಂಡಾಗ ಅವರಿಗೆ ಮಾಸಿಕ ರೂ. ೩೦ ವೇತನ ನಿಗದಿ ಮಾಡಿತ್ತು. ಪ್ರಾಯಃ ಅದೇ ಆಸುಪಾಸಿನಲ್ಲಿ ಕಾಗಲ್‌ಕರ್ ಸಂಯುಕ್ತ ಕರ್ನಾಟಕದಲ್ಲಿ ನೇಮಕಗೊಂಡಾಗ ಪಡೆಯುತ್ತಿದ್ದಿರಬಹುದು. ಆದರೆ ದಶಕದ ನಂತರ ಜಿಲ್ಲಾವರದಿಗಾರನೆಂದು ಬಡ್ತಿ ಹೊಂದಿದ ಮೇಲೆ ಅವರ ವೇತನದಲ್ಲೂ ಬಡ್ತಿ ಆಗಿತ್ತು.

ಈಗ ಅವರಿಗೆ ಮಾಸಿಕ ವೇತನ ರೂ. ೫೦! ತಿಂಗಳಿಗೆ ಕನಿಷ್ಠ ಹತ್ತು ಕಾಲಂ ಸುದ್ದಿ ಅವರು ಕಳುಹಿಸಬೇಕಿತ್ತು. ಹತ್ತು ಕಾಲಂಗಿಂತಲೂ ಮಿಕ್ಕಿದ ಸುದ್ದಿಗೆ ಪ್ರತಿ ಕಾಲಂ ಇಂಚಿಗೆ ಮೂವತ್ತು ಪೈಸೆ ಲೈನೇಜನ್ನು ನಿಗಧಿ ಮಾಡಲಾಗಿತ್ತು. ಈಗ ಅವರ

ಮೇಲೆ ಜವಾಬ್ದಾರಿಯು ಅಧಿಕ. ಸುದ್ದಿಯ ಜೊತೆಗೆ ಅವರು ವಾರ್ತಾ ಪತ್ರಗಳನ್ನು ಮತ್ತು ಹೈದ್ರಾಬಾದ್ ಕರ್ನಾಟಕ ಪ್ರದೇಶದ ಹಿತಾಸಕ್ತಿಗೆ ಪೂರಕವಾಗುವ ಲೇಖನ-ರೂಪಕಗಳನ್ನು ಬರೆಯುವಂತೆಯು ಅವರಿಗೆ ಸೂಚಿಸಲಾಗಿತ್ತು.

ಕಾಗಲ್‌ಕರ್ ಅವರು ಕಲಬುರಗಿ ಜಿಲ್ಲಾ ವರದಿಗಾರರೆಂದು ನಿಯೋಜಿಸಲ್ಪಟ್ಟಿದ್ದರೂ ಅವರು ಹೈದ್ರಾಬಾದ್ ಕರ್ನಾಟಕ ಪ್ರದೇಶದ ಗುಲ್ಬರ್ಗ್, ಬೀದರ್ ಮತ್ತು ರಾಯಚೂರು (ಈಗಿನ ಕೊಪ್ಪಳ ಜಿಲ್ಲೆ ಸೇರಿ) ಜಿಲ್ಲೆಗಳಲ್ಲಿ ವ್ಯಾಪಕ ಸಂಚಾರ ಕೈಕೊಂಡು ಅನೇಕ ವರದಿಗಳನ್ನು ಲೇಖನಗಳನ್ನು ಬರೆಯುತ್ತಿದ್ದರು.

ಈ ಮಧ್ಯೆ ಕಾಗಲ್ಕರ್ ಅವರ ವೇತನ / ಸಂಭಾವನೆ / ಗೌರವಧನ ನೀಡಿಕೆ ವಿಷಯದಲ್ಲಿ ಯಾವುದೇ ಏರಿಕೆ ಕಂಡು ಬರಲಿಲ್ಲ. ೧೨ನೇ ಸೆಪ್ಟೆಂಬರ್ ೧೯೭೨ ರಂದು ನೀಡಿದ ಒಂದು ಆದೇಶದಲ್ಲಿ ಕಾಗಲ್ಕರ್ ಅವರಿಗೆ ನೀಡಲಾಗುವ ಮಾಸಿಕ ಗೌರವಧನವನ್ನು ಒಂದನೆ ಜುಲೈ ೧೯೭೨ ರಿಂದ ಜಾರಿಗೆ ಬರುವಂತೆ ರೂ. ೬೦ ರಿಂದ ರೂ. ೭೫ ಕ್ಕೆ ಹೆಚ್ಚಿಸಿದ್ದು ತಿಳಿದು ಬರುತ್ತದೆ. ಅಂದರೆ ಅವರು ಸಂಯುಕ್ತ ಕರ್ನಾಟಕ ಸೇರಿದ ಹದಿನೇಳು ವರ್ಷಗಳ ನಂತರವೂ ಅವರ ಮಾಸಿಕ ವೇತನ ರೂ. ೭೫ ಮಾತ್ರ! ಈ ಮೂಲ ವೇತನಕ್ಕೆ ಹೊರತಾಗಿ ಅವರಿಗೆ ಅವರು ಬರೆಯುವ ವರದಿ, ಲೇಖನಗಳ ಆಧಾರದ ಮೇಲೆ ಅವರಿಗೆ ಲೈನೇಜ್ ನೀಡಲಾಗುತ್ತಿತ್ತು.

ಸನ್ನತಿ ಮೇಲೆ ಹೊಸ ಬೆಳಕು

'ಸಂಯುಕ್ತ ಕರ್ನಾಟಕ' ಪತ್ರಿಕೆಯಲ್ಲಿ ಕಾಗಲ್ಕರ್ ಸುಮಾರು ಇಪ್ಪತ್ತು ವರ್ಷಗಳ ಕಾಲ ಕಾರ್ಯನಿರ್ವಹಿಸಿದರು. ಸಾಮಾಜಿಕ ವಲಯದಲ್ಲಿ ಅವರು ಬಹಿರಂಗಗೊಳಿಸಿದ ದಲಿತನ ಕಣ್ಣುಗಳನ್ನು ಕಿತ್ತ ಘೋರ ಪ್ರಕರಣ ಸಮುದಾಯದಲ್ಲಿ, ರಾಜಕೀಯದಲ್ಲಿ ಮತ್ತು ಸರಕಾರದಲ್ಲಿ ವಿಶೇಷ ಸಂಚಲನ ಉಂಟುಮಾಡಿತ್ತು. ಆ ವರದಿ ಅವರಿಗೆ ಸಾಕಷ್ಟು ಖ್ಯಾತಿಯನ್ನು ತಂದುಕೊಟ್ಟಿತ್ತು.

ಕಾಗಲ್‌ಕರ್ ಅವರ ಮತ್ತೊಂದು ಅತ್ಯಮೋಘ ಕೊಡುಗೆ ಎಂದರೆ ಅವರು ಶ್ರೀ ಚಂದ್ರಕಲಾ ಪರಮೇಶ್ವರಿಯ ಸುಕ್ಷೇತ್ರವಾದ ಭೀಮಾ ನದಿಯ ದಂಡೆಯ ಮೇಲಿರುವ ಚಿತಾಪುರ ತಾಲೂಕಿನ ಇತಿಹಾಸ ಪ್ರಸಿದ್ಧಿ ಸನ್ನತೆಯ ಮೇಲೆ ಹೊಸ ಬೆಳಕನ್ನು ಚೆಲ್ಲಿದ್ದು. ಇದುವರೆಗೂ ಗೊತ್ತಿಲ್ಲದೆ ಇದ್ದ ಒಂದು ಐತಿಹಾಸಿಕ, ಚಾರಿತ್ರಿಕ, ಸತ್ಯವನ್ನು ಅವರು ಸನ್ನತಿಗೆ ಸಂಬಂಧಿಸಿದಂತೆ ಹೊರಗೆಡವಿದ್ದರು. ಅದು ಇತಿಹಾಸ ಸಂಶೋಧಕರ ಆಲೋಚನ ವಿಧಾನವನ್ನೇ ಬದಲಿಸಿತು.

ಸನ್ನತಿ ಹಾಗೂ ಸುತ್ತ-ಮುತ್ತಲಿನ ಪ್ರದೇಶ ಒಂದು ಕಾಲಕ್ಕೆ ಬೌದ್ಧರ ನೆಲೆ ಬೀಡಾಗಿತ್ತು ಎಂದು ಕಾಗಲ್ಕರ್ ಕೆಲವೊಂದು ಪುರಾವೆ ಸಹಿತ 'ಸಂಯುಕ್ತ ಕರ್ನಾಟಕ'ದಲ್ಲಿ ಬರೆದ ಮೇಲೆ ಬರೀ ಸನ್ನತಿಯ ಭವಿಷ್ಯವಷ್ಟೇ ಅಲ್ಲ; ಭಾರತೀಯ ಇತಿಹಾಸ ಸಂಶೋಧನೆಯ ದಿಕ್ಕೂ ಬದಲಾಯಿತು. ಕರ್ನಾಟಕದ ಮೊಟ್ಟ ಮೊದಲ ಬೌದ್ಧ ನೆಲೆ ಸನ್ನತಿ ಎಂಬುದು ಬೆಳಕಿಗೆ ಬಂದು ಹಲವಾರು ಧರ್ಮಗಳ ಜೊತೆಗೆ ಕರ್ನಾಟಕ ಬೌದ್ಧ ಧರ್ಮವನ್ನು ತನ್ನ ತೆಕ್ಕೆಗೆ ತೆಗೆದುಕೊಂಡಿತೆಂಬ ಅಂಶ ಪ್ರಾಯಃ ಮೊದಲ ಬಾರಿಗೆ ಪ್ರಪಂಚಕ್ಕೆ ಗೊತ್ತಾಗುವಂತೆ ಮಾಡಿದವರು ಕಾಗಲ್ಕರ್.

ಸುಮಾರು ಸಾವಿರ ವರ್ಷಗಳಷ್ಟು ಹಳೆಯದಾದ ಶಕ್ತಿ ದೇವತೆ ಚಂದ್ರಲಾ ಪರಮೇಶ್ವರಿ ದೇವಸ್ಥಾನ ನಿರ್ಮಾಣ ರಾಷ್ಟ್ರಕೂಟರ ಕಾಲದಲ್ಲಿ ನಡೆದು ಕಲ್ಯಾಣಿ ಚಾಲುಕ್ಯರ ಆಳ್ವಿಕೆಯಲ್ಲಿ ವಿಸ್ತಾರಗೊಂಡಿತು. ಕರ್ನಾಟಕ, ಆಂಧ್ರಪದೇಶ, ಮಹಾರಾಷ್ಟ್ರ ರಾಜ್ಯಗಳಿಂದ ಮುಖ್ಯವಾಗಿ ಮತ್ತು ಭಾರತದ ಇತರ ಪ್ರದೇಶಗಳಿಂದ ಸಾಮಾನ್ಯವಾಗಿ ಸಾವಿರಾರು ಭಕ್ತರು ಈ ದೇವಸ್ಥಾನಕ್ಕೆ ಭೇಟಿ ನೀಡಿ ಪೂಜೆ, ಹರಕೆಗಳನ್ನು ಸಲ್ಲಿಸುತ್ತಾರೆ. ಚಂದ್ರಲಾಂಬಾ ಸಹಸ್ರಾರು ಕುಟುಂಬಗಳ ಕುಲದೇವತೆಯೂ ಹೌದು. ಮುಂಜಿ, ಮದುವೆ ಇತ್ಯಾದಿ ಸತ್ಕಾರ್ಯಗಳು ಇಲ್ಲಿ ನಡೆಯುತ್ತವೆ.

ಸಂಕ್ರಮಣದ ಪುಣ್ಯ ಸ್ನಾನ, ಶ್ರಾವಣ ಮಾಸದ ಕುಂಕುಮಾರ್ಚನೆ ಹಾಗೂ ನವರಾತ್ರಿಯ ದೀಪೋತ್ಸವಕ್ಕೆ ಹೆಸರಾಗಿರುವ ಸನ್ನತಿಯಲ್ಲಿ ದವನದ ಹುಣ್ಣಿಮೆಯಿಂದ ಪಂಚಮಿ ವರೆಗೆ ದೇವಿಯ ರಥೋತ್ಸವ ಮತ್ತು ಶ್ರಾವಣ ಮಾಸದಲ್ಲಿ ಒಂಭತ್ತು ದಿನದ ಜಾತ್ರೆ ನಡೆಯುತ್ತದೆ. ಅದೆಲ್ಲವೂ ಸರಿಯೇ. ಸಹಸ್ರಾರು ಭಕ್ತಾದಿಗಳು ದೇಶದ ವಿವಿಧ ಭಾಗಗಳಿಂದ ಬಂದು ಹೋಗುವವರು ಧಾರ್ಮಿಕ ಶ್ರದ್ಧೆ ಉಳ್ಳವರಾಗಿರುತ್ತಾರೆಯೇ ಹೊರತು ಅವರಿಗೆ ಕ್ಷೇತ್ರದ ಇತಿಹಾಸದ ಮಹತ್ವದ ಬಗ್ಗೆ ಅಷ್ಟಾಗಿ ಮಾಹಿತಿಯಾಗಲಿ, ಆಸಕ್ತಿಯಾಗಲೀ ಇರುವುದಿಲ್ಲ.

ನೂರಾರು ವರ್ಷಗಳಿಂದ ಅಸ್ತಿತ್ವದಲ್ಲಿರುವ ಚಂದ್ರಲಾ ಪರಮೇಶ್ವರಿ ದೇವಸ್ಥಾನ ತನ್ನ ಗರ್ಭದಲ್ಲೇ ಐತಿಹಾಸಿಕ ಮಹತ್ವದ ರಹಸ್ಯವನ್ನು ಅಡಗಿಸಿಕೊಂಡಿದ್ದರೂ ಅದನ್ನು ಕಾಣುವ ಕಣ್ಣು ಮತ್ತು ಗುರುತಿಸುವ ಮನಸ್ಸು ಮಾತ್ರ ಇರಲಿಲ್ಲ. ಆದರೆ ಕಾಗಲಕರ್ ಅವರು ಒಬ್ಬ ನಿಜವಾದ ಪತ್ರಕರ್ತನಲ್ಲಿರಬೇಕಾದ ಅಂತರ್ ದೃಷ್ಟಿಯನ್ನು ಹೊಂದಿದವರಾದ್ದರಿಂದ ಸನ್ನತಿಯ ರಹಸ್ಯವನ್ನು ಬೇಧಿಸುವಲ್ಲಿ ಅವರು ಯಶಸ್ವಿಯಾದರು. ದೇವಸ್ಥಾನದ ಶಿಲ್ಪದಲ್ಲಿ ಬುದ್ಧನ ಪ್ರತಿಮೆ ಮತ್ತು ಧರ್ಮಚಕ್ರವನ್ನು ಗುರುತಿಸಿ 'ಸಂಯುಕ್ತ ಕರ್ನಾಟಕ'ದಲ್ಲಿ ಒಂದು ಲೇಖನ ಬರೆದರು.

ಇದೇನು ಸಾಧಾರಣ ಲೇಖನವಾಗಿರಲಿಲ್ಲ. ಇತಿಹಾಸ ಸಂಶೋಧನಾ ವಲಯದಲ್ಲಿ ಇದುವರೆಗೂ ಗೊತ್ತಿರದ ಒಂದು ಸಾಂಪ್ರದಾಯಿಕ ಧಾರ್ಮಿಕ ನಂಬಿಕೆಯನ್ನೇ ಅಲುಗಾಡಿಸುವ ಆಸ್ಫೋಟಕ ಲೇಖನ ಇದಾಗಿತ್ತು.

ಶೈವ ಸಂಪ್ರದಾಯದ ದೇವಸ್ಥಾನವೊಂದರ ಮೇಲೆ ಬೌದ್ಧ ಧರ್ಮದ ಸಂಕೇತಗಳು! ಚಕಿತಗೊಂಡದ್ದು ಇತಿಹಾಸವಷ್ಟೇ ಅಲ್ಲ ಒಂದು ಧಾರ್ಮಿಕ ಪರಂಪರೆಯೂ ಕೂಡ.

ಕಾಗಲ್ಕರ್ ಅವರ ಈ ಲೇಖನವನ್ನು ಅದರ ಮೇಲು ನೋಟದಲ್ಲೇ ಸ್ವೀಕರಿಸುವ ಇತಿಹಾಸ ಸಂಶೋಧಕರು ತೀರಾ ವಿರಳ ಅಥವಾ ಇಲ್ಲವೆಂದರೂ ನಡೆದೀತು. ಖ್ಯಾತ ಇತಿಹಾಸ ಸಂಶೋಧಕ ಡಾ. ಪಿ.ಬಿ. ದೇಸಾಯಿ ಅವರು ಈ ಲೇಖನದ ಬಗ್ಗೆ ಅಚ್ಚರಿಗೊಂಡರು. ಅದರ ಬಗ್ಗೆ ಅವರಿಗೆ ವಿಶ್ವಾಸವೇ ಮೂಡಲಿಲ್ಲ. ಕೆಲವರಂತೂ ಲೇಖನವನ್ನು ಬರೀ ಉಡಾಫೆ ಎಂದೂ ಜರಿದರು. ಹಲವಾರು ಮಹತ್ವದ ಸಂಶೋಧನೆಗಳನ್ನು ಕೈಕೊಂಡು ಹೆಸರು ಮಾಡಿದ್ದ ಪಿ.ಬಿ.ದೇಸಾಯಿ ಅವರು ಲೇಖನ ಓದಿ ಧಾರವಾಡದಿಂದ ಕಲಬುರಗಿಗೆ ಧಾವಿಸಿದರು. ಕಲಬುರಗಿಯಿಂದ ಸನ್ನತಿಗೆ ವಿಶೇಷ ವಾಹನದ ವ್ಯವಸ್ಥೆ ಮಾಡಿ ಕಾಗಲಕರ್ ಅವರನ್ನು ತಮ್ಮ ಜೊತೆಗೆ ಕರೆದುಕೊಂಡು ಹೋದರು. ಅಲ್ಲಿ ಹೋಗಿ ಚಂದ್ರಲಾಪರಮೇಶ್ವರಿ ದೇವಸ್ಥಾನದ ಕಟ್ಟಡ, ಶಿಖರ ಇತ್ಯಾದಿ ಕೂಲಂಕುಷವಾಗಿ ಖುದ್ದಾಗಿ ಪರೀಶೀಲಿಸಿದ ಮೇಲೆಯೇ ಕಾಗಲಕರ್ ಸ್ಫೋಟಿಸಿದ ವಿಷಯ ಅವರಿಗೆ ಮನದಟ್ಟಾಯಿತು. ಕಾಗಲಕರ್ ಲೇಖನದ ಅಥೆಂಟಿಸಿಟಿಗೆ ಒಂದು ಪ್ರಾತಿನಿಧಿಕ ಐತಿಹಾಸಿಕ ಮುದ್ರೆ ಬಿದ್ದಿತು!

ವಾಸ್ತವವಾಗಿ ಸನ್ನತಿ ಕ್ಷೇತ್ರದ ಬೌದ್ಧ ಸಂಬಂಧ ಕಾಗಲಕರ್ ಅವರ ಸಂಶೋಧನೆ ಅಲ್ಲ. ಸನ್ನತಿಯ ಬೌದ್ಧ ಪ್ರಭಾವವನ್ನು ಮೊದಲು ಗುರುತಿಸಿ ಅದೊಂದು ಪ್ರಾಚೀನ ಬೌದ್ಧ ಕೇಂದ್ರವಾಗಿರುವ ಸಾಧ್ಯತೆಯನ್ನು ಬೆಳಕಿಗೆ ತಂದ ಶ್ರೇಯಸ್ಸು ಖ್ಯಾತ ಹವ್ಯಾಸಿ ಸಂಶೋಧಕರಾಗಿದ್ದ ಕಪಟರಾಳ ಕೃಷ್ಣರಾಯರಿಗೆ ಸಲ್ಲುತ್ತದೆ. ಅವರು ೧೯೫೪ ರಲ್ಲಿ ಸನ್ನತಿ ಬೌದ್ಧ ನೆಲೆಯಾಗಿತ್ತೆಂದೂ ಅಲ್ಲಿ ಉತ್ಖನನ ಕಾರ್ಯ ನಡೆಯಬೇಕೆಂದೂ ಖಚಿತವಾದ ಅಭಿಪ್ರಾಯಪಟ್ಟಿದ್ದರು. ಕಪಟರಾಳರೊಂದಿಗೆ ನಿಕಟ ಸ್ನೇಹ ಹೊಂದಿದ್ದ ಕಾಗಲಕರ್ ಅವರು ಸನ್ನತಿಯ ವಿಷಯದಲ್ಲಿ ಹೆಚ್ಚು ಆಸಕ್ತಿವಹಿಸಿ ಅದನ್ನು ವಿವರವಾಗಿ ಅಧ್ಯಯನ ಮಾಡಿ ಲೇಖನ ಬರೆದಿದ್ದರು.

ಪ್ರಾದೇಶಿಕವಾಗಿ 'ಸೊಂಥಿ', 'ಸಂತಿ' ಎಂದು ಕರೆಯಲ್ಪಡುವ ಸನ್ನತಿ ಭೀಮಾ ನದಿಯ ಎಡದಂಡೆ ಮೇಲಿರುವ ಪ್ರಾಗೈತಿಕಹಾಸಿಕ ಹಾಗೂ ಚಾರಿತ್ರಿತ ಮಹತ್ವದ

ಪ್ರಾಚೀನ ನೆಲೆಗಳಲ್ಲಿ ಪ್ರಮುಖವಾದದ್ದು. ಹಳೆಯ ಶಿಲಾಯುಗದ ಆಯುಧಗಳು, ಮೌರ್ಯ ಚಕ್ರವರ್ತಿ ಅಶೋಕನ ಆಳ್ವಿಕೆಗೆ ಸೇರಿದ ಬೃಹತ್ ಶಿಲಾಶಾಸನಗಳು ಇಲ್ಲಿ ದೊರೆತಿವೆ. ಕೆಲವು ವರ್ಷಗಳಿಂದ ನಡೆಯುತ್ತಿರುವ ಉತ್ಖನನದಲ್ಲಿ ಶಾತವಾಹನರ ಕಾಲದ ಬೌದ್ಧ ಸ್ತೂಪಾವಶೇಷಗಳನ್ನು ಪತ್ತೆ ಹಚ್ಚಲಾಗಿದೆ. ಸನ್ನತಿ ಹತ್ತಿರವೇ ಇರುವ ಕಣಗಿನಹಳ್ಳಿಯಲ್ಲಿ ದೊರೆತಿರುವ ಬೌದ್ಧ ಸ್ತೂಪ, ವಿಗ್ರಹ ಇತ್ಯಾದಿಗಳು ಈ ಭಾಗ ಒಂದು ಕಾಲದಲ್ಲಿ ಪ್ರಮುಖ ಬೌದ್ಧ ಕೇಂದ್ರವಾಗಿತ್ತು ಎಂಬುದನ್ನು ತೋರಿಸಿಕೊಡುತ್ತದೆ. ಕರ್ನಾಟಕದಲ್ಲಿ ಪತ್ತೆಯಾದ ಮೊಟ್ಟ ಮೊದಲ ಬೌದ್ಧ ನೆಲೆ ಇದಾಗಿದೆ.

ಕ್ರಿ.ಪೂ. ಮೂರನೇ ಶತಮಾನದ ಮೌರ್ಯ ಸಾಮ್ರಾಜ್ಯದ ಚಕ್ರವರ್ತಿ ಅಶೋಕನ ಕಾಲಕ್ಕೆ ಶಾಸನಗಳು ಮತ್ತು ಕ್ರಿ.ಶ. ಎರಡರಿಂದ ನಾಲ್ಕನೇ ಶತಮಾನದ ಅವಧಿವರೆಗಿನ ಶಾತವಾಹನರ ಕಾಲಕ್ಕೆ ಸೇರಿದ ಸುಮಾರು ೭೫ ಶಾಸನಗಳು ಇಲ್ಲಿ ಪತ್ತೆಯಾಗಿವೆ. ಪ್ರಾಕೃತ ಭಾಷೆಯಲ್ಲಿರುವ ಈ ಬ್ರಾಹ್ಮೀ ಶಾಸನಗಳು ಇತಿಹಾಸದ ಅಧ್ಯಯನದ ದಿಕ್ಕನ್ನೇ ಬದಲಿಸಿವೆ. ಇಷ್ಟೊಂದು ಅಧಿಕ ಸಂಖ್ಯೆಯ ಶಾಸನಗಳು ದೊರೆತಿರುವ ಏಕೈಕ ಸ್ಥಳ ಸನ್ನತಿಯಾಗಿದೆ.

ಕಪಟರಾಳ ಕೃಷ್ಣರಾಯರು ಮತ್ತು ಕಾಗಲಕರ್ ಅವರಂತಹ ಪ್ರಾಮಾಣಿಕ, ಸತ್ಯನಿಷ್ಠ ಅಧ್ಯಯನಶೀಲ ಮಹಾಮಹಿಮರಿಂದಾಗಿಯೇ ಸನ್ನತಿ ರಾಷ್ಟ್ರದ ಪ್ರಾಗೈತಿಹಾಸಿಕ ಭೂಪಟದಲ್ಲಿ ಒಂದು ಮಹತ್ವದ ಸ್ಥಾನ ಪಡೆಯಲು ಸಾಧ್ಯವಾಗಿದೆ ಎಂದು ಹೇಳಿದರೆ ಅತಿಶಯೋಕ್ತಿ ಆಗಲಾರದು.

ಉತ್ಖನನ ವೀಕ್ಷಣೆ

ಈ ಲೇಖಕ 'ದಿ ಇಂಡಿಯನ್ ಎಕ್ಸ್‌ಪ್ರೆಸ್' ವರದಿಗಾರನಾಗಿ ೧೯೮೬ರಲ್ಲಿ ಕಲಬುರಗಿಗೆ ಬಂದಾಗ ಆಗ ತಾನೆ ಸನ್ನತಿಯಲ್ಲಿ ಉತ್ಖನನ ಕಾರ್ಯ ಆರಂಭವಾಗಿತ್ತು. ಸನ್ನತಿ ಒಂದು ತೀರ್ಥಕ್ಷೇತ್ರ ಎಂಬುದು ಮಾತ್ರ ನನಗೆ ಗೊತ್ತಿತ್ತು. ಬಾಲ್ಯದಲ್ಲಿ ಒಂದು ಸಲ ನಮ್ಮ ಮನೆಯವರೊಂದಿಗೆ ಅಲ್ಲಿಗೆ ಹೋಗಿದ್ದೆ. ಆದರೆ ಸನ್ನತಿಯ ಐತಿಹಾಸಿಕ ಮಹತ್ವದ ಬಗ್ಗೆ ನನಗಾವ ಅರಿವೂ ಇರಲಿಲ್ಲ. ಒಂದು ದಿನ ಕಾಗಲಕರ್ ಅವರು ನನ್ನ ಮನೆಗೆ ಬಂದವರೇ ಸನ್ನತಿಯಲ್ಲಿ ಉತ್ಖನನ ಕಾರ್ಯ ನಡೆಯುತ್ತಿದ್ದು, ಯಾರೋ ಒಬ್ಬ ವಿದೇಶಿ ಪರಿಣಿತ ಉತ್ಖನನ ಕಾರ್ಯದ ಉಸ್ತುವಾರಿ ವಹಿಸಿಕೊಂಡಿದ್ದಾನೆಂದು ಹೇಳಿದರು. ಉತ್ಖನನ ಕಾರ್ಯವನ್ನು ವೀಕ್ಷಿಸಲು ಮತ್ತು ವಿದೇಶಿ ಪರಿಣಿತನನ್ನು ಮಾತಾಡಿಸಲು ಸನ್ನತಿಗೆ ಹೋಗುವ ಪ್ರಸ್ತಾವನೆಯನ್ನು ನನ್ನ ಮುಂದಿಟ್ಟರು. ನಾನು ಕೂಡಲೇ ಒಪ್ಪಿದ್ದರಿಂದ ಮಾರನೆ ದಿವಸ ಸನ್ನತಿಗೆ ಹೊರಟೆವು.

ಒಂದು ನೋಟು ಪುಸ್ತಕ, ಪೆನ್ನು ಮತ್ತು ಹಳೆಯ ಕಾಲದ ಚಿಕ್ಕ ಗಾತ್ರದ ಟನ್ನಿನ ಡಬ್ಬಿಯಂತಿದ್ದ ಕ್ಲಿಕ್-೧೧೧ ಕ್ಯಾಮರಾದೊಂದಿಗೆ ನಾನು ಸಿದ್ದನಾದೆ. ಅದು ಮಾರ್ಚ ೧೯೮೭ ರ ಕೊನೆಯ ವಾರ. ಕಾಗಲಕರ್ ಅವರೊಂದಿಗೆ ಸನ್ನತಿಗೆ ಬಂದಿಳಿದೆವು.

ಪವಿತ್ರ ಮತ್ತು ಪ್ರಶಾಂತ ಭೀಮ ನದಿಯ ದಂಡೆಯ ಮೇಲಿರುವ ಸನ್ನತಿ ಸುಪ್ರಸಿದ್ದ ಯಾತ್ರಾ ಸ್ಥಳವಾಗಿದ್ದರೂ ಅತ್ಯಂತ ಕಳಪೆ ಸಾರಿಗೆ ಸೌಕರ್ಯದಿಂದಾಗಿ ಅಲ್ಲಿಗೆ ಹೋಗಿ ಬರುವುದು ಒಂದು ಸಾಹಸದ ಕಾರ್ಯವೇ ಆಗಿತ್ತು. ಮುಂಬೈ - ಚೆನ್ನೈ ಬ್ರಾಡ್ಗೇಜ್ ರೈಲು ಮಾರ್ಗದ ವಾಡಿ ಜಂಕ್ಷನ್ನಿಂದ ಸುಮಾರು ೧೫ ಕಿ.ಮೀ. ದೂರದಲ್ಲಿರುವ ನಾಲ್ವಾರ ರೈಲು ನಿಲ್ದಾಣದಲ್ಲಿ ಇಳಿದು ಅಲ್ಲಿಂದ ಮತ್ತೆ ಸುಮಾರು ೨೦ ಕಿ.ಮಿ. ಕ್ರಮಿಸಿದರೆ ಬರುವುದೇ ಸನ್ನತಿ. ಜಿಲ್ಲಾ ಕೇಂದ್ರವಾದ ಕಲಬುರಗಿಯಿಂದ ನೇರ ಬಸ್ ಸೌಕರ್ಯ ಇರಲಿಲ್ಲ. ಒಂದು ಅಥವಾ ಎರಡು ಬಸ್ಸುಗಳಿದ್ದರೂ, ಅವು ರದ್ದುಗೊಳ್ಳುವುದೇ ಅಧಿಕವಾಗಿತ್ತು. ಮೇಲಾಗಿ ಅತ್ಯಂತ ಕೆಟ್ಟ ರಸ್ತೆಯಿಂದಾಗಿ ಬಸ್ಸಿನ ಪ್ರಯಾಣ ದುಸ್ಸಾಹಸಕ್ಕೆ ಸಮನಾಗಿತ್ತು. ಜಿಲ್ಲಾ ಕೇಂದ್ರದಿಂದ ೮೫ ಕಿ.ಮಿ. ದೂರದಲ್ಲಿದ್ದರೂ ಈ ಐತಿಹಾಸಿಕ ಕ್ಷೇತ್ರ ತಲುಪಲು ನಾಲ್ಕು ಗಂಟೆ ಬೇಕಿತ್ತು! ಈಗಲೂ ಅಂತಹ ಹೇಳಿಕೊಳ್ಳುವಂತಹ ಬದಲಾವಣೆ ಆಗಿಲ್ಲ.

ಕಲಬುರಗಿಯಿಂದ ನಾಲ್ವಾರವರೆಗೆ ರೈಲಿನಲ್ಲಿ ಯಾವುದೇ ತ್ರಾಸ ಇಲ್ಲದೆ ಹೋಗಬಹುದಾದರೂ ನಾಲ್ವಾರದಿಂದ ಸನ್ನತಿಗೆ ೨೦ ಕಿ.ಮಿ. ರಸ್ತೆ ಪಯಣ ಮಾಡಲೇಬೇಕು. ಬಸ್ಸುಗಳಿಗಾಗಿ ಗಂಟೆಗಟ್ಟಲೆ ನಾಲ್ವಾರದಲ್ಲಿ ಕಾಯಬೇಕು. ಮೂರು ದಶಕಗಳ ಹಿಂದೆ ನಾಲ್ವಾರದಿಂದ ಸನ್ನತಿಗೆ ಎತ್ತಿನಗಾಡಿ, ಕುದುರೆ ಟಾಂಗಾ ಪ್ರಮುಖ ಸಂಚಾರ ಸಾಧನಗಳಾಗಿದ್ದವು. ಆಗಾಗ್ಗೆ ಲಾರಿಗಳೂ ದೊರೆತವು. ಕರ್ನಾಟಕದ ಮತ್ತು ಭಾರತದ ಒಂದು ಐತಿಹಾಸಿಕ, ಸಾಂಸ್ಕೃತಿಕ ಮತ್ತು ಪರಂಪರೆಯ ತಾಣವಾಗಿರುವ ಸನ್ನತಿಯ ಪಾಡು ಇಷ್ಟೊಂದು ಶೋಚನೀಯವಾಗಿರಬೇಕಾದರೆ ಇನ್ನಿತರ ಐತಿಹಾಸಿಕ ಮಹತ್ವದ ಸ್ಥಳಗಳ ದುರ್ಗತಿಯನ್ನು ಯಾರಾದರೂ ಊಹಿಸಿಕೊಳ್ಳಬಹುದು.

ಅಂತೂ, ಇಂತೂ ನಾನು ಮತ್ತು ಕಾಗಲಕರ್ ಸನ್ನತಿಯ ಪುಣ್ಯಧಾಮಕ್ಕೆ ಬಂದಿಳಿದೆವು. ನಮ್ಮ ಅದೃಷ್ಟಕ್ಕೆ ನಾವು ಕಾಣಬೇಕಿದ್ದ ವ್ಯಕ್ತಿ ಸನ್ನತಿಯಲ್ಲಿದ್ದರು. ಅಲ್ಲಿಯ ಉತ್ಖನನ ಕಾರ್ಯದ ನೇರ ಉಸ್ತುವಾರಿ ಹೊತ್ತ ಲಂಡನ್ನಿನ ದಕ್ಷಿಣ ಏಶಿಯಾ ಅಧ್ಯಯನ ಸಂಸ್ಥೆಯ (Society for South Asian Studies, London) ಜೇಮ್ಸ್ ಹಾವೆಲ್ ನಮಗಾಗಿಯೇ ಕಾದು ಕುಳಿತಿರುವರೇನೋ ಎನ್ನುವಂತೆ ನಮಗೆ

ದೊರಕಿಯೇ ಬಿಟ್ಟರು. ಉದ್ದನೆಯ ನೀಳಕಾಯದ, ಮಧ್ಯವಯಸ್ಸಿನ ಸುಲೋಚನಾಧಾರಿ ಜೇಮ್ಸ್ ಹಾವೆಲ್ ಹಸನ್ಮುಖಿದ ಆಕರ್ಷಕ ವ್ಯಕ್ತಿ. ಬಹಳ ಸರಳ ವ್ಯಕ್ತಿ ಎಂಬುದು ಅವರ ಉಡಿಗೆ, ತೊಡಿಗೆ, ನಡೆ-ನುಡಿಗಳಿಂದ ವೇದ್ಯವಾಯಿತು.

ಉಭಯಕುಶಲೋಪರಿ ಸಂಭಾಷಣೆಯ ನಂತರ ತಮ್ಮ ಚರ್ಚೆ ಸನ್ನತಿಯ ಉತ್ಖನನ ಕಾರ್ಯದತ್ತ ತಿರುಗಿತು. ಅವರ ಜೊತೆಗೆ ಸಂಭಾಷಣೆ ನಡೆಸುವ ಒಂದೇ ಜವಾಬ್ದಾರಿ ಕಾಗಲಕರ್ ಅವರಿಗಿತ್ತು. ನಾನಾದರೋ ಹಾವೆಲ್ ಅವರ ವಿವಿಧ ಭಂಗಿಗಳನ್ನು ನನ್ನ ಕೆಮರಾದಲ್ಲಿ ಸೆರೆ ಹಿಡಿಯುವ ಹೆಚ್ಚುವರಿ ಜವಾಬ್ದಾರಿ ನಿಭಾಯಿಸುತ್ತಿದ್ದೆ. ಆದರೆ ವಾಸ್ತವವಾಗಿ ನನ್ನ ಕ್ಯಾಮರ ಮೇಲೆ ನನಗೇ ವಿಶ್ವಾಸವಿರಲಿಲ್ಲ. ನಾವು ನಿಜವಾದ ಪತ್ರಕರ್ತರು ಎಂಬುದನ್ನು ಸಾಬೀತು ಪಡಿಸಲು ಆ ಛಾಯಾಗ್ರಹಣ ಪೆಟ್ಟಿಗೆ ಸಹಾಯ ಮಾಡಿತೇನೋ! ಅದು ಕಪ್ಪು-ಬಿಳುಪು ಫಿಲ್ಮನ್ನು ಹೊಂದಿತ್ತು. ಆಗಿನ್ನೂ ಕಲರ್ ಫೋಟೋಗಳು ಅಷ್ಟೊಂದು ಚಾಲ್ತಿಯಲ್ಲಿರಲಿಲ್ಲ. ಕಪ್ಪು-ಬಿಳುಪಿನ ಫೋಟೋಗಳೇ ಬಳಕೆಯಲ್ಲಿದ್ದವು. ನೆರಳು-ಬೆಳಕು ಸಂಯೋಜನೆಯ ಯಾವೊಂದು ಕಲ್ಪನೆಯು ಇಲ್ಲದ ನನಗೆ ಕಾಮರಾ ಕ್ಲಿಕ್ಕಿಸುವುದೊಂದೇ ಗೊತ್ತಿತ್ತು. ಫೋಟೋಗ್ರಾಫಿ ಬಗ್ಗೆ ನನ್ನ ಅಜ್ಞಾನ, ನಿರಕ್ಷರತೆ ಏನೇ ಇದ್ದರೆ ಫೋಟೊ ತೆಗೆಯುವವನ ಹಂಬಲ ಇದ್ದದ್ದು ಸುಳ್ಳಲ್ಲ.

ಯಾವುದೇ ಒಂದು ಜಾತ್ರೆಯಲ್ಲಿರಬೇಕು, ಕೇವಲ ನಲವತ್ತೈದು ರೂಪಾಯಿಗೆ ಕೊಂಡಿದ್ದ ಕ್ಯಾಮರಾ ಸನ್ನತಿಯ ಉತ್ಖನನದಂತಹ ಅತ್ಯಂತ ಮಹತ್ವದ ವಿಷಯದಲ್ಲಿ ಉಪಯೋಗಕ್ಕೆ ಬಂದದ್ದು ಆಶ್ಚರ್ಯವೇ ಆಗಿತ್ತು. ಇಲ್ಲಿಯೂ ನನ್ನ ಅದೃಷ್ಟ ನನಗೆ ಸಾಥ್ ನೀಡಿತ್ತು. ಸುಮಾರು ಫೋಟೋಗಳೆಲ್ಲ ಸಾಧಾರಣಾ ಚೆನ್ನಾಗಿ ಬಂದಿದ್ದವು. ನಾನು ಮತ್ತು ಕಾಗಲ್ಕರ್ ಅವೇ ಫೋಟೋಗಳನ್ನು ನಮ್ಮ ಲೇಖನಕ್ಕೆ ಬಳಸಿಕೊಂಡೆವು. ಸನ್ನತಿ ಉತ್ಖನನದ ಉದ್ದೇಶ ಮತ್ತು ಮಹತ್ವದ ಕುರಿತಾಗಿ ನಾವು ಬರೆದ ವರದಿಗಳೇ ಮೊದಲ ವರದಿಗಳಾಗಿದ್ದವು.

ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆ (Archeological Survey of India) ಲಂಡನ್ನಿನ ದಕ್ಷಿಣ ಏಶಿಯ, ಅಧ್ಯಯನ ಸಂಸ್ಥೆಯೊಂದಿಗೆ ಮೂರು ವರುಷಗಳ ಅವಧಿಯ ಒಪ್ಪಂದವನ್ನು ಮಾಡಿಕೊಂಡು ೧೯೮೬ ರಿಂದ ಸನ್ನತಿಯಲ್ಲಿ ಉತ್ಖನನಾ ಕಾರ್ಯಯೋಜನೆಯನ್ನು ಕೈಕೊಂಡಿತ್ತು. ಉತ್ಖನನಾ ಯೋಜನೆಯ ಮುಖ್ಯಸ್ಥರಾದ ಜೇಮ್ಸ್ ಹಾವೆಲ್ ಶ್ರೀಲಂಕಾದಲ್ಲಿ ಬೌದ್ಧ ನೆಲೆಗಳಿಗೆ ಸಂಬಂಧಿಸಿದಂತೆ ಇಂತಹುದೆ ಉತ್ಖನನಗಳನ್ನು ಕೈಕೊಂಡಿದ್ದ ಸಾಕಷ್ಟು ಅನುಭವ

ಉಳ್ಳವರು. ಭಾರತ ಬುದ್ಧನ ನಾಡೇ ಆಗಿದ್ದರೂ ಬೌದ್ಧನೆಲೆಗಳ ಉತ್ಖನನದಲ್ಲಿ ಭಾರತೀಯ ಪರಿಣತರು ಇಲ್ಲದಿರುವುದನ್ನು ಸನ್ನತಿಯ ಉತ್ಖನನ ತೋರಿಸಿಕೊಡುತ್ತದೆ.

ಈ ಮುಂಚೆ ಕರ್ನಾಟಕದಲ್ಲಿ ಬೌದ್ಧನೆಲೆಗಳು ಇದ್ದಾವೆಂಬ ಕಲ್ಪನೆಯೂ ಇರಲಿಲ್ಲ. ಜೈನ ಸಂಸ್ಕೃತಿಗೆ ಪ್ರಸಿದ್ಧವಾಗಿರುವ ಕರ್ನಾಟಕ ಜೈನಧರ್ಮದ ಸಮಕಾಲೀನ ಧರ್ಮವಾಗಿದ್ದ ಬೌದ್ಧ ಧರ್ಮದ ಪ್ರಭಾವ ಕರ್ನಾಟಕದಲ್ಲಿ ಇಲ್ಲವೇ ಇಲ್ಲ ಎಂದು ಮೊದಲು ನಂಬಲಾಗಿತ್ತು. ಸನ್ನತಿಯ ಬಗ್ಗೆ ಕೆಲಮಹನೀಯರು ಕೈಕೊಂಡ ಸಂಶೋಧನೆ ಮತ್ತು ೧೯೮೬ ರ ಉತ್ಖನನ ಈ ಎಲ್ಲ ನಂಬುಗೆಯನ್ನು ಹುಸಿಯಾಗಿಸಿದ್ದವು. ಕರ್ನಾಟಕ ಬೌದ್ಧರ ನೆಲೆವೀಡಾಗಿತ್ತು ಎಂಬುದಕ್ಕೆ ಸನ್ನತಿ ಸಜೀವ ಸಾಕ್ಷಿಯಾಗಿ ಆವಿರ್ಭವಿಸಿತ್ತು.

ಕಲಬುರಗಿಯ ಖ್ಯಾತ ಸಂಶೋಧಕರಾದ ಕಪಟರಾಳ ಕೃಷ್ಣರಾವ್ ೧೯೫೬ರ ಹಿಂದೆಯೇ ಸನ್ನತಿ ಮತ್ತು ಸುತ್ತ-ಮುತ್ತಲ ಪ್ರದೇಶಗಳಲ್ಲಿ ಕಂಡುಬರುವ ವಿಶಿಷ್ಟ ರೀತಿಯ ಮಣ್ಣುಗುಡ್ಡೆಯ ರಚನೆಗಳು ಬೌದ್ಧ ಸ್ತೂಪಗಳನ್ನು ಹೋಲುತ್ತವೆ ಎಂದೂ, ಅವುಗಳ ಉತ್ಖನನ ನಡೆಯಬೇಕೆಂದೂ ಪ್ರತಿಪಾದಿಸಿದ್ದರು. ನಂತರ ನಡೆಸಿದ ತನಿಖೆ -ಗಳಿಂದ ಬುದ್ಧಪಾದವನ್ನು ಹೊಂದಿದ ಕೆಲವು ಶಿಲ್ಪಗಳು ಸನ್ನತಿಯಲ್ಲಿ ಪತ್ತೆಯಾದವು.

ಇದಾದ ಕೆಲವು ವರ್ಷಗಳ ನಂತರ ಮೈಸೂರು ವಿಶ್ವವಿದ್ಯಾಲಯದ ಪ್ರಾಚೀನ ಇತಿಹಾಸ ವಿಭಾಗದ ನಾಗರಾಜ ಮತ್ತು ಡಾ॥ ಎಂ. ಶೇಷಾದ್ರಿ ಹಾಗೂ ಕರ್ನಾಟಕ ವಿಶ್ವವಿದ್ಯಾಲಯದ ಖ್ಯಾತ ಇತಿಹಾಸ ಸಂಶೋಧಕ ಡಾ. ಪಿ.ಬಿ. ದೇಸಾಯಿ ಸನ್ನತಿಯ ಬೌದ್ಧ ಸಂಬಂಧ ಕುರಿತಾಗಿ ಕೆಲವು ಸಂಶೋಧನಾ ಪ್ರಬಂಧಗಳನ್ನು ಮಂಡಿಸಿದರು.

ಇವೆಲ್ಲವಕ್ಕೆ ಪೂರಕವಾಗಿ ಉತ್ಖನನ ಕಾರ್ಯ ಆರಂಭವಾಗಲು ಎರಡು ದಶಕಗಳೇ ಬೇಕಾಯಿತು. ಸನ್ನತಿ ಉತ್ಖನನದಲ್ಲಿ ಎಂಟು ಮೀಟರ್ ಎತ್ತರ ಮತ್ತು ೫೫ ಮೀಟರ್ ವ್ಯಾಸದ ಒಂದು ಬೌದ್ಧ ಸ್ಮಾರಕ ಪತ್ತೆಯಾಯಿತು. ಚಂದ್ರಲಾಪರಮೇಶ್ವರಿ ದೇವಸ್ಥಾನದ ಸುತ್ತಲೂ ಕಡೆಯ ಪಕ್ಷ ನಾಲ್ಕು ಸ್ತೂಪಗಳು ದೊರೆಯಬಹುದೆಂದು ನಿರೀಕ್ಷಿಸಲಾಗಿತ್ತು.

ಜೇಮ್ಸ್ ಹಾವೆಲ್ ಅವರ ಪ್ರಕಾರ ಸಾಂಚಿ ಮತ್ತು ಸಾರಾನಾಥದಲ್ಲಿ ದೊರೆತ ಸ್ತೂಪಗಳಿಗಿಂತಲೂ ಸನ್ನತಿಯಲ್ಲಿ ದೊರೆತ ಸ್ತೂಪ ವಿಶಿಷ್ಟವಾಗಿದೆ. ಸನ್ನತಿಯ ಬೌದ್ಧ ವಿಹಾರ ಸಾಂಚಿ, ಸಾರಾನಾಥಗಳಲ್ಲಿ ಕಂಡು ಬರುವ ಬೌದ್ಧ ವಿಹಾರಗಳಷ್ಟು

ಆಡಂಬರಗಳಿಂದ ಕೂಡಿಲ್ಲವಾದರೂ ಅದು ಅಸಾಮಾನ್ಯ ಬೃಹತ್ ಗಾತ್ರದ್ದಾಗಿದೆ. ಅವರ ನಿರ್ಮಾಣಕ್ಕೆ ಹಲವು ಮುಖಗಳಿವೆ. ಬೌದ್ಧ ವಿಹಾರದ ಸುತ್ತಲೂ ಒಂದು ಉದ್ದನೆಯ ಮಾರ್ಗವಿದ್ದು ಯಾತ್ರಾರ್ಥಿಗಳು ಅಲ್ಲಿ ಸ್ವಚ್ಛಂದವಾಗಿ ವಿಹರಿಸುವುದಕ್ಕೆ ಅವಕಾಶ ಮಾಡಿಕೊಡಲೆಂಬಂತೆ ಈ ದೊಡ್ಡ ಗಾತ್ರದ ವಿಹಾರದಲ್ಲಿ ಉದ್ದನೆಯ ಮಾರ್ಗ ನಿರ್ಮಿಸಿರಬಹುದೆಂದು ಭಾವಿಸಲಾಗಿದೆ. ಸ್ತೂಪದ ಒಳಗಡೆ ವ್ಯವಸ್ಥಿತವಾಗಿ ಕಟ್ಟಲ್ಪಟ್ಟ ಇಟ್ಟಿಗೆಯ ಗೋಡೆ ಮತ್ತು ಅದಕ್ಕೆ ಸಮಾನಾಂತರವಾಗಿ ಒಂದು ಮಣ್ಣು ಗೋಡೆ ಕಂಡುಬರುತ್ತದೆ.

ಇಲ್ಲಿಯ ಶಿಲಾ ಲೇಖಗಳ ಶೈಲಿ ಹಾಗೂ ಇಲ್ಲಿ ದೊರೆತಿರುವ ನಾಣ್ಯ, ಮಣಿ, ಉಂಗುರ ಇತ್ಯಾದಿಗಳು ಶಾತವಾಹನರ ಕಾಲಕ್ಕೆ ಸೇರಿದವುಗಳೆಂದು ಹೇಳಲಾಗಿದೆ.

ನಿರಂತರ ಭೂಮಿಯ ಉಳುಮೆಯಿಂದಾಗಿ ನಾಲ್ಕರಲ್ಲಿ ಒಂದು ಸ್ತೂಪ ನಾಶಗೊಂಡಿದೆ. ಸನ್ನತಿ ಪ್ರದೇಶದ ಭೂಭಾಗದ ಲಕ್ಷಣಗಳನ್ನು ಗಮನಿಸಿದರೆ, ಭೀಮಾ ನದಿಯಿಂದ ಉಂಟಾಗಿರಬಹುದಾದ ಒಂದು ವಕ್ರ ತಿರುವಿನ ನಡುಗಡ್ಡೆಯಲ್ಲಿ ಬೌದ್ಧ ಸಂಸ್ಕೃತಿ ನೆಲೆಯೂರಿತ್ತೆಂದು ಭಾವಿಸಲು ಅಡ್ಡಿಯಿಲ್ಲ ಎಂಬುದು ಜೇಮ್ಸ್ ಹಾವೆಲ್ಸ್ ಅವರ ಅಭಿಪ್ರಾಯ. ಅವರ ಪ್ರಕಾರ ಸನ್ನತಿಯಲ್ಲಿ ದೊರೆತ ನಾಲ್ಕು ಸ್ತೂಪಗಳೂ ಸಮಕಾಲೀನವಲ್ಲ.

ನಾನು ಕಲಬುರಗಿಗೆ ಹೊಸದಾಗಿ ಬಂದ ದಿನಗಳಲ್ಲಿ ನನಗೆ ಸನ್ನತಿಯ ದರ್ಶನ ಮಾಡಿಸಿ ಅದರ ಪ್ರಾಗೈತಿಹಾಸಿಕ ಮಹತ್ವವನ್ನು ಮನಗಾಣಿಸಿದ ಮಹಾನುಭಾವರು ಕಾಗಲಕರ್. ಸನ್ನತಿಯ ಉತ್ಖನನದ ವಿಷಯವನ್ನು ಅವರೊಬ್ಬರೇ 'ಹಿಂದು' ಪತ್ರಿಕೆಯಲ್ಲಿ (ಆಗ ಅವರು 'ಹಿಂದು' ಪತ್ರಿಕೆಯಲ್ಲಿದ್ದರು) ವಿಶಿಷ್ಟ ವರದಿಯಾಗಿ ಮಾಡಬಹುದಿತ್ತು. ಆದರೆ ಸುದ್ದಿಯ ಅನನ್ಯತೆಯ ಬಗ್ಗೆ, ಅದರ ಸ್ವಾಮ್ಯತ್ವದ ಬಗ್ಗೆ ಅಷ್ಟಾಗಿ ತಲೆಕೆಡಿಸಿಕೊಳ್ಳದಿದ್ದ ಕಾಗಲಕರ್ ತಮಗಿಂತ ಮೂವತ್ತು ವರ್ಷ ಕಿರಿಯವನಾದ ನನ್ನನ್ನು ತಮ್ಮ ಜೊತೆ ಯಾವುದೇ ಏಚು-ಪೇಚಿಲ್ಲದೆ ಕರೆದುಕೊಂಡು ಹೋಗಿ ಒಂದು ಅತ್ಯಂತ ಮಹತ್ವದ ವಿಷಯಕ್ಕೆ ನನ್ನನ್ನು ಒಡ್ಡಿಕೊಳ್ಳುವಂತೆ ಮಾಡಿದ್ದು ಅವರಲ್ಲಿರುವ ಒಂದು ಶ್ರೇಷ್ಠ ಗುಣಕ್ಕೆ ಸಾಕ್ಷಿ.

ಸುದ್ದಿ ಸೂರಣ್ಣ

ಕಾಗಲಕರ್ ಮತ್ತು 'ಸಂಯುಕ್ತ ಕರ್ನಾಟಕ' ೧೯೫೦ ಮತ್ತು ೧೯೬೦ ದಶಕಗಳಲ್ಲಿ ಕಲಬುರಗಿಯಲ್ಲಿ ಒಂದೇ ನಾಣ್ಯದ ಎರಡು ಮುಖಗಳಂತೆ

ಜನಸಾಮಾನ್ಯರಲ್ಲಿ ಹಾಸುಹೊಕ್ಕಾಗಿದ್ದವು. ವಾಸ್ತವವಾಗಿ 'ಸಂಯುಕ್ತ ಕರ್ನಾಟಕ'ದಿಂದ ಕಾಗಲಕರ್ ಅವರಿಗೆ ಒಂದು ಐಡೆಂಟಿ ಪ್ರಾಪ್ತವಾಗಿದ್ದರೂ ಎಷ್ಟೋ ಜನ ಅದನ್ನು ತಿರುವು-ಮುರುವಾಗಿಯೂ ಭಾವಿಸಿದ್ದುಂಟು. ತಮ್ಮ ಎಲ್ಲ ನಿಷ್ಠೆ, ಕಾರ್ಯತತ್ಪರತೆ, ಕಾಯಕ ತತ್ವ, ಮುಂತಾದವುಗಳನ್ನು ಅವರು ಸಂಯುಕ್ತ ಕರ್ನಾಟಕಕ್ಕೆ ಸಂಪೂರ್ಣವಾಗಿ ಧಾರೆ ಎರೆದಿದ್ದರು. ಅಂತೆಯೇ 'ಸಂಯುಕ್ತ ಕರ್ನಾಟಕ'ಕ್ಕೆ ಕಾಗಲಕರ್ ಅವರಿಂದಲೇ ಒಂದು ಐಡೆಂಟಿ ಬಂದಿತ್ತು ಎಂದು ಸಮಾಜದ ಒಂದು ವರ್ಗ ಭಾವಿಸಿದ್ದಲ್ಲಿ ಅದರಲ್ಲಿ ಅತಿಶಯೋಕ್ತಿಯನ್ನೇನೂ ಕಾಣಲಿಕ್ಕಾಗದು. ತಮ್ಮ ಕಾಲದಲ್ಲಿ ಸುದ್ದಿ ಜಗತ್ತಿನಲ್ಲಿ ಏಕಮೇವಾದ್ವಿತೀಯರಾಗಿದ್ದ ಕಾಗಲಕರ್ ಅವರನ್ನು 'ಸುದ್ದಿ ಸೂರಣ್ಣ' ಎಂದೇ ಜನ ಪ್ರೀತಿ, ಅಭಿಮಾನಗಳಿಂದ ಕರೆಯುತ್ತಿದ್ದರು.

ಆಗಿನ ಕಾಲದ ರಾಜಕೀಯ ದಿಗ್ಗಜರಾದ ಮಹದೇವಪ್ಪ ರಾಂಪುರೆ, ಚಂದ್ರಶೇಖರ ಪಾಟೀಲ, ನೀಲಕಂಠರಾವ್ ಪಾಟೀಲ, ಜಗನ್ನಾಥ ಚಂಡ್ರಿರೆ, ವಿರೇಂದ್ರ ಪಾಟೀಲ, ದತ್ತಾತ್ರೇಯ ಅವರಾದಿ, ಅಣ್ಣರಾವ್ ಗಣಮುಖಿ, ಮಹ್ಮದ್ ಅಲಿ, ಶೇರ್ಖಾನ್ ಮುಂತಾದವರೊಂದಿಗೆ ನಿಕಟ ಸ್ನೇಹ, ಸಂಪರ್ಕ ಹೊಂದಿದ್ದ ಕಾಗಲಕರ್ ತಮ್ಮ ಸೌಮ್ಯ ಹಾಗೂ ಪೂರ್ವಾಗ್ರಹ ಪೀಡಿತವಲ್ಲದ ವರ್ತನೆಯಿಂದಾಗಿ ಎಲ್ಲರಿಗೂ ಬೇಕಾದವರಾಗಿದ್ದರು. ಅವರೆಲ್ಲರಿಗೂ ಕಾಗಲಕರ್ ಎಂದರೆ ಪ್ರೀತಿ, ಗೌರವ.

ಈ ದಿಗ್ಗಜರ ಪೈಕಿ ಕೆಲವರನ್ನಂತೂ ಕಾಗಲ್ಕರ್ ಅಗದಿ ಸಲಿಗೆಯಿಂದಲೇ ಮಾತನಾಡಿಸುತ್ತಿದ್ದರು. ಎಷ್ಟರ ಮಟ್ಟಿಗೆ ಎಂದರೆ ಆಪ್ತ ಸ್ನೇಹಿತರೋಪಾದಿಯಲ್ಲಿ ಪರಸ್ಪರ 'ಹೋಗೋ ಬಾರೋ' ಎನ್ನುವಷ್ಟು ಆಪ್ತತೆ ಇತ್ತು. ಸಮಾಜದ ಮತ್ತು ತಾವು ಪ್ರತಿನಿಧಿಸುತ್ತಿದ್ದ ಭಾಗದ ಏಳಿಗೆ, ಶ್ರೇಯೋಭಿವೃದ್ಧಿಗಾಗಿ ಅವರೆಲ್ಲರೂ ದುಂಬಾಲು ಬಿದ್ದು ನಿರ್ಧಿಷ್ಟ ಯೋಜನೆ, ಕಾರ್ಯಕ್ರಮ ಕೈಕೊಳ್ಳುವಂತೆ ಪ್ರೇರೇಪಿಸುತ್ತಿದ್ದರು. ಮಾಜಿ ಸಂಸತ್ ಸದಸ್ಯರಾದ ಶೇರಖಾನರ ಮೇಲೆ ವಿಶೇಷ ಪ್ರಭಾವ ಬೀರಿ ರಾಷ್ಟ್ರಕೂಟರ ರಾಜಧಾನಿಯಾದ ಮಳಖೇಡದ ಐತಿಹಾಸಿಕ ಮಹತ್ವದ ಮೇಲೆ ಬೆಳಕು ಚೆಲ್ಲುವ ಕೆಲವು ಕಾರ್ಯಕ್ರಮಗಳನ್ನು ರೂಪಿಸಿ ಜಾರಿಗೆ ತರುವಲ್ಲಿ ಯಶಸ್ವಿಯಾಗಿದ್ದರು.

ಮುಗಿದ ಋಣಾನುಬಂಧ

'ಸಂಯುಕ್ತ ಕರ್ನಾಟಕ'ದಲ್ಲಿ ಅಪಾರ ನಿಷ್ಠೆ, ಪ್ರಾಮಾಣಿಕತೆ, ವೃತ್ತಿ, ನೈಪುಣ್ಯತೆಯಿಂದ ಸೇವೆಗೈಯ್ಯುವ ಮೂಲಕ ವೆಂಕಟರಾವ್ ಕಾಗಲಕರ್ ಪತ್ರಿಕಾ ವೃತ್ತಿಯ ಮತ್ತು ಪತ್ರಕರ್ತರ ಘನತೆ ಗೌರವಗಳನ್ನು ಹೆಚ್ಚಿಸುವಲ್ಲಿ ಕಾರಣರಾಗಿದ್ದರು. ಪತ್ರಿಕೋದ್ಯಮದ ಪ್ರಥಮ ಅಧ್ಯಾಯವನ್ನು ಕಲಬುರಗಿಯಲ್ಲಿ ಪ್ರಾರಂಭಿಸಿದವರೇ

ಕಾಗಲಕರ್. ಅವರು ಹಾಕಿದ ಅಡಿಪಾಯ ಭದ್ರವಾಗಿದ್ದರಿಂದ ಕಲಬುರಗಿಯಲ್ಲಿ ಪತ್ರಿಕೋದ್ಯಮ ಸೊಗಸಾಗಿ ಬೆಳೆದು ಬರಲು ಕಾರಣವಾಯಿತು. ಯಾವುದೇ ಕ್ಷೇತ್ರದಲ್ಲಿ ಪ್ರಾರಂಭವಾದ ದಿನಗಳು ಬಹಳ ಮಹತ್ವದ್ದಾಗಿರುತ್ತವೆ. ಈ ಪ್ರಾರಂಭದ ದಿನಗಳಲ್ಲಿ ಕಾಗಲಕರ್ ಅವರು ಸನ್ಮಾರ್ಗದಲ್ಲಿ ನಡೆದಿದ್ದರಿಂದಲೇ ಕಲಬರುಗಿಯ ಪತ್ರಿಕೋದ್ಯಮಕ್ಕೆ ಒಂದು ವಿಶ್ವಾಸಾರ್ಹತೆಯ ಮೆರಗು ಬರಲು ಸಾಧ್ಯವಾಯಿತು.

ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಮತ್ತು ಆರ್ಥಿಕವಾಗಿ ತೀರಾ ಶೋಚನೀಯ ಸ್ಥಿತಿಯಲ್ಲಿದ್ದ ಕಲಬುರಗಿಯ ಸಕಾರಾತ್ಮಕ ಪರಿವರ್ತನೆಗಾಗಿ ಅವರು 'ಸಂಯುಕ್ತ ಕರ್ನಾಟಕ' ಪತ್ರಿಕೆಯನ್ನು ಒಂದು ಅತ್ಯಂತ ಪ್ರಬಲ ಅಸ್ತ್ರವನ್ನಾಗಿ ಬಳಸಿಕೊಂಡರು.

ಎಲ್ಲ ಒಳ್ಳೆಯ ಸಂಗತಿಗಳು ಒಂದು ಅಂತ್ಯ ಕಾಣುತ್ತವೆಯಲ್ಲವೆ? ಕಾಗಲಕರ್ ಮತ್ತು ಸಂಯುಕ್ತ ಕರ್ನಾಟಕದ ಅವಿನಾಭವ ಸಂಬಂಧವೂ ಇದಕ್ಕೆ ಹೊರತಾಗಿರಲಿಲ್ಲ. ಪತ್ರಕರ್ತ ಮತ್ತು ಪತ್ರಿಕೆಯ ಋಣಾನುಬಂಧ ಇಪ್ಪತ್ತು ವರ್ಷಗಳ ನಂತರ ಕೊನೆಗೊಂಡಿತು.

೧೯೭೫ರ ಡಿಸೆಂಬರ್‌ನಲ್ಲಿ ಪತ್ರಿಕೆಯ ಆಡಳಿತ ಮಂಡಳಿ ಕಲಬುರಗಿಯಲ್ಲಿ ಓರ್ವ ಪೂರ್ಣಾವಧಿ ವರದಿಗಾರನನ್ನು ನೇಮಕ ಮಾಡಿಕೊಳ್ಳಲು ನಿರ್ಧರಿಸಿತು. 'ಪ್ರಜಾವಾಣಿ' ಪತ್ರಿಕೆ ಪ್ರಾರಂಭವಾಗಿ ಅದರ ಪೂರ್ಣಾವಧಿ ವರದಿಗಾರರು ದೂರ ಮುದ್ರಣ (ಟೆಲಿಪ್ರಿಂಟರ್) ಮೂಲಕ ಸುದ್ದಿ ಕಳುಹಿಸಲು ಆರಂಭಿಸಿದ ಮೇಲೆ ಸಂಯುಕ್ತ ಕರ್ನಾಟಕ ಮೊದಲ ಬಾರಿಗೆ ತನ್ನ ಪ್ರತಿಸ್ಪರ್ಧಿಯಿಂದ ಪೈಪೋಟಿಯನ್ನು ಎದುರಿಸಬೇಕಾಯಿತು. ಪತ್ರಿಕೆಯ ಹುಬ್ಬಳ್ಳಿ ಆವೃತ್ತಿಯ ಸ್ಥಾನಿಕ ಸಂಪಾದಕರಾಗಿದ್ದ ಮತ್ತಿಹಳ್ಳಿ ನಾಗರಾಜರಾವ್ ಅವರು ಕಲಬುರಗಿ ಭಾಗದ ವಿಶೇಷ ವರದಿಗಾರಿಕೆಯನ್ನು ಬಲಪಡಿಸುವುದಕ್ಕಾಗಿ ಅಲ್ಲಿ ಒಬ್ಬ ಸಮರ್ಥ ಪೂರ್ಣಾವಧಿ ವರದಿಗಾರ (Staff Correspondent) ಇರಬೇಕಾದ ಅವಶ್ಯಕತೆಯನ್ನು ಮನಗಂಡರು.

ಏತನ್ಮಧ್ಯೆ ಕಲಬುರಗಿ 'ಬೀದರ್-ರಾಯಚೂರ್ ಜಿಲ್ಲೆಗಳಿಗಾಗಿ 'ಸಂಯುಕ್ತ ಕರ್ನಾಟಕ'ದ ಪ್ರತ್ಯೇಕ ಆವೃತ್ತಿಯನ್ನು ಪ್ರಾರಂಭಿಸಲಾಗಿತ್ತು. ಈ ಆವೃತ್ತಿ ಆರಂಭವಾದ ಮೇಲೆ ಪತ್ರಿಕೆ ಈ ಭಾಗಗಳಿಗೆ ಬೇಗನೆ ತಲುಪುವ ವ್ಯವಸ್ಥೆಯನ್ನು ಮಾಡಲಾಯಿತು. ಈ ಮೂರು ಜಿಲ್ಲೆಗಳಲ್ಲಿ ಈ ಮುಂಚೆ ಮಧ್ಯಾಹ್ನದ ನಂತರ ಬರುತ್ತಿದ್ದ ಪತ್ರಿಕೆ ಈಗ ಬೆಳಿಗ್ಗೆ ೮ ಗಂಟೆಗೆಲ್ಲ ಬರುವಂತಾಯಿತು. ಬೀದರಗೆ ಮಾತ್ರ ಬೇಗ ಎಂದರೆ ಮಧ್ಯಾಹ್ನದ ಸುಮಾರಿಗೇ ಬರುತ್ತಿತ್ತು! ಪತ್ರಿಕೆ ಒಂದು ನಿರ್ಧಿಷ್ಟ ಸ್ಥಳಕ್ಕೆ ಬೇಗನೆ

ಬರುವುದರ ಹಿಂದಿನ ಉದೇಶ ಆಯಾ ಭಾಗದ ಸುದ್ದಿಗಳು, ವಿಶೇಷ ವರದಿಗಳು ಹೆಚ್ಚು ಹೆಚ್ಚಾಗಿ ಅದರಲ್ಲಿರಬೇಕೆಂಬುದೇ ಆಗಿರುತ್ತದೆ. ಇದರಿಂದಾಗಿ ಪತ್ರಿಕೆಯ ಪ್ರಸಾರ ಸಂಖ್ಯೆ ಹೆಚ್ಚುತ್ತದೆ. ಪ್ರಸಾರ ಸಂಖ್ಯೆ ಹೆಚ್ಚಿದರೆ ಜಾಹಿರಾತು ಆದಾಯವೂ ಹೆಚ್ಚೀತು. ಇದು ಯಾವುದೇ ಪತ್ರಿಕೆಯ ಆಡಳಿತ ಮಂಡಳಿಯ ಲೆಕ್ಕಾಚಾರ.

ಪತ್ರಿಕೆಯ ವರದಿಗಾರಿಕೆಯನ್ನು ಬಲಪಡಿಸಲು ಜಿಲ್ಲಾಕೇಂದ್ರಸ್ಥಾನದಲ್ಲಿ ಪೂರ್ಣಾವಧಿ ವರದಿಗಾರನಿರುವುದು ಅಗತ್ಯವೂ, ಅನಿವಾರ್ಯವೂ ಆಗುತ್ತದೆ. ಕಾಗಲಕರ್ ಅವರು 'ಸಂಯುಕ್ತ ಕರ್ನಾಟಕ'ದಲ್ಲಿ ಇಪ್ಪತ್ತು ವರ್ಷಕಾಲ ಸೇವೆ ಸಲ್ಲಿಸಿದ್ದರೂ ಅವರು ಅರೆಕಾಲಿಕ ವರದಿಗಾರರಾಗಿಯೇ ಇದ್ದರು. ಅವರ ಪ್ರಮುಖ ಉದ್ಯೋಗ ಎಂ.ಎಸ್.ಕೆ. ಮಿಲ್ಲಿನಲ್ಲಿ ಇದ್ದು ಅವರು ಪತ್ರಿಕಾ ವೃತ್ತಿಯನ್ನು ಅರೆಕಾಲಿಕವಾಗಿಯೇ ಅತ್ಯಂತ ಸಮರ್ಥವಾಗಿ ನಿರ್ವಹಿಸುತ್ತಿದ್ದರು. ಕಾಗಲಕರ್ ಅವರಿಗೆ ಪೂರ್ಣಾವಧಿ ವರದಿಗಾರನಾಗಬೇಕೆಂಬ ಅಭಿಲಾಷೆ ಇತ್ತೋ ಇಲ್ಲವೋ ಗೊತ್ತಿಲ್ಲ. ಪತ್ರಿಕೆಯ ಆಡಳಿತ ಮಂಡಳಿ ಅವರನ್ನೇ ಪೂರ್ಣಾವಧಿ ವರದಿಗಾರರನ್ನಾಗಿ ನೇಮಕ ಮಾಡಿಕೊಳ್ಳಬೇಕೆಂಬ ಚಿಂತನೆಯನ್ನು ಮಾಡಿರಲಿಕ್ಕಿಲ್ಲ. ಎಂ.ಎಸ್.ಕೆ. ಮಿಲ್ಲಿನ ಕಾಯಂ ಉದ್ಯೋಗವನ್ನು ಬಿಟ್ಟು ಆರ್ಥಿಕವಾಗಿ ಸುಭದ್ರವಲ್ಲದ ಪತ್ರಿಕೆಯ ಪೂರ್ಣಾವಧಿ ವರದಿಗಾರಿಕೆಯನ್ನು ಕೈಕೊಳ್ಳುವ ಅಪಾಯದ ಧೈರ್ಯವನ್ನು ಕಾಗಲಕರ್ ಪ್ರಾಯಃ ಮಾಡಿರಲಿಕ್ಕಿಲ್ಲ. ಅವರು ತುಂಬು ಸಂಸಾರವನ್ನು ನಡೆಸುತ್ತಿದ್ದರು. ಸಾಂಸಾರಿಕ ಒತ್ತಡಗಳು, ದುರ್ಬಲ ಆರ್ಥಿಕ ಹಿನ್ನೆಲೆಯ ಕಾರಣಗಳಿಂದಾಗಿ ಅವರು ತಮ್ಮ ಕುಟುಂಬದ ಒಟ್ಟಾರೆ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು ಬೇರೊಂದು ನಿಶ್ಚಿತವಲ್ಲದ ಔದ್ಯೋಗಿಕ ಸಾಹಸಕ್ಕೆ ಕೈಹಾಕಲು ಹಿಂದೇಟು ಹಾಕಿರುವ ಸಾಧ್ಯತೆ ಇಲ್ಲದಿಲ್ಲ.

ಕಲಬುರ್ಗಿಯಲ್ಲಿ ಅಧಿಕೃತವಾಗಿ ಪೂರ್ಣಾವಧಿ ವರದಿಗಾರನ ಹುದ್ದೆ ಮಂಜೂರು ಆಗುವತನಕ ಹುಬ್ಬಳ್ಳಿಯಿಂದ ಒಬ್ಬ ವರದಿಗಾರನನ್ನು ಕಳುಹಿಸಲು ನಿರ್ಧರಿಸಲಾಯಿತು. ಪತ್ರಿಕೆಯ ಹುಬ್ಬಳ್ಳಿ ಆವೃತ್ತಿಯಲ್ಲಿ ಉಪ ಸಂಪಾದಕರಾಗಿದ್ದ ವೈ.ಎನ್. ಜೋಶಿ ಅವರನ್ನು ಕಲಬುರಗಿಗೆ ಕಳುಹಿಸಲು ನಿರ್ಧರಿಸಲಾಯಿತು. ಅವರು ಜನವರಿ ೧, ೧೯೭೬ ರಿಂದ ಕಲಬುರಗಿಗೆ ಕಾರ್ಯನಿರ್ವಹಿಸಲು ಆದೇಶ ನೀಡಲಾಯಿತು. ಜೋಶಿ ಅವರು ಈಗಾಗಲೇ ಕಾರ್ಯನಿರ್ವಹಿಸುತ್ತಿರುವ ಅರೆಕಾಲಿಕ ವರದಿಗಾರರಾದ ಬಿ.ಎನ್. ಕಾಗಲಕರ್ ಅವರ ಸಹಕಾರದಿಂದ ಕೆಲಸ ಮಾಡಲು ತಿಳಿಸಲಾಗಿತ್ತು.

ವೈ.ಎನ್. ಜೋಶಿ ಕಲಬುರಗಿ ಕಾರ್ಯಾಲಯಕ್ಕೆ ಆಗಮಿಸಿದರು. ಆದರೆ ಕಲಬುರಗಿ ಕಾರ್ಯಾಲಯದಿಂದ ಕಾಗಲಕರ್ ನಿರ್ಗಮಿಸಿದರು! ಅತ್ಯಂತ ಸ್ವಾಭಿಮಾನಿಯಾಗಿದ್ದ ಕಾಗಲಕರ್ ಅವರಿಗೆ ಆಡಳಿತ ಮಂಡಳಿಯ ನಿರ್ಧಾರ ಘಾಸಿಗೊಳಿಸಿತ್ತು. ಅವರನ್ನು 'ಸಂಯುಕ್ತ ಕರ್ನಾಟಕ' ವರದಿಗಾರಿಕೆಯಿಂದ ಬಿಡುಗಡೆಗೊಳಿಸಲಿಲ್ಲವಾದರೂ ಆಡಳಿತ ಮಂಡಳಿಯ ನಿರ್ಧಾರದ ಹಿಂದಿನ ಉದ್ದೇಶವನ್ನು ಅರಿಯದಷ್ಟು ಮುಗ್ಧರಾಗಿರಲಿಲ್ಲ ಕಾಗಲಕರ್. ಇನ್ನೊಬ್ಬ ಪೂರ್ಣಾವಧಿ ವರದಿಗಾರನ ನೇಮಕ ಎಂದರೆ ಇನ್ನು ತಮ್ಮ ಸೇವೆಯ ಅಗತ್ಯವಿಲ್ಲ ಎಂದೇ ಕಾಗಲಕರ್ ಭಾವಿಸಿದರು. 'ಸಂಯುಕ್ತ ಕರ್ನಾಟಕ'ದಿಂದ ಕಾಲ್ತೆಗೆಯುವಂತೆ ತಮಗೆ ಬಂದ ಪರೋಕ್ಷ ಸೂಚನೆಯನ್ನು ಕಾಗಲಕರ್ ಸ್ವಲ್ಪ ವ್ಯಗ್ರತೆಯಿಂದ ಸ್ವೀಕರಿಸಿದರೂ ಅದನ್ನು ಪ್ರತಿಭಟಿಸುವ ಗೊಡವೆಗೆ ಹೋಗಲಿಲ್ಲ. ಪ್ರತಿಭಾ ಸಂಪನ್ನರೂ, ಸುಸಂಸ್ಕೃತರೂ ಆಗಿದ್ದ ಕಾಗಲಕರ್ ತಮ್ಮ ಉತ್ತರಾಧಿಕಾರಿಯಾಗಿ ಬಂದವರೊಂದಿಗೆ ಅಸಭ್ಯತೆಯಿಂದ ವರ್ತಿಸುವುದಾಗಲೀ, ಅವರಿಗೆ ತೊಂದರೆ ಕೊಡುವುದಾಗಲೀ ಎಂದೂ ಮಾಡಲಿಲ್ಲ. ತಮಗೆ ಒಂದು ರೀತಿಯಲ್ಲಿ ಅನ್ಯಾಯವಾಗಿದ್ದರೂ ಪತ್ರಿಕೆಯ ಆಡಳಿತ ಮಂಡಳಿಯ ನಿರ್ಧಾರವನ್ನು ಅವರು ಕ್ರೀಡಾ ಮನೋಭಾವದಿಂದಲೇ ಸ್ವೀಕರಿಸಿದರು.

ಕಲಬುರಗಿಯಲ್ಲಿ ವೈ.ಎನ್. ಜೋಶಿ ಅವರ ನೇಮಕ ಕೇವಲ ಹಂಗಾಮಿ ವ್ಯವಸ್ಥೆಯಾಗಿತ್ತು. ನಾಲ್ಕೈದು ತಿಂಗಳು ಕಾರ್ಯನಿರ್ವಹಿಸಿದ ನಂತರ ಕೆ.ರಾಜರಾವ್ ಅವರು 'ಸಂಯುಕ್ತ ಕರ್ನಾಟಕ'ದ ಮೊದಲ ಪೂರ್ಣಾವಧಿ ವರದಿಗಾರನಾಗಿ ಕಲಬುರಗಿಗೆ ಆಗಮಿಸಿದರು.

೧೯೫೫ ರಿಂದ ೧೯೭೫ ರ ವರೆಗೆ ಇಪ್ಪತ್ತು ವರ್ಷ ದೀರ್ಘಕಾಲ ವರದಿಗಾರನಾಗಿ ಸೇವೆ ಸಲ್ಲಿಸಿ ಕಲಬುರಗಿ ಮತ್ತು ಸುತ್ತ-ಮುತ್ತಲ ಪ್ರದೇಶದಲ್ಲಿ ಪತ್ರಿಕೆಯನ್ನು ಕಟ್ಟಿ ಬೆಳೆಸಿ, ಕೈಹಿಡಿದು ನಡೆಸಿದ ಕಾಗಲಕರ್ ಅವರೊಂದಿಗೆ ಪತ್ರಿಕೆಯ ಆಡಳಿತ ವರ್ಗ ನಡೆದುಕೊಂಡ ರೀತಿ ಅನೇಕರಿಗೆ ಉಚಿತವಾಗಿ ಕಾಣಲಾರದು. ಆದರೆ ಅದೆಲ್ಲವೂ ಪತ್ರಿಕೋದ್ಯಮದಲ್ಲಿ ಮಾಮೂಲು. ಪತ್ರಿಕಾ ವರದಿಗಾರನ ಕೆಲಸ ಒಂದು thankless job ಎಂದೇ ಕರೆಯಲಾಗುತ್ತದೆ. 'ಕಸ್ತೂರಿ' ಮಾಸ ಪತ್ರಿಕೆಗಾಗಿ ತಮ್ಮ ಜೀವನವನ್ನೇ ತೇಯ್ದ ಪಾ.ವೆಂ. ಆಚಾರ್ಯ ಅವರು ಸಂಪಾದಕ ಸ್ಥಾನದಿಂದ ನಿವೃತ್ತರಾದ ಮೇಲೆ ಅವರಿಗೆ ಪೂರೈಸಲಾಗುತ್ತಿದ್ದ 'ಕಸ್ತೂರಿ'ಯ ಉಚಿತ ಪ್ರತಿಯನ್ನು ಬಂದು ಮಾಡಲಾಯಿತಂತೆ!

'ಸಂಯುಕ್ತ ಕರ್ನಾಟಕ'ದ ಈ ಭಾಗದ ಮೊದಲ ವರದಿಗಾರನಾಗಿದ್ದ ಕಾಗಲಕರ್ ಪತ್ರಿಕೆಯ ಪ್ರತಿಷ್ಠೆ, ಖ್ಯಾತಿ, ಗೌರವಕ್ಕೆ ಕುಂದುಂಟಾಗುವ ರೀತಿಯಲ್ಲಿ ವರ್ತಿಸಿದ ಒಂದೂ ನಿದರ್ಶನವಿಲ್ಲ. ತಮ್ಮ ನಿಸ್ಪೃಹ ಸೇವೆಯಿಂದ ತಾವು ಬೆಳೆಯುವುದರ ಜೊತೆಗೆ ಸಂಯುಕ್ತ ಕರ್ನಾಟಕವನ್ನು ಬೆಳೆಸಿದರು. ತನ್ನ ಪ್ರಾರಂಭದ ದಿನಗಳಲ್ಲಿ ಪತ್ರಿಕೆಯನ್ನು ಕೈಹಿಡಿದು ನಡೆಸಿದ ಕಾಗಲಕರ್ ಅವರಿಗೆ 'ಸಂಯುಕ್ತ ಕರ್ನಾಟಕ'ದ ಒಡೆಯರು ಋಣಿಯಾಗಿರಬೇಕಾದದ್ದು ಅವರ ಧರ್ಮವಲ್ಲದೆ ಮತ್ತೇನು ಅಲ್ಲ. ಕಲಬುರಗಿಯಲ್ಲಿ ಕಾಗಲಕರ್ ಮತ್ತು ಸಂಯುಕ್ತ ಕರ್ನಾಟಕದ ನಡುವಿನ ಅಂತರ ಒಂದು ಕೂದಲೆಳೆಯಷ್ಟು ಮಾತ್ರ. ಸಂಯುಕ್ತ ಕರ್ನಾಟಕದಲ್ಲಿ ಕಾಗಲಕರ್ ಅವರಿಗಿದ್ದ ಅಚಲ ನಿಷ್ಠೆ ಬೇರೆ ಯಾವುದೇ ಪತ್ರಿಕೆಯಲ್ಲಿ ಕೆಲಸ ಮಾಡುವ ಯಾವುದೇ ವರದಿಗಾರನಲ್ಲಿ ಕಾಣುವುದು ತೀರಾ ವಿರಳ.

ಕಾಗಲಕರ್ ಅವರು ತಮಗೆ ದೊರೆತ ಸದಾವಾಕಾಶವನ್ನು ಅತ್ಯಂತ ಪರಿಣಾಮಕಾರಿಯಾಗಿ ಬಳಸಿಕೊಂಡರು. 'ಸಂಯುಕ್ತ ಕರ್ನಾಟಕ'ದ ಜನಪ್ರಿಯ ಸೋದರಿ ಸಾಪ್ತಾಹಿಕ 'ಕರ್ಮವೀರ'ದಲ್ಲಿ ಅವರು ಅನೇಕ ಲೇಖನಗಳನ್ನು ಬರೆದಿದ್ದಾರೆ.

ಎರಡು ದಶಕಗಳ ಅವಧಿಯಲ್ಲಿ ಕಾಗಲಕರ್ ಅವರು ಕೇವಲ ತಾವು ಬೆಳೆದು, ಸಂಯುಕ್ತ ಕರ್ನಾಟಕವಷ್ಟನ್ನೇ ಬೆಳೆಸಲಿಲ್ಲ. ಸಂಯುಕ್ತ ಕರ್ನಾಟಕದ ಮೂಲಕ ಅವರು ಕಲಬುರಗಿಯನ್ನು ಬೆಳೆಸಿದರು.

ಕಾಗಲಕರ್ 'ಹಿಂದು' ಪರ್ವ

ಆದದೆಲ್ಲವೂ ಒಳ್ಳೆಯದೇ ಎಂಬುದು ಒಂದು ಉದಾತ್ತವಾದ, ಸಕಾರಾತ್ಮಕವಾದ ಆಧ್ಯಾತ್ಮಿಕ ಧೋರಣೆ. ಅದು ವೆಂಕಟರಾವ್ ಕಾಗಲಕರ್ ಅವರ ವಿಷಯದಲ್ಲಿ ಅಕ್ಷರಶಃ ಸತ್ಯ. ಅವರು ಯಾವುದನ್ನು ಕಳೆದುಕೊಂಡರೋ ಕೆಲವೇ ದಿನಗಳಲ್ಲಿ ಅದಕ್ಕಿಂತಲೂ ಉತ್ತಮವಾದುದ್ದನ್ನು ಪಡೆದರು! ಬದುಕಿನಲ್ಲಿ ಮೌಲ್ಯಗಳನ್ನು ಗೌರವಿಸಿ ಸಕಾರಾತ್ಮಕ ಧೋರಣೆಯನ್ನು ಮೈಗೂಡಿಸಿಕೊಂಡರೆ ಧರ್ಮ ಅಂತಹವರನ್ನು ಕೈ ಬಿಡುವುದಿಲ್ಲ.

'ಸಂಯುಕ್ತ ಕರ್ನಾಟಕ'ದಿಂದ ಸಂತ್ರಸ್ತರಾದ ಮೇಲೆ ಕಾಗಲಕರ್ ವಿಚಲಿತರಾದದ್ದು ಸುಳ್ಳಲ್ಲ. ಅವರು ವಿಚಲಿತರಾದದ್ದು ಆರ್ಥಿಕ ಕಾರಣದಿಂದ ಖಂಡಿತ ಅಲ್ಲ. ಪತ್ರಿಕೆಯ ಅರೆಕಾಲಿಕ ವರದಿಗಾರಿಕೆಯಿಂದ ಅವರಿಗೆ ಅಲ್ಪ ಸ್ವಲ್ಪ ಆದಾಯ ಇದ್ದಿರಬಹುದಾದರೂ, ಅವರಿಗೆ ಅದರಿಂದ ಅಷ್ಟಿಷ್ಟು ಅನುಕೂಲವಾಗಿದ್ದಿರ

-ಬಹುದಾದರೂ, ಅದೊಂದೇ ಕಾರಣ ಅವರಿಗೆ ಆಘಾತ ಉಂಟು ಮಾಡಿರಲಿಲ್ಲ. ಅವರು ಮೂಲತಃ ಪತ್ರಕರ್ತರೇ. ಆದರೆ ಹೊಟ್ಟೆಪಾಡಿಗಾಗಿ ಬೇರೊಂದು ಕಾಯಕಕ್ಕೆ ಅಂಟಿಕೊಂಡಿದ್ದರು. ಪತ್ರಿಕಾ ವೃತ್ತಿಯೇ ಅವರಿಗೆ ಕೌಟುಂಬಿಕ ಆರ್ಥಿಕ ಭದ್ರತೆಯನ್ನು ಒದಗಿಸಬಹುದಾಗಿದ್ದರೆ ಅವರು ಉಪಜೀವನದ ಬೇರೊಂದು ಮಾರ್ಗವನ್ನು ಹಿಡಿಯುವ ಅಗತ್ಯವೇ ಇರಲಿಲ್ಲ.

ಎರಡು ದಶಕಗಳ ಕಾಲ ಅತ್ಯಂತ ಕ್ರಿಯಾಶೀಲವಾಗಿ, ಉತ್ಸುಕತೆಯಿಂದ ಪತ್ರಕರ್ತನಾಗಿ ಕಾರ್ಯನಿರ್ವಹಿಸಿದ ಕಾಗಲಕರ್ ಅವರಿಗೆ ಇದ್ದಕ್ಕಿದ್ದ ಹಾಗೆ ನಿಷ್ಕ್ರಿಯರಾಗುವುದು ದುಃಖದ ವಿಷಯವಾಗಿತ್ತು. ಅವರು 'ಸಂಯುಕ್ತ ಕರ್ನಾಟಕ'ವನ್ನು ಕಳೆದುಕೊಂಡ ಮೇಲೆ ಆಘಾತಕ್ಕೀಡಾಗಿದ್ದರೂ ಎದೆಗುಂದಿರಲಿಲ್ಲ. ಅವರು ಆಶಾವಾದಿ-ಯಾಗಿದ್ದರು. ಮತ್ತೊಮ್ಮೆ ಸಂಯುಕ್ತ ಕರ್ನಾಟಕಕ್ಕೆ ಮರಳುವ ಸಾಧ್ಯತೆ ಇರಲಿಲ್ಲ. ಬೇರೊಂದು ಪತ್ರಿಕೆಯಲ್ಲಿ ಅವಕಾಶದ ಅನ್ವೇಷಣೆಯಲ್ಲಿ ಅವರು ತೊಡಗಿದರು.

ಈ ಮಧ್ಯೆ ಕಲಬುರಗಿಯಲ್ಲಿ ಮದರಾಸಿನಿಂದ ಪ್ರಕಟವಾಗಿ ಬರುತ್ತಿದ್ದ ಆಂಗ್ಲ ದಿನ ಪತ್ರಿಕೆ 'ದಿ ಹಿಂದು' ವರದಿಗಾರರಾಗಿದ್ದ ವೆಂಕಯ್ಯ ಎಂಬುವವರು ಅದಾವುದೋ ಕಾರಣದಿಂದ ಕೆಲಸವನ್ನು ತೊರೆದಿದ್ದರು. ಆ ಪತ್ರಿಕೆಯ ವರದಿಗಾರನ ಹುದ್ದೆ ಖಾಲಿಯೇ ಇತ್ತು. ಅದರತ್ತ ಕಾಗಲಕರ್ ಅವರ ಗಮನ ಹರಿದಿದ್ದರಲ್ಲಿ ಆಶ್ಚರ್ಯವೇನಿಲ್ಲ. ಅವರು ಕಾಲಹರಣ ಮಾಡದೆ ಕಾರ್ಯೋನ್ಮುಖರಾದರು.

೧೯೭೬ ರ ಮೇ ತಿಂಗಳಲ್ಲಿ 'ದಿ ಹಿಂದು' ಪತ್ರಿಕೆಯ ಗುಲ್ಬರ್ಗ ವರದಿಗಾರನಾಗಿ ಸೇವೆ ಸಲ್ಲಿಸಲು ಅವಕಾಶ ನೀಡುವಂತೆ ಕೋರಿ ಅರ್ಜಿ ಗುಜರಾಯಿಸಿಕೊಂಡರು. ಬೆಂಗಳೂರು ಮತ್ತು ಹುಬ್ಬಳ್ಳಿಗಳಿಂದ ಏಕಕಾಲಕ್ಕೆ ಪ್ರಕಟವಾಗುತ್ತಿದ್ದ 'ಸಂಯುಕ್ತ ಕರ್ನಾಟಕ'ದಲ್ಲಿ ಇಪ್ಪತ್ತು ವರ್ಷ ದೀರ್ಘಾವಧಿಯ ಅನುಭವವಿದ್ದ ಕಾಗಲಕರ್ ತುಂಬಾ ಆತ್ಮವಿಶ್ವಾಸದಿಂದಲೇ ಮುನ್ನಡೆದರು. ಕನ್ನಡ ಪತ್ರಿಕೆಯ ಆಡಳಿತ ಮಂಡಳಿ ಕಲಬುರಗಿಯಲ್ಲಿ ಪೂರ್ಣಾವಧಿ ವರದಿಗಾರರನ್ನು ನೇಮಿಸಿಕೊಂಡಿದ್ದರಿಂದ ಅರೆಕಾಲಿಕ ವರದಿಗಾರರಾಗಿದ್ದ ತಾವು ಆ ಹುದ್ದೆಯನ್ನು ಬಿಡಬೇಕಾಗಿ ಬಂತೆಂಬ ಯೋಗ್ಯ ಕಾರಣವನ್ನು ಕಾಗಲಕರ್ ನೀಡಿದ್ದರು.

ಈ ಎರಡು ದಶಕಗಳ ಅವಧಿಯಲ್ಲಿ ಕಾಗಲಕರ್ ಗುಲ್ಬರ್ಗ ಮತ್ತು ಸುತ್ತ-ಮುತ್ತಲಿನ ಪ್ರದೇಶದಲ್ಲಿ ಮನೆಮಾತಾಗಿದ್ದರು. ಸಮಾಜದ ವಿವಿಧ ಕ್ಷೇತ್ರಗಳ ಎಲ್ಲ ಗಣ್ಯರು ಅವರಿಗೆ ವೈಯಕ್ತಿಕ ನೆಲೆಯಲ್ಲೂ, ವೃತ್ತಿ ಸಂಬಂಧದಿಂದಲೂ ಚಿರಪರಿಚಿತರಾಗಿದ್ದರು.

ಈ ಭಾಗದ ಸಮಸ್ಯೆಗಳ ಕುರಿತಾಗಿ ಕಾಗಲಕರ್ ಅವರಿಗಿದ್ದಷ್ಟು ಅರಿವು, ಜ್ಞಾನ ಪ್ರಾಯಃ ಅವರ ಸಮಕಾಲೀನ ಪತ್ರಕರ್ತರಷ್ಟೇ ಅಲ್ಲ ಸಮಾಜದ ಇತರ ಕ್ಷೇತ್ರಗಳಲ್ಲಿ ತೊಡಗಿಸಿಕೊಂಡ ಬೇರೆ ಯಾರಿಗೂ ಇದ್ದಿರಲಿಲ್ಲ. ಬರವಣಿಗೆ ಅವರ ಜೀವನದ ಉಸಿರೇ ಆಗಿತ್ತು. ಈ ಎಲ್ಲ ಅನುಭವ ಸಂಪತ್ತಿನ ಒಡೆಯರಾಗಿದ್ದ ಕಾಗಲಕರ್ 'ಹಿಂದು' ಪತ್ರಿಕೆಗೆ ಹಾಕಿಕೊಂಡ ಅರ್ಜಿ ಆ ಪತ್ರಿಕೆಯ ಸಂಪಾದಕರು ಮತ್ತು ಆಡಳಿತ ವರ್ಗ ಪುರಸ್ಕರಿಸದಿರಲು ಕಾರಣವೇ ಇರಲಿಲ್ಲ!

ವೃತ್ತಿಯ ರ, ಠ, ಈ, ಕ ಗೊತ್ತಿಲ್ಲದ ವ್ಯಕ್ತಿಯೊಬ್ಬನನ್ನು ನೇಮಿಸಿಕೊಂಡು ಅವನೊಂದಿಗೆ ಹೊಂದಿಕೊಂಡು ಹೋಗಲು ಪರದಾಡುವುದಕ್ಕಿಂತ ಸಾಕಷ್ಟು ಅನುಭವ, ಜ್ಞಾನ ಉಳ್ಳವರನ್ನು ನೇಮಿಸಿಕೊಳ್ಳುವುದು ಯಾವುದೇ ಪ್ರಬುದ್ಧ ಪತ್ರಿಕೆಯ ಲಕ್ಷಣ. ಕಾಗಲಕರ್ ವಿಷಯದಲ್ಲಿ 'ಹಿಂದು' ಪತ್ರಿಕೆ ಪ್ರದರ್ಶಿಸಿದ್ದು ಇದೇ ಪ್ರಬುದ್ಧತೆಯನ್ನು. ಕಾಗಲಕರ್ ಅರ್ಜಿ ಹಾಕಿದ ಎರಡೇ ತಿಂಗಳಲ್ಲಿ ಅವರಿಗೆ 'ಹಿಂದು' ಪತ್ರಿಕೆ ಕಲಬುರಗಿ ವರದಿಗಾರನೆಂದು ನೇಮಿಸಿಕೊಂಡು ಆದೇಶ ನೀಡಿಯೇ ಬಿಟ್ಟಿತು! ಆಗಸ್ಟ್ ೧, ೧೯೭೬ ರಿಂದ ಅವರು ತಮ್ಮ ಹೊಸ ಜವಾಬ್ದಾರಿಯನ್ನು ಹೊಸ ಹುರುಪಿನಿಂದ ಹೊತ್ತುಕೊಂಡು ಕಾರ್ಯೋನ್ಮುಖರಾಗಿಯೇ ಬಿಟ್ಟರು.

ಕಾಗಲಕರ್ ಅವರು ಪ್ರಾರಂಭದಲ್ಲಿ ಮೂರು ತಿಂಗಳ ಅವಧಿಗೆ ಪರೀಕ್ಷಾರ್ಥವಾಗಿ 'ಹಿಂದು' ಪತ್ರಿಕೆಯಲ್ಲಿ ನೇಮಕಗೊಂಡರು. ಆದರೆ ಒಂದು ಬಾರಿ ಅದರಲ್ಲಿ ಕಾಲಿಟ್ಟ ಕಾಗಲಕರ್ ಅದನ್ನು ಹಿಂದಕ್ಕೆ ತೆಗೆದುಕೊಳ್ಳುವ ಪ್ರಮೇಯವೇ ಇರಲಿಲ್ಲ. 'ಸಂಯುಕ್ತ ಕರ್ನಾಟಕ'ದ ಶ್ರೀಮಂತ ಕಾರ್ಯಾನುಭವದ ಹಿನ್ನೆಲೆಯಲ್ಲಿ ಹೆಚ್ಚಿನ ಹುರುಪು, ವೇಗ ಹಾಗೂ ವೈವಿಧ್ಯತೆಯಿಂದ ವರದಿಗಾರಿಕೆಯನ್ನು ಲೀಲಾಜಾಲವಾಗಿ ನಿಭಾಯಿಸಿದ ಕಾಗಲಕರ್ ತಮ್ಮ ಕೊನೆಯುಸಿರಿರುವವರೆಗೆ ಇಪ್ಪತ್ತೊಂದು ವರುಷಗಳ ಕಾಲ, ಅಂದರೆ ೧.೮.೧೯೭೬ ರಿಂದ ೧೯.೮.೧೯೯೭ರ ವರೆಗೆ ನಿರಂತರ ಬರೆದರು. ಅವರು ಪತ್ರಕರ್ತರಾಗಿ ಜನಿಸಿದರೋ ಇಲ್ಲವೋ ಗೊತ್ತಿಲ್ಲ ಆದರೆ ಅವರು ಪತ್ರಕರ್ತರಾಗಿಯೇ ನಿರ್ವಾಣ ಹೊಂದಿದರು.

ದಿಢೀರ್ ಮತ್ತು ತಾಜಾ ಸುದ್ದಿಗಳನ್ನು ಕಳುಹಿಸುವುದರ ಜೊತೆಗೆ ಅವರು ಪ್ರತಿ ಮಂಗಳವಾರ ಅಥವಾ ಬುಧವಾರಕ್ಕೆ ತಲುಪುವಂತೆ ಒಂದು ಅಥವಾ ಎರಡು ಈ ಭಾಗದ ಮಹತ್ವದ ಸಂಘ-ಸಂಸ್ಥೆ, ಘಟನೆ ಮತ್ತು ಬೆಳವಣಿಗೆ ಕುರಿತ ವಿಶೇಷ ಲೇಖನಗಳನ್ನು ಕಳುಹಿಸಬೇಕಿತ್ತು. ಪತ್ರಿಕೆ ಪ್ರತಿ ಶುಕ್ರವಾರ ಇಂತಹ ಪ್ರಾದೇಶಿಕ ವಿಶೇಷ ಬರಹಗಳಿಗಾಗಿಯೇ ಎರಡು ವಿಶೇಷ ಪುಟಗಳನ್ನು ಮೀಸಲಿಟ್ಟಿತ್ತು. ಈ ಎರಡು

ವಿಶೇಷ ಪುಟಗಳು ಮುಖ್ಯ ಪತ್ರಿಕೆಯ ಭಾಗವೇ ಆಗಿರುತ್ತಿದ್ದವು. ಅವುಗಳಿಗಾಗಿ ಪ್ರತ್ಯೇಕ ಪುರವಣಿಗಳು ಆಗಿನ್ನೂ ಪ್ರಕಟಿಸುತ್ತಿರಲಿಲ್ಲ. ಸಾಮಾಜಿಕ, ಶೈಕ್ಷಣಿಕ, ಸಾಹಿತ್ಯಿಕ, ಸಾಂಸ್ಕೃತಿಕ, ಆರ್ಥಿಕ ಮುಂತಾದ ವಿವಿಧ ಕ್ಷೇತ್ರಗಳಲ್ಲಿನ ವಿಶಿಷ್ಟ ಬೆಳವಣಿಗೆಗಳನ್ನು ಕುರಿತು ಬರೆಯುವುದಕ್ಕೆ ಶುಕ್ರವಾರದ ಸಂಚಿಕೆಯಲ್ಲಿ ವಿಪುಲ ಅವಕಾಶಗಳಿದ್ದವು. ಇವುಗಳಲ್ಲದೆ ಪತ್ರಿಕೆಯ ಸಂಪಾದಕರು / ಸುದ್ದಿ ಸಂಪಾದಕರು ಬಯಸುವ ಇತರ ಯಾವುದೇ ಸುದ್ದಿ ಸಂಬಂಧಿ ಹೊಣೆಗಾರಿಕೆಯನ್ನು ಕಾಗಲಕರ್ ನಿರ್ವಹಿಸಬೇಕಿತ್ತು.

ಕಾಗಲಕರ್ ಅವರು 'ಹಿಂದು' ಪತ್ರಿಕೆಗೆ ನೇಮಕಗೊಂಡ ಸಂದರ್ಭದಲ್ಲಿ ಅವರಿಗೆ ತಿಂಗಳಿಗೆ ಇಂತಿಷ್ಟು ಎಂದು ನಿರ್ದಿಷ್ಟ, ನಿಗದಿತ ರಿಟೇನರ್ ಇರಲಿಲ್ಲ. ಪ್ರಕಟವಾದ ಅವರ ವರದಿ / ಲೇಖನಗಳಿಗೆ ಒಂದು ಸಾವಿರ ಶಬ್ದಗಳಿಗೆ ರೂ. ೪೦ 'ಹಿಂದು' ಪತ್ರಿಕೆ ನೀಡುತ್ತಿತ್ತು. ಇದರ ಹೊರತಾಗಿ ಆಡಳಿತ ಮಂಡಳಿಗೆ ಮತ್ತಾವುದೇ ಆರ್ಥಿಕ ಭದ್ರತೆ ಇರುವದಿಲ್ಲವೆಂದು ಸ್ಪಷ್ಟಪಡಿಸಲಾಗಿತ್ತು. ಅವರು ಕಳುಹಿಸುವ ಫೋಟೋಗಳಿಗೆ ಪ್ರಕಟವಾದ ಪ್ರತಿ ಫೋಟೋಕ್ಕೆ ರೂ. ೧೦ನ್ನು ಪ್ರತ್ಯೇಕವಾಗಿ ನೀಡಲಾಗುತ್ತಿತ್ತು. ಉಪಯೋಗಿಸಲಾಗದ ಪ್ರತಿ ಫೋಟೋಕ್ಕೆ ಮೂರು ರೂಪಾಯಿ ನೀಡಲಾಗುತ್ತಿತ್ತು. ಸಾಧ್ಯವಾದರೆ ಪ್ರತಿ ಛಾಯಾ ಚಿತ್ರದ ಜೊತೆಗೆ ಅದರ ನೆಗೆಟಿವ್ ಪ್ರತಿಯನ್ನು ಕಳುಹಿಸಬೇಕಿತ್ತು.

'ಹಿಂದು' ಪತ್ರಿಕೆಯ ಸೇವಾ ಷರತ್ತುಗಳು ಆದರ್ಶಪೂರ್ಣ ಎನ್ನಲಾಗದಿದ್ದರೂ ಭಾರತೀಯ ಪತ್ರಿಕೋದ್ಯಮದ ಸಮಕಾಲೀನ ಸಂದರ್ಭದ ಇತರ ಯಾವುದೇ ಪತ್ರಿಕೆಗೆ ಹೊಸದಾಗಿ ನೇಮಕಗೊಂಡವರಿಗೆ ನೀಡುವ ಆರ್ಥಿಕ ಗೌರವಕ್ಕಿಂತಲೂ ಉತ್ತಮವಾಗಿದ್ದವು. ಯಾವುದೇ ಕ್ರಿಯಾಶೀಲ ಪತ್ರಕರ್ತ ಇಂತಹ ಅವಕಾಶಗಳನ್ನು ಸಂಪೂರ್ಣವಾಗಿ ಬಳಸಿಕೊಳ್ಳಲಿಕ್ಕೆ ಆ ಪತ್ರಿಕೆಯಲ್ಲಿ ಸಾಕಷ್ಟು ಅವಕಾಶಗಳಿದ್ದವು. ಪ್ರತಿನಿತ್ಯ ಸರಾಸರಿ ಸಾವಿರ ಶಬ್ದಗಳ ವರದಿ/ಲೇಖನಗಳನ್ನು ಕಳುಹಿಸಿದರೂ ವರದಿಗಾರ ತಿಂಗಳಿಗೆ ಏನಿಲ್ಲವೆಂದರೂ ಸಾವಿರ ರೂಪಾಯಿಗಳನ್ನು ಅತ್ಯಂತ ಗೌರವಯುತವಾಗಿ ಸಂಪಾದಿಸಬಹುದಿತ್ತು. ೧೯೭೦ ರ ದಶಕದಲ್ಲಿ ಈ ಗಳಿಕೆ ಸರಳ ಜೀವನ ನಡೆಸುವ ಪತ್ರಕರ್ತನಿಗೆ ಗೌರವದ ವೇತನವೇ ಆಗಿತ್ತು!

ಕಾಗಲಕರ್ ಅವರಿಗೆ 'ಹಿಂದು' ಪತ್ರಿಕೆಯಲ್ಲಿ ಆರ್ಥಿಕ ಬಡ್ತಿ ದೊರೆತದ್ದು ಸುಮಾರು ಒಂಭತ್ತು ವರುಷಗಳ ನಂತರ! ೧೯೮೫ ರ ಮಾರ್ಚ ೧ ರಿಂದ ಅವರಿಗೆ ನಿಗದಿಯಾಗಿದ್ದ 'ಶಬ್ದಾದಾಯ' (Wordage) - ಮುಂಚೆಯಿಂದ ಇದ್ದ ಸಾವಿರ ಪದಗಳಿಗೆ ರೂ. ೪೦ರಿಂದ ರೂ. ೬೦ಕ್ಕೆ ಹೆಚ್ಚಿಸಲಾಯಿತು.

ಕನ್ನಡದಿಂದ ಇಂಗ್ಲೀಷಿಗೆ

ಎರಡು ದಶಕಗಳ ಕಾಲ ಕನ್ನಡ ವರದಿಗಾರಿಕೆಯಿಂದ ಇದ್ದಕ್ಕಿದ್ದ ಹಾಗೆ ಇಂಗ್ಲೀಷ್ ವರದಿಗಾರಿಕೆಗೆ ಹೊಂದಿಕೊಳ್ಳುವುದು ಸುಲಭದ ಮಾತಲ್ಲ. ಮಾತೃ ಭಾಷೆಯಲ್ಲಿ ಇರುವಷ್ಟು ಬರವಣಿಗೆ ಸಾಮರ್ಥ್ಯ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯದ ಸಲಿಗೆ ಬೇರಾವ ಭಾಷೆಯಲ್ಲೂ ಇರಲಿಕ್ಕೆ ಸಾಧ್ಯವಿಲ್ಲ. ಅದರಲ್ಲೂ ಇಂಗ್ಲೀಷ್ ಎಷ್ಟಾದರೂ ಪರಕೀಯ ಭಾಷೆ. ಆಂಗ್ಲ ಭಾಷೆಯನ್ನು ಶಾಸ್ತ್ರೀಯವಾಗಿ ಕಲಿತವರು ಕೂಡ ಇಂಗ್ಲೀಷಿನಲ್ಲಿ ಬರೆಯುವುದಕ್ಕೆ, ಮಾತಾಡುವುದಕ್ಕೆ ತಡವರಿಸುತ್ತಾರಷ್ಟೆ. ಇನ್ನು ಮ್ಯಾಟ್ರಿಕ್ ಕೂಡ ಪಾಸಾಗದ, ಕನ್ನಡ ಮಾಧ್ಯಮದಲ್ಲೇ ಕಲಿತ ಮತ್ತು ಇಂಗ್ಲೀಷಿನೊಂದಿಗೆ ವಿಶೇಷ ಸಂಪರ್ಕವಿಲ್ಲದೆ ಕಾಗಲಕರ್ ಅದ್ದೇಗೆ ಸಮೃದ್ಧ ಇಂಗ್ಲೀಷ್ ಭಾಷಾ ಸಂಪತ್ತಿನಿಂದ ಕೂಡಿದ 'ಹಿಂದು' ಅಂತಹ ಪತ್ರಿಕೆಯಲ್ಲಿ ದಿಢೀರನೆ ಹೊಂದಿಕೊಂಡು ಕಾರ್ಯ ನಿರ್ವಹಿಸಿದರೆಂಬುದು ಅನೇಕರಿಗೆ ಇನ್ನೂ ಆಶ್ಚರ್ಯವಾಗಿಯೇ ಉಳಿದಿದೆ.

ಆದರೆ ಇಂಗ್ಲೀಷ್‌ನಲ್ಲಿ ಒಂದು ಸೊಗಡು ಇದೆ. ರೂಢಿಯಿಂದ ಬರುವ ಯಾವುದಾದರೂ ಭಾಷೆ ಇದ್ದರೆ ಅದು ಇಂಗ್ಲೀಷ್ ಮಾತ್ರ. ವ್ಯಾಕರಣೀಯ ಅಂಶಗಳನ್ನು ಕಡೆಗಣಿಸಿಯೂ, ಒಬ್ಬನು ಇಂಗ್ಲೀಷಿನೊಂದಿಗೆ ಬದುಕಬಲ್ಲ, ಅದರೊಂದಿಗೆ ಸಂವಾದಿಸಬಲ್ಲ. ಆದರೆ ಇದೆಲ್ಲವೂ ವ್ಯಾವಹಾರಿಕವಾಗಿ ಸಾಧ್ಯವಾಗಬಹುದಷ್ಟೇ. ಬರವಣಿಗೆಗೆ ಬಂದಾಗ ಅದರಲ್ಲೂ ಇಂಗ್ಲೀಷ್ ಪತ್ರಿಕೆಯ ವರದಿಗಾರನಾಗಿ ದಿನನಿತ್ಯವೂ ಬರವಣಿಗೆಯಲ್ಲಿ ತೊಡಗಿಸಿಕೊಳ್ಳುವ ಸಂದರ್ಭದಲ್ಲಿ ವ್ಯಾವಹಾರಿಕ ಇಂಗ್ಲೀಷ್ ಉಪಯೋಗಕ್ಕೆ ಬರುವುದಿಲ್ಲ. ರೂಢಿಯಿಂದ ಇಂಗ್ಲೀಷ್ ಕಲಿತ ಕಾಗಲಕರ್ ವ್ಯಾವಹಾರಿಕವಾಗಿಯೂ ಮತ್ತು ಬರವಣಿಗೆಯಲ್ಲೂ ಅದರ ಮೇಲೆ ತಕ್ಕ ಮಟ್ಟಿಗೆ ಪ್ರಭುತ್ವವನ್ನು ಸಿದ್ಧಿಸಿಕೊಂಡದ್ದು ಸೋಜಿಗವಲ್ಲದೆ ಮತ್ತೇನೂ ಅಲ್ಲ. ವರದಿಗಾರನಿಗೆ ವಿಶೇಷವಾದ ಇಂಗ್ಲೀಷ್ ಭಾಷಾ ಪರಿಣಿತಿಯ ಅಗತ್ಯವಿಲ್ಲ -ವಾದರೂ, ಸರಳ, ನೇರ, ಸಂಕ್ಷಿಪ್ತ ಇಂಗ್ಲೀಷ್ ಬರೆಯುವುದು ಕಷ್ಟವೇ.

ಪ್ರಾಯಃ ಕಾಗಲಕರ್ ಅವರು ಹೈದ್ರಾಬಾದಿನಲ್ಲಿದ್ದಾಗಲೇ ಇಂಗ್ಲೀಷ್ ಮಾತನಾಡುವವರ ಸಂಪರ್ಕಕ್ಕೆ ಬಂದಿದ್ದರೆಂದು ಕಾಣುತ್ತದೆ. ಕಲಬುರಗಿಗೆ ಆಗಮಿಸಿ ಅವರು ಪಿ.ಟಿ.ಐ. ಸುದ್ದಿ ಸಂಸ್ಥೆ ವರದಿಗಾರರಾದ ಮೇಲೆ ಇಂಗ್ಲೀಷಿನಲ್ಲೇ ವರದಿ ಮಾಡಬೇಕಿತ್ತು. ಸುದ್ದಿ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸಿದ ಅಲ್ಪಕಾಲೀನ ಅನುಭವ ಅವರ ನೆರವಿಗೆ ಬಂದಿರಲೂ ಸಾಧ್ಯ. ಎಂ.ಎಸ್.ಕೆ. ಜವಳಿ ಗಿರಣಿಯಲ್ಲಿ

ಉದ್ಯೋಗಕ್ಕೆ ಸೇರಿದ ಮೇಲೆ ತಮಗೆ ವಹಿಸಲಾಗಿದ್ದ ಸುಂಕ ವಿಭಾಗದಲ್ಲಿ ಮತ್ತು ಇತರ ಸಾಮಾನ್ಯ ಆಡಳಿತಕ್ಕೆ ಸಂಬಂಧಿಸಿದ ವಿಷಯಗಳಲ್ಲಿ ಅವರು ಇಂಗ್ಲೀಷಿನಲ್ಲೇ ಕಳುಹಿಸುತ್ತಿದ್ದರಂತೆ. ಕನ್ನಡವನ್ನು ಆಂಗ್ಲ ಲಿಪಿಯಲ್ಲಿ ಟೆಲಿಗ್ರಾಫಿಕ್ ಶೈಲಿಯಲ್ಲಿ ಬರೆದು ಹೈರಾಣ ಆಗುವುದಕ್ಕಿಂತ ನೇರವಾಗಿ ಇಂಗ್ಲೀಷಿನಲ್ಲೇ ವರದಿ ಮಾಡುವುದು ಸುಲಭವೆಂದು ಅವರು ಭಾವಿಸಿದ್ದಿರಲೂಬಹುದು. ಅವರು ಇಂಗ್ಲೀಷ್ ವರದಿಗಾರಿಕೆಗೆ ಎಷ್ಟೊಂದು ಸಹಜವಾಗಿ ಒಗ್ಗಿಹೋಗಿದ್ದರೆಂದರೆ ಅವರ ಸಂದರ್ಭದಲ್ಲಿ ಇಂಗ್ಲೀಷ್ 'ನೀರಿಳಿಯದ ಗಂಟಲಲ್ಲಿ ಕಡುಬು ತುರುಕಿದಂತಾಯಿತು' ಎನ್ನುವ ಮಾತೂ ಹುಸಿಯಾಗಿತ್ತು!

ಇಂಗ್ಲೀಷ್ ಪತ್ರಿಕೆಯ ವರದಿಗಾರಿಕೆಯ ವೃತ್ತಿ ಕಾಗಲಕರ್ ಅವರ ಪ್ರತಿಷ್ಠೆ-ಗೌರವಗಳನ್ನು ಮತ್ತಷ್ಟು ಹೆಚ್ಚಿಸಲು ಸಹಾಯಕವಾಯಿತು. ಮೂಲಭೂತವಾಗಿ ಪತ್ರಕರ್ತ, ಅವನು ಯಾವುದೇ ಭಾಷೆಯ ಪತ್ರಿಕೆಯ ವರದಿಗಾರನಾಗಿರಲಿ, ಪತ್ರಕರ್ತನೇ ಭಾಷೆಯ ಆಧಾರದ ಮೇಲೆ ಪತ್ರಕರ್ತರನ್ನು ಬೇಧ ಭಾವದಿಂದ ಕಾಣುವುದು ಸಾಧ್ಯವಿಲ್ಲ, ಸಾಧುವೂ ಅಲ್ಲ. ಆದರೆ ಅದೇಕೋ ಭಾರತೀಯ ಸಾಮಾಜಿಕ ಸಂದರ್ಭ-ದಲ್ಲಿ ಇಂಗ್ಲೀಷ್ ಪತ್ರಕರ್ತನಿಗೆ ಒಂದು ರೀತಿಯ ಗತ್ತು, ಪ್ರತಿಷ್ಠೆ, ಗೌರವ ಅಯಾಚಿತ-ವಾಗಿ ಪ್ರಾಪ್ತವಾಗಿರುತ್ತದೆ. ಇಂಗ್ಲೀಷ್ ಭಾಷೆಯ ಪತ್ರಕರ್ತನನ್ನು ಸಮಾಜ ಅದೇಕೆ ವಿಭಿನ್ನವಾಗಿ ಕಾಣುತ್ತದೆ ಎಂಬುದಕ್ಕೆ ಸಿದ್ಧ ಉತ್ತರವಿಲ್ಲ. ಪ್ರಾಯಃ ಇಂಗ್ಲೀಷ್ ಪತ್ರಕರ್ತ-ನಿಗೆ ವಿಶೇಷವಾದ ಪಾಂಡಿತ್ಯ-ಪರಿಣತಿ ಇದ್ದೀತೆಂಬ ತಪ್ಪು ಕಲ್ಪನೆ ಇದ್ದಿರಲೂ-ಬಹುದು. ಆದರೆ ವಾಸ್ತವದಲ್ಲೂ ಈ ಕಲ್ಪನೆ ಅಪ್ಪಟ ಸುಳ್ಳು ಎಂಬುದು ದಿಟ.

ಕಾನ್ವೆಂಟಿನ ಪ್ಯ-ಫೈ (ಥಳುಕು-ಬಳುಕು) ಇಂಗ್ಲೀಷ್ ಮಾತನಾಡುವ ಪತ್ರಕರ್ತನಿಗ ಸಾಮಾನ್ಯವಾಗಿ ಅರಿವು ಕಡಿಮೆ. ಆಧುನಿಕ ಸಂದರ್ಭದಲ್ಲಂತೂ ವಿಚಿತ್ರವಾದ ವೇಷ-ಭೂಷಣಧಾರಿಗಳಾಗಿ, ಸಿಗರೇಟಿನ ಹೊಗೆ ಬಿಡುತ್ತ, ಟುಸು-ಪುಸು ಇಂಗ್ಲೀಷಿನ, ಆಂಗ್ಲೀಯ ಗ್ಲಾಮರ್ ಪ್ರೇರಿತ ಒನಪು ವೈಯ್ಯಾರದ ಪತ್ರಕರ್ತರನ್ನು ಕಂಡರ ಅವರೇ ಪ್ರಭೃತಿಗಳೆಂಬ ಸಾಮಾನ್ಯ ಅಪಾಯಕಾರಿಯಾದ ಭಾವನೆ ಬೆಳೆದು ಬಂದಿದೆ. ಸಾಮಾನ್ಯವಾಗಿ ದೊಡ್ಡ ದೊಡ್ಡ ಪಟ್ಟಣಗಳಲ್ಲಿ, ರಾಜಧಾನಿಗಳಲ್ಲಿ ಕಾಣಸಿಗುವ ಇಂತಹ ವಿಚಿತ್ರ ಶೈಲಿಯ ಇಂಗ್ಲೀಷ್ ಪತ್ರಕರ್ತರು ಆಯಾ ಪರಿಸರದ ಆಕರ್ಷಣೀಯ ಕೇಂದ್ರ ಬಿಂದುವಾಗಿರುತ್ತಾರೆ.

ಇಂತಹ ಪ್ರದರ್ಶನ ಕಲೆಯ ಇಂಗ್ಲೀಷ್ ಸ್ಕ್ರೈಬ್ (Scribe) ಗಳಿಗೆ ಲಿಂಗಬೇಧವೂ ಇಲ್ಲ. ನಾವೇನೂ ಪುರುಷರಿಗಿಂತಲೂ ಕಡಿಮೆ ಇಲ್ಲ ಎಂದು

ಭಾವಿಸುವ ಮಹಿಳಾ ಪತ್ರಕರ್ತರೂ, ವಿಚಿತ್ರ ವೇಷ-ಭೂಷಣಗಳಲ್ಲಿ ಪುರುಷರನ್ನೂ ಮೀರಿಸುತ್ತಾರೆ. ಅತಿಗಣ್ಯ ವ್ಯಕ್ತಿ ಯಾರೇ ಇರಲಿ ಅವರ ಎದುರೇ ಧೂಮಪಾನ ಮಾಡುತ್ತಾ ಅವರ ಮುಖಕ್ಕೆ ಹೊಗೆ ಬಿಟ್ಟು ಪ್ರಶ್ನೆ ಕೇಳುವ ಶೈಲಿಯಿಂದ ಬೆಕ್ಕಸ ಬೆರಗನ್ನುಂಟು ಮಾಡುತ್ತಾರೆ. ಕಾಲು ಮೇಲೆ ಕಾಲು ಹಾಕಿಕೊಂಡು ಒಂದು ಕೈಯಲ್ಲಿ ಉರಿಯುವ ಸಿಗರೇಟು ಮತ್ತೊಂದು ಕೈಯಲ್ಲಿ ಪೆನ್ನಿನಿಂದ ಬರೆದುಕೊಳ್ಳುವುದು ಇವರ ಜಾಯಮಾನ. ಲಿಂಗ ಬೇಧವಿಲ್ಲದೆ ಪಾನಕೂಟಗಳಲ್ಲಿ ಯತೇಚ್ಛವಾಗಿ ಕುಡಿದು ಪಾನಮತ್ತರಾಗಿ ಅಸಭ್ಯದಿಂದ ವರ್ತಿಸುವುದೂ ಅವರಿಗೆ ಪ್ರಗತಿ ಪರತೆಯ ಲಕ್ಷಣ. ಇವರು ಆಂತರ್ಯದಲ್ಲಿ ಟೊಳ್ಳಾಗಿದ್ದರೂ ಬಹಿರಂಗದಲ್ಲಿ ಮಾತ್ರ ಪ್ರದರ್ಶನ ಪ್ರಿಯರಾಗಿ ಎಲ್ಲರ ಗಮನ ಸೆಳೆಯುವಲ್ಲಿ ಯಶಸ್ವಿಯಾಗುತ್ತಾರೆ.

ಅತಿ ಬಿಗಿಯಾದ ಜೀನ್ಸ್ ಪ್ಯಾಂಟ್, ಶರ್ಟ ಧರಿಸಿ, ಕೈಯಲ್ಲಿ ಉರಿವ ಸಿಗರೇಟು ಹಿಡಿದು, ಪಾಶ್ಚಿಮಾತ್ಯ ಶೈಲಿಯ ಇಂಗ್ಲೀಷ್ ಮಾತನಾಡುತ್ತ ಬಂದು ಗಣ್ಯ ವ್ಯಕ್ತಿಗಳ ಮೇಲೆ ವಿಶೇಷ ಪ್ರಭಾವವನ್ನುಂಟು ಮಾಡುತ್ತಾರೆ. ರಾಮಕೃಷ್ಣ ಹೆಗಡೆ ಅಂತಹ ಬುದ್ದಿಜೀವಿ ಮುಖ್ಯಮಂತ್ರಿಗಳು ಇಂತಹ ಪತ್ರಕರ್ತರಿಗೆ ಮೊದಲ ಮಣೆ ಹಾಕುತ್ತಿದ್ದರೆಂದು ಕೆಲವು ಹಿರಿಯ ಪತ್ರಕರ್ತರ ಅನಿಸಿಕೆ. ಆದರೆ ವಾಸ್ತವದಲ್ಲಿ ಈ ವಿಸ್ಮಯಕಾರಿ ಇಂಗ್ಲೀಷ್ ಪತ್ರಕರ್ತರಿಗೆ ಜ್ಞಾನ ಮತ್ತು ಪರಿಜ್ಞಾನ ತುಂಬಾ ಕಡಿಮೆ. ಅವರು ಸಾಂಸ್ಕೃತಿಕವಾಗಿ ಪ್ರತ್ಯೇಕಿಸಲ್ಪಟ್ಟಿರುತ್ತಾರೆ.

ಕನ್ನಡ ಭಾಷೆ, ಹಿಂದು ಸಂಸ್ಕೃತಿ, ಆಚಾರ, ವಿಚಾರ, ಸಂಪ್ರದಾಯ, ಮೌಲ್ಯ, ಪರಂಪರೆ, ಸಾಹಿತ್ಯ, ಸಂಗೀತ, ಕಲೆ ಮುಂತಾದ ದೇಶೀಯ ಸ್ವರೂಪದ ಎಲ್ಲವನ್ನೂ ಅಸಡ್ಡೆಯಿಂದ ಕಾಣುವ ಪ್ರವೃತ್ತಿ ಬೆಳೆಸಿಕೊಂಡಿರುತ್ತಾರೆ. ದೇಶೀಯತೆಯೇ ಅವರಿಗೆ ವರ್ಜ್ಯವಾಗಿರುತ್ತದೆ.

ಅವರ ಜ್ಞಾನದ ಬಾಗಿಲನ್ನು ತಟ್ಟಿದಾಗಲೇ ಅವರ ಬಂಡವಾಳವೆಲ್ಲ ಬಯಲಾದೀತು. ಕರ್ನಾಟಕದಲ್ಲಿ ಹರಿಯುವ ನದಿಗಳ ಬಗ್ಗೆಯೂ ಅವರಿಗೆ ಗೊತ್ತಿರುವುದಿಲ್ಲ. ಉತ್ತರ ಕರ್ನಾಟಕದ ಪ್ರಮುಖ ಬೆಳೆಗಳು ಯಾವುವೆಂದು ಕೇಳಿದರೆ ಅದಕ್ಕೆ ಮೌನವೇ ಮಾರುತ್ತರ. ಅವರ ಅರಿವಿನ ಪ್ರಕಾರ ರಾಯಚೂರು ಇರುವುದು ಆಂಧ್ರದಲ್ಲಿ! ಇನ್ನು ಅವರಿಗೆ ಕನ್ನಡ ಸಾಹಿತ್ಯದ ಪರಿಚಯ ಹೇಗಾದೀತು? ಪಂಪ, ರನ್ನ ಅವರ ವಿಚಾರದಲ್ಲಿ Pump, Run ಗಿಂತಲೂ ಭಿನ್ನವಾಗಿರಲೂ ಸಾಧ್ಯವಿಲ್ಲ!

ಆದರೆ ವೆಂಕಟರಾವ್ ಕಾಗಲಕರ್ ಥಳುಕು-ಬಳುಕಿನ ಇಂಗ್ಲೀಷ್ ಪತ್ರಕರ್ತರಿಗೆ ಒಂದು ಅಪವಾದ. ಅವರಿಗೂ ಆಧುನಿಕ ಇಂಗ್ಲೀಷ್ ಪತ್ರಕರ್ತರಿಗೂ

ಅಜಗಜಾಂತರ ವ್ಯತ್ಯಾಸ, ಹೋಲಿಕೆಯೇ ಅಸಾಧ್ಯ. ಸಾಂಪ್ರದಾಯಿಕ, ಸುಸಂಸ್ಕೃತ, ವಿನಯ ಶೀಲ, ಜ್ಞಾನ ಸಮೃದ್ಧ, ಅಧ್ಯಯನ ನಿರತ, ಚಿಕಿತ್ಸಕ ಮನೋಭಾವದ ಕಾಗಲಕರ್ ತುಂಬಿದ ಕೊಡದಂತೆ. ತಮ್ಮ ವೃತ್ತಿ ಜೀವನದಲ್ಲಿ ಅವರೆಂದೂ ಸಭ್ಯತೆಯ ಎಲ್ಲೆ ಮೀರಿ ವರ್ತಿಸಿದವರಲ್ಲ. ಅತ್ಯಂತ ಗಟ್ಟಿಯಾದ ಸಾಂಸ್ಕೃತಿಕ ನೆಲೆಯಲ್ಲಿ ವಿಕಾಸಗೊಂಡಿದ್ದ ಕಾಗಲಕರ್ ಕಸ್ತೂರಿ ಕನ್ನಡದ ಮೂಲೆಯಿಂದ ಬಂದವರಾದುದರಿಂದಲೇ ಅವರು ಯಶಸ್ವಿ ಇಂಗ್ಲೀಷ್ ಪತ್ರಕರ್ತರಾಗಲು ಸಾಧ್ಯವಾಯಿತು.

'ಹಿಂದು' ಪತ್ರಿಕೆಯಂತಹ ಅತ್ಯಂತ ಪ್ರತಿಷ್ಠಿತ ಅಸ್ತ್ರ ಅವರ ಕೈಯಲ್ಲಿದ್ದರೂ ಅವರು ಅದರಿಂದ ಬೀಸಿ ಇತರರನ್ನು ಅಸಡ್ಡೆಯಾಗಿ ಕಂಡವರಲ್ಲ. ಪತ್ರಿಕಾಗೋಷ್ಠಿಗಳಲ್ಲಿ, ಕಾರ್ಯಕ್ರಮಗಳಲ್ಲಿ ಏನಕೇನ ಪ್ರಕಾರೇಣ ಗಣ್ಯ ವ್ಯಕ್ತಿಗಳ ಗಮನ ಸೆಳೆಯುವ ಪ್ರವೃತ್ತಿ ಅವರಲ್ಲಿ ಖಂಡಿತ ಇರಲಿಲ್ಲ. ಅವರು ಬರೀ ಇಂಗ್ಲೀಷಿನಲ್ಲಿ ಪ್ರಶ್ನೆಗಳನ್ನು ಕೇಳಿ ತಮ್ಮ ಹಿರಿಮೆ-ಗರಿಮೆಗಳನ್ನು ಪ್ರದರ್ಶಿಸಲಿಲ್ಲ. ಸಾಂದರ್ಭಿಕವಾಗಿ ಮಾತ್ರ ಅವರು ಇಂಗ್ಲೀಷನ್ನು ಬಳಸುತ್ತಿದ್ದರು. ಇನ್ನುಳಿದ ಸಮಯದಲ್ಲಿ ಅವರು ಕನ್ನಡದಲ್ಲೇ ವ್ಯವಹರಿಸುತ್ತಿದ್ದರು. ಅವರು ಎಂದೂ ಯಾವುದೇ ಸಿದ್ಧಾಂತ, ಆದರ್ಶ, ವಿಚಾರಧಾರೆ, ಪ್ರಣಾಳಿಕೆ, ಭಾಷೆ, ಸಂಸ್ಕೃತಿ ಮುಂತಾದ ವಿಷಯಗಳಲ್ಲಿ ಪೂರ್ವಗ್ರಹ ಅವರನ್ನೆಂದೂ ಬಾಧಿಸಲಿಲ್ಲ. ಅಂತೆಯೇ ಸಮಾಜದಲ್ಲಿ ಅವರು ಎಲ್ಲ ವಿಚಾರಧಾರೆಯ ಜನರ ಪ್ರೀತಿ ವಿಶ್ವಾಸ, ಆದರ, ಗೌರವಗಳಿಗೆ ಪಾತ್ರರಾಗಿದ್ದರು.

ಇಂಗ್ಲೀಷ್ ಪತ್ರಿಕೆಗಳ ವರದಿಗಾರರಿಗೆ ಪ್ರಾದೇಶಿಕ ಭಾಷಾ ಪತ್ರಿಕೆಗಳ ವರದಿಗಾರರಿಗಿಂತಲೂ, ಅಧಿಕಾರಿಗಳ ವಲಯದಲ್ಲಿ ವಿಶೇಷ ಮನ್ನಣೆ ಇರುವುದು ಸುಳ್ಳಲ್ಲ. ಅದು ಸರಿಯಾದ ಧೋರಣೆ ಅಲ್ಲ ನಿಜ, ಆದರೆ ಅದು ಇಂಗ್ಲೀಷ್ ಪತ್ರಕರ್ತರಿಗೆ ಬಯಸದೇ ಬರುವ ಭಾಗ್ಯ! ಸಾಮಾನ್ಯವಾಗಿ ಎಲ್ಲ ಅಧಿಕಾರಿಗಳು ಅದರಲ್ಲೂ ವಿಶೇಷವಾಗಿ ಐ.ಎ.ಎಸ್. ಮತ್ತು ಐ.ಪಿ.ಎಸ್. ಅಧಿಕಾರಿಗಳು ಇಂಗ್ಲೀಷ್ ಪತ್ರಿಕೆಗಳನ್ನು ಹೆಚ್ಚಾಗಿ ಓದುತ್ತಾರೆ. ಅವುಗಳಲ್ಲಿನ ವರದಿ-ಲೇಖನಗಳಿಂದ ಪ್ರಭಾವಿತರಾಗುತ್ತಾರೆ. ಇಂಗ್ಲೀಷ್ ಪತ್ರಿಕೆಗಳಲ್ಲಿ ಬರುವ ವಿಷಯಗಳು ಅವರ ಗಮನ ಸೆಳೆಯುತ್ತವೆ. ಪರಿಶೀಲನಾ ಸಭೆಗಳಲ್ಲಿ, ನಿರ್ಧಾರ ಕೈಕೊಳ್ಳುವ ಸಂದರ್ಭಗಳಲ್ಲಿ, ಚರ್ಚೆಗಳಲ್ಲಿ ಆಂಗ್ಲ ಪತ್ರಿಕೆಗಳ ವರದಿಗಳು, ಅಭಿಪ್ರಾಯಗಳು ಅವರನ್ನು ಪ್ರಭಾವಿಸುತ್ತವೆ. ಅನೇಕ ಸಂದರ್ಭಗಳಲ್ಲಿ ಇಂಗ್ಲೀಷ್ ಪತ್ರಿಕೆಗಳ ವರದಿಗಳು ಶೀಘ್ರ ಫಲಕಾರಿಯಾಗುತ್ತವೆ. ಯಾಕೆಂದರೆ ಅವು ಅಧಿಕಾರಿಗಳ ವಲಯದಲ್ಲಿ ಸಂಚಲನ ಉಂಟು ಮಾಡುತ್ತವೆ.

ಆದರೆ ಭಾಷಾ ಪತ್ರಿಕೆಗಳು ನೇರವಾಗಿ ಜನರನ್ನು ತಲುಪುತ್ತದೆ. ಸಮಾಜದಲ್ಲಿ ವ್ಯಾಪಕವಾದ ಜಾಗೃತಿ, ತಿಳುವಳಿಕೆ ಉಂಟಾಗುವುದು ಪ್ರಾದೇಶಿಕ ಭಾಷಾ ಪತ್ರಿಕೆಗಳಿಂದಲೇ ಹೆಚ್ಚು. ಅವು ಜನರ ಮೇಲೆ ನೇರ ಹಾಗೂ ಗಾಢ ಪರಿಣಾಮ ಉಂಟುಮಾಡುತ್ತವೆ. ಅವರ ಆಲೋಚನಾ ಕ್ರಮವನ್ನು ಬದಲಿಸುತ್ತವೆ. ಅವರ ಅಭಿಪ್ರಾಯವನ್ನು ರೂಢಿಸಿ ಒಂದು ರೀತಿಯ ಶೈಕ್ಷಣಿಕ ಕಾರ್ಯವನ್ನು ಮಾಡುತ್ತವೆ. ಇಂಗ್ಲೀಷ್ ಮತ್ತು ಇಂಗ್ಲೀಷೇತರ ಪತ್ರಕರ್ತರಲ್ಲಿ ಬೇಧ-ಭಾವ ಉಂಟು ಮಾಡುವುದು ಖಂಡಿತ ಅನುಚಿತ.

ಕಾಗಲಕರ್ ಅವರಲ್ಲಿ ಇಂತಹ ಯಾವುದೇ ಕ್ಲೀಷೆ, ಮೇಲರಿಮೆ, ಕೀಳರಿಮೆ, ಪೂರ್ವಗ್ರಹಗಳಿಗೆ ಅವಕಾಶವೇ ಇರಲಿಲ್ಲ. ಅವರು ಸ್ಥಳೀಯ ಪತ್ರಿಕೆಗಳ ವರದಿಗಾರರನ್ನು ಕೂಡ ಪ್ರೀತಿ, ವಾತ್ಸಲ್ಯದಿಂದ ಕಾಣುತ್ತಿದ್ದರು. ಅವರಿಗೆ ಮಾರ್ಗದರ್ಶನ ಮಾಡುತ್ತಿದ್ದರು, ಉತ್ತೇಜನ ನೀಡುತ್ತಿದ್ದರು.

ಶುಕ್ರವಾರದ ಸೊಗಡು

ಕೆಲ ವರ್ಷಗಳ ನಂತರ 'ಹಿಂದು' ಪತ್ರಿಕೆ ಸಿನೆಮಾ, ನಾಟಕ, ಸಂಗೀತ, ಕಲೆ, ಮುಂತಾದ ಸಾಂಸ್ಕೃತಿಕ ಆಯಾಮಗಳಿಗಾಗಿಯೇ ಪ್ರತಿ ಶುಕ್ರವಾರ ನಾಲ್ಕು ಪುಟಗಳ ಪುರವಣಿಯನ್ನು ಪ್ರಕಟಿಸಲು ಪ್ರಾರಂಭಿಸಿತು. ಈ ಮುಂಚೆ ಪತ್ರಿಕೆಯ ಮುಖ ಸಂಚಿಕೆಯಲ್ಲೇ ಎರಡು ಪುಟಗಳನ್ನು ಪತ್ರಿಕೆ ಈ ಉದ್ದೇಶಕ್ಕಾಗಿ ಶುಕ್ರವಾರದಂದು ಮೀಸಲಿಟ್ಟಿತ್ತು.

ಶುಕ್ರವಾರದ ಪ್ರತ್ಯೇಕ ಸಾಂಸ್ಕೃತಿಕ ಪುರವಣಿ ಕಾಗಲಕರ್ ಪಾಲಿಗೆ ವರದಾನವಾಗಿತ್ತು. ಅವರ ಆಸಕ್ತಿ ಮತ್ತು ಮನೋಧರ್ಮಕ್ಕೆ ಅದು ಅತ್ಯಂತ ಪೂರಕವಾಗಿತ್ತು. ತಮ್ಮ ಸಾಂಸ್ಕೃತಿಕ ಸಾಧ್ಯತೆಗಳಿಗ ಅಭಿವ್ಯಕ್ತಿಗೆ ಈ ಪುರವಣಿ ಅವರಿಗೆ ಅತ್ಯಂತ ಪರಿಣಾಮಕಾರಿ ವೇದಿಕೆಯಾಗಿತ್ತು.

ತಮ್ಮ ಬರಪಣಿಗೆಯ ಜಾಯಮಾನಕ್ಕೆ ತಕ್ಕುದಾಗಿದ್ದ ಶುಕ್ರವಾರದ ಸಂಚಿಕೆಯನ್ನು ಶ್ರೀಮಂತಗೊಳಿಸಿದವರಲ್ಲಿ ಕಾಗಲಕರ್ ಪ್ರಮುಖರು. ಕಲಬುರಗಿ ಜಿಲ್ಲೆಯ ಎಲ್ಲ ಸಾಹಿತ್ಯ, ಸಾಂಸ್ಕೃತಿಕ, ಐತಿಹಾಸಿಕ, ಪಾರಂಪರಿಕ, ಚಾರಿತ್ರಿಕ ವಿಷಯಗಳ ಬಗ್ಗೆ ಓತಪ್ರೋತವಾಗಿ ಬರೆದವರು ಕಾಗಲಕರ್. ಕಾಗಲಕರ್ ಅವರ ಬರಹವಿಲ್ಲದ ಶುಕ್ರವಾರದ ಸಂಚಿಕೆ ತೀರಾ ಅಪರೂಪ. ಜನಮರೆತೇ ಹೋಗಿದ್ದ ಹತ್ತು ಹಲವು ಸಂಗತಿಗಳನ್ನು, ವಿಷಯಗಳನ್ನು ತಮ್ಮ ಲೇಖನಗಳ ಮೂಲಕ ಮತ್ತೆ ಅವರ ಸ್ಮೃತಿಪಟಲದೊಳಗೆ ಪ್ರವೇಶಿಸುವಂತೆ ಮಾಡಿದರು.

ತಮ್ಮ ಪತ್ರಿಕಾ ಬರವಣಿಗೆಯ ಕೊನೆಯ ಒಂದು, ಒಂದುವರೆ ದಶಕಗಳ ಅವಧಿಯಲ್ಲಿ ಅವರು ದಿಢೀರ್ ಸುದ್ದಿಗಳಿಗೆ, ಸಾಮಾನ್ಯ ಬೆಳವಣಿಗೆಗಳಿಗೆ ಅಷ್ಟೊಂದು ಮಹತ್ವ ಕೊಡುತ್ತಿರಲಿಲ್ಲ. ವಿಶೇಷ ಲೇಖನ / ವರದಿಗಳನ್ನು ಮಾಡುವುದರಲ್ಲಿಯೇ ತೀವ್ರ ಆಸಕ್ತಿ ರೂಢಿಸಿಕೊಂಡರು. ಕಾಗಲಕರ್ ಅವರ ಲೇಖನಗಳಿಗಾಗಿ 'ಹಿಂದು' ಪತ್ರಿಕೆಯ ಸಂಪಾದಕೀಯ ಸಿಬ್ಬಂದಿ ಪ್ರತಿವಾರವೂ ಕಾಯ್ದು ಕುಳಿತಿರುತ್ತಿದ್ದರು. ಪತ್ರಿಕೆಯ ಸಂಪಾದಕ ಬಳಗದಲ್ಲಿ ಅವರೊಬ್ಬ ವಿಶ್ವಾಸಾರ್ಹ ವರದಿಗಾರರಾಗಿ ರೂಪುಗೊಂಡಿದ್ದರು.

ಕಾಗಲಕರ್ ಮತ್ತು ಶುಕ್ರವಾರದ ಸಂಚಿಕೆ ಪರಸ್ಪರ ಪೂರಕವಾಗಿದ್ದವು. ಪತ್ರಿಕೆಯ ಓದುಗರು ಪ್ರತಿ ವಾರವೂ ಅವರ ಬರಹಕ್ಕಾಗಿ ಕಾತುರದಿಂದ ನಿರೀಕ್ಷಿಸುತ್ತಿದ್ದರು. ಈ ವಾರ ಕಾಗಲಕರ್ ಏನು ಬರೆದಿದ್ದಾರೆ, ಮುಂದಿನ ವಾರ ಏನು ಬರೆಯಬಹುದು ಎಂಬ ಜಿಜ್ಞಾಸೆ, ಚರ್ಚೆ ಓದುಗರಲ್ಲಿ ಬೆಳೆದು ಬಂದಿತ್ತು. 'ಹಿಂದು' ಪತ್ರಿಕೆಯ ವರದಿಗಾರನಾಗುವುದರ ಜೊತೆಗೆ ಕಾಗಲಕರ್ ಓರ್ವ ಸಾಂಸ್ಕೃತಿಕ ರಾಯಭಾರಿಯಾಗಿ ಆವಿರ್ಭವಿಸಿದ್ದರು.

'ಹಿಂದು' ಪತ್ರಿಕೆಗೆ ಇತರ ಸಮಕಾಲೀನ ಇಂಗ್ಲೀಷ್ ಪತ್ರಿಕೆಗಳು ಅದರಲ್ಲೂ ಮುಖ್ಯವಾಗಿ 'ಇಂಡಿಯನ್ ಎಕ್ಸ್‌ಪ್ರೆಸ್' ಮತ್ತು 'ಡೆಕ್ಕನ್ ಹೆರಾಲ್ಡ್' ತೀವ್ರ ಪೈಪೋಟಿ ನೀಡಲು ಪ್ರಾರಂಭವಾದ ಮೇಲೆ 'ಹಿಂದು' ಪತ್ರಿಕೆಯಲ್ಲಿ ತೀವ್ರ ಬದಲಾವಣೆಗಳಾದವು. ತನ್ನ ಇತರ ಎರಡು ಪತ್ರಿಕೆಗಳಿಗೆ ಕಲಬುರಗಿಯಲ್ಲಿ ಪೂರ್ಣಾವಧಿ ವರದಿಗಾರರು ಇರುವುದನ್ನು 'ಹಿಂದು' ಗಂಭೀರವಾಗಿ ಪರಿಗಣನೆಗೆ ತೆಗೆದುಕೊಂಡಿತು. ಕಲಬುರಗಿ ಬೆಳೆಯುತ್ತಲೇ ಇದ್ದಿತು. ಅಂತೆಯೇ ಅದರ ಮುದ್ರಣ ಮಾಧ್ಯಮದ ಬೇಡಿಕೆಯೂ ವೃದ್ಧಿಸಲಾರಂಭಿಸಿತು. ವಿಭಾಗೀಯ ಕೇಂದ್ರವೂ, ವಿಶ್ವವಿದ್ಯಾಲಯದ ಕೇಂದ್ರವೂ, ಶೈಕ್ಷಣಿಕವಾಗಿ ಅತ್ಯಂತ ವೇಗದಿಂದ ಬೆಳೆಯುತ್ತಿದ್ದುದರಿಂದಾಗಿಯೂ ಮತ್ತು ರಾಜಕೀಯ ಹಾಗೂ ಸಾಮಾಜಿಕವಾಗಿ ತೀವ್ರ ಚಟುವಟಿಕೆಯ ಕೇಂದ್ರವಾಗಿಯೂ, ಕಲಬುರಗಿ ಬೆಳೆದು ಬಂದಿದ್ದರಿಂದ ಅಲ್ಲೊಬ್ಬ ಪೂರ್ಣಾವಧಿ ವರದಿಗಾರನ್ನು ನೇಮಿಸಿಕೊಳ್ಳಲು 'ಹಿಂದು' ಪತ್ರಿಕೆ ನಿರ್ಧರಿಸಿತು.

ಕೃಷ್ಣಾ ಕಣಿವೆಯ ಹತ್ತಾರು ನೀರಾವರಿ ಯೋಜನೆಗಳು ಕಲಬುರಗಿ ಜಿಲ್ಲೆಯಲ್ಲೇ ಬರುತ್ತವೆ. ಕೃಷ್ಣಾ ಮೇಲ್ದಂಡೆ ಯೋಜನೆಯಲ್ಲದೆ ಇತರ ಅನೇಕ ಬೃಹತ್, ಮಧ್ಯಮ ಮತ್ತು ಸಣ್ಣ ನೀರಾವರಿ ಯೋಜನೆಗಳಿಂದ ಸಮೃದ್ಧವಾದ ಜಿಲ್ಲೆ ಕಲಬುರಗಿ. ಬರ ಮತ್ತು ಕ್ಷಾಮಕ್ಕೆ ಒಂದು ಕಾಲದಲ್ಲಿ ಕುಖ್ಯಾತವಾಗಿದ್ದ ಕಲಬುರಗಿ

ನೀರಾವರಿಯಿಂದಾಗಿ ಸಮೃದ್ಧಿಯ ಪಥದಲ್ಲಿ ದಾಪುಗಾಲು ಹಾಕಲು ಪ್ರಾರಂಭಿಸಿತು. ಈ ಎಲ್ಲ ಬೆಳವಣಿಗೆಗಳ ಹಿನ್ನೆಲೆಯಲ್ಲಿ 'ಹಿಂದು' ಪತ್ರಿಕೆ ಕಲಬುರಗಿಯಲ್ಲಿ ಓರ್ವ ಪೂರ್ಣಾವಧಿ ವರದಿಗಾರನನ್ನು ನೇಮಿಸಿಕೊಳ್ಳಲು ನಿರ್ಧರಿಸಿತು. ಪತ್ರಿಕೆ ತಾನು ರೂಪಿಸಿಕೊಂಡ ಹೊಸ ನೀತಿಗನುಗುಣವಾಗಿ ಎಲ್ಲ ಪ್ರಮುಖ ಜಿಲ್ಲೆಗಳಲ್ಲಿ ಪೂರ್ಣಾವಧಿ ವರದಿಗಾರರನ್ನು ನೇಮಿಸಿಕೊಳ್ಳಲು ನಿರ್ಣಯ ಕೈಕೊಂಡಿತು. ಅದಕ್ಕೆ ಅನುಗುಣವಾಗಿ ೧೯೯೦ ರ ದಶಕದ ಆರಂಭದಲ್ಲಿ ಪತ್ರಿಕೆ ಕಲಬುರಗಿಯಲ್ಲಿ ತನ್ನ ಮೊದಲ Staff Correspondent ಅನ್ನು ನೇಮಕ ಮಾಡಿಕೊಂಡಿತು.

ಅತ್ಯಂತ ಸಂತಸದ ಸಂಗತಿ ಎಂದರೆ ಪೂರ್ಣಾವಧಿ ವರದಿಗಾರನನ್ನು ನೇಮಕ ಮಾಡಿದ ಮೇಲೆಯೂ 'ಹಿಂದು' ಪತ್ರಿಕೆ ಕಾಗಲಕರ್ ಅವರ ಸೇವೆಯನ್ನು ಮೊಟಕುಗೊಳಿಸಲಿಲ್ಲ. ಕಾಗಲಕರ್ ಅವರ ಸಾಂಸ್ಕೃತಿಕ ಬರವಣಿಗೆ ಕೌಶಲವನ್ನು ಮನಗಂಡಿದ್ದ ಪತ್ರಿಕೆ ಅವರ ಸೇವೆಯನ್ನು ಮುಂದುವರೆಸಿಕೊಂಡು ಹೋಗಲು ನಿರ್ಧರಿಸಿದ್ದು ಪತ್ರಿಕೆಯ ಸಂಪಾದಕ ವರ್ಗ ಮತ್ತು ಆಡಳಿತ ವರ್ಗದ ಉದಾರ ಹಾಗೂ ಉಚಿತ ಧೋರಣೆಯ ಸಂಕೇತವಾಗಿದೆ. ಹೊಸ ಚಿಗುರು ಬಂದ ಮೇಲೆ ಹಳೆಯ ಬೇರನ್ನು ಕಡೆಗಣಿಸದೆ ಇರುವ ಪತ್ರಿಕೆಯ ನೀತಿ ಪ್ರಶಂಸಾರ್ಹವಾದದ್ದು.

ಪೂರ್ಣಾವಧಿ ವರದಿಗಾರನ ನೇಮಕವಾದ ಮೇಲಿನ ಸಂದರ್ಭವನ್ನು ಕಾಗಲಕರ್ ಒಂದು ಸವಾಲಾಗಿಯೇ ಸ್ವೀಕರಿಸಿದರು. ಪತ್ರಿಕೆ ತಮ್ಮ ಮೇಲೆ ಇರಿಸಿದ್ದ ನಂಬಿಕೆ, ವಿಶ್ವಾಸಕ್ಕೆ ಪೂರಕವಾಗಿ ಕಾಗಲಕರ್ ತಮ್ಮ ಅರವತ್ತರ ಇಳಿ ವಯಸ್ಸಿನಲ್ಲೂ ಅತ್ಯಂತ ಚುರುಕಾಗಿ ಕಾರ್ಯನಿರ್ವಹಿಸಿದರು.

ಬದಲಾದ ಸಂದರ್ಭ ಅವರಿಗೆ ಒಂದು ಸದಾವಕಾಶವಾಗಿ ಒದಗಿ ಬಂದಿತ್ತು. ದೈನಂದಿನ ಘಟನೆ, ಬೆಳವಣಿಗೆಗಳಿಗೆ ಸಂಬಂಧಿಸಿದ ವರದಿಗಳನ್ನು ಅವರು ಸಂಪೂರ್ಣವಾಗಿ ತೊರೆದರು. ತಮ್ಮ ಆಸಕ್ತಿಯ ಆದ್ಯತಾ ವಲಯವಾದ ಸಾಂಸ್ಕೃತಿಕ ಕ್ಷೇತ್ರಕ್ಕೆ ಅವರು ಇನ್ನಷ್ಟು ಹತ್ತಿರವಾದರು. ಈಗ ಅವರಿಗೆ ಸಾಮಾನ್ಯ ವರದಿಗಾರಿಕೆಯ ಯಾವೊಂದೂ ಜವಾಬ್ದಾರಿ, ಜಂಜಾಟ ಇಲ್ಲದಿದ್ದುದರಿಂದ ತಮ್ಮನ್ನು ಸಂಪೂರ್ಣವಾಗಿ ಸಾಂಸ್ಕೃತಿಕ ಕ್ಷೇತ್ರಕ್ಕೆ ಸಮರ್ಪಿಸಿಕೊಂಡರು.

ಕಾಗಲಕರ್ ಅವರು ೧೯೮೭ರಲ್ಲೇ ಎಂ.ಎಸ್.ಕೆ. ಮಿಲ್ಸ್ ಉದ್ಯೋಗದಿಂದ ನಿವೃತ್ತರಾಗಿದ್ದರಷ್ಟೆ. ಆಗ ಅವರಿಗೆ ವಯಸ್ಸು ೬೦. ಸುಮಾರು ಮೂರು ದಶಕಗಳ ಈ ಅವಧಿಯಲ್ಲಿ ಕಾಗಲಕರ್ 'ಸಂಯುಕ್ತ ಕರ್ನಾಟಕ'ದಲ್ಲಿ ಎರಡು ದಶಕ ಮತ್ತು 'ಹಿಂದು'ನಲ್ಲಿ ಒಂದು ದಶಕದ ಸೇವೆಯನ್ನು ಅರೆಕಾಲಿಕ

ವರದಿಗಾರನಾಗಿಯೇ ಅತ್ಯಂತ ಸಮರ್ಥವಾಗಿ, ಅರ್ಥಪೂರ್ಣವಾಗಿ ನಿಭಾಯಿಸಿದರು. ನಿವೃತ್ತಿಯ ನಂತರ ಪತ್ರಿಕೆ ಅವರನ್ನೇನೂ ಪೂರ್ಣಾವಧಿ ವರದಿಗಾರನನ್ನಾಗಿ ನೇಮಿಸಿಕೊಳ್ಳಲಿಲ್ಲ ನಿಜ. ಆದರೆ ಕಾಗಲಕರ್ ಅವರಿಗೆ ಪೂರ್ಣಾವಧಿ ವರದಿಗಾರಿಕೆಯ ಅವಕಾಶ ದೊರೆತದ್ದು ನಿವೃತ್ತಿಯ ನಂತರ. ನಿವೃತ್ತಿಯಾದ ಮೇಲೂ ಅವರು ಒಂದು ದಶಕದ ಕಾಲ ಅವರು ಪತ್ರಕರ್ತನಾಗಿ 'ಹಿಂದು' ಪತ್ರಿಕೆಯಲ್ಲಿ ಅಮೋಘ ಸೇವೆ ಸಲ್ಲಿಸಿದರು.

ನಿವೃತ್ತಿಯ ನಂತರ ಅವರ ಬರವಣಿಗೆ ಸಾಧ್ಯತೆಗಳು ಮತ್ತಷ್ಟು ಗರಿಗೆದರಿಕೊಂಡವು. ದೈನಂದಿನ ಬೆಳವಣಿಗೆಗಳನ್ನಾಗಲೀ, ಪತ್ರಿಕಾಗೋಷ್ಠಿಗಳನ್ನಾಗಲೀ ಅವರು ವರದಿ ಮಾಡುವ ಅವಶ್ಯಕತೆ ಇರಲಿಲ್ಲವಾದ್ದರಿಂದ ಅವರು ಸಂಪೂರ್ಣವಾಗಿ ವಿಶೇಷ ವರದಿ, ಅಭ್ಯುದಯ ವರದಿ, ಸಾಂಸ್ಕೃತಿಕ ವರದಿಗಳಿಗೆ ಹೆಚ್ಚು ಹೆಚ್ಚು ಗಮನ ಹರಿಸಲು ಸಾಧ್ಯವಾಯಿತು. ಉಪಜೀವನಕ್ಕಾಗಿ ನೆಚ್ಚಿಕೊಂಡಿದ್ದ ಕಾಯಂ ನೌಕರಿಯಿಂದ ನಿವೃತ್ತಿ ಹೊಂದಿದ ಮೇಲೆ ಮತ್ತು 'ಹಿಂದು' ಪತ್ರಿಕೆಗೆ ಪೂರ್ಣವಧಿ ವರದಿಗಾರನ ನೇಮಕವಾದ ನಂತರ ಕಾಗಲಕರ್ ಅವರು ಔಪಚಾರಿಕವಾಗಿ ಪೂರ್ಣವಧಿ ವರದಿಗಾರನಾಗಿ ಕೆಲಸ ಮಾಡಿಲ್ಲದೆ ಇರಬಹುದು. ಆದರೆ ಅವರು ವಾಸ್ತವವಾಗಿ 'ಹಿಂದು' ಪತ್ರಿಕೆಯ ಪೂರ್ಣವಧಿ ಸಾಂಸ್ಕೃತಿಕ ವರದಿಗಾರರಾಗಿ ಪರಿವರ್ತಿತರಾಗಿದ್ದರು!

ತಮ್ಮ ಜೀವನದ ಕೊನೆಯ ಉಸಿರು ಇರುವವರೆಗೂ ಅವರು ಬರೆಯುತ್ತಲೇ ಬದುಕಿದರು. ಪತ್ರಕರ್ತರಾಗಿಯೆ ಪರಿನಿರ್ವಾಣ ಹೊಂದಿದ ಕಾಗಲಕರ್ ತಮ್ಮ ಹಿಂದೆ ಒಂದು ಭವ್ಯ ಪರಂಪರೆಯನ್ನೇ ಸೃಷ್ಟಿಸಿ ಹೋಗಿದ್ದಾರೆ.

ಆ ಪರಂಪರೆಯಿಂದ ನವಪೀಳಿಗೆಯ ಪತ್ರಕರ್ತರು ಕಲಿಯಬೇಕಾದದ್ದು ಅಪಾರವಿದೆ.

p

ಅಧ್ಯಾಯ-೫

ಕಾರ್ಮಿಕರ ಕಣ್ಮಣಿ

ಕಾರ್ಮಿಕ ಸಂಘಟನೆ ಕಾಗಲಕರ್ ಅವರ ಮತ್ತೊಂದು ಆಸಕ್ತ ಕ್ಷೇತ್ರವಾಗಿತ್ತು. ಕಾರ್ಮಿಕ ಚಳವಳಿ ಮತ್ತು ಕಾರ್ಮಿಕರ ಕಲ್ಯಾಣ ವಿಷಯದಲ್ಲಿ ಅವರ ಪಾತ್ರ ಅತ್ಯಂತ ಮಹತ್ವದ್ದು ಮತ್ತು ಐತಿಹಾಸಿಕವೂ ಆಗಿದೆ. ಒಂದು ರೀತಿಯಲ್ಲಿ ಹೇಳುವುದಾದರೆ ಕಲಬುರಗಿಯಲ್ಲಿ ಕಾರ್ಮಿಕ ಆಂದೋಲನವನ್ನು ಆರಂಭ ಮಾಡಿದವರಲ್ಲಿ ಕಾಗಲಕರ್ ಅವರೂ ಒಬ್ಬರು. ಆದರೆ ಕಾಗಲಕರ್ ಅವರ ಕಾರ್ಮಿಕ ಹೋರಾಟ ಇತರ ಯಾವುದೇ ಕಾರ್ಮಿಕ ಸಂಘಟನೆಗಳ ನಾಯಕರುಗಳಿಗಿಂತ ವಿಭಿನ್ನವೂ, ವಿಶಿಷ್ಟವೂ ಆಗಿತ್ತು.

ಕಲಬುರಗಿಯ ಮಹಬೂಬಶಾಹಿ ಕುಲಬರ್ಗಾ (ಎಂ.ಎಸ್.ಕೆ.) ಮಿಲ್ಸ್ ಈ ನಗರದ ಆರ್ಥಿಕ ಚೇತನದ ಮೂಲ ಸೆಲೆಯಾಗಿತ್ತು. ಒಂದು ಕಾಲದಲ್ಲಿ ಸುಮಾರು ನಾಲ್ಕು ಸಾವಿರ ಉದ್ಯೋಗಿಗಳು ಈ ಸಂಯುಕ್ತ ಜವಳಿ ಗಿರಣಿಯಲ್ಲಿ ಕೆಲಸ ಮಾಡುತ್ತಿದ್ದರು. ಇನ್ನು ಪರೋಕ್ಷವಾಗಿ ಕೆಲಸ ಮಾಡುವವರ ಸಂಖ್ಯೆ ಹಲವಾರು ಸಾವಿರ ಆಗಿತ್ತು. ಹೈದ್ರಾಬಾದ ಕರ್ನಾಟಕ ಪ್ರದೇಶದ ಅತ್ಯಂತ ಪುರಾತನ ಜವಳಿ ಗಿರಣಿಗಳಲ್ಲಿ ಒಂದಾಗಿದ್ದ ಎಂ.ಎಸ್.ಕೆ. ಮಿಲ್ಸ್ ಔದ್ಯೋಗಿಕ ಕ್ಷೇತ್ರದಲ್ಲಿ ಒಂದು ಕ್ರಾಂತಿಯನ್ನು ಉಂಟು ಮಾಡಿತ್ತು. ಮೊದಲು ಖಾಸಗಿ ಒಡೆತನದಲ್ಲಿದ್ದಾಗ ಮತ್ತು ನಂತರ ರಾಷ್ಟ್ರೀಯ ಜವಳಿ ನಿಗಮದ (National Textile Corporation) ಒಡೆತನಕ್ಕೆ ಬಂದ ಮೇಲೂ ಎಂ.ಎಸ್.ಕೆ. ಮಿಲ್ಸ್ ಉತ್ತಮ ರೀತಿಯಲ್ಲಿ ಕೆಲಸ ಮಾಡುತ್ತಿತ್ತು. ಕೆಲವಾರು ವರ್ಷ ಅದು ಲಾಭದಾಯಕವಾಗಿಯೂ ಮುನ್ನಡೆದಿತ್ತು. ಇಲ್ಲಿ ತಯಾರಾದ ಸುಂದರ ರಂಗುರಂಗಿನ ಬಟ್ಟೆಗಳು ದೇಶದಲ್ಲೇ ಖ್ಯಾತಿಯನ್ನು ಪಡೆದಿದ್ದವು. ಪಾರಂಪಾರಿಕವಾಗಿ ಕೆಲಸ ಮಾಡುತ್ತಿದ್ದ ಈ ಗಿರಣಿಯ ಕೆಲಸಗಾರರು ಅತ್ಯಂತ ಕುಶಲ ಕರ್ಮಿಗಳಾಗಿದ್ದರು. ಅವರು ಸುರಿಸಿದ ಬೆವರಿನ ಫಲವಾಗಿ ಎಂ.ಎಸ್.ಕೆ. ಮಿಲ್ಸ್ ಒಂದು ಕಾಲಕ್ಕೆ ಭಾರತದಲ್ಲೇ ಖ್ಯಾತಿ ಹೊಂದಿದ ಜವುಳಿ ಗಿರಣಿಯಾಗಿತ್ತು.

ಮೆಹಬೂಬ ಶಾಹಿ ಕಲ್ಬುರ್ಗಿ ಮಿಲ್ಸ್ ಕಂಪನಿ ೧೮೮೪ರಲ್ಲಿ ಪ್ರಾರಂಭಗೊಂಡಿತು. ಬೆಂಗಳೂರು ಮೆ: ಸಭಾಪತಿ ಅಯ್ಯ ಮತ್ತು ಅಖಿಲಾಂಡಯ್ಯ ಎಂಬ ಉದ್ಯಮ ಸಾಹಿಸಿಗಳು ೧೮೮೩ರಲ್ಲಿ ಹೈದ್ರಾಬಾದಿನ ನಿಜಾಂನಿಂದ ಸನದು ಪಡೆದು ಅದೇ ವರುಷ ಮದರಾಸಿನಲ್ಲಿ 'ದಿ ಮೆಹಬೂಬ ಶಾಹಿ ಮಿಲ್ಸ್ ಆಫ್ ಕಲಬುರಗಿ ಕಂಪನಿ ಲಿಮಿಟೆಡ್' ಎಂಬ ಹೆಸರಿನಲ್ಲಿ ನೋಂದಣಿ ಮಾಡಿಸಿ ೧೮೮೪ರಲ್ಲಿ ಗುಲ್ಬರ್ಗದಲ್ಲಿ ಅದರ ಶಿಲಾನ್ಯಾಸ ಕಾರ್ಯ ನೆರವೇರಿಸಿದರು. ಇದು ೧೮೮೬ರಲ್ಲಿ ಕಾರ್ಯಾರಂಭ ಮಾಡಿತು. ಕಾನೂನಿನ ತೊಡಕಿನಿಂದಾಗಿ ಕಂಪನಿ ಮುಚ್ಚಲ್ಪಟ್ಟಿತು.

ಬಟ್ಟೆ ಗಿರಣಿಯನ್ನು ೧೮೮೬ರಲ್ಲಿ ಕಂಪನಿ ಕಾಯ್ದೆ ೧೮೮೨ರ ಅನ್ವಯ ಮುಂಬೈಯಲ್ಲಿ 'ದಿ ಮೆಹಬೂಬ ಶಾಹಿ ಕಲ್ಬುರ್ಗಿ ಮಿಲ್ಸ್ ಕಂಪನಿ' ಎಂಬ ಹೆಸರಲ್ಲಿ ನೋಂದಣಿ ಮಾಡಿಸಲಾಯಿತು. ಕಂಪನಿ ಬೆಳವಣಿಗೆ ಹೊಂದುತ್ತ ಆಡಳಿತಾತ್ಮಕವಾಗಿ ಹಲವಾರು ಬದಲಾವಣೆಗಳನ್ನು ಕಂಡಿತು. ಇದೇ ಕಾಲಾವಧಿಯಲ್ಲಿ ಸಭಾಪತಿ ಅಯ್ಯ ಮತ್ತು ಖಾನ್ ಬಹದ್ದೂರ ಶಾಪುರ್ಜಿ ಎಂಡುಲ್ಜಿ ಚೆನಾಯ್ ಇವರ ಮಧ್ಯೆ ಒಪ್ಪಂದ ಏರ್ಪಟ್ಟು ಕೊನೆಯವರನ್ನು ಪಾಲುದಾರರನ್ನಾಗಿ ಮಾಡಿಕೊಳ್ಳಲಾಯಿತು. ೧೮೮೯ರ ನಂತರ ಚೆನಾಯ್‌ನವರು ಮಿಲ್ಲಿನ ಮಾಲೀಕರಾಗಿಯೂ, ಸಭಾಪತಿ ಅಯ್ಯ ಮಿಲ್ಲಿನ ಏಳಿಗೆಗಾಗಿ ದುಡಿದರು. ಮೊದಮೊದಲು ಕಂಪನಿ ಲಾಭಗಳಿಸಿದರೂ ನಂತರದ ವರ್ಷಗಳಲ್ಲಿ ನಷ್ಟ ಅನುಭವಿಸತೊಡಗಿತು. ಇದರ ಆಡಳಿತ ವ್ಯವಸ್ಥೆಯು ೧೯೬೦ರ ವರೆಗೂ ಖಾಸಗಿ ಒಡೆತನಕ್ಕೊಳಪಟ್ಟಿದ್ದು ಹಣದ ಮುಗ್ಗಟ್ಟಿನಿಂದ ೧೯೬೨ರಲ್ಲಿ ಮುಚ್ಚಲ್ಪಟ್ಟಿತು. ಮೈಸೂರು ರಾಜ್ಯ ಸರಕಾರ (ಈಗ ಕರ್ನಾಟಕ) ಕಾರ್ಖಾನೆ ಕಾರ್ಮಿಕರ ಹಿತದೃಷ್ಟಿಯಿಂದ ಅದನ್ನು ಮುಂದುವರೆಸುವ ನಿರ್ಧಾರ ಕೈಕೊಂಡಿತು. ೧೯೬೩ರಲ್ಲಿ ಅದರ ಅರ್ಧಕ್ಕೂ ಹೆಚ್ಚಿನ, ಅಂದರೆ, ಶೇಕಡಾ ೫೧ರಷ್ಟು ಶೇರುಗಳನ್ನು ಕೊಂಡು ಕೂಡು ಬಂಡವಾಳ ಸಂಸ್ಥೆಯನ್ನಾಗಿ ರಚಿಸಲಾಯಿತು. ಈ ಮೂಲಕ ರಾಜ್ಯ ಸರಕಾರ ಕಂಪನಿಯನ್ನು ತನ್ನ ಹತೋಟಿಗೆ ತೆಗೆದುಕೊಂಡಿತು.

೧೯೬೪ರಲ್ಲಿ ಮಿಲ್ಲಿನ ಆಸ್ತಿಯ ಮೌಲ್ಯ ರೂ. ೪೭.೮೦ ಲಕ್ಷ ಆಗಿತ್ತು. ೧೯೬೫ರಲ್ಲಿ ಇದು ೨,೬೦೦ ಕಾರ್ಮಿಕರಿಗೆ ಉದ್ಯೋಗ ಒದಗಿಸಿ ಮಾಸಿಕ ಮೂರು ಲಕ್ಷ ರೂಪಾಯಿ ವೇತನ ನೀಡುತ್ತಿತ್ತು.

ಆಶಕ್ತ ಬಟ್ಟೆ ಗಿರಣಿಗಳನ್ನು ತನ್ನ ಸ್ವಾಧೀನಕ್ಕೆ ತೆಗೆದುಕೊಳ್ಳುವ ಕೇಂದ್ರ ಸರಕಾರದ ನೀತಿ ಅನ್ವಯ ರಾಷ್ಟ್ರೀಯ ಜವಳಿ ನಿಗಮ (ಎನ್.ಟಿ.ಸಿ.) ೧೯೭೩ರಲ್ಲಿ

ಎಂ.ಎಸ್.ಕೆ. ಗಿರಣಿಯನ್ನು ತನ್ನ ಸ್ವಾಧೀನಕ್ಕೆ ತೆಗೆದುಕೊಂಡಿತು. ೧೯೮೧ರಲ್ಲಿ ಈ ಗಿರಣಿ ೩೩ ಸಾವಿರ ಕದಿರು ಹಾಗೂ ೬೦೦ ಮಗ್ಗಗಳನ್ನು ಹೊಂದಿದ್ದು, ಸುಮಾರು ಮೂರು ಸಾವಿರ ಕಾರ್ಮಿಕರಿಗೆ ಉದ್ಯೋಗ ಒದಗಿಸಿ ಬಟ್ಟೆ ಮತ್ತು ನೂಲು ತಯಾರಿಕಾ ಕಾರ್ಯದಲ್ಲಿ ತೊಡಗಿತು. ೧೯೯೪-೯೫ರಲ್ಲಿ ಇದರಲ್ಲಿ ತೊಡಗಿಸಲ್ಪಟ್ಟ ಬಂಡವಾಳ ರೂ. ೪೮.೧೨ ಕೋಟಿ ಆಗಿದ್ದು ಇದರ ಉತ್ಪಾದನಾ ಸಾಮರ್ಥ್ಯ ೧೯.೮೦ ಲಕ್ಷ ಕೆ.ಜಿ. ನೂಲು ಮತ್ತು ೧.೪೮ ಲಕ್ಷ ಮೀಟರ್ ಬಟ್ಟೆ ಆಗಿತ್ತು. ೧೯೯೫-೯೬ರಲ್ಲಿ ಕಾರ್ಮಿಕರ ಸಂಖ್ಯೆ ೧೦೨೨ಕ್ಕೆ ಇಳಿಯಿತು. ಇದರಲ್ಲಿ ಉತ್ಪಾದಿಸಲ್ಪಟ್ಟ ನೂಲು ಮತ್ತು ಬಟ್ಟೆಯನ್ನು ಎನ್.ಟಿ.ಸಿ. ಮಾರುಕಟ್ಟೆ ಮಳಿಗೆಗಳ ಮೂಲಕ ದೇಶದಾದ್ಯಂತ ಮಾರಾಟ ಮಾಡಲಾಗುತ್ತಿತ್ತು.

ಹಲವಾರು ಏರಿಳಿತಗಳನ್ನು ಕಂಡ ಎಂ.ಎಸ್.ಕೆ. ಮಿಲ್ಸ್ ೧೯೯೦ರ ದಶಕದಲ್ಲಿ ಅವನತಿಯ ಹಾದಿಯನ್ನು ಹಿಡಿಯಿತು. ೧೯೯೬ರಲ್ಲಿ ಬಟ್ಟೆ ಉತ್ಪಾದನೆಯನ್ನು ಸ್ಥಗಿತಗೊಳಿಸಲಾಯಿತು. ಕಾಯಂ ಉದ್ಯೋಗಿಗಳಿಗೆ ಸ್ವಯಂ ನಿವೃತ್ತಿಯೋಜನೆಯನ್ನು ಜಾರಿಗೊಳಿಸಲಾಯಿತು, ಬರಬರುತ್ತ ಮಿಲ್ಲಿನ ಒಂದೊಂದೇ ಘಟಕವನ್ನು ಮುಚ್ಚಲಾಯಿತು. ವರ್ಷ ೨೦೦೦ ಹೊತ್ತಿಗೆ ಎಂ.ಎಸ್.ಕೆ. ಮಿಲ್ಲಿನ ಉತ್ಪಾದನಾ ಚಟುವಟಿಕೆಗಳು ಸಂಪೂರ್ಣವಾಗಿ ಸ್ಥಗಿತಗೊಂಡವು. ಕಚ್ಚಾ ಸಾಮಗ್ರಿಗಳ ಕೊರತೆ, ಹೊಸ ತಂತ್ರಜ್ಞಾನ ಅಳವಡಿಕೆಯಲ್ಲಿ ವೈಫಲ್ಯ ಕುಂದಿದ, ಮಾರುಕಟ್ಟೆಯ ಬೆಂಬಲ, ಉದಾರೀಕರಣ ಮತ್ತು ಜಾಗತೀಕರಣದ ನೀತಿಗಳು, ಹೆಚ್ಚುತ್ತಿರುವ ಆಡಳಿತ ವೆಚ್ಚ ಇತ್ಯಾದಿ ಕಾರಣಗಳಿಂದಾಗಿ ಗಿರಣಿ ಸುಮಾರು ತನ್ನ ೧೧೫ ವರ್ಷಗಳ ಅಸ್ತಿತ್ವದ ನಂತರ ಶಾಶ್ವತವಾಗಿ ಮುಚ್ಚಿಕೊಂಡಿತು. ಗುಲ್ಬರ್ಗ ನಗರಾಭಿವೃದ್ಧಿ ಪ್ರಾಧಿಕಾರ ಎಂ.ಎಸ್.ಕೆ. ಮಿಲ್ಸ್ ಜಾಗವನ್ನು ಖರೀದಿಸಿ ಈಗ ಅಲ್ಲಿ ವಸತಿ ಮತ್ತು ವ್ಯಾಪಾರಿ ಸಮುಚ್ಚಯಗಳನ್ನು ನಿರ್ಮಿಸುತ್ತಿದೆ. ಸಹಸ್ರಾರು ಜನರಿಗೆ ಪ್ರತ್ಯಕ್ಷ ಮತ್ತು ಪರೋಕ್ಷ ಉದ್ಯೋಗ ಕಲ್ಪಿಸಿ ಕಲ್ಬುರ್ಗಿಯ ಆರ್ಥಿಕ ಚೇತನವಾಗಿದ್ದ ಎಂ.ಎಸ್.ಕೆ. ಮಿಲ್ಸ್ ಈಗ ಬರೀ ನೆನಪು ಮಾತ್ರ.

೧೯೫೨-೫೩ರ ಅವಧಿಯಲ್ಲಿ ಕಾಗಲಕರ್ ಅವರು ಕಾರಕೂನರಾಗಿ ಎಂ.ಎಸ್.ಕೆ. ಮಿಲ್ಸಿನಲ್ಲಿ ಉದ್ಯೋಗಕ್ಕೆ ಸೇರಿದರು. ಆಗ ಅದು ಖಾಸಗಿ ಒಡೆತನದಲ್ಲಿತ್ತು. ಒಡೆತನದ ಬದಲಾವಣೆಗಳಿಂದ ಹಲವು ಸ್ಥಿತ್ಯಂತರಗಳನ್ನು ಕಂಡಾಗಲೂ ಕಾಗಲಕರ್ ಅವರ ಹುದ್ದೆಗೆ ಸಂಚಕಾರವೇನು ಬರಲಿಲ್ಲ, ಆಡಳಿತ ವರ್ಗ

ಬದಲಾದಂತೆಲ್ಲಾ ಕಾರ್ಖಾನೆ ಹೊಸದಾಗಿ ಶುರುವಾಗುತ್ತಿತ್ತು. ಮತ್ತು ಅಲ್ಲಿನ ಕಾರ್ಮಿಕರಿಗೆ ಹೊಸದಾಗಿ ನೇಮಕಾತಿ ಆದೇಶ ನೀಡಲಾಗುತ್ತಿತ್ತು.

ಕಾಗಲಕರ್ ಅವರು ಬಟ್ಟೆ ಗಿರಣಿಯ ಸುಂಕ ವಿಭಾಗದಲ್ಲಿ ಕಾರಕೂನರಾಗಿ ಸೇರಿ ಸುಮಾರು ಮೂರುವರೆ ದಶಕಗಳ ಕಾಲ ದುಡಿದು ಅದೇ ವಿಭಾಗದ ಮುಖ್ಯಸ್ಥರಾಗಿ ೧೯೮೭ರಲ್ಲಿ ನಿವೃತ್ತಿ ಹೊಂದಿದರು.

ಜೀವನಮುದ್ದಕ್ಕೂ ಕ್ರಿಯಾಶೀಲರಾಗಿದ್ದ ಕಾಗಲಕರ್ ಎಂ.ಎಸ್.ಕೆ. ಮಿಲ್ಲಿನಲ್ಲಿ ದುಡಿಯುವಾಗಲೂ ತಮ್ಮ ಕ್ರಿಯಾಶೀಲತೆಯನ್ನು ಮುಂದುವರೆಸಿಕೊಂಡು ಬಂದರು. ಬಟ್ಟೆ ಗಿರಣಿಯ ಕಾರಕೂನಿ ಅವರ ಉದರಂಭರಣೆಯ ವೃತ್ತಿಯಾಗಿದ್ದರೆ ಪತ್ರಿಕೋದ್ಯಮ ಅವರ ಪ್ರವೃತ್ತಿಯಾಗಿತ್ತು. ಅವರು ಮೂರು ದಶಕಗಳಿಗೂ ಮೀರಿ ವೃತ್ತಿ ಮತ್ತು ಪ್ರವೃತ್ತಿಯನ್ನು ಏಕಕಾಲಕ್ಕೆ ನಿಭಾಯಿಸಿದ್ದರೂ ಅದರಲ್ಲಿ ಯಾವುದಕ್ಕೂ ಕುಂದು ಉಂಟಾಗದಂತೆ ಎಚ್ಚರಿಕೆ ವಹಿಸಿದ್ದರು. ಜವಳಿ ಗಿರಣಿಯಲ್ಲಿ ತಮ್ಮ ಹುದ್ದೆಯಲ್ಲಿ ನಿಗಧಿತ ಅವಧಿಯಲ್ಲಿ ಅತ್ಯಂತ ನಿಷ್ಠೆ ಮತ್ತು ಪ್ರಾಮಾಣಿಕತೆಯಿಂದ ಕಾರ್ಯನಿರ್ವಹಿಸುತ್ತಿದ್ದ ಕಾಗಲಕರ್ ಅದಕ್ಕೆ ಹೊರತಾದ ಸಮಯದಲ್ಲಿ ಪತ್ರಿಕೋದ್ಯಮ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ತೊಡಗುತ್ತಿದ್ದರು. ತಮ್ಮ ವೃತ್ತಿಯೇತರ ಚಟುವಟಿಕೆಗಳು ಯಾವುದೇ ರೀತಿಯಲ್ಲಿ ತಮ್ಮ ವೃತ್ತಿ ನಿರ್ವಹಣೆಗೆ ಅಡ್ಡಿಯಾಗದಿರುವಂತೆ ವಿಶೇಷ ಕಾಳಜಿ ವಹಿಸುತ್ತಿದ್ದರು. ಅವರು ಎರಡೂ ಜವಾಬ್ದಾರಿಗಳನ್ನು ಏಕಕಾಲಕ್ಕೆ ನಿರ್ವಹಿಸಿದ ಮೂರು ದಶಕಗಳ ಉದ್ದಕ್ಕೂ ತಮ್ಮ ವೃತ್ತಿಯನ್ನು ಕಡೆಗಣಿಸಿದ ಬಗ್ಗೆ ಅಪವಾದಕ್ಕಾದರೂ ಒಂದಾದರೂ ಆಕ್ಷೇಪಣೆ ಅಥವಾ ದೂರ ಇಲ್ಲದಿರುವುದೇ ಅವರ ನಿಸ್ಪೃಹ ಮತ್ತು ಪಾರದರ್ಶಕ ಶೈಲಿಯ ಕಾರ್ಯನಿರ್ವಹಣೆಗೆ ಸಾಕ್ಷಿಯಾಗಿದೆ.

ವೃತ್ತಿ, ಪ್ರವೃತ್ತಿ ಮತ್ತು ಸಾಂಸ್ಕೃತಿಕ ಜಂಜಡಗಳ ಮಧ್ಯೆಯೂ ಅವರು ಕಾರ್ಮಿಕ ಸಂಘಟನೆ ಮತ್ತು ಚಳವಳಿಯಲ್ಲಿ ತಮ್ಮನ್ನು ತಾವು ಸಕ್ರಿಯವಾಗಿ ತೊಡಗಿಸಿಕೊಂಡ ಬಗೆ ಆಶ್ಚರ್ಯಕರವಾದದ್ದು.

ಕಾರ್ಮಿಕ ಚಳುವಳಿಗೆ ಮರು ಜೀವ

ಎಂ.ಎಸ್.ಕೆ. ಮಿಲ್ಲಿನಲ್ಲಿ ಒಂದು ಕಾಲಕ್ಕೆ ಕಾರ್ಮಿಕ ಚಟುವಟಿಕೆ ಸಂಪೂರ್ಣ ಸ್ಥಗಿತಗೊಂಡ ಸಂದರ್ಭದಲ್ಲಿ ಅದಕ್ಕೆ ಮರುಜನ್ಮ ನೀಡಿದವರು ಕಾಗಲಕರ್ ೧೯೪೦ರ ದಶಕದ ಅತ್ಯಂತ ಪ್ರಾಮಾಣಿಕ ಮತ್ತು ಚೈತನ್ಯಶೀಲ ಕಮ್ಯುನಿಸ್ಟ್ ನಾಯಕರಾಗಿದ್ದ ಶ್ರೀನಿವಾಸ ಗುಡಿ ಅವರು ಮೊದಲ ಬಾರಿಗೆ ಎಂ.ಎಸ್.ಕೆ.

ಮಿಲ್ಲಿನಲ್ಲಿ ಕಾರ್ಮಿಕ ಸಂಘಟನೆಗೆ ನಾಂದಿ ಹಾಡಿದವರು. ಅವರು ನಲವತ್ತರ ದಶಕದ ಆರಂಭದಲ್ಲಿ ಎಂ.ಎಸ್.ಕೆ. ಮುಷ್ಕರದಲ್ಲಿ ಶ್ರೀನಿವಾಸ ಗುಡಿ ಅವರು ಭೂಗತವಾದ ಪರಿಣಾಮವಾಗಿ ಅನೇಕ ವರ್ಷಗಳ ಕಾಲ ಕಾರ್ಮಿಕ ಸಂಘಟನೆ ಸ್ಥಗಿತಗೊಂಡಿತ್ತು.

ಕಾಗಲಕರ್ ಅವರು ೧೯೫೨-೫೩ರಲ್ಲಿ ಎಂ.ಎಸ್.ಕೆ. ಮಿಲ್ ಸೇರಿದ್ದರು. ಅವರು ಉದ್ಯೋಗಕ್ಕೆ ಸೇರಿದಾಕ್ಷಣ ಕಾರ್ಮಿಕ ಸಂಘಟನೆ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ಸಾಧ್ಯವಿರಲಿಲ್ಲ. ಅವರು ೧೯೫೭ರಲ್ಲಿ ವಿದ್ಯುಕ್ತವಾಗಿ ಕಾರ್ಮಿಕ ರಂಗಕ್ಕೆ ಧುಮುಕಿದರು.

"ಎಂ.ಎಸ್.ಕೆ. ಮಿಲ್ಸ್ ಕಾಮಗಾರ ಯೂನಿಯನ್" ಎಂಬ ಕಾರ್ಮಿಕ ಸಂಘಟನೆಗೆ ೧೯೫೭ರಲ್ಲಿ ಕಾಗಲಕರ್ ಜನ್ಮ ನೀಡಿದರು. ಬಟ್ಟೆ ಗಿರಣಿಯ ವೈಂಡಿಂಗ್ ವಿಭಾಗದಲ್ಲಿ ಸೂಪರವೈಸರ್ ಆಗಿದ್ದ ಆರ್.ಬಿ. ಜೋಶಿ ಅವರನ್ನು ಕಾಮಗಾರ ಯೂನಿಯನ್ನಿನ ಅಧ್ಯಕ್ಷರನ್ನಾಗಿ ಮಾಡಿದ ಕಾಗಲಕರ್ ತಾವು ಕಾರ್ಯದರ್ಶಿಯಾದರು. ಹಲವು ವರುಷಗಳ ನಂತರ ಅದೇ ಮೊದಲ ಬಾರಿಗೆ ಎಂ.ಎಸ್.ಕೆ. ಮಿಲ್ಲಿನಲ್ಲಿ ಕಾರ್ಮಿಕ ಚಟುವಟಿಕೆಗಳು ಮತ್ತೆ ಪ್ರಾರಂಭಗೊಂಡವು.

ಇದಾದ ನಂತರ ಕಾಗಲಕರ್ ಅವರು "ಎಂ.ಎಸ್.ಕೆ. ಮಿಲ್ಸ್ ಕ್ಲಾರ್ಕ್ ಮತ್ತು ಮಿನಿಸ್ಟೀರಿಯಲ್ ಸ್ಟಾಫ್ ಸಂಘ"ವನ್ನು ಹುಟ್ಟು ಹಾಕಿದರು. ಕೆಲವು ವರ್ಷಗಳ ನಂತರ ಅವರು "ಎಂ.ಎಸ್.ಕೆ. ಮಿಲ್ಸ್ ಕ್ಲರಿಕಲ್ ಮತ್ತು ಸ್ಟಾಫ್ ಅಸೋಸಿಯೇಶನ್" ಎಂಬ ಮತ್ತೊಂದು ಸಂಘಟನೆಯನ್ನು ರಚಿಸಿದರು. ಹೀಗೆ ಒಟ್ಟು ಮೂರು ಕಾರ್ಮಿಕ ಸಂಘಗಳನ್ನು ರಚಿಸಿದ ಖ್ಯಾತಿ ಅವರಿಗೆ ಸಲ್ಲುತ್ತದೆ.

ಈ ಎಲ್ಲ ಕಾರ್ಮಿಕ ಸಂಘಟನೆಗಳನ್ನು ಅವರು ಸ್ವತಂತ್ರವಾಗಿಯೇ ನಿರ್ಮಿಸಿ ಸ್ವತಂತ್ರವಾಗಿಯೇ ಮುನ್ನಡೆಸಿಕೊಂಡು ಹೋದದ್ದು ಒಂದು ವೈಶಿಷ್ಟ್ಯ. ಅಂದರೆ ತಮ್ಮ ಟ್ರೇಡ್ ಯೂನಿಯನ್‌ಗಳಿಗೆ ಯಾವುದೇ ಪಕ್ಷದ ರಾಷ್ಟ್ರೀಯ ಅಥವಾ ಕ್ಷೇತ್ರೀಯ ಕಾರ್ಮಿಕ ಸಂಘಟನೆಯೊಂದಿಗೆ ಸಂಲಗ್ನತೆಯನ್ನು ಹೊಂದಿರಲಿಲ್ಲ. ಯಾವುದೇ ರಾಜಕೀಯ ಪಕ್ಷದ ಹಿತಾಸಕ್ತಿ ತಮ್ಮ ಕಾರ್ಮಿಕ ಸಂಘಟನೆಗಳಲ್ಲಿ ನುಸುಳದಂತೆ ಅವರು ಎಚ್ಚರಿಕೆ ವಹಿಸಿದ್ದರು.

ಕಾಗಲಕರ್ ಅವರು ಸ್ವಾತಂತ್ರ್ಯ ಚಳವಳಿಯ ಮೂಲಕವೇ ತಮ್ಮ ವಿದ್ಯಾರ್ಥಿ ಜೀವನವನ್ನು ಕಳೆದಿದ್ದರಿಂದ, ಕಾಂಗ್ರೆಸ್ ಪಕ್ಷವೇ ಚಳವಳಿಯ ನೇತೃತ್ವವಹಿಸಿದ್ದರಿಂದ ಮತ್ತು ಆ ಕಾಲದ ಎಲ್ಲ ಕಾಂಗ್ರೆಸ್ ನಾಯಕರು ಅವರೊಂದಿಗೆ ಸ್ನೇಹಪೂರ್ಣ ಸಂಬಂಧ ಹೊಂದಿದ್ದರಿಂದ ಅವರ ರಾಜಕೀಯ ಬಲವು ಅಂದಿನ ದಿನಗಳಲ್ಲಿ

ಕಾಂಗ್ರೆಸ್ಸಿಗೆ ಹತ್ತಿರವಾಗಿದ್ದಿತು. ಅಂತೆಯೇ ಕಾಂಗ್ರೆಸ್ ಪಕ್ಷದ ಕಾರ್ಮಿಕ ಸಂಘಟನೆಯಾದ - ಇಂಡಿಯನ್ ನ್ಯಾಷನಲ್ ಟ್ರೇಡ್ ಯೂನಿಯನ್ ಕಾಂಗ್ರೆಸ್ (INTUC ಇಂಟಕ್)ನೊಂದಿಗೆ ಹೆಚ್ಚಿನ ಒಲವು ಇದ್ದೀತು. ಆದಾಗ್ಯೂ ಕಾಗಲಕರ್ ತಮ್ಮ ಸಂಘಟನೆಗಳಲ್ಲಿ ಕಾಂಗ್ರೆಸ್ ಮುಖಂಡರಿಗಾಗಲೀ, ಇಂಟಕ್ ಧುರೀಣರಿಗಾಗಲೀ ನೇರ ಅಥವಾ ಪರೋಕ್ಷ ಹಸ್ತಕ್ಷೇಪಕ್ಕೆ ಎಂದೂ ಅವಕಾಶ ನೀಡಲಿಲ್ಲ.

ಅಪ್ಪಟವಾದ ಕಾರ್ಮಿಕ ಒಳಿತನ್ನು ಸಾಧಿಸುವುದಕ್ಕಾಗಿ ಕಾರ್ಮಿಕರ ಹಿತಾಸಕ್ತಿಯನ್ನು ಕಾಪಾಡುವುದಕ್ಕಾಗಿ ಕಾರ್ಮಿಕರಿಂದಲೇ ನಡೆಸಲ್ಪಡುವ ರಾಜಕೀಯೇತರ ಕಾರ್ಮಿಕ ಸಂಘಟನೆಗಳಿಂದ ಮಾತ್ರ ಸಾಧ್ಯ ಎಂದು ಕಾಗಲಕರ್ ನಂಬಿದ್ದರು. ಮತ್ತು ಅವರು ಹಾಗೆಯೇ ನಡೆದುಕೊಂಡರು.

ಕಾಗಲಕರ್ ಅವರ ಕಾರ್ಮಿಕ ನಾಯಕತ್ವ ಇತರ ಕಾರ್ಮಿಕ ನಾಯಕತ್ವಕ್ಕಿಂತ ಸಂಪೂರ್ಣ ವಿಭಿನ್ನವಾಗಿದ್ದುದು ಒಂದು ವಿಶೇಷ. ಅವರು ಅನ್ಯಾಯದ ವಿರುದ್ಧ ಪ್ರತಿಭಟಿಸುತ್ತಿದ್ದರಾದರೂ ಪ್ರತಿಭಟನೆ ಅತ್ಯಂತ ಸಾತ್ವಿಕ ನೆಲೆಯಲ್ಲಿರುತ್ತಿತ್ತು. ಆದರೆ ತಮ್ಮ ಕಾರ್ಮಿಕ ಪರವಾದ ನಿಲುವಿನಲ್ಲಿ ಅಷ್ಟೇ ನಿಷ್ಠುರರಾಗಿದ್ದರು. ತಮ್ಮ ಹಕ್ಕುಗಳ ಸ್ಥಾಪನೆಗಾಗಿ, ಬೇಡಿಕೆಗಳ ಈಡೇರಿಕೆಗಾಗಿ ಕಾರ್ಮಿಕರು ಪ್ರತಿಭಟನಾ ಪ್ರದರ್ಶನಗಳಿಗೆ ಇಳಿಯುವುದಕ್ಕೆ ಕಾಗಲಕರ್ ಅವರಲ್ಲಿ ಅಷ್ಟಾಗಿ ಒಲವಿರಲಿಲ್ಲ. ಸೌಹಾರ್ದಯುತವಾದ ಮಾತುಕತೆಗಳಿಂದ ಎಲ್ಲರಿಗೂ ಒಪ್ಪಿಗೆಯಾಗುವ ರೀತಿಯಲ್ಲಿ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳುವಲ್ಲಿಯೇ ಅವರಿಗೆ ನಂಬಿಕೆ ಇತ್ತು. ಪ್ರಾಯಃ ಮಹಾತ್ಮ ಗಾಂಧಿ ಅವರ ಅಹಿಂಸಾ ತತ್ವಾಧಾರಿತ ಸತ್ಯಾಗ್ರಹದ ಸಾತ್ವಿಕ ಪ್ರಭಾವ ಅವರ ಮೇಲೆ ಆಗಿರಲೂಬಹುದು.

ಅಂತೆಯೇ ಅವರೆಂದೂ ಕಾರ್ಮಿಕರನ್ನು ಬೀದಿಗೆ ತರಲಿಲ್ಲ. ಪ್ರದರ್ಶನ ನಡೆಸಲಿಲ್ಲ, ಪ್ರತಿಭಟನೆ ಮಾಡಲಿಲ್ಲ. ಫೋಟೋ ತೆಗೆಸಿಕೊಳ್ಳಲಿಲ್ಲ, ಪೇಪರನಲ್ಲಿ ಹಾಕಿಸಿಕೊಂಡು ಮೆರೆಯಲಿಲ್ಲ. ಪ್ರತಿಭಟನೆಗಾಗಿ ಪ್ರತಿಭಟನೆ, ಪ್ರಚಾರಕ್ಕಾಗಿ ಪ್ರತಿಭಟನೆ ಮುಂತಾದ ತಂತ್ರಗಾರಿಕೆಯಲ್ಲಿ ಅವರಿಗೆ ಆಸಕ್ತಿಯೂ ಇರಲಿಲ್ಲ, ವಿಶ್ವಾಸವೂ ಇರಲಿಲ್ಲ. ಯಾವುದಾದರೂ ಒಂದು ಸಮಸ್ಯೆ ಇದ್ದರೆ ಅದನ್ನು ಪರಸ್ಪರ ಚರ್ಚೆ, ಸಂಧಾನ, ಕೊಡು-ಕೊಳ್ಳುವ ಮನೋಭಾವದಿಂದ ಪರಿಹರಿಸಿ -ಕೊಳ್ಳುವುದರಲ್ಲೇ ಅವರಿಗೆ ಆಸಕ್ತಿ. ಕಾರ್ಖಾನೆಯ ಉತ್ಪಾದನೆಯನ್ನು ಸ್ಥಗಿತಗೊಳಿಸಿ ರಾಷ್ಟ್ರೀಯ ನಷ್ಟ ಉಂಟು ಮಾಡುವುದಕ್ಕೆ ಅವರು ಸುತರಾಂ ಒಪ್ಪುತ್ತಿರಲಿಲ್ಲ.

ಕಾರ್ಮಿಕರು ತಮ್ಮ ಬೇಡಿಕೆಗಳ ಈಡೇರಿಕೆಗಾಗಿ ಹಿಂಸಾಚಾರಕ್ಕೆ ಇಳಿಯುವದನ್ನು ಅವರು ದ್ವೇಷಿಸುತ್ತಿದ್ದರು.

ಕಾರ್ಮಿಕ ನಾಯಕರಾಗಿ ಕಾಗಲಕರ್ ತಮ್ಮ ಸಹೋದ್ಯೋಗಿಗಳ ಸಂಪೂರ್ಣ ವಿಶ್ವಾಸಕ್ಕೆ ಪಾತ್ರರಾಗಿದ್ದರು. ಕಾಗಲಕರ್ ತಮ್ಮ ಕೈ ಬಿಡುವದಿಲ್ಲ ಎಂಬ ವಿಶ್ವಾಸ ಅವರಲ್ಲಿತ್ತು.

ಒಂದು ಅತ್ಯಂತ ಗಮನಾರ್ಹ ಸಂಗತಿ ಎಂದರೆ ತಮ್ಮ ಸಹೋದ್ಯೋಗಿ ಕಾರ್ಮಿಕರಷ್ಟೇ ಒಲವು-ವಿಶ್ವಾಸವನ್ನು ಅವರು ಆಡಳಿತ ಮಂಡಳಿಯಿಂದಲೂ ಗಳಿಸಿದ್ದರು. ಆಡಳಿತ ಮಂಡಳಿ ಅವರ ಮೇಲೆ ಇರಿಸಿದ ವಿಶ್ವಾಸಕ್ಕೆ ಒಂದೆರೆಡು ಪ್ರಮುಖ ಕಾರಣಗಳಿದ್ದವು. ಕಾಗಲಕರ್ ವಿನಾಕಾರಣ ಕಾರ್ಮಿಕರನ್ನು ಆಡಳಿತ ವರ್ಗದ ವಿರುದ್ಧ ಎತ್ತಿಕಟ್ಟುವ ನಾಯಕರಾಗಿರಲಿಲ್ಲ. ದುಡಿಯುವ ವರ್ಗದವರ ಮತ್ತು ಆಡಳಿತ ವರ್ಗದವರ ಹಿತಾಸಕ್ತಿಯನ್ನು ಅವರು ಸಮಾನವಾಗಿ ಕಾಣುತ್ತಿದ್ದರು. ಕಾರ್ಮಿಕರನ್ನು ಕತ್ತಲೆಯಲ್ಲಿಟ್ಟು ಅವರ ದಾರಿ ತಪ್ಪಿಸಿ ಆಡಳಿತ ಮಂಡಳಿ ಜೊತೆಗೆ ಗುಪ್ತ ರೀತಿಯಲ್ಲಿ ಸೌಹಾರ್ದತೆಯನ್ನು ಹೊಂದುವ ಹತ್ತು ಹಲವು ಕಾರ್ಮಿಕ ನಾಯಕರನ್ನು ನಾವು ಕಾಣುತ್ತೇವೆ. ಆದರೆ ಕಾಗಲಕರ್ ಅವರಲ್ಲಿ ಉಭಯತರು ಇರಿಸಿದ್ದ ವಿಶ್ವಾಸಕ್ಕೆ ಒಂದು ಮೂಲ ಕಾರಣವೆಂದರೆ ಅವರ ಪ್ರಾಮಾಣಿಕತೆ ಮತ್ತು ಪಾರದರ್ಶಕ ಶೈಲಿಯ ಕಾರ್ಯನಿರ್ವಹಣೆ.

ಆಗಿನ ಕಾಲದ ಸಂದರ್ಭದಲ್ಲಿ ಕಾರ್ಮಿಕ ಸಂಘಟನೆಗಳು ಇದ್ದವಾದರೂ, ಕಾರ್ಮಿಕ ವಿವಾದದ ವಿಷಯಗಳನ್ನು ಸಮಗ್ರವಾಗಿ ಅರಿತುಕೊಂಡವರು, ಕಾರ್ಮಿಕ ಕಾನೂನಿನ ಸೂಕ್ಷ್ಮತೆಯನ್ನು ಬಲ್ಲವರು, ಕಾರ್ಮಿಕರ ಹಿತಾಸಕ್ತಿಗೆ ಸಂಬಂಧಿಸಿದ, ನಿಯಮಗಳನ್ನು ಸಂಪೂರ್ಣವಾಗಿ ಅಧ್ಯಯನ ಮಾಡಿ ಅರ್ಥಮಾಡಿಕೊಂಡವರು ತೀರಾ ವಿರಳರಾಗಿದ್ದರು. ಅಂತಹವರಲ್ಲಿ ಕಾಗಲಕರ್ ಅಗ್ರಗಣ್ಯರು. ಯಾವುದೇ ಕಾರ್ಮಿಕ ವಿವಾದ ಇರಲಿ ಇದರ ಆಳ-ವಿಸ್ತಾರಗಳನ್ನು ಕಾನೂನಿನ ನೆಲೆಯಲ್ಲಿ ಅವರು ವಿಮರ್ಶಿಸುತ್ತಿದ್ದರು, ವಿಶ್ಲೇಷಿಸುತ್ತಿದ್ದರು.

ಕಾರ್ಮಿಕ ವಿವಾದ ಕಾಯ್ದೆ (Industrial Distutes Act), ಕಾರ್ಮಿಕ ಪರಿಹಾರ ಕಾಯ್ದೆ (Workman Compensation Act), ಭವಿಷ್ಯ ನಿಧಿ ಕಾಯ್ದೆ (Provident Fund Act), ಗ್ರಾಚುಟಿಗೆ ಸಂಬಂಧಿಸಿದ ಕಾನೂನು ಇತ್ಯಾದಿ ಎಲ್ಲ ಕಾಯ್ದೆಗಳನ್ನು ಸಮಗ್ರವಾಗಿ ಅವರು ಬಲ್ಲವರಾಗಿದ್ದುದರಿಂದಲೇ ಅವರಿಗೆ ಎಲ್ಲೆಡೆ ಮನ್ನಣೆ ಇತ್ತು.

ಒಂದು ನಿರ್ದಿಷ್ಟ ವಿವಾದದಲ್ಲಿ ಯಾರು ಏನೇ ಹೇಳಿದರೂ, ವಾದ-ವಿವಾದ ನಡೆದರೂ ಅದು ಅಂತಿಮವಾಗಿ ಕಾಗಲಕರ್ ಅವರ ಸೂತ್ರದಿಂದಲೇ ಪರಿಹಾರಗೊಳ್ಳಬೇಕು! ಕಾರ್ಮಿಕ ವಿಷಯಗಳಲ್ಲಿ ಅವರಿಗಿರುವ ಜ್ಞಾನ, ವಿಷಯಗಳನ್ನು ಮಂಡಿಸುತ್ತಿದ್ದ ರೀತಿ ಮತ್ತು ವಸ್ತು ಸ್ಥಿತಿಯನ್ನು ಯಾವುದೇ ಉದ್ವೇಗವಿಲ್ಲದೆ, ಭಾವನಾತ್ಮಕ ಮಾಡದೆ ವಿಷಯದ ನೈಜ ನೆಲೆಯಲ್ಲಿ ವಿಶ್ಲೇಷಣೆ ಮಾಡುತ್ತಿದ್ದ ಅವರ ಪಾಂಡಿತ್ಯ ಎಲ್ಲರ ಮೆಚ್ಚುಗೆಗೆ ಪಾತ್ರವಾಗಿತ್ತು. ಯಾರ ಹಿತಾಸಕ್ತಿಯನ್ನೂ ಗೌಣವಾಗಿ ಕಾಣದ ಅವರ ಗುಣ ಸರ್ವಮಾನ್ಯವಾಗಿತ್ತು. ಅಂತೆಯೇ ಕಾರ್ಮಿಕರು ಮತ್ತು ಆಡಳಿತ ವರ್ಗ ಅವರನ್ನು ಅತ್ಯಂತ ಗೌರವದಿಂದ ಕಾಣುತ್ತಿದ್ದರು. ತಮ್ಮ ಹಿತಾಸಕ್ತಿಗಳು ಕಾಗಲಕರ್ ಅವರ ಕೈಯಲ್ಲಿ ಸುರಕ್ಷಿತವಾಗಿದೆ ಎಂದು ಕಾರ್ಮಿಕರು ಭಾವಿಸಿದರೆ ತಮಗೆ ಯಾವುದೇ ರೀತಿಯ ಬಾಧೆಯನ್ನು ಉಂಟು ಮಾಡಲಾರರೆಂಬ ಪರಿಪೂರ್ಣ ನಂಬಿಕೆ ಆಡಳಿತ ವರ್ಗಕ್ಕಿತ್ತು.

'ಜ್ಞಾನವೇ ಬಲ' ಎಂಬ ಉಕ್ತಿಯನ್ನು ಅವರು ತಮ್ಮ ಕಾರ್ಮಿಕ ನಾಯಕತ್ವದ ಸಮರ್ಥ ನಿರ್ವಹಣೆಯಲ್ಲಿ ಸಾಕಾರಗೊಳಿಸಿದ್ದರು. ತಮ್ಮ ಜ್ಞಾನದ ಬಲದಿಂದಲೇ ಸಮಸ್ಯೆಗಳು ಎಷ್ಟೇ ಜಟಿಲವಾಗಿದ್ದರೂ ಅವುಗಳನ್ನು ಸುಲಭಗೊಳಿಸುತ್ತಿದ್ದರು.

ಕಾಗಲಕರ್ ಎಂ.ಎಸ್.ಕೆ. ಮಿಲ್ಲಿನಲ್ಲಿ ಮೂರು ಕಾರ್ಮಿಕ ಸಂಘಟನೆಗಳನ್ನು ಹುಟ್ಟು ಹಾಕಿದರೂ, ಹಲವಾರು ಕಾರ್ಮಿಕ ವಿವಾದಗಳನ್ನು ಸೌಹಾರ್ದಯುತವಾಗಿ ಪರಿಹರಿಸಿದರೂ, ಎಲ್ಲರ ವಿಶ್ವಾಸಕ್ಕೆ ಪಾತ್ರರಾಗಿದ್ದರೂ ಅವರು ಕಾರ್ಮಿಕ ನೇತಾರನೆಂಬ ಹಣೆ ಪಟ್ಟಿ ಹಚ್ಚಿಕೊಂಡು ಎಂದೂ ಮೆರೆಯಲಿಲ್ಲ! ಕಾರ್ಮಿಕ ಅಶಾಂತಿಗೆ ಎಂದೂ ಕಾರಣರಾಗಲಿಲ್ಲ. ಶಾಂತಿ-ಸೌಹಾರ್ದತೆ ಇದ್ದರೆ ಮಾತ್ರ ಸಮೃದ್ಧಿ ಸಾಧ್ಯ ಎಂಬುದನ್ನು ಅವರು ಬಲವಾಗಿ ನಂಬಿದ್ದರು. ಅಂತೆಯೇ ಇತರ ನಾಯಕರಂತೆ ಅವರು ಕಾರ್ಮಿಕರ ಕಲ್ಯಾಣದ ವಿಷಯದಲ್ಲಿ ಮೂಲಭೂತವಾದಿಗಳಾಗಿರಲಿಲ್ಲ. ಪ್ರಾಯಃ ಕಾರ್ಮಿಕ ನಾಯಕರಲ್ಲಿ ಅತ್ಯಂತ ವಿರಳವಾಗಿ ಕಂಡು ಬರುವ ಒಂದು ಶ್ರೇಷ್ಠ ಗುಣ ಅವರಲ್ಲಿತ್ತು.

ದುಡಿಯುವ ವರ್ಗದವರ ಹಿತಾಸಕ್ತಿಯ ವಿಷಯಗಳಲ್ಲಿ ಅವರು ಅತ್ಯಂತ ದೃಢವಾಗಿದ್ದು ಅದರೊಂದಿಗೆ ಎಂದೂ ರಾಜಿ ಮಾಡಿಕೊಳ್ಳುತ್ತಿರಲಿಲ್ಲ ನಿಜ. ಆದರೆ ಕಾರ್ಮಿಕರು ಶಿಸ್ತಿನಿಂದ ಇದ್ದು ನಿಯತ್ತಿನಿಂದ ದುಡಿಯಬೇಕೆಂದು ಅವರು ಎಲ್ಲ ಕೆಲಸಗಾರರಿಗೆ ತಿಳಿಹೇಳುತ್ತಿದ್ದರು. ಕಾರ್ಮಿಕ ಸಂಘಟನೆಗಳ ನಾಯಕರು ಕೇವಲ ಕಾರ್ಮಿಕರ ಹಕ್ಕು ಬಾಧ್ಯತೆಗಳ ಬಗ್ಗೆ ಮಾತ್ರ ಅತ್ಯಂತ ಆಕ್ರಮಣಕಾರಿಯಾದ,

ಪ್ರಚೋದನಾಕಾರಿಯಾದ ನಿಲುವು ತಾಳಿ ಕಾರ್ಮಿಕರ ಕರ್ತವ್ಯಗಳ ಬಗ್ಗೆ ಏನನ್ನೂ ಹೇಳದಿರುವುದು ಈ ದೇಶದ ಕಾರ್ಮಿಕ ನಾಯಕತ್ವದ ಒಂದು ಗುಣ. ಯಾಕೆಂದರೆ ಕಾರ್ಮಿಕ ನಾಯಕತ್ವವನ್ನೇ ಒಂದು ವೃತ್ತಿಯಾಗಿ, ದಂಧೆಯನ್ನಾಗಿ ಮಾಡಿಕೊಂಡವರು ಕಾರ್ಮಿಕರ ಹಕ್ಕುಗಳ ಬಗ್ಗೆ ಅಷ್ಟೇ ಮಾತನಾಡಬೇಕಾಗುತ್ತದೆ. ಕಾರ್ಮಿಕರ ಕರ್ತವ್ಯಗಳು ಸಂಪೂರ್ಣವಾಗಿ ಗೌಣವಾಗುತ್ತದೆ. ಕಾರ್ಮಿಕ ಸಂಘಟನೆಗಳ ಮತ್ತು ಆ ಸಂಘಟನೆಗಳ ನಾಯಕರ ತೀವ್ರಗಾಮಿ ನಿಲುವುಗಳು, ಧೋರಣೆಗಳು, ಸದಾಕಾಲಕ್ಕೂ ಮುಷ್ಕರದ ಮಾರ್ಗಗಳು, ಕಾರ್ಮಿಕರ ದೂರಗಾಮಿ ಹಿತಾಸಕ್ತಿಗಳಿಗೆ ಖಂಡಿತ ಮಾರಕವಾಗುತ್ತವೆ.

ಇದಕ್ಕೆ ಪೂರಕವಾದ ಎಷ್ಟೋ ಉದಾಹರಣೆಗಳು ತಮ್ಮ ಮುಂದೆಯೇ ಇವೆ. ಯಾವ ಕಾಲದಲ್ಲಿ ಆಡಳಿತ ವರ್ಗಗಳಲ್ಲಿ ಕಾರ್ಮಿಕ ನಾಯಕರಿಗೆ ಸಂಪೂರ್ಣ ಸ್ವಾತಂತ್ರ್ಯವನ್ನು ನೀಡಿದ್ದವೋ ಅಂತಹ ಸ್ವಾತಂತ್ರ್ಯವನ್ನು ಸ್ವೇಚ್ಛಾಚಾರವನ್ನಾಗಿ ಬಗೆದು ಕಾರ್ಮಿಕರ ಹಿತಾಸಕ್ತಿಯನ್ನೇ ಬಲಿಗೊಟ್ಟ ಹಲವು ಹತ್ತು ಪ್ರಸಂಗಗಳು ಇಲ್ಲದಿಲ್ಲ.

ಯಾವ ಕಾಲದಲ್ಲಿ ಗ್ರಾಚುಟಿ, ಭವಿಷ್ಯ ನಿಧಿ, ಬೋನಸ್, ರಜಾ ನಗದೀಕರಣ ಇತ್ಯಾದಿ ಆರ್ಥಿಕ ಸೌಲಭ್ಯಗಳು ಉದಾರವಾಗಿ ಲಭಿಸುತ್ತಿದ್ದವೋ ಅಂತಹ ಸಂದರ್ಭಗಳಲ್ಲೇ ಕಾರ್ಮಿಕ ಚಳವಳಿಗಳು ಶಕ್ತಿಯುತವಾಗಿದ್ದವು! ತಮ್ಮ ತೀವ್ರಗಾಮಿ ನಿಲುವಿನಿಂದಾಗಿ ಕಾರ್ಮಿಕ ನಾಯಕರು ಆಡಳಿತ ಮಂಡಳಿಗಳನ್ನು ತತ್ತರಿಸುವಂತೆ ಮಾಡಿದರು. ಎಲ್ಲೆಡೆ ಕಾರ್ಮಿಕ ಅಶಾಂತಿ ಉಂಟು ಮಾಡಬಲ್ಲವರಾಗಿದ್ದರು. ದಿನ-ವಾರ-ತಿಂಗಳುಗಟ್ಟಲೆ ಮುಷ್ಕರಗಳು! ಜನ ಸಾಮಾನ್ಯರಿಗೆ ಆಗುವ ತೊಂದರೆಗಳ ಬಗ್ಗೆಯೆ, ಅವರಿಗೆ ಕಾಳಜಿ ಇಲ್ಲ. ಕಾರ್ಮಿಕ ನಾಯಕತ್ವವೊಂದು ಜೀವಂತವಾಗಿದ್ದರೆ ಅವರು ಏನನ್ನೂ ಮಾಡಬಲ್ಲವರಾಗಿದ್ದರು.

ಕಾರ್ಮಿಕ ನಾಯಕರ ಅಗಾಧ ಬೆಳವಣಿಗೆಯಿಂದಾಗಿ ಸ್ವಾರ್ಥ, ಲಾಲಸೆ, ರಾಜಕೀಯ ಮಹತ್ವಾಕಾಂಕ್ಷೆ ಮುಂತಾದುವು ಉಂಟಾದವು. ಇವು ಬರಬರುತ್ತ ಕಾರ್ಮಿಕ ಚಳವಳಿಯನ್ನೇ ದುರ್ಬಲಗೊಳಿಸಿದವು. ಕಾರ್ಮಿಕ ನಾಯಕರ ಆಂತರಿಕ ಸಂಘರ್ಷಗಳು ತಾರಕಕ್ಕೇರಿದವು. ಸಂಘಟನೆಗಳಲ್ಲಿ ಒಡಕು-ವಿಭಜನೆಗಳು ಸಾಮಾನ್ಯವಾದವು. ಕಾರ್ಮಿಕ ಸಂಸ್ಥೆಗಳು ಸಂಪೂರ್ಣ ರಾಜಕೀಯ ಪ್ರೇರಿತವಾಗಿ ಪ್ರತಿಯೊಂದು ಸಂಘಟನೆಯೂ ಒಂದಲ್ಲ ಒಂದು ರಾಜಕೀಯ ಪಕ್ಷದ ಅಂಗವಾಗಿಯೇ ಬೆಳೆದು ಬಂದವು. ಕಾರ್ಮಿಕ ಅಶಾಂತಿ ಭಾರತೀಯ ಔದ್ಯೋಗಿಕ ಕ್ಷೇತ್ರದಲ್ಲಿ ತ್ರಾಹಿತ್ರಾಹಿಯನ್ನುಂಟು ಮಾಡಿತು.

ಆದರೆ ಈಗಿನ ಪರಿಸ್ಥಿತಿ ಸಂಪೂರ್ಣ ಬದಲಾಗಿದೆ. ಖಾಸಗೀಕರಣ, ಉದಾರೀಕರಣ ಮತ್ತು ಜಾಗತೀಕರಣದ ಭರಾಟೆಯಲ್ಲಿ ಹಲವು ಹತ್ತು ಕ್ಷೇತ್ರಗಳಲ್ಲಿ ಕಾರ್ಮಿಕರ ಹಕ್ಕುಗಳು ಸಂಪೂರ್ಣವಾಗಿ, ಮೊಟಕುಗೊಂಡಿದ್ದರೂ ಅದರ ಬಗ್ಗೆ ಚಳವಳಿಯೇ ಇಲ್ಲ! ಎಲ್ಲ ಕಾರ್ಮಿಕ ನಾಯಕರು ತಮ್ಮ ಕಾಲಿಗೆ ಬುದ್ಧಿ ಹೇಳಿದ್ದಾರೆ. ಆಡಳಿತ ವರ್ಗಗಳು ಈಗ ಬಲಾಢ್ಯಗೊಂಡು ಸರಕಾರಿ ಒಡೆತನದ ಸಂಘಟಿತ ಕ್ಷೇತ್ರಗಳಲ್ಲೇ ಕಾರ್ಮಿಕರ ಶೋಷಣೆ ತಾರಕಕ್ಕೇರಿದೆ. ಕೆಲವೇ ಕೆಲವು ಸಂಘಟಿತ ಕ್ಷೇತ್ರಗಳಲ್ಲಿ ಮಾತ್ರ ಕಾರ್ಮಿಕ ಪ್ರಜ್ಞೆ ಬಲವಾಗಿದೆ. ಆದರೆ ಈ ಕ್ಷೇತ್ರದ ಕಾರ್ಮಿಕರೇ ಮಿಕ್ಕೆಲ್ಲರಿಗಿಂತಲೂ ಒಳ್ಳೆಯ ಸಂಬಳ, ಭತ್ತೆ ಮುಂತಾದ ಎಲ್ಲ ಸೌಕರ್ಯಗಳನ್ನು ಧಾರಾಳವಾಗಿ ಪಡೆದಿದ್ದಾರೆ!

ಯಾವುದೇ ಸ್ವಹಿತಾಸಕ್ತಿ ಇಲ್ಲದೆ ಕಾರ್ಮಿಕರ ಒಳಿತಿಗಾಗಿಯೇ ದುಡಿಯುವಂತಹ ಪ್ರಾಮಾಣಿಕ, ಕಳಕಳಿಯುಕ್ತ ಕಾರ್ಮಿಕ ನಾಯಕರು ವಿರಳವಾಗುತ್ತಿರುವುದರಿಂದಲೇ ಇಂದು ಕಾರ್ಮಿಕ ಜಗತ್ತು ಡೋಲಾಯಮಾನ -ವಾಗಿದೆ, ಕಳವಳಕಾರಿಯಾಗಿದೆ.

ಈ ಹಿನ್ನೆಲೆಯಲ್ಲಿ ವೆಂಕಟರಾವ ಕಾಗಲಕರ್ ಅವರು ಕಾರ್ಮಿಕ ನಾಯಕನಾಗಿ ನಿರ್ವಹಿಸಿದ ಪಾತ್ರ ಅತ್ಯಂತ ಪ್ರಾಮುಖ್ಯತೆಯನ್ನು ಪಡೆಯುತ್ತದೆ. ಅವರದು ಸುಸ್ಥಿರ ಕಾರ್ಮಿಕ ಚಳವಳಿ. ಅವರು ಕಾರ್ಮಿಕ ಆಂದೋಲನಕ್ಕೆ ಬೇರೊಂದು ಭಾಷ್ಯವನ್ನೇ ಬರೆದವರು. ಕಾರ್ಮಿಕರ ಹಕ್ಕುಗಳ ಜೊತೆಗೆ ಅವರ ಕರ್ತವ್ಯವನ್ನೂ ಹೇಳಿಕೊಡುವ ಕಾಗಲಕರ್ ಮಾದರಿಯ ಕಾರ್ಮಿಕ ಆಂದೋಲನ ಮಾತ್ರ ಸುಸ್ಥಿರ ಆಂದೋಲನವಾಗಿ ಉಳಿಯಲು ಸಾಧ್ಯ.

ದುರದೃಷ್ಟವಶಾತ್ ೧೯೮೦ರ ದಶಕದ ಉತ್ತರಾರ್ಧದಿಂದ ಎಂ.ಎಸ್.ಕೆ. ಮಿಲ್ಲಿನ ಪರಿಸ್ಥಿತಿ ಬಿಗಡಾಯಿಸುತ್ತ ಬಂದು ಅದು ವರ್ಷ ೨೦೦೦ ಹೊತ್ತಿಗೆ ಶಾಶ್ವತವಾಗಿ ಮುಚ್ಚೇ ಹೋಯಿತು.

ತಮ್ಮ ಹಲವಾರು ವೈಯಕ್ತಿಕ ಕೌಟುಂಬಿಕ ಒತ್ತಡಗಳ ಮಧ್ಯೆ, ವೃತ್ತಿ ಪ್ರವೃತ್ತಿ ಮತ್ತು ಸಾಂಸ್ಕೃತಿಕ ಜವಾಬ್ದಾರಿಗಳ ನಡುವೆ ಕಾಗಲಕರ್ ಅವರು ನಿರ್ವಹಿಸಿದ ಕಾರ್ಮಿಕ ನಾಯಕನ ಪಾತ್ರ ಕಲಬುರಗಿಯ ಕಾರ್ಮಿಕ ಚಳವಳಿಯ ಇತಿಹಾಸದಲ್ಲೇ ವಿಶೇಷವಾಗಿ ಉಲ್ಲೇಖಾರ್ಹವಾದದ್ದು. ಸಾಚಾ ಕಾರ್ಮಿಕ ಆಂದೋಲನದ ಹರಿಕಾರರಾಗಿದ್ದ ಕಾಗಲಕರ್ ಅವರಿಗೆ ಕಾರ್ಮಿಕ ಪ್ರಪಂಚ ಚಿರಋಣಿಯಾಗಿರುತ್ತದೆ.

ಕಲಬುರಗಿಯಲ್ಲಿ ಪತ್ರಿಕೋದ್ಯಮ ಮತ್ತು ಸಾಂಸ್ಕೃತಿಕ ಕ್ಷೇತ್ರಕ್ಕೆ ಮಹತ್ವದ ತಿರುವನ್ನು ನೀಡಿ ಅವುಗಳನ್ನು ಉಳಿಸಿ, ಬೆಳೆಸಿದ ಕಾಗಲಕರ್ ಅವರು ಕಾರ್ಮಿಕ ಕ್ಷೇತ್ರವನ್ನು ತಮ್ಮ ತೆಕ್ಕೆಗೆ ತೆಗೆದುಕೊಂಡು ಅದನ್ನು ಪರಿಶುದ್ಧ ನೆಲೆಯಲ್ಲಿ ಶ್ರೀಮಂತಗೊಳಿಸಿದ ಅಪರೂಪದ ಶ್ರೇಯಸ್ಸಿಗೆ ಪಾತ್ರರಾದವರು.

❐

ಅಧ್ಯಾಯ-೬

ಬರಿಗಾಲಿನ ಪತ್ರಕರ್ತ

ಕಾಗಲಕರ್ ಅವರು ಕಲಬುರಗಿಗೆ ಬಂದಾಗ ಜಿಲ್ಲೆಯಲ್ಲಿ ಪತ್ರಿಕಾ ವ್ಯವಸಾಯ ಉತ್ತೇಜನಕಾರಿಯಾಗಿರಲಿಲ್ಲ. ಜಿಲ್ಲಾ ಅಥವಾ ಸ್ಥಳೀಯ ಮಟ್ಟದ ಪತ್ರಿಕೆ ಒಂದನ್ನು ಪ್ರಾರಂಭಿಸುವ ಧೈರ್ಯ ಯಾರೂ ಮಾಡಿರಲಿಲ್ಲ. 'ಸಂಯುಕ್ತ ಕರ್ನಾಟಕ' ಪತ್ರಿಕೆ ೧೯೫೦ರ ದಶಕದ ಆರಂಭದಲ್ಲಿ ಅಂಚೆಯಲ್ಲಿ ಬರುತ್ತಿದ್ದುದರಿಂದ ಮೂರು-ನಾಲ್ಕು ದಿನಗಳ ನಂತರವಷ್ಟೇ ಓದಲು ಲಭ್ಯವಿತ್ತು. ಹುಬ್ಬಳ್ಳಿ-ಕಲಬುರಗಿಗೆ ನೇರ ರಸ್ತೆ, ರೈಲು ಸಂಪರ್ಕ ಇಲ್ಲದಿದ್ದುದೇ ಇದಕ್ಕೆ ಕಾರಣವಾಗಿತ್ತು. ಈಗಲೂ ಕೂಡ ಹುಬ್ಬಳ್ಳಿಗೆ ನೇರ ರೈಲು ಸಂಪರ್ಕ ಇಲ್ಲ ಎಂಬುದನ್ನು ಗಮನಿಸಿದರೆ ಸಾರಿಗೆ ಸಂಪರ್ಕ ಕ್ಷೇತ್ರದಲ್ಲಿ ಈ ಭಾಗ ಎಷ್ಟೊಂದು ಹಿಂದಿದೆ ಎಂಬುದರ ಅರಿವಾದೀತು.

ಕಲಬುರಗಿಗೆ ಒಂದು ಸ್ಥಳೀಯ ಪತ್ರಿಕೆಯ ಅಗತ್ಯವನ್ನು ತೀವ್ರವಾಗಿ ಮನಗಂಡ ಕಾಗಲಕರ್ ಈ ನಿಟ್ಟಿನಲ್ಲಿ ಸಾಹಸ ಮಾಡಬಲ್ಲವರನ್ನು ಹುಡುಕಿ ಅವರಿಂದ ಪತ್ರಿಕೆ ಪ್ರಾರಂಭಿಸುವ ಯತ್ನಗಳನ್ನು ನಿರಂತರವಾಗಿ ಮಾಡತೊಡಗಿದರು. ತಮ್ಮಲ್ಲಿ ಅನುಕೂಲಕರ ಸಂಪನ್ಮೂಲಗಳಿದ್ದರೆ ಪ್ರಾಯಃ ಅವರೇ ಒಂದು ಪತ್ರಿಕೆಯನ್ನು ಪ್ರಾರಂಭಿಸಿ ಬಿಡುತ್ತಿದ್ದರೇನೋ! ಆದರೆ ಅದು ಅವರ ಆರ್ಥಿಕ ಸಾಮರ್ಥ್ಯಕ್ಕೆ ಹೊರತಾಗಿತ್ತು.

ಸ್ಥಳೀಯ ಪತ್ರಿಕೆಯೊಂದರ ಪ್ರಾರಂಭಕ್ಕಾಗಿ ತೀವ್ರವಾಗಿ ಹಪಹಪಿಸುತ್ತಿದ್ದ ಕಾಗಲಕರ್ ಈ ವಿಷಯ ಕುರಿತಾಗಿಯೇ ಅಹರ್ನಿಶಿ ಚಿಂತಿಸುತ್ತಿದ್ದರು. ಅದರಲ್ಲಿ ಪ್ರಾಯಃ ಅವರ ಸ್ವಾರ್ಥವೂ ಅಡಗಿತ್ತೆಂದು ಕಾಣುತ್ತದೆ. ಸ್ಥಳೀಯ ಪತ್ರಿಕೆಯೊಂದು ತಮಗೆ ಲಭ್ಯವಾದಲ್ಲಿ ತಾವು ಇನ್ನಷ್ಟು ಮುಕ್ತವಾಗಿ ಅದರಲ್ಲಿ ಬರೆಯಬಹುದು! ತಮ್ಮ ಆಲೋಚನೆಗಳ ಅಭಿವ್ಯಕ್ತಿಗೆ ಒಂದು ಸೂಕ್ತ ವೇದಿಕೆ ದೊರೆಯಬಲ್ಲದು. ೧೯೬೪-೬೫ರ ಸುಮಾರಿಗೆ ಕಾಗಲಕರ್ ಅವರ ಕನಸು ನನಸಾಗುವ ಕಾಲ ಕೂಡಿ ಬಂದಿತು.

ಆಗಿನ ಕಾಲದ ಸುಪ್ರಸಿದ್ಧ ಪತ್ರಕರ್ತರೂ, ರಾಜ್ಯಸಭೆಯ ಸದಸ್ಯರೂ ಆಗಿದ್ದ ಕಲಬುರಗಿ ಜಿಲ್ಲೆಯವರೇ ಆದ ರಾಗು ಜಾಗಿರದಾರ ಅವರ ಮೇಲೆ ಕಾಗಲಕರ್ ಅವರ ಕಣ್ಣು ನೆಟ್ಟವು. ಕಲಬುರಗಿ ಜಿಲ್ಲೆಯ ಅಫಜಲಪುರ ತಾಲೂಕಿನ ಚಿನಮಳ್ಳಿ ಗ್ರಾಮದ ಜಾಗಿರದಾರರಾಗಿದ್ದ ರಾಗು ಅವರು ಇಂಗ್ಲೀಷ್ ಮತ್ತು ಬಂಗಾಲಿ ಭಾಷೆಯಲ್ಲಿ ಪ್ರಸಿದ್ಧ ಪತ್ರಕರ್ತರಾಗಿದ್ದರು. ಗುರುದೇವ ರವೀಂದ್ರನಾಥ ಟ್ಯಾಗೋರ ಅವರ ಶಾಂತಿನಿಕೇತನದ ಶಿಷ್ಯರಾಗಿದ್ದ ಜಾಗಿರದಾರ ಬಂಗಾಲಿ ಭಾಷೆಯನ್ನು ಕಲಿತು ಕಲಕತ್ತೆಯ ಬಂಗಾಲಿ ಪತ್ರಿಕೆಗಳಿಗೆ ಬರೆಯುತ್ತಿದ್ದರು. ಇಂಗ್ಲಿಷ್‌ನಲ್ಲೂ ಅವರದು ಪಳಗಿದ ಕೈ. ನೇಪಾಳ ವಿಮೋಚನಾ ಚಳವಳಿಯ ಸಂದರ್ಭದಲ್ಲಿ ನೇಪಾಳದಿಂದಲೇ ಅವರು ಭಾರತೀಯ ಪತ್ರಿಕೆಗಳಿಗೆ ವರದಿಗಳನ್ನು ಲೇಖನಗಳನ್ನು ಕಳುಹಿಸುತ್ತಿದ್ದರು. ಕಾಗದ ತಯಾರಿಕೆ, ಅಕ್ಷರ ಜೋಡಣೆ, ಮುದ್ರಣ ಇತ್ಯಾದಿ ಕಲೆಗಳನ್ನು ಅವರು ಕಲಿತುಕೊಂಡಿದ್ದರು. ಅಷ್ಟೇ ಏಕೆ ಅವರು ತಮ್ಮ ಪಾದರಕ್ಷೆಗಳನ್ನು ತಾನೇ ಹೊಲೆದುಕೊಳ್ಳುತ್ತಿದ್ದರು. ಅತ್ಯಂತ ಕಟ್ಟು ನಿಟ್ಟಿನ ನಿಯತ್ತಿನ, ಶಿಸ್ತಿನ ವ್ಯಕ್ತಿಯಾಗಿದ್ದ ಜಾಗಿರದಾರ ಅವರನ್ನು ಕಲಬುರಗಿಗೆ ಕರೆತಂದು 'ಸಾರಥಿ' ಎಂಬ ಪತ್ರಿಕೆಯನ್ನು ಪ್ರಾರಂಭಿಸಿ ಅದರ ಸಾರಥ್ಯವನ್ನು ಅವರಿಗೆ ವಹಿಸಿದವರು ಕಾಗಲಕರ್.

ಈ ಪತ್ರಿಕೆಯ ಪ್ರಾರಂಭಕ್ಕೆ ಕಾಗಲಕರ್ ಅವರು ವಿರೇಂದ್ರ ಪಾಟೀಲರ ಸಹಾಯ ಯಾಚಿಸಿದರು. ಪಾಟೀಲ ಮತ್ತು ಅವರ ಸ್ನೇಹಿತರು ವಿಚಾರಣೆ ನಡೆಸಿ ಹೈದ್ರಾಬಾದಿನಿಂದ ಮುದ್ರಣ ಯಂತ್ರವೊಂದನ್ನು ಖರೀದಿಸಿ ಕಲಬುರಗಿಗೆ ತರಲಾಯಿತು.

೧೯೫೪-೬೦ರ ಅವಧಿಯಲ್ಲಿ ರಾಜ್ಯಸಭೆಯ ಸದಸ್ಯರಾಗಿದ್ದ ರಾಗು ಜಾಗಿರದಾರ ಅವರು ಆನಂದ ಬಜಾರ ಪತ್ರಿಕಾ ಸಮೂಹದ 'ಹಿಂದೂಸ್ತಾನ ಸ್ಟ್ಯಾಂಡರ್ಡ್' ಪತ್ರಿಕೆಯ ದೆಹಲಿ ಆವೃತ್ತಿಯ ಸ್ಥಾನಿಕ ಸಂಪಾದಕರಾಗಿದ್ದರು. ಆಗಿನ ಕಾಲದ ರಾಜಕೀಯ ದಿಗ್ಗಜರೂ, ಸುವಿಖ್ಯಾತ ಸಮಾಜವಾದಿ ಧುರೀಣರೂ ಆಗಿದ್ದ ರಾಮ ಮನೋಹರ ಲೋಹಿಯಾ, ಜಯಪ್ರಕಾಶ್ ನಾಯಾರಣ, ಆಚಾರ್ಯ ಕೃಪಲಾನಿ ಮುಂತಾದವರೊಂದಗೆ ನಿಕಟ ಸಂಬಂಧ ಹೊಂದಿದ್ದ ಜಾಗಿರದಾರ ಅವರು ಪತ್ರಿಕೋದ್ಯಮ ಮತ್ತು ರಾಜಕಾರಣದಲ್ಲಿ ಸಾಕಷ್ಟು ಅನುಭವ ಉಳ್ಳವರಾಗಿದ್ದರು.

ವಾರ ಪತ್ರಿಕೆಯಾಗಿ ಆರಂಭವಾದ 'ಸಾರಥಿ' ತನ್ನ ಜನ್ಮದಿಂದಲೇ ಆಧುನಿಕತೆಯನ್ನು ಮೈಗೂಡಿಸಿಕೊಂಡು ಬಂದ ಪತ್ರಿಕೆಯಾಗಿತ್ತು. ನಂತರ

ದಿನಪತ್ರಿಕೆಯಾಗಿ ಮಾರ್ಪಟ್ಟ 'ಸಾರಥಿ' ಟೆಲಿಪ್ರಿಂಟರ್ ಸೌಲಭ್ಯವನ್ನು ಹೊಂದಿತ್ತು. ಆಗಿನ ಕಾಲದಲ್ಲಿ, ಜಿಲ್ಲೆಯಿಂದ ಪ್ರಕಟವಾಗುವ ಪತ್ರಿಕೆಯೊಂದು ಟೆಲಿಪ್ರಿಂಟರ್ ಸೌಕರ್ಯ ಹೊಂದುವುದೆಂದರೆ ಆಶ್ಚರ್ಯದ ಸಂಗತಿಯೇ ಆಗಿತ್ತು. ಪ್ರಾಯಃ ಗ್ರಾಮೀಣ ಪತ್ರಿಕೆಗಳ ಪೈಕಿ ಟೆಲಿಪ್ರಿಂಟರ್ ಹೊಂದಿದ್ದ ಅತ್ಯಂತ ವಿರಳ ಪತ್ರಿಕೆಗಳಲ್ಲಿ 'ಸಾರಥಿ' ಒಂದಾಗಿತ್ತು.

ಸ್ಥಳೀಯವಾಗಿ ಅತ್ಯಂತ ಪ್ರಭಾವಶಾಲಿ ಪತ್ರಿಕೆಯಾಗಿದ್ದ 'ಸಾರಥಿ' ಅನೇಕ ಸಂದರ್ಭಗಳಲ್ಲಿ ಹಲವಾರು ವಿಷಯಗಳಲ್ಲಿ ತನ್ನ ತೀಕ್ಷ್ಣ ನಿಲುವಿನಿಂದಾಗಿ ಅತ್ಯಂತ ಪರಿಣಾಮಕಾರಿಯಾದ ವರದಿಗಳನ್ನು ಬರೆದು ತೀವ್ರ ಸಂಚಲನವನ್ನುಂಟು ಮಾಡಿತ್ತು. ೧೯೬೦ರ ದಶಕದ ಉತ್ತರಾರ್ಧದಲ್ಲಿ ಕಲಬುರಗಿ ನಗರದ ನೀರು ಪೂರೈಕೆ ಅವ್ಯವಸ್ಥೆಯ ಬಗ್ಗೆ ಸರಣಿ ಲೇಖನಗಳನ್ನು, ಸಂಪಾದಕೀಯಗಳನ್ನು ಬರೆದು ಅಪಾರವಾದ ಜನಜಾಗೃತಿಯನ್ನುಂಟು ಮಾಡಿತ್ತು. ನೀರು ಪೂರೈಕೆ ಅವ್ಯವಸ್ಥೆ ಬಗ್ಗೆ ಅದು ಎಷ್ಟೊಂದು ಆಕ್ರಮಣಕಾರಿ ನಿಲುವು ತಾಳಿತ್ತೆಂದರೆ ತನ್ನ ನಿರಂತರ ಬರವಣಿಗೆ ಸರಣಿಯ ಮೂಲಕ ಕಲಬುರಗಿ ನಗರ ಸಭೆಯ ಆಗಿನ ಅಧ್ಯಕ್ಷರಾಗಿದ್ದ ನೀಲಕಂಠರಾವ್ ಪಾಟೀಲ ಅವರ ರಾಜೀನಾಮೆ ನೀಡುವಲ್ಲಿಯೂ ತನ್ನ ಕಾಣಿಕೆ ಸಲ್ಲಿಸಿತ್ತು.

ಕಾಗಲಕರ್, ಅನಂತರಂಗಾಚಾರ್, ದತ್ತಾತ್ರೇಯ ಹೆರೂರ ಮುಂತಾದವರು ಹುರುಸು ಹುಮ್ಮಸ್ಸಿನಿಂದ, ನಿಷ್ಠೆಯಿಂದ ಶ್ರಮಿಸಿದ್ದರ ಫಲವಾಗಿ ಕಲಬುರಗಿಯಲ್ಲಿ 'ಸಾರಥಿ'ಯು ಜನನವಾಯಿತು. ಈ ಎಲ್ಲ ಮಹನೀಯರ ಪೈಕಿ ಅತ್ಯಂತ ಕ್ರಿಯಾಶೀಲರಾಗಿದ್ದವರೆಂದರೆ ಸ್ವಾಭಾವಿಕವಾಗಿ ಕಾಗಲಕರ್ ಅವರೇ, ಮೊಳೆ ಜೋಡಣೆಯಿಂದ ಪತ್ರಿಕೆ ಓದುಗರ ಕೈಸೇರುವವರೆಗೆ ಪ್ರತಿಯೊಂದು ಹಂತದಲ್ಲೂ ಅವರದೇ ಕಾರ್ಯಭಾರ, ಒಂದು ರೀತಿಯಲ್ಲಿ ಪತ್ರಿಕೆಯ ಒಟ್ಟಾರೆ ಜವಾಬ್ದಾರಿ ಅವರ ಮೇಲೆ ಬಿದ್ದಿದ್ದರೆ, ಸಂಪಾದಕೀಯ ವಿಭಾಗದಲ್ಲೂ ಅವರದೇ ನಾಯಕತ್ವ. ಅವರ ಕಂಪನಿಯಲ್ಲಿ ಕಾಗಲಕರ್ ಅವರೊಬ್ಬರೇ ವೃತ್ತಿನಿರತ ಮತ್ತು ಕಾರ್ಯನಿರತ ಪತ್ರಕರ್ತರಾಗಿದ್ದುದರಿಂದ ಸಹಜವಾಗಿಯೇ ಅವರು ಸಂಪಾದಕತ್ವದ ಹೊಣೆಯನ್ನು ಹೊರಬೇಕಿತ್ತು. ಆದರೆ ಅವರು ಸಂಪಾದಕಾಗಿರಲಿಲ್ಲ! ನಿಜವಾದ ಸಂಪಾದಕರು ರಾಗು ಜಾಗಿರದಾರ. ಆದರೆ ಜಾಗಿರದಾರ ಅವರಿಗೆ ಕನ್ನಡ ಮಾತನಾಡಲು ಬರುತ್ತಿತ್ತೇ ಹೊರತು ಕನ್ನಡ ಬರವಣಿಗೆಯಲ್ಲಿ ಅವರು ಪಳಗಿದವರಲ್ಲ. ಹೀಗಾಗಿ ಕಾಗಲಕರ್ ಅವರು ಜಾಗಿರದಾರರ ಹೆಸರಿನಲ್ಲಿ 'ಸಾರಥಿ'ಯು ಸಾರಥ್ಯವನ್ನು ಹಿಂಬದಿಯಿಂದ ವಹಿಸಿಕೊಂಡಿದರು.

'ಸಾರಥಿ'ಯ ಯಶಸ್ಸಿಗೆ ಅವರು ಏನೆಲ್ಲ ಪ್ರಯತ್ನಪಟ್ಟು ಹಗಲಿರುಳೂ ಅದೇ ಗುಂಗಿನಲ್ಲಿರುತ್ತಿದ್ದರು ಕಾಗಲಕರ್. ವಾಸ್ತವವಾಗಿ ಸಾರಥಿಯಿಂದ ಅವರಿಗೆ ಆರ್ಥಿಕ ಲಾಭವೇನೂ ಇರಲಿಲ್ಲ. ಕೆಲ ಸಂದರ್ಭದಲ್ಲಿ ಅವರೇ ಪತ್ರಿಕೆಗಾಗಿ ಅಷ್ಟಿಷ್ಟು ಖರ್ಚು ಮಾಡುತ್ತಿದ್ದರು. ಪತ್ರಿಕೆಯ ಸಂಪಾದಕತ್ವ, ಮಾಲೀಕತ್ವ ಬೇರೆಯವರದೇ ಆಗಿದ್ದರೂ ಅವರು 'ಸಾರಥಿ'ಯನ್ನು ತಮ್ಮ ಸ್ವಂತ ಪತ್ರಿಕೆ ಎಂದೇ ತಿಳಿದು ಅದಕ್ಕಾಗಿ ತನು-ಮನ-ಧನದಿಂದ ದುಡಿದರು.

ಸಾರಥಿಗೆ ವರದಿಗಳನ್ನು ನೀಡುವುದು, ಲೇಖನಗಳನ್ನು ಬರೆಯುವುದು, ಲೇಖನಗಳನ್ನು ಹೊಂದಿಸುವುದು, ಬರೆಯಬಲ್ಲವರನ್ನು ಹುಡುಕಿ, ಹೆಕ್ಕಿ ತೆಗೆದು ಅವರಿಂದ ಲೇಖನಗಳನ್ನು ಬರೆಸುವುದು, ಜನರನ್ನು ಓದುವಂತೆ ಪ್ರೇರೇಪಿಸುವುದು ಇತ್ಯಾದಿಗಳೆಲ್ಲವನ್ನೂ ಕಾಗಲಕರ್ ಅವರೇ ಮಾಡುತ್ತಿದ್ದರು. ಪತ್ರಿಕೆ ಅವರಿಗೊಂದು ಧ್ಯೇಯವಷ್ಟೇ ಅಲ್ಲ ಜೀವನದ ಮಂತ್ರವೇ ಆಗಿತ್ತು.

ಖ್ಯಾತ ಕವಿ ವಸಂತ ಕುಷ್ಟಗಿ ಅವರು ಬೀದರನಲ್ಲಿ ಹೈದ್ರಾಬಾದ ಕರ್ನಾಟಕ ಶಿಕ್ಷಣ ಸಂಸ್ಥೆಯ ಕಾಲೇಜೊಂದರಲ್ಲಿ ಅಧ್ಯಾಪಕರಾಗಿದ್ದರು. ೧೯೬೮ರಲ್ಲಿ ಅವರಿಗೆ ಬೀದರನಿಂದ ಶಹಾಬಾದಿನ ಎಸ್.ಎಸ್.ಎಂ. ಕಾಲೇಜಿಗೆ ವರ್ಗವಾಯಿತು, ಸಾರಥಿಗಾಗಿ ಕುಷ್ಟಗಿ ಅವರ ಸೇವೆಯನ್ನು ಬಳಸಿಕೊಳ್ಳಲು ಕಾಗಲಕರ್ ಹಾತೊರೆಯುತ್ತಿದ್ದರು. ಅವರಿಗೆ ಶಹಾಬಾದಿಗೆ ವರ್ಗವಾದ ಸಂದರ್ಭ ಕಾಗಲಕರ್ ಅವರಲ್ಲಿ ಹೊಸ ಆಶಾಕಿರಣವೊಂದನ್ನು ಮೂಡಿಸಿತ್ತು.

ವಸಂತ ಕುಷ್ಟಗಿ ಶಹಾಬಾದಿನಲ್ಲೇ ನೆಲೆಸುವುದರ ಬದಲು ಅವರು ಪ್ರತಿನಿತ್ಯ ಕಲಬುರಗಿಗೆ ಬಂದು ಹೋಗುವಂತೆ ಏರ್ಪಾಟುಮಾಡಿದರು ಕಾಗಲಕರ್. ಮಾಜಿ ಸಂಸತ ಸದಸ್ಯರಾಗಿದ್ದ ರಾಗು ಜಾಗಿರದಾರ ಅವರು ಪ್ರಭಾವವನ್ನು ಬಳಸಿ ಕುಷ್ಟಗಿ ಅವರ ದೈನಂದಿನ ರೈಲು ಪ್ರಯಾಣಕ್ಕೆ ರಿಯಾಯ್ತಿ ದರದಲ್ಲಿ ರೈಲ್ವೆ ಪಾಸನ್ನು ಒದಗಿಸಿ -ಕೊಟ್ಟರು. ಈ ರಿಯಾಯ್ತಿ ಪಯಣ ವೆಚ್ಚ ಆಗಿನ ಕಾಲದಲ್ಲಿ ಮೂರು ತಿಂಗಳಿಗೆ ಹದಿನಾಲ್ಕು ರೂಪಾಯಿಗಳು ಮಾತ್ರ! ಲೇಖನಗಳನ್ನು ಬರೆಯುವುದು, ಅಚ್ಚು ಪ್ರತಿಯನ್ನು ತಿದ್ದುವುದು, ಹಸ್ತಪ್ರತಿಗಳನ್ನು ತಿದ್ದುವುದು, ಅವುಗಳನ್ನು ಸಂಪಾದಿಸುವುದು / ಸಂಕಲಿಸುವುದು ಇತ್ಯಾದಿ ಕಾರ್ಯಗಳಿಗೆ ಕಾಗಲಕರ್ ಅವರು ವಸಂತ ಕುಷ್ಟಗಿ ಅವರ ಸೇವೆಯನ್ನು ಧಾರಾಳವಾಗಿ ಉಪಯೋಗಿಸಿಕೊಂಡರು. ಕುಷ್ಟಗಿ ಅವರಲ್ಲಿನ ಬರವಣಿಗೆ ಸಾಮರ್ಥ್ಯ, ಆಸಕ್ತಿಗಳಿಗೆ 'ಸಾರಥಿ'ಯ ಮೂಲಕ ಅತ್ಯಂತ ಪರಿಣಾಮಕಾರಿಯಾದ ಅಭಿವ್ಯಕ್ತಿಯನ್ನು ಮೂಡಿಸುವಲ್ಲಿ ಕಾಗಲಕರ್ ಯಶಸ್ವಿಯಾದರು.

ಕಲಬುರಗಿಯ ಎಂ.ಎಸ್.ಕೆ. ಮಿಲ್ಸ್ ರಸ್ತೆಯಲ್ಲಿರುವ ಡಾ|| ಸಾಂಬ್ರಾಣಿ ಅವರ ಕಾಂಪೌಂಡಿನಲ್ಲಿ ಪ್ರಕಟವಾಗುತ್ತಿದ್ದ ಸಾರಥಿ ೧೯೭೫-೭೬ರ ವರೆಗೆ ಯಶಸ್ವಿಯಾಗಿ ನಡೆದು ಸ್ಥಳೀಯ ಪತ್ರಿಕೋದ್ಯಮದ ಬೆಳವಣಿಗೆಗೆ ಅಸ್ತಿವಾರ ಹಾಕಿತ್ತು. ಕಲಬುರಗಿಯ ಸಾಹಿತ್ಯಕ ಮತ್ತು ಸಾಂಸ್ಕೃತಿಕ ಲೋಕವನ್ನು ಬೆಳಗುವಲ್ಲಿ 'ಸಾರಥಿ' ಪ್ರಮುಖ ಪಾತ್ರ ವಹಿಸಿತ್ತು. ಕಲಬುರಗಿಯಲ್ಲಿ 'ಸಾರಥಿ' ಪರ್ವದ ಮೇರು ಪುರುಷ ಕಾಗಲಕರ್ ಆಗಿದ್ದರು.

'ಸಾರಥಿ' ಯಶಸ್ಸಿನಿಂದಾಗಿ ಕಲಬುರಗಿಯಲ್ಲಿ ಸ್ಥಳೀಯ ಪತ್ರಿಕೆಗಳ ಒಂದು ಶಕೆಯೇ ಪ್ರಾರಂಭವಾಯಿತು. ಆ ನಂತರ ಶುರುವಾದ ಹಲವು ಸ್ಥಳೀಯ ಪತ್ರಿಕೆಗಳಿಗೆ ಕಾಗಲಕರ್ ಅವರ ಮಾರ್ಗದರ್ಶನ ಉದಾರವಾಗಿ ದೊರೆಯುತ್ತಿತ್ತು.

'ಸಂಯುಕ್ತ ಕರ್ನಾಟಕ' ಮತ್ತು ಕಾಗಲಕರ್ ಒಂದೇ ನಾಣ್ಯದ ಎರಡು ಮುಖಗಳಿಂತಿದ್ದರು. ಪತ್ರಿಕೆ ಮತ್ತು ಪತ್ರಕರ್ತನ ಸಂಬಂಧ ಅವಿನಾಭಾವವಾಗಿತ್ತು. ಆಗಿನ ಕಾಲದಲ್ಲಿ ಕಲಬುರಗಿಯಲ್ಲಿ 'ಸಂಯುಕ್ತ ಕರ್ನಾಟಕ' ಏಕಮೇವಾದ್ವಿತೀಯ ಪತ್ರಿಕೆಯಾಗಿದ್ದರೆ, ಆ ಪತ್ರಿಕೆಯ ವರದಿಗಾರನಾಗುವುದರ ಮೂಲಕ ಕಾಗಲಕರ್ ಕಲಬುರಗಿ ಪತ್ರಿಕಾಲೋಕದಲ್ಲಿ ಏಕಮೇವಾದ್ವಿತೀಯ ಪತ್ರಕರ್ತನಾಗಿ ಅನಭಿಷಕ್ತ ದೊರೆಯಂತೆ ಮೆರೆದರು. ಸಾಹಿತ್ಯ ಸಂಸ್ಕೃತಿ, ಕಲೆ, ಇತಿಹಾಸ, ಪರಂಪರೆ, ನೀರಾವರಿ, ಗ್ರಾಮೀಣ ಅಭಿವೃದ್ಧಿ, ಶಿಕ್ಷಣ, ಆರೋಗ್ಯ, ಕೃಷಿ ಮುಂತಾದವು ಅವರ ಆದ್ಯತಾ ಕ್ಷೇತ್ರಗಳಾಗಿದ್ದವು. ರಾಜಕೀಯ ಅವರ ಆದ್ಯತಾ ಪಟ್ಟಿಯಲ್ಲಿ ಕೊನೆಯ ಸ್ಥಾನ ಪಡೆದಿತ್ತು.

ಈಗಿನಂತೆ ಆಗ ಸುದ್ದಿಗಳು ಸುಲಭವಾಗಿ ದೊರೆಯುತ್ತಿರಲಿಲ್ಲ. ಸಾಮಾಜಿಕ ಆಂದೋಲನದ ತೀವ್ರ ಕೊರತೆಯ ಕಾರಣದಿಂದಾಗಿ ಮತ್ತು ರಾಜಕೀಯ ಪ್ರಜ್ಞೆಯ ಕೊರೆತಯಿಂದಾಗಿ ಸುದ್ದಿಗಳು ಸುಲಭವಾಗಿ ದೊರೆಯುತ್ತಿರಲಿಲ್ಲ. ಸುದ್ದಿ ಮಾಡಲು ಪತ್ರಕರ್ತ ತೀವ್ರವಾಗಿ ಹೆಣಗಬೇಕಾದ ಕಾಲ ಅದು. ಪತ್ರಿಕಾ ಗೋಷ್ಠಿಗಳನ್ನು ಏರ್ಪಡಿಸಿ ತಮ್ಮ ನಿಲುವನ್ನು ಪ್ರಕಟಿಸುವ ಸಂಪ್ರದಾಯ ಆಗಿನ್ನೂ ಬೆಳೆದು ಬಂದಿರಲಿಲ್ಲ. ಪತ್ರಿಕೆಗಳ ಹಾಗೂ ಪತ್ರಕರ್ತರ ಸಂಖ್ಯೆ ತೀವ್ರ ವಿರಳವಾಗಿದ್ದುದರಿಂದ ಸ್ಪರ್ಧೆಯೂ ಇರಲಿಲ್ಲ. 'ಸಂಯುಕ್ತ ಕರ್ನಾಟಕ'ದಲ್ಲಿ ಬಂದದ್ದು ಮಾತ್ರ ಸುದ್ದಿಯಷ್ಟೇ!

'ಸಂಯುಕ್ತ ಕರ್ನಾಟಕ' ಪ್ರತಿಷ್ಠಾಪಿತವಾಗಿ, ಚೆನ್ನಾಗಿ ಬೇರು ಬಿಡುವವರೆಗೆ ಅದಕ್ಕೆ ಸಾಟಿಯಾಗಿ ನಿಲ್ಲುವ ಬೇರೊಂದು ಪತ್ರಿಕೆ ಈ ಭಾಗದಲ್ಲಿ ಇರಲಿಲ್ಲ. ಬಹಳ ದಿನಗಳ ನಂತರ 'ಪ್ರಜಾವಾಣಿ', 'ಡೆಕ್ಕನ್ ಹೆರಾಲ್ಡ್' ಪತ್ರಿಕೆಗಳು ಕಲಬುರಗಿಗೆ

ಪಾದಾರ್ಪಣೆ ಮಾಡಿದವು. ಬಾಬುರಾವ್ ಹಾಗರಗಿ ಆ ಪತ್ರಿಗಳ ವರದಿಗಾರರಾಗಿದ್ದರು. ೧೯೭೨ರ ಸುಮಾರಿಗೆ ಮೈಸೂರಿನವರಾದ ಸುಂದರರಾಜ 'ಪ್ರಜಾವಾಣಿ'ಯ ಪೂರ್ಣಾವಧಿ ವರದಿಗಾರರೆಂದು ಕಲಬುರಗಿಗೆ ನೇಮಕ ಗೊಂಡರು. 'ಪ್ರಜಾವಾಣಿ' ಕಲಬುರಗಿಯಲ್ಲಿ ತನ್ನ ಕಾರ್ಯಾಲಯವನ್ನು ಪ್ರಾರಂಭಿಸಿದ್ದಷ್ಟೇ ಅಲ್ಲ, ಅದರ ಜೊತೆಯಲ್ಲೇ 'ದೂರಮುದ್ರಕ' (Teleprinter) ಸೌಕರ್ಯವನ್ನು ಪಡೆದುಕೊಂಡಿತು. ಈಗಿರುವ ಕಂಪ್ಯೂಟರ ಗಾತ್ರಕ್ಕಿಂತಲೂ ಮೂರು-ನಾಲ್ಕು ಪಟ್ಟು ದೊಡ್ಡದಿದ್ದ ಟೆಲಿಪ್ರಿಂಟರ್ಸ್ ಬೆರಳಚ್ಚು ಯಂತ್ರದಂತೆ ಕೆಲಸ ಮೂಡುತ್ತಿತ್ತು. ಯಂತ್ರದ ಒಳಗಡೆಯೇ ಬಿಳಿ ಹಾಳೆಯ ಸುತ್ತನ್ನು ಜೋಡಿಸಲಾಗಿತ್ತು. ಟೆಲಿಪ್ರಿಂಟರ್ ಸಂಪರ್ಕದ ಮಾರ್ಗವನ್ನು ಕ್ರಿಯಾಶೀಲಗೊಳಿಸಿ ಅದರ ಮೇಲೆ ಏನೇ ಬೆರಳಚ್ಚು ಮೂಡಿದರೂ ಅದೇ ಸಮಯಕ್ಕೆ ಪತ್ರಿಕೆಯ ಪ್ರಕಾಶನ ಕೇಂದ್ರವಾದ ಬೆಂಗಳೂರಿನ ಪತ್ರಿಕಾಲಯದಲ್ಲಿ ಅಂತಹುದೇ ರೀತಿಯ ಟೆಲಿಪ್ರಿಂಟರ್ ಮೇಲೆ ಮೂಡುತ್ತಿತ್ತು. ಟೆಲಿಪ್ರಿಂಟರ್ ಒಂದು ಕೇಂದ್ರದಿಂದ ಮತ್ತೊಂದು ಕೇಂದ್ರಕ್ಕೆ ಸಂಪರ್ಕ ಕಲ್ಪಿಸುತ್ತಿತ್ತು. ಅದು ಬರೀ ಏಕಮುಖ ಸಂಪರ್ಕ ವ್ಯವಸ್ಥೆಯಾಗಿರಲಿಲ್ಲ. ದ್ವಿಮುಖ ಸಂಪರ್ಕ ಸೌಲಭ್ಯ ಅದರಲ್ಲಿದ್ದ ಕಾರಣ ಈ ತುದಿಯಿಂದ ವರದಿಗಾರರು ಮತ್ತು ಪ್ರಕಾಶನ ಕೇಂದ್ರದ ತುದಿಯಿಂದ ಬೇರೊಬ್ಬರು ಪರಸ್ಪರ ಸಂಭಾಷಣೆ ನಡೆಸಬಹುದಿತ್ತು. ಈಗಿನ ಇಂಟರನೆಟ್‌ನಲ್ಲಿ ಚಾಟ್ ಮಾಡುವಂತೆ.

ಕೇವಲ ತಂತಿ ಮೂಲಕವಷ್ಟೇ ವರದಿಗಳು ರವಾನೆಯಾಗುತ್ತಿದ್ದ ಆಗಿನ ದಿನಗಳಲ್ಲಿ ಟೆಲಿಪ್ರಿಂಟರ್ ಯಂತ್ರ ಸುದ್ದಿ ಸಂಪರ್ಕ ಕ್ಷೇತ್ರದಲ್ಲಿ ಅತ್ಯಂತ ಮಹತ್ವದ ಕ್ರಾಂತಿಯನ್ನುಂಟು ಮಾಡಿತ್ತು. ಸುದ್ದಿ ಸಂಸ್ಥೆಗಳ ಜೀವಾಳವೂ ಟೆಲಿಪ್ರಿಂಟರ್‌ಗಳೇ ಆಗಿದ್ದವು. ಪಿ.ಟಿ.ಐ. ಮತ್ತು ಯು.ಎನ್.ಐ. ಸುದ್ದಿ ಸಂಸ್ಥೆಗಳಿಗೆ ಚಂದಾದಾರರಾಗಿದ್ದ ಪತ್ರಿಕೆಗಳು ತಮ್ಮ ತಮ್ಮ ಕಚೇರಿಯಲ್ಲಿ ಯಾ ಸುದ್ದಿ ಸಂಸ್ಥೆಯ ಟೆಲಿಪ್ರಿಂಟರ್ಸ್‌ಗಳನ್ನು ಹೊಂದುವ ಮೂಲಕ ಸುದ್ದಿ ಸಂಸ್ಥೆಗಳ ಸೇವೆಯನ್ನು ನಿರಂತರವಾಗಿ ಪಡೆಯುತ್ತವೆ.

ಕಲಬುರಗಿಯಂತಹ ದುರ್ಗಮ ಪ್ರದೇಶದಲ್ಲಿ 'ಪ್ರಜಾವಾಣಿ' ಪತ್ರಿಕೆ ಟೆಲಿಪ್ರಿಂಟರ್ ಆರಂಭಿಸಿದ ಮೇಲೆ ಸುದ್ದಿ ರವಾನೆಯಲ್ಲಿ ಮಹತ್ವದ ಬದಲಾವಣೆಗಳು ಉಂಟಾದವು. ಅಂದಿನ ಸುದ್ದಿಗಳನ್ನು, ಘಟನೆಗಳನ್ನು, ಬೆಳವಣಿಗೆಗಳನ್ನು ಅದೇ ದಿನದಂದು ರವಾನಿಸಿ ಮಾರನೆಯ ದಿನದ ಪತ್ರಿಕೆಗಳಲ್ಲಿ ಅವು ಪ್ರಕಟಗೊಳ್ಳಬಹುದಿತ್ತು. ಇದರಿಂದ ಅಗದಿ ತಾಜಾ ಸುದ್ದಿಗಳು ಓದುಗರಿಗೆ ಲಭ್ಯವಾಗಲು ಸಾಧ್ಯವಾಯಿತು.

ಟೆಲಿಪ್ರಿಂಟ್ಟರ್ ಯಂತ್ರ ಶೀಘ್ರ ಸುದ್ದಿ ತಲುಪಿಸುವಲ್ಲಿ ಕ್ರಾಂತಿಕಾರಿ ಬದಲಾವಣೆಯನ್ನು ತಂದಿದ್ದರ ಪರಿಣಾಮವಾಗಿ 'ಪ್ರಜಾವಾಣಿ' ಪತ್ರಿಕೆಯ ಸುಸ್ಥಿರ ಬೆಳವಣಿಗೆಗೆ ಅದು ಪೂರಕವಾಯಿತು. ಪತ್ರಿಕೋದ್ಯಮದಲ್ಲಿಈ ಹಿಂದುಳಿದ ಪ್ರದೇಶದಲ್ಲಿ ಆಧುನಿಕ ತಂತ್ರಜ್ಞಾನವನ್ನು ಪರಿಚಯಿಸಿ, ಅಳವಡಿಸಿ, ಅನುಷ್ಠಾನಕ್ಕೆ ತಂದ ಶ್ರೇಯಸ್ಸು 'ಪ್ರಜಾವಾಣಿ' ಸಮೂಹದ ಪತ್ರಿಕಾ ಗುಂಪಿನ ಮಾಲೀಕ ವರ್ಗಕ್ಕೆ ಸಲ್ಲಬೇಕು. ಟೆಲಿಪ್ರಿಂಟರ್ ವ್ಯವಸ್ಥೆಯಿಂದಾಗಿ ಸಂಪಾದಕರು, ಸುದ್ದಿ ಸಂಪಾದಕರು ವರದಿಗಾರರೊಂದಿಗೆ ನೇರ ಹಾಗೂ ಸುಲಭ ಸಂಪರ್ಕ ಹೊಂದಲು ಅನುಕೂಲವಾಯಿತು. ವರದಿಗಾರನಿಗೆ ಕಾಲಕಾಲಕ್ಕೆ ಸಲಹೆ, ಸೂಚನೆ, ಮಾರ್ಗದರ್ಶನ ಮುಂತಾದವುಗಳನ್ನು ನೀಡಲು ಅನುಕೂಲವಾಗಿದ್ದುದರಿಂದ ವರದಿಗಾರ ಯಾವಾಗಲೂ ಕ್ರಿಯಾಶೀಲನಾಗಿ ಹೆಚ್ಚಿನ ಜವಾಬ್ದಾರಿಯಿಂದ ಕಾರ್ಯನಿರ್ವಹಿಸಲು ಟೆಲಿಪ್ರಿಂಟರ್ ತಂತ್ರಜ್ಞಾನ ಅನುಕೂಲ ಕಲ್ಪಿಸಿಕೊಟ್ಟಿತ್ತು. ಇದು ಅಂತಿಮವಾಗಿ 'ಪ್ರಜಾವಾಣಿ' ಪತ್ರಿಕೆ ಕಲಬುರಗಿ ಪ್ರದೇಶದಲ್ಲಿ 'ಸಂಯುಕ್ತ ಕರ್ನಾಟಕ'ಕ್ಕೆ ಒಂದು ಪರಿಣಾಮಕಾರಿ ಮತ್ತು ವಿಶ್ವಾಸಾರ್ಹ ಪರ್ಯಾಯ ಪತ್ರಿಕೆಯಾಗಿ ರೂಪುಗೊಳ್ಳಲು ಸಹಾಯವಾಯಿತು.

'ಪ್ರಜಾವಾಣಿ'ಯ ಟೆಲಿಪ್ರಿಂಟರ್ ವ್ಯವಸ್ಥೆ ಸಂಯುಕ್ತ ಕರ್ನಾಟಕಕ್ಕೆ ಒಂದು ಸವಾಲನ್ನೇ ಒಡ್ಡಿತ್ತು. ಕಲಬುರಗಿಯಲ್ಲಿ ಸಂಯುಕ್ತ ಕರ್ನಾಟಕ ಅತ್ಯಂತ ಹಳೆಯ ಪತ್ರಿಕೆಯಾಗಿದ್ದರೂ ಅದರ ಕಾರ್ಯಾಲಯವೂ ಕೂಡ ಇಲ್ಲಿರಲಿಲ್ಲ. ಅನೇಕ ವರ್ಷಗಳ ನಂತರ ಆಗಮಿಸಿದ ಪ್ರಜಾವಾಣಿ ಪೂರ್ಣಾವಧಿ ವರದಿಗಾರನನ್ನು ನೇಮಿಸಿಕೊಂಡು, ಕಾರ್ಯಾಲಯವನ್ನು ಪ್ರಾರಂಭಿಸಿ ಅಲ್ಲಿ ಟೆಲಿಪ್ರಿಂಟರ್ ವ್ಯವಸ್ಥೆಯನ್ನು ಅಳವಡಿಸಿ ತನ್ನ ಮೇಲುಗೈಯನ್ನು ಸ್ಪಷ್ಟವಾಗಿ ಸಾಧಿಸಿತ್ತು. 'ಪ್ರಜಾವಾಣಿ' ಉಂಟು ಮಾಡಿದ ತೀವ್ರ ಬೆಳವಣಿಗೆ ಅದರ ಪ್ರತಿಸ್ಪರ್ಧಿಯಾದ 'ಸಂಯುಕ್ತ ಕರ್ನಾಟಕ'ದ ಮೇಲೆ ಪರಿಣಾಮ ಮತ್ತು ಪ್ರಭಾವ ಬೀರದೆ ಇರಲು ಸಾಧ್ಯವಿರಲಿಲ್ಲ. ಮೊಟ್ಟಮೊದಲ ಬಾರಿಗೆ 'ಸಂಯುಕ್ತ ಕರ್ನಾಟಕ' ಕಲಬುರಗಿಯಲ್ಲಿ ತನ್ನ ಪ್ರತಿಸ್ಪರ್ಧಿಯಿಂದ ಪೈಪೋಟಿಯನ್ನು ಎದುರಿಸಬೇಕಾಗಿ ಬಂತು.

ತನ್ನ ವ್ಯವಸ್ಥಿತ ಸಂಪರ್ಕ ಸಾಧನಗಳಿಂದಾಗಿ, ಆಡಳಿತ ನೀತಿಯಿಂದಾಗಿ ಇಂದಿನ ಸುದ್ದಿಗಳು 'ಪ್ರಜಾವಾಣಿ'ಯಲ್ಲಿ ನಾಳೆಯೇ ಬರಲಾರಂಭಿಸಿದವು. ಆದರೆ ಅವೇ ಸುದ್ದಿಗಳು 'ಸಂಯುಕ್ತ ಕರ್ನಾಟಕ'ದಲ್ಲಿ ಬಾರದಿದ್ದಾಗ ಪತ್ರಿಕೆ ಮುಜುಗರ ಎದುರಿಸುವುದರ ಜೊತೆಗೆ ಓದುಗರ ಟೀಕೆ, ವಿಮರ್ಶೆಗೆ ಗುರಿಯಾಗುತ್ತಿತ್ತು. ನಿಧಾನವಾಗಿಯಾದರೂ ಅತ್ಯಂತ ದೃಢವಾಗಿ 'ಪ್ರಜಾವಾಣಿ' ಈ ಭಾಗದಲ್ಲಿ

ಗಟ್ಟಿಯಾಗಿ ಬೆಳೆಯಲು ಪ್ರಾರಂಭಿಸಿ ಸಂಯುಕ್ತ ಕರ್ನಾಟಕ್ಕೆ ಸೆಡ್ಡು ಹೊಡೆದು ನಿಂತಿತ್ತು. ಈ ಬೆಳವಣಿಗೆ ಮತ್ತು ಸ್ಪರ್ಧೆಯ ಲಾಭ ಪಡೆದವರೆಂದರೆ ಕಲಬುರಗಿ ಮತ್ತು ಕಲಬುರಗಿಯ ಜನತೆ.

ಯಾವುದೇ ಕ್ಷೇತ್ರದಲ್ಲಿ ಸ್ಪರ್ಧೆ ಇಲ್ಲದಿದ್ದಾಗ ಅಲ್ಲಿ ಏಕಸ್ವಾಮ್ಯತೆ ಬೆಳೆವುದು ಸಹಜ. ಈ ರೀತಿಯ ಏಕಸ್ವಾಮ್ಯತೆ ಸಮಾಜದ ಒಳಿತಿನ ದೃಷ್ಟಿಯಿಂದ ಸಾಧುವಲ್ಲ. ಏಕಸ್ವಾಮ್ಯತೆಯಿಂದ ಸಂಬಂಧಿಸಿದ ಕ್ಷೇತ್ರದಲ್ಲಿ ಒಂದು ರೀತಿಯ ಅನಪೇಕ್ಷಣೀಯ ಸಂತೃಪ್ತಭಾವ ಉಂಟಾಗಿ ಗುಣಾತ್ಮಕ ಬೆಳವಣಿಗೆ ಕುಂಠಿತವಾಗುತ್ತದೆ. ಸ್ಪರ್ಧಾಹೀನತೆಯಲ್ಲಿ ಬೆಳೆದು ಬಂದು 'ಸಂಯುಕ್ತ ಕರ್ನಾಟಕ' ಇಂತಹುದೇ ಅಪಾಯಕಾರಿಯಾದ ಸಂತೃಪ್ತಭಾವಕ್ಕೆ ಒಗ್ಗಿಕೊಂಡು ಹೋಗಿತ್ತು. ಆದರೆ ಪತ್ರಿಕೆ ಜನಮಾನಸದಿಂದ ಅಷ್ಟೊಂದು ಸುಲಭವಾಗಿ ದೂರವಾಗಲು ಸಾಧ್ಯವಿರಲಿಲ್ಲ. ಸ್ವಾತಂತ್ರ್ಯ ಪೂರ್ವಕಾಲದಿಂದಲೂ ಅಸ್ತಿತ್ವದಲ್ಲಿದ್ದು ಜನರಿಗೆ ಸುದ್ದಿ, ಮಾಹಿತಿ, ಶಿಕ್ಷಣ, ಮನರಂಜನೆ ಇತ್ಯಾದಿ ಒದಗಿಸುತ್ತಿದ್ದ 'ಸಂಯುಕ್ತ ಕರ್ನಾಟಕ' ಈ ಪ್ರದೇಶದ ಜನರ ಹೃನ್ಮನಗಳಲ್ಲಿ ಒಂದು ಶಾಶ್ವತ ಸ್ಥಾನವನ್ನೇ ಪಡೆದುಕೊಂಡಿತ್ತು. ಆ ಸ್ಥಾನದಿಂದ ಪತ್ರಿಕೆಯನ್ನು ಪಲ್ಲಟಗೊಳಿಸುವುದು ಸುಲಭವಾಗಿರಲಿಲ್ಲ. ಸುದ್ದಿ ತಡವಾಗಿ ಬಂದರೂ ಚಿಂತೆಯಿಲ್ಲ 'ಸಂಯುಕ್ತ ಕರ್ನಾಟಕ' ವನ್ನೇ ಓದಬೇಕೆಂಬ ಅಭಿರುಚಿ ಮತ್ತು ನಿಷ್ಠೆ ಈ ಭಾಗದ ಜನರಲ್ಲಿತ್ತು.

'ಸಂಯುಕ್ತ ಕರ್ನಾಟಕ'ದ ಭಾಷೆ ಮತ್ತು ಶೈಲಿ ಉತ್ತರ ಕರ್ನಾಟಕದ ಜನತೆಯ ಅಭಿರುಚಿಗೆ ಪೂರಕವಾಗಿದ್ದುದರಿಂದ ಅದು ಜನಸಾಮಾನ್ಯರ ಪತ್ರಿಕೆಯಾಗಿತ್ತು. 'ಪ್ರಜಾವಾಣಿ' ಶಿಷ್ಟ ಭಾಷೆಯನ್ನು ಪ್ರಯೋಗಿಸಿದ್ದರಿಂದ ಒಂದು ರೀತಿಯ ಏಕತಾನತೆ ಅದರಲ್ಲಿದ್ದು ಭಾಷಾ ವೈವಿಧ್ಯತೆಯ ಕೊರತೆ ಕಂಡು ಬರುತ್ತಿತ್ತು. 'ಪ್ರಜಾವಾಣಿ'ಯ ಭಾಷೆ ಪ್ರಾಯಃ ದಕ್ಷಿಣ ಕರ್ನಾಟಕ ಜನತೆಯ ಅಭಿರುಚಿಗೆ ಸ್ಪಂದಿಸುತ್ತಿತ್ತು. ಆಯಾ ಪ್ರದೇಶದ ಜನರ ಭಾಷೆಯ ಮೂಲಕವೇ ಮಾಧ್ಯಮಗಳು ಜನರೊಂದಿಗೆ ಗುರುತಿಸಿಕೊಂಡರೆ ಅವುಗಳಿಗೆ ಒಂದು ವಿಶಿಷ್ಟವಾದ ಅವಿನಾಭಾವ ನೆಂಟಸ್ಥಿಕೆ ಬೆಳೆಯಲು ಸಾಧ್ಯವಾದೀತು.

'ಸಂಯುಕ್ತ ಕರ್ನಾಟಕ' ಸಾಂಪ್ರದಾಯಿಕ ಶೈಲಿಯ ಪತ್ರಿಕೆಯಾಗಿದ್ದರಿಂದ ಆಧುನಿಕತೆಯ ಗಾಳಿಯನ್ನು ಗುರುತಿಸಲು ಅದು ತನ್ನದೇ ಆದ ಸಮಯವನ್ನು ತೆಗೆದುಕೊಂಡಿತು. 'ಪ್ರಜಾವಾಣಿ'ಯ ಪ್ರವೇಶದಿಂದಾಗಿ ಮತ್ತು ಅದು ಉಂಟು ಮಾಡಿದ ತಾಂತ್ರಿಕ ಸ್ಪರ್ಧೆಯಿಂದಾಗಿ ಕಾಗಲಕರ್ ಅವರು ಬಾಧಿತರಾಗದೆ

ಉಳಿಯಲು ಸಾಧ್ಯವಿರಲಿಲ್ಲ. 'ಪ್ರಜಾವಾಣಿ' ಯಿಂದಾಗಿ ತಮ್ಮ ಪತ್ರಿಕೆಯ ಬೆಳವಣಿಗೆಗೆ ಉಂಟಾಗಬಹುದಾದ ಸಾಧಕ-ಬಾಧಕಗಳನ್ನೆಲ್ಲ ಕಾಗಲಕರ್ ಮೇಲಿಂದ ಮೇಲೆ ತಮ್ಮ ಪತ್ರಿಕೆಯ ಸಂಪಾದಕರಿಗೆ ಮತ್ತು ಆಡಳಿತ ವರ್ಗಕ್ಕೆ ತಿಳಿಸುತ್ತಲೇ ಇದ್ದರು. ಇದರ ಪರಿಣಾಮವಾಗಿ 'ಸಂಯುಕ್ತ ಕರ್ನಾಟಕ' ೧೯೭೩ರಲ್ಲಿ ಕಲಬುರಗಿಯಲ್ಲಿ ತನ್ನ ಕಾರ್ಯಾಲಯವನ್ನು ಪ್ರಾರಂಭಿಸಲು ನಿರ್ಧರಿಸಿತು.

ಯುವಕನ ಶೋಧ

ಆದರೆ ಇಡೀ ಕಾರ್ಯಾಲಯವನ್ನು ಕಾಗಲಕರ್ ಅವರೊಬ್ಬರೇ ನಿರ್ವಹಿಸಲು ಆಗುತ್ತಿರಲಿಲ್ಲ. ಕಚೇರಿಯಲ್ಲೇ ಇದ್ದು ಕಚೇರಿಯ ಚಟುವಟಿಕೆಗಳನ್ನು ನೋಡಿಕೊಂಡು ಹೋಗಲು ಒಬ್ಬ ವ್ಯಕ್ತಿಯ ಅವಶ್ಯಕತೆ ತುರ್ತಾಗಿ ಇತ್ತು, ಸೂಕ್ತ ವ್ಯಕ್ತಿಯ ಅನ್ವೇಷಣೆಯಲ್ಲಿ ತೊಡಗಿದ್ದ ಕಾಗಲಕರ್ ಅವರ ಕಣ್ಣು ನೆಟ್ಟದ್ದು ಜೇವರ್ಗಿ ತಾಲ್ಲೂಕಿನ ದೂರದ ಯಡ್ರಾಮಿಯಲ್ಲಿದ್ದ ಯುವಕನೊಬ್ಬನ ಮೇಲೆ. ಶ್ರೀಕಾಂತ ಎಂಬ ಹೆಸರಿನಲ್ಲಿ ಈ ಯುವಕ ಲೋಕೋಪಯೋಗಿ ಇಲಾಖೆಯಲ್ಲಿ ಹಂಗಾಮಿ ಹುದ್ದೆಯೊಂದರಲ್ಲಿ ಕಾರ್ಯನಿರ್ವಹಿಸುತ್ತಿದ್ದ. ಮ್ಯಾಟ್ರಿಕ್‌ವರೆಗೆ ಓದಿದ್ದ ಈ ಯುವಕ ಉದ್ಯೋಗದ ಬೇಟೆಯಲ್ಲಿದ್ದ. ಪಿ.ಡಬ್ಲ್ಯು.ಡಿ.ಯಲ್ಲಿ ಎಂಥದೋ ಒಂದು ಕೆಲಸ ಸಿಕ್ಕಿದ್ದರಿಂದ ಆತ ಅಲ್ಲಿಗೇ ಹೋಗಿದ್ದ. ಆ ಯುವಕನ ತಂದೆ-ತಾಯಿಗೆ ವಿಷಯವನ್ನು ತಿಳಿಸಿ ಮುಂದಿಟ್ಟರು. ಯುವಕನ ಮನೆಯವರೆಲ್ಲರೂ ಕಾಗಲಕರ್ ಅವರಿಗೆ ಚಿರಪರಿಚಿತರು. ಅವರ ಒಪ್ಪಿಗೆಯನ್ನು ಪಡೆದ ಕಾಗಲಕರ್ ಅವರು ಯಡ್ರಾಮಿಗೆ ಧಾವಿಸಿ ಶ್ರೀಕಾಂತನನ್ನು ಲೋಕೋಪಯೋಗಿ ಇಲಾಖೆಯಿಂದ ವಿಮುಕ್ತಿಗೊಳಿಸಿ ಕಲಬುರಗಿಯ 'ಸಂಯುಕ್ತ ಕರ್ನಾಟಕ' ಕಚೇರಿಯಲ್ಲಿ ನಿಯುಕ್ತಿಗೊಳಿಸಿದರು!

ಕಚೇರಿಯೇನೋ ಆರಂಭವಾಯಿತು. ಆದರೆ ಕುಳಿತುಕೊಳ್ಳಲು ಆಸನಗಳೂ ಇರಲಿಲ್ಲ. ಸುಮಾರು ಆರು ತಿಂಗಳ ಕಾಲ ಜಮಖಾನೆ ಹಾಸಿ ಅದರ ಮೇಲೆ ಕುಳಿತೇ ಕಾರ್ಯನಿರ್ವಹಿಸಬೇಕಿತ್ತು. ಹೊಸದಾಗಿ ಬಂದಿದ್ದ ಶ್ರೀಕಾಂತುಗೆ ಜಮಖಾನೆ ಹಾಸಿ, ಜಮಖಾನೆ ಮಡಿಚಿಡುವುದೇ ಮುಖ್ಯ ಕೆಲಸವಾಗಿತ್ತು! ಕಚೇರಿ ಆರಂಭಿಸಿದ ಆರು ತಿಂಗಳ ನಂತರ ಟೆಲಿಪ್ರಿಂಟರ್ ಆಗಮನವಾಯಿತು. ಬೆರಳಚ್ಚು ಮಾಡುವಲ್ಲಿ ಅಲ್ಪ-ಸ್ವಲ್ಪ ಜ್ಞಾನ ಹೊಂದಿದ್ದ ಶ್ರೀಕಾಂತು ಟೆಲಿಪ್ರಿಂಟರ್ ಆಪರೇಟರ್ ಆದ. ವಯಸ್ಸಿಗೆ ತಕ್ಕ ಕುಶಾಗ್ರತೆಯನ್ನು ಹೊಂದಿದ್ದ ಯುವಕ ಟೆಲಿಪ್ರಿಂಟರ್ ನಿರ್ವಹಿಸುವಲ್ಲಿ ನಿಸ್ಸೀಮನಾದ.

ಸುದ್ದಿಯನ್ನು ಮೂಸುವ ಚುರುಕಾದ ನಾಸಿಕ ಉಳ್ಳವನಿಗೆ ಪತ್ರಿಕಾ ಕಚೇರಿಯ ಸುದ್ದಿ ಸಾಮ್ರಾಜ್ಯದಲ್ಲಿ ಕಾರುಬಾರು ಮಾಡದಿರಲು ಆದೀತೇನು? ಶ್ರೀಕಾಂತು

ಸೂಕ್ಷ್ಮವಾಗಿ ಸುದ್ದಿ ಜಗತ್ತಿನ ಎಲ್ಲ ಅಂಶಗಳನ್ನು, ಸೂಕ್ಷ್ಮತೆಗಳನ್ನು, ಒಳ-ಹೊರಗುಗಳನ್ನು ಗಮನಿಸುತ್ತಲೇ ಇದ್ದ. ಕಾಗಲಕರ್ ಬರೆಯುತ್ತಿದ್ದ ಸುದ್ದಿಗಳನ್ನೆಲ್ಲ ಆತನೇ ಟೆಲಿಪ್ರಿಂಟರನಲ್ಲಿ ರವಾನಿಸುತ್ತದ್ದ. ಆದರೆ ಸುದ್ದಿ ರವಾನಿಸುವ ಕೆಲಸವನ್ನಷ್ಟೇ ಆತ ಯಾಂತ್ರಿಕವಾಗಿ ಮಾಡಲಿಲ್ಲ. ತನ್ನ ಕರ್ತವ್ಯದ ವ್ಯಾಪ್ತಿಯನ್ನು ಮೀರಿ ಆತ ಮತ್ತೇನನ್ನೋ ಮನನ ಮಾಡುತ್ತಿದ್ದ. ಎಲ್ಲ ಸುದ್ದಿಗಳು, ಲೇಖನಗಳು ತನ್ನ ಮೂಲಕವೇ ಹಾಯ್ದು ಹೋಗುವ ವಿಶೇಷ ಗೌರವದ ಟೆಲಿಪ್ರಿಂಟರ್ ಆಪರೇಟರ್ ಕೆಲಸ ಆತನಿಗೆ ತೀರಾ ಆಪ್ಯಾಯಮಾನವಾಗಿತ್ತು. ಸುದ್ದಿ ರಚನಾ ಶಾಸ್ತ್ರವನ್ನು ಆತ ಅಯಾಚಿತವಾಗಿ ಕುಳಿತಲ್ಲೇ ಗ್ರಹಿಸಿಕೊಂಡ, ಕಲಿತುಕೊಂಡ.

ಸುದ್ದಿ ಜಗತ್ತಿನಲ್ಲಿ ಅಂಬೆಗಾಲಿಡುತ್ತಿದ್ದ ಶ್ರೀಕಾಂತು ಎದ್ದು ನಿಂತ, ಗೋಡೆ ಹಿಡಿದು ನಡೆಯಲಾರಂಭಿಸಿದ. ಕಾಗಲಕರ್ ಅವರಾದರೂ ಅವನ ಸುದ್ದಿ ಆಸಕ್ತಿಯನ್ನು ಪೋಷಿಸಿ, ನೀರು, ಗೊಬ್ಬರ ಹಾಕಿ ಬೆಳೆಸಿದರು. ಆತ ಕಾಗಲಕರ್ ಅವರ ನೆರವು ಮತ್ತು ಮಾರ್ಗದರ್ಶನದಲ್ಲಿ ತನ್ನದೇ ಆದ ಬೇರೊಂದು ಪಥದಲ್ಲಿ ಮುನ್ನಡೆಯಲಾರಂಭಿಸಿದೆ. ಬರುಬರುತ್ತ ತನ್ನ ಸ್ವಸಾಮರ್ಥ್ಯದ ಮೇಲೆ ಸುದ್ದಿ ಬರೆಯಲು ಶುರುವಿಟ್ಟುಕೊಂಡ ಕಾಗಲಕರ್ ಸಂಯುಕ್ತ ಕರ್ನಾಟಕ ತೊರೆದ ಮೇಲೂ ಯುವಕ ಪತ್ರಿಕೆಯಲ್ಲೇ ಟೆಲಿಪ್ರಿಂಟರ್ ಆಪರೇಟರ್ ಆಗಿ ಮುಂದುವರೆದ. ಕಾಗಲಕರ್ ಮತ್ತು ಅವರ ನಂತರ ಪತ್ರಿಕೆಯ ವರದಿಗಾರರಾಗಿ ಬಂದ ಮಹನೀಯರ ಮಾರ್ಗದರ್ಶನದಲ್ಲಿ ಸುದ್ದಿ ಜಗತ್ತಿನ ಹಲವಾರು ಮಗ್ಗಲುಗಳನ್ನು ಪರಿಚಯಿಸಿಕೊಂಡ. ಹಲವಾರು ಸಾಧ್ಯತೆಗಳಿಗೆ ತನ್ನನ್ನು ಒಡ್ಡಿಕೊಂಡ ಹೊಸ ಹೊಸತನ್ನು ಕಲಿಯಲಾರಂಭಿಸಿದ. ಇದರ ಜೊತೆಗೆ ಹೊರಗಿನಿಂದ ಕಾಗಲಕರ್ ಅವರ ಮಾರ್ಗದರ್ಶನವೂ ಆತನಿಗೆ ಧಾರಾಳವಾಗಿ ದೊರೆಯುತ್ತಿತ್ತು.

ಪತ್ರಿಕೋದ್ಯಮದಲ್ಲಿ ದಿನೇ ದಿನೇ ಬೆಳೆಯುತ್ತಲೇ ಹೋದ ಶ್ರೀಕಾಂತು. ಆತನ ಪ್ರಗತಿ ಅಸದಳವಾದದ್ದು. 'ಸಂಯುಕ್ತ ಕರ್ನಾಟಕ'ದಲ್ಲಿನ ಜಮಖಾನೆ ಹಾಸುವುದರಿಂದ ಪ್ರಾರಂಭ ಮಾಡಿದ ಆ ಯುವಕ ಇಂದು 'ಸಂಯುಕ್ತ ಕರ್ನಾಟಕ' ಕಲಬುರಗಿ ಆವೃತಿಯ ಸ್ಥಾನಿಕ ಸಂಪಾದಕ! ಆತನೇ ಇಂದು ಕನ್ನಡ ಪತ್ರಿಕೋದ್ಯಮದಲ್ಲಿ ಹೆಸರುವಾಸಿಯಾಗಿರುವ ಶ್ರೀಕಾಂತ ಆಚಾರ್ಯ ರಂಗಾಚಾರ್ಯ ಮಣೂರ ಅರ್ಥಾತ್ ಎಸ್.ಎರ್. ಮಣೂರ! ಪತ್ರಿಕೋದ್ಯಮದಲ್ಲಿ ಸಲ್ಲಿಸಿದ ಸೇವೆಗಾಗಿ ವರ್ಷ ೨೦೦೫ರಲ್ಲಿ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಗೆ ಪಾತ್ರರಾದ ಶ್ರೀಕಾಂತ ಆಚಾರ್ಯರ ಶ್ರೇಯೋಭಿವೃದ್ಧಿಯ ಬೀಜಾಕ್ಷರಕ್ಕೆ ಕಾರಣರಾದವರು ವಿ.ಎನ್. ಕಾಗಲಕರ್.

೧೯೭೩ರಲ್ಲಿ ಪತ್ರಿಕಾಲಯ ಪ್ರಾರಂಭವಾಗಿ ಟೆಲಿಪ್ರಿಂಟರ್ ಬಂದ ಮೇಲೆ ಕಾಗಲಕರ್ ಅವರು ಅದರ ಫಲವನ್ನು ಅನುಭವಿಸಲಾಗಲಿಲ್ಲ. ಕೆಂಗಲ್ ಹನುಮಂತಯ್ಯನವರು ಭವ್ಯವಾದ, ದಿವ್ಯವಾದ ವಿಧಾನಸೌಧವನ್ನೇನೋ ಕಟ್ಟಿಸಿದರು. ಆದರೆ ಅವರು ಅಲ್ಲಿ ಒಂದು ದಿನವೂ ಕೂಡ ವಿರಾಜಮಾನರಾಗಲು ಸಾಧ್ಯವಾಗಲಿಲ್ಲ. ಸಂಯುಕ್ತ ಕರ್ನಾಟಕದೊಂದಿಗಿದ್ದ ಕಾಗಲಕರ್ ಅವರ ಋಣ ತೀರುತ್ತ ಬಂದಿತೆಂದು ಕಾಣುತ್ತದೆ. ೧೯೭೫ರಲ್ಲಿ ಪತ್ರಿಕೆಯ ಆಡಳಿತ ಮಂಡಳಿ ಕಲಬುರಗಿಯಲ್ಲಿ ಪೂರ್ಣಾವಧಿ ವರದಿಗಾರನ ನೇಮಕದ ನಿರ್ಣಯ ಕೈಕೊಂಡ ನಂತರ ಕಾಗಲಕರ್ 'ಸಂಯುಕ್ತ ಕರ್ನಾಟಕ'ಕ್ಕೆ ವಿದಾಯ ಹೇಳಿದರು. ಎರಡು ದಶಕದ ಇತಿಹಾಸಕ್ಕೆ ತೆರೆ ಬಿದ್ದಿತು.

ಸಂಯುಕ್ತ ಕರ್ನಾಟಕದ ಏಳ್ಗೆಗಾಗಿ ತನು-ಮನ-ಧನದಿಂದ ಶ್ರಮಿಸಿದ ಕಾಗಲಕರ್ ಪತ್ರಿಕೆ ಮನೆ ಮನೆಯ ಮಾತಾಗುವಂತೆ ಮಾಡಲು ಅಹರ್ನಿಶಿ ದುಡಿದರು. ಪತ್ರಿಕೆಯೊಂದಿಗೆ ಅವರಿಗಿದ್ದ ಸಂಬಂಧ ಕೇವಲ ನೌಕರ-ಉದ್ಯಮ ಸಂಬಂಧವಾಗಿರಲಿಲ್ಲ. ಪತ್ರಿಕೆಯಲ್ಲಿ ಅಚಲ ನಿಷ್ಠೆ ಇರಿಸಿದ್ದ ಕಾಗಲಕರ್ ವೃತ್ತಿಗೌರವ, ಘನತೆಯನ್ನು ಎಚ್ಚರಿಕೆಯಿಂದ ಕಾಪಾಡಿಕೊಂಡು ಬರುವುದರ ಜೊತೆಗೆ ಕಲಬುರಗಿಯಲ್ಲಿ ಪತ್ರಿಕೆ ಬಲವಾಗಿ ತಳವೂರಲು ಅವಿರತ ಶ್ರಮಿಸಿದವರಲ್ಲಿ ಪ್ರಮುಖರು. ತಮ್ಮಂತೆ ಓದುಗರೂ ಪತ್ರಿಕೆಯೊಂದಿಗೆ ಭಾವನಾತ್ಮಕ ಸಂಬಂಧ ಬೆಳೆಸಿಕೊಂಡು ಬರುವುದಕ್ಕೆ ಅವರು ಶ್ರಮಿಸಿದ್ದು ಗಮನಾರ್ಹ.

'ಸಂಯುಕ್ತ ಕರ್ನಾಟಕ' ಕಲಬುರಗಿ ಜನತೆಯ ಬದುಕಿನ ಅನಿವಾರ್ಯ ಮತ್ತು ಅವಿಭಾಜ್ಯ ಅಂಗವನ್ನಾಗಿಸಿದವರು ಕಾಗಲಕರ್. ೧೯೫೫ರಲ್ಲಿ ಕಾಗಲಕರ್ ಅವರ ರೂಪದಲ್ಲಿ ಒಬ್ಬ ಅರೆಕಾಲಿಕ ವರದಿಗಾರನಿಂದ ಪ್ರಾರಂಭವಾದ ಪತ್ರಿಕೆ ಇಂದು ಒಂದು ಹೆಮ್ಮರವಾಗಿ ಬೆಳೆದು ಪರಂಪರೆಯನ್ನೇ ನಿರ್ಮಿಸಿದೆ. ಸಂಯುಕ್ತ ಕರ್ನಾಟಕದಿಂದಾಗಿ ಕಲಬುರಗಿಗೆ ಮಹತ್ವ ಬಂದಿದ್ದರೆ ಅದಕ್ಕೆ ಕಾಗಲಕರ್ ಕಾರಣ. ಅಂತೆಯೇ ಇಂದು ಈ ಐತಿಹಾಸಿಕ ನಗರ ಒಂದು ಪ್ರಮುಖ ಪತ್ರಿಕಾ ಪ್ರಕಾಶನ ಕೇಂದ್ರವಾಗಿ ಬೆಳೆದಿದೆ. ನೂರಾರು ಪತ್ರಕರ್ತರನ್ನು, ಪತ್ರಕರ್ತೇತರ ನೌಕರರನ್ನು ಕಟ್ಟಿ ಬೆಳೆಸಿದ ಪರಂಪರೆ ಕಲಬುರಗಿಗೆ ಇದೆ.

ಸರಳ ಸಜ್ಜನಿಕೆ

ಕಾಗಲಕರ್ ಅವರು Down to Earth ಸರಳ ಜೀವಿ. ಅದರಲ್ಲಿ ಅವರನ್ನು ಮೀರಿಸುವವರು ಯಾರೂ ಇಲ್ಲ! ಅವರ ದೊಡ್ಡತನವೆಲ್ಲ ಅವರ ಸರಳತೆಯಲ್ಲೇ

ಅಡಗಿತ್ತು. ಹರಿದು ತಿನ್ನುವ ಬಡತನದ ಮಧ್ಯೆಯೂ ಅವರು ಸ್ವಾಭಿಮಾನಿಯಾಗಿ ಬದುಕಿದರು. ಅವರು ಸ್ವನಿರ್ಮಿತ ವ್ಯಕ್ತಿ. ಬಾಹ್ಯ ಪ್ರಪಂಚದ ಪ್ರಭಾವ ಎಷ್ಟೇ ಜೋರಾಗಿದ್ದರು, ತಮ್ಮತನವನ್ನು ಬಿಟ್ಟವರಲ್ಲ. ಬಡತನವಿದ್ದರೂ ಅಪ್ಪಿ ತಪ್ಪಿಯೂ ಇನ್ನೊಬ್ಬರೆದುರಿಗೆ ಕೈ ಒಡ್ಡಿದವರಲ್ಲ. 'ಸಂಯುಕ್ತ ಕರ್ನಾಟಕ' ಮತ್ತು 'ಹಿಂದು' ಅಂತಹ ಪ್ರತಿಷ್ಠಿತ ಪತ್ರಿಕೆಗಳಲ್ಲಿ ದಶಕಗಳ ಕಾಲ ಸೇವೆ ಸಲ್ಲಿಸಿದರೂ ತಮ್ಮ ವೃತ್ತಿಯನ್ನು ಸ್ವಂತಕ್ಕಾಗಿ ಎಂದೂ ಬಳಸಿಕೊಳ್ಳದ ಅಸಾಧಾರಣ ಪ್ರಾಮಾಣಿಕ. ಯಾರೊಬ್ಬರೂ ಕೂಡ ಅವರತ್ತ ಬೊಟ್ಟು ಮಾಡಿ ತೋರಿಸದಂತಹ ನಿಷ್ಕಲ್ಮಶ ವ್ಯಕ್ತಿತ್ವ ಅವರದು. ಸರಳತೆ, ಸಜ್ಜನಿಕೆ, ಪ್ರಾಮಾಣಿಕತೆ, ಔದಾರ್ಯತೆ, ವೃತಿ ನಿಷ್ಠೆ, ವೃತ್ತಿ, ಘನತೆ ಗೌರವ ಅವರಲ್ಲಿ ಸಹಜ ಗುಣಗಳಂತೆ ಬೆಳೆದು ಬಂದಿದ್ದವು. ವೈಯಕ್ತಿಕ ವಿಷಯಗಳಲ್ಲಿ ಅವರದು ತೀರಾ ಸಂಕೋಚದ ಪ್ರವೃತ್ತಿ. ಕಷ್ಟಗಳನ್ನೆಲ್ಲ ನುಂಗಿ ಸಂತಸವನ್ನಷ್ಟೇ ಹಂಚಿಕೊಳ್ಳುವ ನೀಲಕಂಠ ಸ್ವಭಾವ ಅವರದು.

ಮನುಷ್ಯ ಬರಿಗೈಯಲ್ಲಿ ಬಂದು ಬರಿಗೈಯಲ್ಲಿ ಹೋಗುತ್ತಾನೆ ಎನ್ನುವ ಶಾಶ್ವತ ಆಧ್ಯಾತ್ಮಿಕ ಸತ್ಯವನ್ನು ಸಾಕಾರಗೊಳಿಸಿದವರು ಅವರು. ಅವರ ಪೂರ್ವಜರು ರಾಜರ ಸಂಸ್ಥಾನಗಳಲ್ಲಿ ಪ್ರತಿಷ್ಠಿತ ಹುದ್ದೆಗಳಲ್ಲಿದ್ದು ಆರ್ಥಿಕವಾಗಿ ಸಬಲರಾಗಿದ್ದಿರಬಹುದು. ಆದರೆ ಕಾಗಲಕರ್ ಅವರ ತಾತ್ನ, ತಂದೆಯ ತಲೆಮಾರಿಗೆಲ್ಲ ಕಾಗಲಕರ್ ಮನೆತನದ ಆರ್ಥಿಕ ಸಬಲತೆಯೆಲ್ಲ ಭೂತಕಾಲದ ವೈಭವವಾಗಿತ್ತು. ಅವರ ತಂದೆ ಒಂದು ಸಣ್ಣ ಸರಕಾರಿ ಹುದ್ದೆಯಲ್ಲಿದ್ದರೂ ಯಾವುದೋ ಕಾರಣಕ್ಕಾಗಿ ಅವರ ಉದ್ಯೋಗಕ್ಕೂ ಸಂಚಕಾರ ಬಂದೊದಗಿತ್ತು. ಕುಟುಂಬದಲ್ಲಿದ್ದ ಒಂದಿಷ್ಟು ಜಮೀನು ಕೂಡ ಭೂಸುಧಾರಣೆ ಕಾಯ್ದೆಯಿಂದಾಗಿ ಅವರ ಕೈತಪ್ಪಿ ಉಳುವವನ ಒಡೆತನಕ್ಕೆ ಜಾರಿ ಹೋಗಿತ್ತು.

ಭೂಮಿಯೂ ಇಲ್ಲ ಪರಿಹಾರವೂ ಇಲ್ಲ!

ಧಾರವಾಡ ಜಿಲ್ಲೆಯ ರೋಣ ತಾಲೂಕಿನ ಉಣಚಗೇರಿ ಎಂಬ ಗ್ರಾಮದ ಸರ್ವೆ ನಂತರ ೧೫ರಲ್ಲಿ ಕಾಗಲಕರ್ ಕುಟುಂಬಕ್ಕೆ ಎಂಟು ಎಕರೆ ಕೃಷಿ ಯೋಗ್ಯ ಜಮೀನು ಇತ್ತು. ಕಾಗಲಕರ್ ಕುಟುಂಬ ಧಾರವಾಡ ಜಿಲ್ಲೆಯನ್ನು ತೊರೆದು ಹೈದ್ರಾಬಾದಿಗೆ ವಲಸೆ ಹೋಗಿತ್ತಷ್ಟೆ. ಆ ಕುಟುಂಬ ಎಂದೂ ಮತ್ತೆ ತಮ್ಮ ಸ್ವಂತ ಊರಿಗೆ ಮರಳಲಿಲ್ಲ. ವಿ.ಎನ್. ಕಾಗಲಕರ್ ಕಲಬುರಗಿಗೆ ಆಗಮಿಸಿ ಅದನ್ನೇ ತಮ್ಮ ಕಾರ್ಯ ಕ್ಷೇತ್ರವನ್ನಾಗಿ ಮಾಡಿಕೊಂಡು ಜೀವನ ಸಾಗಿಸುತ್ತಿದ್ದರು. ವೆಂಕಟರಾಯರ ತಂದೆ ನಾರಾಯಣರಾಯರು ಮಗನೊಂದಿಗೇ ಇದ್ದು ೧೯೬೨ರಲ್ಲಿ ಗುಲ್ಬರ್ಗದಲ್ಲಿ ಕೊನೆಯುಸಿರೆಳೆದರು.

ನಂತರದ ದಿನಗಳಲ್ಲಿ ಕಾಗಲಕರ್ ಕುಟುಂಬ ಕಲಬುರಗಿಯಲ್ಲಿ ತೀವ್ರ ಆರ್ಥಿಕ ಸಂಕಷ್ಟಕ್ಕೆ ಗುರಿಯಾಗಿತ್ತು. ಅನೇಕ ಸಂದರ್ಭಗಳಲ್ಲಿ ಹೊಟ್ಟೆ ತುಂಬ ಉಂಡು ಕಣ್ಣು ತುಂಬ ನಿದ್ದೆ ಮಾಡುವ ಸ್ಥಿತಿಯಲ್ಲಿಯೂ ಇರಲಿಲ್ಲ. ಹೆಂಡತಿಯೊಂದಿಗೆ ಎಂಟು ಮಕ್ಕಳು. ಜೊತೆಗೆ ಮಾನಸಿಕ ವೈಕಲ್ಯದಿಂದ ಕೂಡಿದ್ದ ಬೆನ್ನಿಗೆ ಬಿದ್ದ ತಮ್ಮ. ಮಕ್ಕಳ ಲಾಲನೆ, ಪಾಲನೆ, ಶಿಕ್ಷಣ, ಹೆಣ್ಣು ಮಕ್ಕಳ ಮದುವೆ ಇತ್ಯಾದಿ ಖರ್ಚಿನ ಬಾಬತ್ತಿನ ಸರಮಾಲೆ ಕಾಗಲಕರ್ ಅವರನ್ನು ಸುತ್ತಿಕೊಂಡಿದ್ದವು.

ಅಪ್ಪಟ ಸ್ವಾಭಿಮಾನಿ, ಸ್ವಗೌರವದ ವ್ಯಕ್ತಿಯಾಗಿದ್ದ ಕಾಗಲಕರ್ ತಮ್ಮ ಆರ್ಥಿಕ ಸಂಕಷ್ಟವನ್ನು ಬೇರೆಯವರ ಮುಂದೆ ಹೇಳಿಕೊಂಡ ಒಂದು ಉದಾಹರಣೆಯೂ ದೊರೆಯುವುದಿಲ್ಲ. 'ಬಂದದ್ದೆಲ್ಲ ಬರಲಿ ಗೋವಿಂದನ ದಯ ಇರಲಿ', 'ಹುಟ್ಟಿಸಿದ ದೇವರು ಹುಲ್ಲು ಮೇಯಿಸುವನೆ?' ಎಂಬ ಆಧ್ಯಾತ್ಮಿಕ ಧೋರಣೆ ಅವರದಾಗಿತ್ತು.

ಆರ್ಥಿಕ ಸಂಕಷ್ಟ ತಾರಕಕ್ಕೇರಿದಾಗ ಕಾಗಲ್‌ಕರ್ ಅವರಿಗೆ ಉಣಚಗೇರಿಯಲ್ಲಿ ತಮ್ಮ ಪೂರ್ವಜರಿಂದ ಬಳುವಳಿಯಾಗಿ ಬಂದ ಜಮೀನು ನೆನಪಾಯಿತು. ಭೂಸುಧಾರಣೆ ಕಾಯ್ದೆ ಜಾರಿಯ ಸಂದರ್ಭದಲ್ಲಿ ಆ ಜಮೀನು ಉಳುವವನ ಪಾಲಾಗಿತ್ತು. ಹಲವಾರು ವರುಷಗಳ ಕಾಲ ಕಾಗಲಕರ್ ಕುಟುಂಬ ಜಮೀನಿನ ಉಳುಮೆ ಮಾಡದೆ ಇದ್ದುದರಿಂದ ಅದು ಅವರ ಕೈ ಬಿಟ್ಟು ಹೋಗಿತ್ತು. ಆಪತ್ಕಾಲದಲ್ಲಿ ಪಿತ್ರಾರ್ಜಿತ ಆಸ್ತಿಯೂ ಅವರ ಬಳಿ ಇರಲಿಲ್ಲ. ಸ್ವಯಾರ್ಜಿತ ಆಸ್ತಿ ನಿರ್ಮಿಸುವ ವಿಷಯದಲ್ಲಿ ಅವರಿಗೆ ಆಸಕ್ತಿಯೂ ಇರಲಿಲ್ಲ. ಅವರ ಎಂ.ಎಸ್.ಕೆ. ಮಿಲ್ಸ್ ಉದ್ಯೋಗ ಮತ್ತು ಪತ್ರಿಕಾ ವ್ಯವಸಾಯದಿಂದ ಅಷ್ಟಿಷ್ಟು ದೊರೆಯುತ್ತಿದ್ದ ಆದಾಯ ಕುಟುಂಬದ ಉದರಂಭರಣೆಗೆ ಸಾಕಾಗುತ್ತಿರಲಿಲ್ಲ.

ಪಿತ್ರಾರ್ಜಿತವಾಗಿ ಬಂದ ಎಂಟು ಎಕರೆ ಕೃಷಿ ಭೂಮಿಯೇನೋ ಉಳುವವನ ಪಾಲಾಗಿತ್ತು. ಆದರೆ ಹೊಲ ಕಳೆದುಕೊಂಡವರಿಗೆ ಸಿಗಬೇಕಾದ ಪರಿಹಾರದಿಂದಲೂ ಕಾಗಲಕರ್ ಕುಟುಂಬ ವಂಚಿತವಾಗಿತ್ತು.

ಕಾಗಲಕರ್ ಅವರಿಗೆ ಆಗ ೫೫ ವಯಸ್ಸು. ಐವರು ಹೆಣ್ಣು ಮಕ್ಕಳ ಮದುವೆ ಮಾಡುವ ಗುರುತರ ಜವಾಬ್ದಾರಿ ಅವರ ಮೇಲೆ. ಇಂದಿನ ಸಾಮಾಜಿಕ ರೀತಿ-ನೀತಿಗಳಿಗನುಗುಣವಾಗಿ ಎಷ್ಟೇ ಕೈ ಹಿಡಿದು ಖರ್ಚು ಮಾಡಿದರೂ ಮದುವೆ ಸಮಾರಂಭಗಳಿಗೆ ಸಾಕಷ್ಟು ಹಣ ಖರ್ಚು ಮಾಡಲೇಬೇಕಾಗುತ್ತದೆ. ಅಂತೆಯೇ ಅವರಿಗೆ ನೆನಪಾದದ್ದು ಪಿತ್ರಾರ್ಜಿತ ಆಸ್ತಿ. ೧೯೮೮ರಲ್ಲಿ ಅವರು ಧಾರವಾಡ ಜಿಲ್ಲೆಯ ರೋಣ ತಾಲೂಕಿನ ತಹಸಿಲ್ದಾರುಗೆ ಅರ್ಜಿಯೊಂದನ್ನು ಬರೆದು ತಮಗೆ

ಬರಬೇಕಾದ ಪರಿಹಾರ ಧನವನ್ನು ದೊರಕಿಸಿಕೊಡಬೇಕೆಂದು ವಿನಂತಿಸಿದ್ದರು. ಅವರು ತಮ್ಮ ಪತ್ರವನ್ನು ರಿಜಿಸ್ಟರ್ಡ್ ಅಂಚೆಯ ಮೂಲಕ ಕಳುಹಿಸಿದ್ದರು.

ಕರ್ನಾಟಕದ ಕುಖ್ಯಾತ ನಿರ್ಲಕ್ಷ್ಯ ಆಡಳಿತಕ್ಕನುಗುಣವಾಗಿ ಕಾಗಲಕರ್ ಅವರು ರಿಜಿಸ್ಟರ್ಡ್ ಅಂಚೆ ಮೂಲಕ ಕಳುಹಿಸಿದ ಅರ್ಜಿಗೆ ಮೂರು ವರುಷ ಕಳೆದರೂ ಯಾವುದೇ ಪ್ರತಿಕ್ರಿಯೆ ತಹಸಿಲ್ದಾರ ಸಾಹೇಬರಿಂದ ಬರಲೇ ಇಲ್ಲ.

ಕಾಗಲಕರ್ ಪುನಃ ೧೯೮೪ರಲ್ಲಿ ರೋಣ ತಹಸಿಲ್ದಾರರಿಗೆ ಮತ್ತೊಂದು ಪತ್ರವನ್ನು ಬರೆದರು. ಅದರಲ್ಲಿ ಹಿಂದೆ ರಿಜಿಸ್ಟರ್ಡ್ ಅಂಚೆ ಮೂಲಕ ಬರೆದಿದ್ದ ಪತ್ರವನ್ನು ಪ್ರಸ್ತಾಪಿಸಿದ್ದರು. ತಮ್ಮ ತಂದೆಯವರ ಹೆಸರಿನಲ್ಲಿದ್ದ ಎಂಟು ಎಕರೆ ಜಮೀನು ಭೂಸುಧಾರಣೆ ಕಾಯ್ದೆ ಜಾರಿಯಿಂದಾಗಿ ತಮ್ಮ ಕೈತಪ್ಪಿ ಹೋಗಿದ್ದು ಈಗ ಆ ಜಮೀನು ಸರಕಾರದ ವಶದಲ್ಲಿದೆ. ಆ ಜಮೀನಿಗೆ ತಾವು ಕಾಯ್ದೆ ಬದ್ಧ ವಾರಸುದಾರರಾಗಿದ್ದು ಆ ಜಮೀನಿಗೆ ಬರಬೇಕಾದ ಪರಿಹಾರ ಹಣವನ್ನು ಪಡೆಯಲು ತಾವು ಅರ್ಹರಾಗಿರುವುದರಿಂದ ದಯವಿಟ್ಟು ಪರಿಹಾರವನ್ನು ತಮಗೆ ಸಂದಾಯ ಮಾಡಬೇಕೆಂದು ಕೋರಿದರು.

ಭೂಸುಧಾರಣೆ ಕಾಯ್ದೆ ಜಾರಿ ಸಂದರ್ಭದಲ್ಲಿ ವಶಪಡಿಸಿಕೊಳ್ಳಲಾಗಿದ್ದ ಜಮೀನಿನ ಮಾಲೀಕರುಗಳಿಗೆ ಕೊಡದೆ ಬಿಟ್ಟು ಹೋಗಿದ್ದ ಪರಿಹಾರ ಮೊತ್ತದ ವಿಲೇವಾರಿಯ ಸಣ್ಣ ಪುಟ್ಟ ಪ್ರಕರಣಗಳನ್ನು ಇತ್ಯರ್ಥ ಪಡಿಸುವ ನಿರ್ಧಾರವನ್ನು ಆಗಿನ ಸರಕಾರ ಕೈಕೊಂಡಿದ್ದರಿಂದ ಕಾಗಲಕರ್ ಪರಿಹಾರ ಮೊತ್ತಕ್ಕೆ ತಮ್ಮ ಹಕ್ಕನ್ನು ಚಲಾಯಿಸಿದ್ದರು.

ತಮಗೆ ಬರಬೇಕಾದ ಪರಿಹಾರದ ಮೊತ್ತವನ್ನು ಅಗತ್ಯ ಬ್ಯಾಂಕ್ ಕಮೀಶನ್ ಮುರಿದುಕೊಂಡು ಗುಲ್ಬರ್ಗ ಜಿಲ್ಲಾಧಿಕಾರಿಗಳಿಗೆ ಚೆಕ್ ಕಳುಹಿಸಿಕೊಡುವಂತೆ ಕೋರಿದ್ದರು ಕಾಗಲಕರ್, ಚೆಕ್ಕನ್ನು ಜಿಲ್ಲಾಧಿಕಾರಿಗಳಿಗೆ ಕಳುಹಿಸಿದರೆ ತಾವು ತಮ್ಮ ಗುರುತನ್ನು ಅವರಲ್ಲಿ ಸಾಬೀತು ಪಡಿಸಿ ಪರಿಹಾರ ಧನ ಪಡೆದುಕೊಳ್ಳಲು ಅನುಕೂಲವಾದೀತೆಂದು ಅವರು ಲೆಕ್ಕ ಹಾಕಿದ್ದರು.

ಇಲ್ಲಿ ಗಮನಿಸಬೇಕಾದ ಒಂದು ವಿಶಿಷ್ಟ ಅಂಶವಿದೆ. ತಾವು ಕಳೆದುಕೊಂಡ ಜಮೀನಿಗೆ ಪರಿಹಾರವನ್ನು ಪಡೆಯಲು ತಾವೆಂದೂ ಖುದ್ದಾಗಿ ರೋಣಗೆ ಹೋಗಲಿಲ್ಲ. ಪರಿಹಾರ ಧನ ಪಡೆಯಲು ಪ್ರಭಾವಿ ವ್ಯಕ್ತಿಗಳಿಂದ ಯಾವುದೇ ರೀತಿಯ ವಶೀಲಿಯನ್ನಾಗಲೀ, ಮಧ್ಯಸ್ಥಿಕೆಯನ್ನಾಗಲೀ ಅವರು ಯಾಚಿಸಲಿಲ್ಲ. ಅಪ್ಪಟ ಕಾನೂನಿನ ಮಾರ್ಗವನ್ನೇ ಅವರು ಅನುಸರಿಸಿದ್ದರು. ಆದರೆ ಸಾಚಾ ಮಾರ್ಗಗಳಿಗೆ

ಕರ್ನಾಟಕದ ಆಡಳಿತದಲ್ಲಿ ಅವಕಾಶವೇ ಇಲ್ಲ ಎಂಬುದು ಕಾಗಲಕರ್ ಅವರಂತಹ ಮುಗ್ಧ, ಪ್ರಾಮಾಣಿಕ ವ್ಯಕ್ತಿಗಳಿಗೆ ಕೊನೆಯತನಕವೂ ಮನವರಿಕೆಯಾಗಲಾರದು.

ಇಲ್ಲಿ ಗಮನಿಸಬೇಕಾದ ಎರಡನೇ ವಿಶಿಷ್ಟ ಅಂಶವೊಂದಿದೆ. ಕಾಗಲಕರ್‌ರಿಗೆ ತಮ್ಮ ಕರ್ತವ್ಯಕ್ಕಿಂತಲೂ ಮಿಗಿಲಾಗಿದ್ದು ಯಾವುದೂ ಇರಲಿಲ್ಲ. ೧೯೮೪ರಲ್ಲಿ ತಾವು ತಹಸಿಲ್ದಾರರಿಗೆ ಬರೆದ ಪತ್ರಕ್ಕೆ ಪ್ರತಿಕ್ರಿಯೆಯಾಗಿ ಏನಾದರೂ ಕಾಗದ ಬಂದಿದ್ದರೆ ಅವರು ರೋಣಕ್ಕೆ ಹೋಗುತ್ತಿದ್ದರೋ ಇಲ್ಲವೋ ಗೊತ್ತಿಲ್ಲ. ಆದರೆ ೧೯೮೪ರ ಡಿಸೆಂಬರ್‌ನಲ್ಲಿ ತಹಸಿಲ್ದಾರರಿಗೆ ಬರೆದ ಪತ್ರದಲ್ಲಿ ಸಂಸದೀಯ ಚುನಾವಣೆಗಳು ಹತ್ತಿರದಲ್ಲೇ ಇರುವುದರಿಂದ ಪರಿಹಾರದ ಮೊತ್ತದ ಚೆಕ್ಕನ್ನು ಪಡೆಯಲು ರೋಣಕ್ಕೆ ಆಗಮಿಸುವುದು ಸಾಧ್ಯವಾಗುವುದಿಲ್ಲ ಎಂಬುದನ್ನು ಅವರು ವಿನಮ್ರವಾಗಿಯೇ ತಮ್ಮ ಅರ್ಜಿಯಲ್ಲಿ ತಿಳಿಸಿದ್ದರು!

ಇಂತಹ ವ್ಯಕ್ತಿಗೆ ಪರಿಹಾರ ದೊರೆಯಲು ಸಾಧ್ಯವೆಂದು ಯಾರಾದರೂ ಭಾವಿಸುವುದು ಕರ್ನಾಟಕದ ಆಡಳಿತದ ಸಂದರ್ಭದಲ್ಲಿ ಮೂರ್ಖತನವೇ ಆದೀತು. ಅದು ಅಕ್ಷರಶಃ ಸಾಬೀತಾಯಿತು ಕಾಗಲಕರ್ ಪ್ರಕರಣದಲ್ಲಿ, ಪರಿಹಾರ ಒಂದೆಡೆ ಇರಲಿ, ಅವರು ಗುಜರಾಯಿಸಿಕೊಂಡ ಅರ್ಜಿಗಳಿಗೆ ಸರಕಾರದಿಂದ ಪ್ರತಿಕ್ರಿಯೆಯೂ ಬರಲಿಲ್ಲ!

ಕೊನೆಗೊಂದು ಸೂರು!

ಎಂ.ಎಸ್.ಕೆ. ಮಿಲ್ಲಿನಲ್ಲಿ ಉದ್ಯೋಗದಲ್ಲಿರುವವರೆಗೂ ಅವರಿಗೆ ಸ್ವಂತ ಮನೆಯ ಚಿಂತೆ ಇರಲಿಲ್ಲ. ಆ ಕುರಿತು ಅವರು ಯೋಚನೆಯನ್ನು ಮಾಡಿರಲಿಲ್ಲ. ಸೇನೆಯಲ್ಲಿ ಇರುವ ತನಕ ಅವರು ಎಂ.ಎಸ್.ಕೆ. ಮಿಲ್ಲಿನ ಅಧಿಕೃತ ಕ್ವಾಟರ್ಸ್‌ನಲ್ಲೆ ಇದ್ದರು. ಇನ್ನೇನು ನೌಕರಿಯಿಂದ ನಿವೃತ್ತರಾಗಲು ಕೆಲವೇ ತಿಂಗಳುಗಳು ಬಾಕಿ ಇದ್ದವು. ಆಗಲೇ ಸ್ವಂತ ಸೂರಿನ ಚಿಂತೆ ಅವರನ್ನು ಧುತ್ತೆಂದು ಕಾಡಿತ್ತು. ದೊಡ್ಡ ಸಂಸಾರ ಬಾಡಿಗೆ ಮನೆಯಲ್ಲಿದ್ದು ದುಬಾರಿ ಬಾಡಿಗೆ ತೆರುವ ಸ್ಥಿತಿಯಲ್ಲಿ ಅವರಿರಲಿಲ್ಲ.

ಅದೃಷ್ಟವೋ ಎಂಬಂತೆ ಕಲಬುರಗಿ ಜಿಲ್ಲೆಯ ಪ್ರಮುಖ ರಾಜಕೀಯ ನೇತಾರರಾಗಿದ್ದ ಬಾಪುಗೌಡ ದರ್ಶನಾಪುರ ಅವರು ಆಗ ಕರ್ನಾಟಕದ ಗೃಹ ಮಂಡಳಿ ಅಧ್ಯಕ್ಷರಾಗಿದ್ದರು. ಕಾಗಲಕರ್ ಮತ್ತು ದರ್ಶನಾಪುರ ನಿಕಟ ಸ್ನೇಹಿತರೇ. ಬಾಪುಗೌಡರು ಕಾಗಲಕರ್ ಅವರನ್ನು ತುಂಬಾ ಆದರದಿಂದ ಗೌರವಿಸುತ್ತಿದ್ದರು.

ನಿವೃತ್ತಿಯ ನಂತರ ಕಾಗಲಕರ್ ಕುಟುಂಬ ಅಕ್ಷರಶಃ ಬೀದಿಗೆ ಬರಬೇಕಿತ್ತು. ಇಷ್ಟಾದರೂ ಬಾಪುಗೌಡರಲ್ಲಿ ತಮ್ಮ ಸಮಸ್ಯೆಯನ್ನು ಹೇಳಿಕೊಳ್ಳಲು ಅವರಿಗೆ ಇಷ್ಟವಿರಲಿಲ್ಲ. ತಮ್ಮ ಜೀವಮಾನದುದ್ದಕ್ಕೂ ಅನೇಕರಿಗೆ ನಿವೇಶನ, ಮನೆ, ಉದ್ಯೋಗ ಇತ್ಯಾದಿಗಳನ್ನು ಕೊಡಿಸುವಲ್ಲಿ ತಮ್ಮ ಪ್ರಭಾವ ಬೀರಿದ್ದ ಕಾಗಲಕರ್ ಅವರು ತಮಗಾಗಿ ಒಂದು ಮನೆಯನ್ನು ಮಾಡಿಕೊಳ್ಳಲಿಲ್ಲ. ನಿವೃತ್ತಿಯ ಸಂದರ್ಭದಲ್ಲಿ ಸಮಸ್ಯೆ ಎದುರಾದಾಗಲೇ ಅದರ ಬಗ್ಗೆ ಚಿಂತಿತರಾಗಿದ್ದರು.

ವಾರ್ತಾ ಇಲಾಖೆಯ ಅಧಿಕಾರಿಗಳಾಗಿದ್ದ ಅಪ್ಪಾರಾವ್ ಅಕ್ಕೋಣಿ ಅವರಲ್ಲಿ ತಮ್ಮ ಸಮಸ್ಯೆಯನ್ನು ಕಾಗಲಕರ್ ತೋಡಿಕೊಂಡರು. ತಮಗೊಂದು ಸೂಕ್ತ ಮನೆ ದೊರಕಿಸಿಕೊಡುವಂತೆ ಬಾಪುಗೌಡರಲ್ಲಿ ಒಂದು ಮಾತು ಹೇಳುವಂತೆ ಅವರಲ್ಲಿ ವಿನಂತಿಸಿಕೊಂಡರು. ವಾರ್ತಾಧಿಕಾರಿಗಳಿಗೆ ಆಶ್ಚರ್ಯವೋ ಆಶ್ಚರ್ಯ! ಕಾಗಲಕರ್ ಅವರ ನಿಸ್ವಾರ್ಥ ಮತ್ತು ಸಂಕೋಚ ಸ್ವಭಾವವನ್ನು ಚೆನ್ನಾಗಿ ಅರಿತವರಾಗಿದ್ದ ಅಕ್ಕೋಣಿ ಬಾಪುಗೌಡರನ್ನು ಕಂಡು ಕಾಗಲಕರ್ ಅವರ ಬವಣೆಯನ್ನು ಅರುಹಿದರು.

ದರ್ಶನಾಪುರ ಅವರು ಕೂಡಲೇ ಕಾಗಲಕರ್ ಅವರನ್ನು, ಗೃಹ ಮಂಡಳಿಯ ಅಧಿಕಾರಿಗಳನ್ನು ಕರೆಯಿಸಿದರು. ಕಾಗಲಕರ್ ಅವರ ಆರ್ಥಿಕ ಸಾಮರ್ಥ್ಯಕ್ಕ -ನುಗುಣವಾಗಿ ಖಾಲಿ ಇರುವ ಹೌಸಿಂಗ್ ಬೋರ್ಡ್ ಮನೆಯೊಂದನ್ನು ಗುರುತಿಸಿ ಅದನ್ನು ಕಾಗಲಕರ್ ಅವರಿಗೆ ಮಂಜೂರು ಮಾಡುವಂತೆ ಗೌಡರು ಆದೇಶವಿತ್ತರು. ತಕ್ಷಣಕ್ಕೆ ಕಾರ್ಯಪ್ರವೃತ್ತರಾದ ಅಧಿಕಾರಿಗಳು ಕಲಬುರಗಿಯ ಕೇಂದ್ರ ಬಸ್ ನಿಲ್ದಾಣದ ಎದುರುಗಡೆ ಇರುವ ಶಾಂತಿನಗರದಲ್ಲಿ ಕಟ್ಟಲಾಗಿದ್ದ ಕಡಿಮೆ ಆದಾಯ ಗುಂಪಿನ (ಎಲ್.ಐ.ಸಿ.) ಪುಟ್ಟ ಮನೆಯೊಂದನ್ನು ಗುರುತಿಸಿದರು. ಕಾಗಲಕರ್ ಅವರಿಗೆ ಅದು ಒಪ್ಪಿಗೆಯಾಯಿತು. ಸುಮಾರು ನಲವತ್ತೆರಡು ಸಾವಿರ ರೂಪಾಯಿ ಬೆಲೆ ಬಾಳುವ ಪುಟ್ಟ ಮನೆಯನ್ನು ಕಾಗಲಕರ್ ಅವರ ಹೆಸರಿಗೆ ವಿದ್ಯುಕ್ತವಾಗಿ ನೀಡಲಾಯಿತು. ನಿವೃತ್ತಿಯಾದ ಮರುದಿನ ಕಾಗಲಕರ್ ಕುಟುಂಬ ಸ್ವಂತ ಸೂರಿನಡಿಗೆ ಬಂದಿತ್ತು!

೨೦ ಅಡಿ ಮತ್ತು ೩೦ ಅಡಿ ಚಿಕ್ಕ ನಿವೇಶನದಲ್ಲಿ ಕಟ್ಟಲಾಗಿದ್ದ ಈ ಮನೆಯ ಒಟ್ಟು ವಿಸ್ತೀರ್ಣ ೪೦೦ ಚದರ ಅಡಿ ಮಾತ್ರ. ಒಂದು ಚಿಕ್ಕ ಪಡಸಾಲೆ, ಒಂದು ಚಿಕ್ಕ ಮಲಗುವ ಕೋಣೆ, ಅಡುಗೆ ಮನೆ, ಇತ್ಯಾದಿಗಳನ್ನೊಳಗೊಂಡ ಈ ಮನೆ ವಾಸ್ತವವಾಗಿ ಹೊಸದಾಗಿ ಮದುವೆಯಾದ ದಂಪತಿಗಳಿಗೆ ಅಥವಾ ಹೆಚ್ಚೆಂದರೆ ಗಂಡ-ಹೆಂಡತಿ ಒಂದು ಮಗು ಉಳ್ಳ ಚಿಕ್ಕ ಚೊಕ್ಕ ಸಂಸಾರಕ್ಕೆ ಸೂಕ್ತವಾಗಿತ್ತು. ಆದರೆ

ಕಾಗಲಕರ್ ಅವರು ನಿವೃತ್ತಿಯ ನಂತರ ತಮ್ಮ ವಿಶಾಲ ಸಂಸಾರದೊಂದಿಗೆ ಕೊನೆಯುಸಿರಿರುವವರೆಗೂ ಈ ಮನೆಯಲ್ಲೇ ಸಂತೃಪ್ತಿಯ ಜೀವನ ನಡೆಸಿದರು. ಶಾಂತಿನಗರ ಒಂದು ಪ್ರತಿಷ್ಠಿತ ಬಡಾವಣೆ. ಹಲವು ರಾಜಕಾರಣಿಗಳು, ಸಮಾಜದ ವಿವಿಧ ಕ್ಷೇತ್ರಗಳ ಗಣ್ಯರ ಭವ್ಯ ಮನೆಗಳು ಇರುವುದು ಇಲ್ಲಿಯೇ. ಆದರೆ ವಾಸ್ತವವಾಗಿ ಶಾಂತಿನಗರಕ್ಕೆ ಪ್ರತಿಷ್ಠೆ ಬಂದದ್ದು ಸರಳ-ಸಜ್ಜನಿಕೆಯ ಬುದ್ಧಿಜೀವಿಯ ಈ ಚಿಕ್ಕ ಗೂಡಿನಿಂದ.

ಕಾಗಲಕರ್ ಅವರು ಸ್ವಯಾರ್ಜಿತವಾಗಿ ಸಂಪಾದಿಸಿದ್ದ ಆಸ್ತಿ ಇದೊಂದೇ. ಅದನ್ನೇ ಅವರು ತಮ್ಮ ಮಕ್ಕಳಿಗೆ ಬಿಟ್ಟು ಹೋಗಿದ್ದಾರೆ. ಅವರ ಹಿರಿಯ ಪುತ್ರ ಜಯತೀರ್ಥ ಕಾಗಲಕರ್ 'ಸಂಯುಕ್ತ ಕರ್ನಾಟಕ' ಪತ್ರಿಕೆಯ ಕಲಬುರಗಿ ವರದಿಗಾರರಾಗಿದ್ದು ಆತ ತನ್ನ ತಾಯಿ, ತಮ್ಮ, ಹೆಂಡತಿಯೊಂದಿಗೆ ಇದೇ ಮನೆಯಲ್ಲಿಯೇ ವಾಸವಾಗಿದ್ದಾನೆ.

ಕಾಗಲಕರ್ ಅವರ ಕೆಲವು ಇಂಗ್ಲೀಷ್ ಲೇಖನಗಳ ಮೇಲೆ ಕಣ್ಣು ಹಾಯಿಸಿದಾಗ ಒಂದು ಕುತೂಹಲಕರ ಅಂಶ ಗಮನಕ್ಕೆ ಬರುತ್ತದೆ. ಲೇಖನದ ತುಂಬಾ ನಡುನಡುವೆ ಒಂದು ಚಿಕ್ಕ ಗೆರೆ ಎಳೆದು ಅಲ್ಲಿ ಒಂದು ಸಂಖ್ಯೆ ಬರೆದಿರುವುದು ಕಂಡು ಬರುತ್ತದೆ. ಅದನ್ನು ವಿವರವಾಗಿ ಗಮನಿಸಿದಾಗ ಗೊತ್ತಾದದ್ದೇನೆಂದರೆ ಕಾಗಲಕರ್ ಅವರು ಪ್ರಕಟವಾದ ತಮ್ಮ ಎಲ್ಲ ವರದಿ - ಲೇಖನ - ವಿಶೇಷ ಬರಹಗಳ ಪದಗಳನ್ನು ಎಣಿಸಿ ಲೆಕ್ಕ ಹಾಕುತ್ತಿದ್ದರು. ಯಾಕೆಂದರೆ ಅವರಿಗೆ ದೊರೆಯುತ್ತಿದ್ದ ಸಂಭಾವನೆ ಅವರು ಬರೆದ ಶಬ್ದಗಳ ಸಂಖ್ಯೆಯನ್ನು ಆಧರಿಸಿತ್ತು. ಒಂದು ಸಾವಿರ ಪ್ರಕಟಿತ ಶಬ್ದಗಳಿಗೆ ಅವರಿಗೆ ಸುಮಾರು ನಲವತ್ತು ರೂಪಾಯಿ ನೀಡಲಾಗುತ್ತಿತ್ತು!

ಪ್ರತಿ ಶುಕ್ರವಾರ 'ಹಿಂದು' ಪತ್ರಿಕೆ ಹೊರ ತರುವ ಸಾಂಸ್ಕೃತಿಕ ಪುರವಣಿಯಲ್ಲಿ ಈ ಭಾಗಕ್ಕೆ ಸಂಬಂಧಿಸಿದೆ. ಒಂದಲ್ಲ ಒಂದು ಲೇಖನ ಇರಲೇಬೇಕು! ಈ ಪುರವಣಿಯು ತಮಗೆ ನೀಡಿದ ಅವಕಾಶವನ್ನು ಕಾಗಲಕರ್ ಗರಿಷ್ಠ ಪ್ರಮಾಣದಲ್ಲಿ ಬಳಸಿಕೊಂಡರು. ತಮ್ಮ ಸಾಂಸ್ಕೃತಿಕ ಕಾಳಜಿ ಹಾಗೂ ಅಭಿವ್ಯಕ್ತಿಗೆ 'ಹಿಂದು' ಪತ್ರಿಕೆಯ Friday Feature ಅತ್ಯಂತ ಪರಿಣಾಮಕಾರಿ ವೇದಿಕೆಯಾಗಿದ್ದಿತು.

ಶುಕ್ರವಾರ ಸಂಚಿಕೆಯಲ್ಲಿ ಅವರ ಲೇಖನ ಪ್ರಕಟವಾದಾಗ ಕಾಗಲಕರ್ ವಿಶೇಷವಾಗಿ ಉಲ್ಲಸಿತರಾಗಿರುತ್ತಿದ್ದರು. ಆ ಖುಶಿಯಲ್ಲೇ ತಮ್ಮ ಸ್ನೇಹಿತರನ್ನಾಗಲೀ, ವಾರ್ತಾ ಇಲಾಖೆ ಸಿಬ್ಬಂದಿಯವರನ್ನಾಗಲಿ ಹೋಟೆಲ್‌ಗೆ ಕರೆದುಕೊಂಡು ಹೋಗಿ

ತಿಂಡಿ, ಚಹ ಕೊಡಿಸುತ್ತಿದ್ದರು. ಮರುಕ್ಷಣವೇ ಅವರು ಮುಂದಿನ ಶುಕ್ರವಾರ ಸಂಚಿಕೆಗಾಗಿ ವಿಷಯಗಳ ಹುಡುಕಾಟದಲ್ಲಿ ತೊಡಗುತ್ತಿದ್ದರು!

ಕಸದಿಂದ ರಸ ತೆಗೆಯುವಲ್ಲಿ ಕಾಗಲಕರ್ ಪ್ರವೀಣರು. ವಿವಿಧ ಇಲಾಖೆಗಳು ನೀಡುತ್ತಿದ್ದ ಪ್ರಗತಿ ವರದಿಗಳನ್ನು ಜಾಲಾಡುವುದಲ್ಲಿ ಅವರು ನಿಸ್ಸೀಮರು. ಆ ವರದಿಗಳನ್ನು ಅವರು ಜೋಪಾನದಿಂದ ಕಾದಿಡುತ್ತಿದ್ದರು. ಮತ್ತೆ ಕೆಲ ತಿಂಗಳ ನಂತರ ಇಲಾಖೆ ನೀಡುವ ಮತ್ತೊಂದು ವರದಿಯನ್ನು ಹಿಂದಿನ ವರದಿಯೊಂದಿಗೆ ತುಲನಾತ್ಮಕ ಅಧ್ಯಯನ ಮಾಡಿ ವರದಿ ಮಾಡುತ್ತಿದ್ದರು. ವಿವಿಧ ಇಲಾಖೆಗಳು ಅನೇಕ ಸಲ ತಮ್ಮ ಗುರಿಸಾಧನೆಯ ವರದಿಗಳನ್ನು ಸೃಷ್ಟಿ ಮಾಡುವುದ ಈ ತುಲನಾತ್ಮಕ ಅಧ್ಯಯನದಿಂದ ಕಂಡು ಬರುತ್ತಿತ್ತು. ಅಂಕಿ-ಸಂಖ್ಯೆಗಳನ್ನು ಮತ್ತು ಕೊಡಮಾಡಿದ ಧನದ ರಾಶಿಯನ್ನು, ವೆಚ್ಚ ಮಾಡಿದ ಹಣವನ್ನು ಅತ್ಯಂತ ವ್ಯವಸ್ಥಿತವಾಗಿ ಶೇಕಡಾ ೧೦ ರಿಂದ ೧೫ರಷ್ಟು ಹೆಚ್ಚಿನ ವರದಿ ತಯಾರಿಸುವುದನ್ನು ಅವರು ಕಂಡುಕೊಂಡಿದ್ದರು.

ನೀರಾವರಿ ನಿಪುಣ

ನೀರಾವರಿಯಲ್ಲಿ ವಿಶೇಷ ಆಸಕ್ತಿಹೊಂದಿದ್ದ ಕಾಗಲಕರ್ ಕೃಷ್ಣಾ ಕೊಳ್ಳದ ಯೋಜನೆಗಳಿಗೆ ಯಾವ ವರ್ಷದಲ್ಲಿ ಎಷ್ಟೆಷ್ಟು ಹಣ ಒದಗಿಸಲಾಗಿತ್ತು. ಎಷ್ಟೆಲ್ಲ ಖರ್ಚಾಗಿದೆ ಅಥವಾ ಎಷ್ಟೆಲ್ಲ ಖರ್ಚಾಗಿಲ್ಲ ಎಂಬುದನ್ನು ಕರಾರು ವಾಕ್ಕಾಗಿ ಹೇಳಬಲ್ಲವರಾಗಿದ್ದರು. ಯೋಜನೆಯಿಂದ ಉಂಟಾಗುವ ಒಟ್ಟು ನೀರಾವರಿ ಸೌಲಭ್ಯ ಮತ್ತು ಈವರೆಗೆ ಸೃಷ್ಟಿಸಿದ ಅಥವಾ ಸೃಷ್ಟಿಸಲಾಗದ ನೀರಾವರಿ ಸಾಮರ್ಥ್ಯ ಎಲ್ಲವನ್ನೂ ಸುಲಭವಾಗಿ ಹೇಳುತ್ತಿದ್ದರು. ಈ ವಿಷಯದಲ್ಲಿ ಅವರಿಗೆ ಯಾರೂ ದಾರಿ ತಪ್ಪಿಸುವ ಹಾಗಿರಲಿಲ್ಲ. ಯಾಕೆಂದರೆ ಅವರು ಅಧಿಕಾರಯುತವಾಗಿ ಮಾತನಾಡುತ್ತಿದ್ದುದು ಸರಕಾರದ ಅಧಿಕೃತ ದಾಖಲೆ, ಅಂಕಿ-ಅಂಶಗಳ ಆಧಾರದ ಮೇಲೆಯೇ.

ಒಂದು ದಿನ ನೀರಾವರಿ ಸಚಿವರೊಬ್ಬರು ಪತ್ರಿಕಾಗೋಷ್ಠಿಯಲ್ಲಿ ಒಂದು ನೀರಾವರಿ ಯೋಜನೆ ಕುರಿತಾಗಿ ಏನೆಲ್ಲ ವೈಭವೀಕೃತ ಚಿತ್ರವನ್ನು ನೀಡಿದರು. ಅದೆಲ್ಲವನ್ನು ಅಗದಿ ಸೌಜನ್ಯದಿಂದ ಕೇಳಿದ ಕಾಗಲಕರ್ ಕೊನೆಯಲ್ಲಿ ಸಚಿವರು ಹೇಳಿದ್ದೆಲ್ಲವೂ ವಸ್ತು ಸ್ಥಿತಿಗೆ ಹೊಂದಾಣಿಕೆಯಾಗುವುದಿಲ್ಲವೆಂದು ಖಡಾಖಂಡಿತವಾಗಿ ಹೇಳಿದರು. ಆದರೆ ನೀವು ಸುಳ್ಳು ಹೇಳುತ್ತಿದ್ದೀರಿ ಎಂದು ಸಚಿವರನ್ನು ದೂಷಿಸಲಿಲ್ಲ. ಅಧಿಕಾರಿಗಳು ಮಧ್ಯೆ ಬಾಯಿ ಹಾಕಿ ಏನನ್ನೋ ಹೇಳಲು ಮುಂದಾದರು.

"ಯಜಮಾನರು ಅನುಭವಿಗಳು. ಅವರಿಗೆ ಈ ಪ್ರದೇಶದ ಯೋಜನೆಗಳ ಬಗ್ಗೆ ಎಲ್ಲ ಗೊತ್ತು. ಅವರು ಏನು ಹೇಳುತ್ತಾರೆ ಎಂಬುದನ್ನು ಮೊದಲು ಕೇಳೋಣ" ಎಂದು ಸಚಿವರು ಅಧಿಕಾರಿಗಳನ್ನು ತಡೆದರು.

ಕಾಗಲಕರ್ ಹೇಳಿದ್ದೆಲ್ಲವನ್ನೂ ತಾಳ್ಮೆಯಿಂದ, ಗೌರವದಿಂದ ಆಲಿಸಿದ ಸಚಿವರು ಕಾಗಲಕರ್ ಅವರು ನೀಡಿದ ಖಚಿತ ವಿವರಣೆಗೂ ಅಧಿಕಾರಿಗಳು ನೀಡಿದ್ದ ಅಂಕಿ-ಅಂಶಗಳಿಗೂ ಯಾವುದೇ ಹೊಂದಾಣಿಕೆ ಆಗದಿರುವುದನ್ನು ಗಮನಿಸಿ ನಿರುತ್ತರರಾದರು. ಅಧಿಕಾರಿಗಳೂ ತೆಪ್ಪಗಾದರು. ಈ ವಿರೋಧಾಭಾಸದ ಅಂಕಿ ಸಂಖ್ಯೆಗಳನ್ನು ನೀಡಿರುವುದರ ಕುರಿತು ವಿಚಾರಣೆ ನಡೆಸುವಂತೆ ಅವರು ಆದೇಶ ನೀಡಿದರು.

೧೯೭೦ರ ದಶಕದಲ್ಲಿ ಆರಂಭವಾದ ಹಲವು ನೀರಾವರಿ ಯೋಜನೆಗಳು ಎರಡು ದಶಕಗಳ ನಂತರವೂ ಕುಂಟುತ್ತ ಸಾಗಿರುವುದನ್ನು ಅವರು ಪದೇ ಪದೇ ತಮ್ಮ ಲೇಖನಗಳಲ್ಲಿ ಪ್ರಸ್ತಾಪಿಸುತ್ತಿದ್ದರು. ವಿಳಂಬದಿಂದ ಉಂಟಾದ ಯೋಜನಾ ವೆಚ್ಚದ ವಿಪರೀತ ಹೆಚ್ಚಳವನ್ನು ಅವರು ಪ್ರಮುಖವಾಗಿ ಎತ್ತಿತೋರಿಸುತ್ತಿದ್ದರು. ಪಾರಂಪಾರಿಕವಾಗಿ ಬರಗಾಲಕ್ಕೆ ತುತ್ತಾಗುವ ಬೀದರ, ಕಲಬುರಗಿ, ರಾಯಚೂರು ಜಿಲ್ಲೆಗಳ ಸಣ್ಣ, ಮಧ್ಯಮ ಮತ್ತು ಬೃಹತ್ ನೀರಾವರಿ ಯೋಜನೆಗಳ ಬಗ್ಗೆ ಸರಕಾರಗಳು ತಾಳುವ ಅಸಡ್ಡೆಯ ಧೋರಣೆ ಕುರಿತಾಗಿ ಅವರು ಅತ್ಯಂತ ಸೌಮ್ಯದಿಂದಲೇ ಖಂಡಿಸುತ್ತಿದ್ದರು.

ನಿಜ, ಕಾಗಲಕರ್ ತಮಗೆ ಆಪ್ತರಾಗಿದ್ದ ರಾಜಕಾರಣಿಗಳನ್ನು ಆಗಾಗ ಪೀಡಿಸುತ್ತಿದ್ದರು. ದುಡ್ಡಿಗಾಗಿ, ನಿವೇಶನಕ್ಕಾಗಿ, ಮನೆಗಾಗಿ ಅಥವಾ ಮತ್ತಾವುದೇ ಲಾಭಕ್ಕಾಗಿ ಅಲ್ಲ. ಸರಕಾರದ ಮಟ್ಟದಲ್ಲಿ ಪ್ರಭಾವವಿದ್ದ ಶಾಸಕರಿಂದ ಅಧಿಕೃತ ದಾಖಲೆಗಳನ್ನು ಪಡೆದುಕೊಂಡು ತಮಗೆ ನೀಡುವಂತೆ ಅವರು ಪದೇ ಪದೇ ಅಗ್ರಹಪಡಿಸುತ್ತಿದ್ದರು. ರಾಜ್ಯ ವಿಧಾನ ಪರಿಷತ್ತಿನ ಮಾಜಿ ಉಪಸಭಾಪತಿಗಳಾದ ಬಿ.ಆರ್. ಪಾಟೀಲ ಮತ್ತು ಕಾಗಲಕರ್ ಅವರ ಮನೆಗಳು ಒಂದೇ ಕಡೆ ಇದ್ದವು. ಅವರಿಬ್ಬರಲ್ಲಿ ಸಹಜವಾಗಿ ಆಪ್ತತೆ ಬೆಳೆದಿತ್ತು. ಕಾಗಲಕರ್ ಅವರಿಗೆ ಕೌಟುಂಬಿಕವಾಗಿ ಎಷ್ಟೆಲ್ಲ ಕಷ್ಟ-ನಷ್ಟಗಳಿದ್ದರೂ ಅವರೆಂದೂ ಅವುಗಳ ಬಗ್ಗೆ ಪಾಟೀಲರ ಎದುರು ಪ್ರಸ್ತಾಪ ಮಾಡಿದ್ದೇ ಇಲ್ಲ. ಬದಲಾಗಿ ವಿಧಾನ ಮಂಡಲದ ಜಂಟಿ ಸದನವನ್ನು ಉದ್ದೇಶಿಸಿ ರಾಜ್ಯಪಾಲರು, ಮಾಡಿದ ಭಾಷಣದ ಪ್ರತಿಯನ್ನು, ಮುಂಗಡ ಪತ್ರದ ಪ್ರತಿಯನ್ನು, ಇಲಾಖೆಯ ವಾರ್ಷಿಕ ವರದಿಗಳನ್ನು ಮತ್ತು ಇನ್ನಿತರ ದಾಖಲೆಗಳನ್ನು

ಒದಗಿಸಿಕೊಡುವಂತೆ ಅವರು ಪಾಟೀಲರನ್ನು ಆಗಾಗ ಒತ್ತಾಯಿಸುತ್ತಲೇ ಇರುತ್ತಿದ್ದರು.

ವಿಧಾನ ಸಭೆಯಲ್ಲಿ ಮತ್ತು ವಿಧಾನ ಪರಿಷತ್ತಿನಲ್ಲಿ ಹೈದ್ರಾಬಾದ ಕರ್ನಾಟಕಕ್ಕೆ ಸಂಬಂಧಪಟ್ಟ ಅದರಲ್ಲೂ ವಿಶೇಷವಾಗಿ ಕಲಬುರಗಿ ಜಿಲ್ಲೆಗೆ ಸಂಬಂಧಿಸಿದ ವಿಷಯಗಳನ್ನು ಪ್ರಸ್ತಾಪಿಸಲು ಮತ್ತು ಪ್ರಶ್ನೆಗಳನ್ನು ಕೇಳಲು ಅನೇಕ ಮುಖಂಡರು ಅವರೊಂದಿಗೆ ಚರ್ಚಿಸುತ್ತಿದ್ದರು. ಅಭಿವೃದ್ಧಿ ವಿಷಯದಲ್ಲಿ ಕೆಲವು ಧುರೀಣರು ಕಾಗಲಕರ್ ಅವರನ್ನು ಖುದ್ದಾಗಿ ಕರೆಯಿಸಿಕೊಂಡು ಚರ್ಚೆ ನಡೆಸುತ್ತಿದ್ದರು. ಅವರ ಸಮಕಾಲೀನ ಮುಖಂಡರೊಂದಿಗೆ ಅದರಲ್ಲೂ ಮುಖ್ಯವಾಗಿ ಮಹದೇವಪ್ಪ ರಾಂಪುರೆ, ಚಂದ್ರಶೇಖರ ಪಾಟೀಲ, ನೀಲಕಂಠರಾವ್ ಪಾಟೀಲ, ವೀರೇಂದ್ರ ಪಾಟೀಲ, ದತ್ತಾತ್ರೇಯ ಅವರಾದಿ, ಬಾಪುಗೌಡ ದರ್ಶನಾಪುರ ಮುಂತಾದವರೊಂದಿಗೆ ಅವರು ಆಪ್ತ, ಸಲುಗೆ ಸಂಬಂಧ ಹೊಂದಿದ್ದರು.

ಕಾಗಲಕರ್ ಅವರ ಪತ್ರಿಕಾ ಬರವಣಿಗೆಯ ಒಂದು ಗಮನಾರ್ಹ ಅಂಶವೆಂದರೆ ಅವರು ಇತರ ಸಾಮಾನ್ಯ ಪತ್ರಕರ್ತರಂತೆ ನಕಾರಾತ್ಮಕ (Negative) ಧೋರಣೆ ಹೊಂದಿದವರಾಗಿರಲಿಲ್ಲ. ಬದುಕನ್ನು ಗಾಢವಾಗಿ ಪ್ರೀತಿಸುತ್ತಿದ್ದ ಅವರು ಸಮಕಾಲೀನ ಸಮಾಜದಲ್ಲಿ ಅಗಾಧವಾದ ಪ್ರೀತಿ, ವಿಶ್ವಾಸ ಹೊಂದಿದ್ದರು. ಅಂತೆಯೇ ಅವರು ಯಾವಾಗಲೂ ಸಕಾರಾತ್ಮಕರಾಗಿಯೇ (Positive) ಚಿಂತಿಸುತ್ತಿದ್ದರು. 'ಯಾವುದರಿಂದ ಏನಾಗಬೇಕಿದೆ, ಯಾರಿಂದ ಏನು ಮಾಡಲು ಸಾಧ್ಯ?' ಎಂಬ ರೀತಿಯ ಸಿನಿಕತನ ಅವರನ್ನೆಂದೂ ಬಾಧಿಸಲಿಲ್ಲ. ಅವರ ಬರವಣಿಗೆಯ ಧಾಟಿಯೂ ಹಾಗೆಯೇ ಇರುತ್ತಿತ್ತು. ಲೋಪದೋಷಗಳನ್ನು ಎತ್ತಿತೋರಿಸುವಲ್ಲಿ ಅವರು ಆಕ್ರಮಣಕಾರಿ ನಿಲುವನ್ನು ತಾಳುತ್ತಿರಲಿಲ್ಲ. ಅವರ ಬರವಣಿಗೆಯಲ್ಲಿ ಅನಗತ್ಯ ಉದ್ವೇಗ ಕಂಡು ಬರುವುದಿಲ್ಲ. ಭಾವನೆಗಳಿಗೆ ಒಳಗಾಗಿ ಅವುಗಳಿಂದ ಪ್ರಭಾವಿತರಾಗುತ್ತಿರಲಿಲ್ಲ. ಕೆಲವು ವಿಷಯಗಳಲ್ಲಿ ಅವರು ವೈಯಕ್ತಿಕವಾಗಿ ತೀವ್ರ ಭಾವುಕರಾಗಿದ್ದಂತೆ ಕಂಡು ಬಂದರೂ ತಮ್ಮ ಬರವಣಿಗೆಯಲ್ಲಿ ಅದನ್ನೆಂದೂ ತೋರ್ಪಡಿಸಿಕೊಳ್ಳುತ್ತಿರಲಿಲ್ಲ. ಸುದ್ದಿ ಸಂಗ್ರಹ ಮತ್ತು ಬರವಣಿಗೆಯನ್ನು ಅವರು ಬಹು ಪವಿತ್ರ ಕಾರ್ಯವೆಂದು ಭಾವಿಸಿದ್ದರು. ತಮ್ಮ ಪತ್ರಿಕಾ ವೃತ್ತಿಯನ್ನು ಧರ್ಮದಂತೆ ಪಾಲಿಸುತ್ತಿದ್ದರು.

ಪ್ರಪಂಚವನ್ನು ತಿದ್ದುವಲ್ಲಿ ನಾರದ ಮಹರ್ಷಿ ವಹಿಸಿದ ಪಾತ್ರವನ್ನೇ ಪತ್ರಕರ್ತರು ವಹಿಸಬೇಕೆಂದು ಅವರು ಹೇಳುತ್ತಿದ್ದರು. ಸುದ್ದಿಯ ಸ್ವರೂಪ

ಎಂತಹುದೇ ಇರಲಿ ಅದನ್ನು ಬರೆಯುವಾಗ ಪತ್ರಕರ್ತರು ಲೋಕದ ಹಿತವನ್ನು ಗಮನದಲ್ಲಿಟ್ಟುಕೊಳ್ಳಬೇಕೆಂಬುದು ಅವರ ದೃಢ ನಿಲುವು. ತಮ್ಮ ವರದಿಗಳಲ್ಲಿ - ಲೇಖನಗಳಲ್ಲಿ ಕಾಗಲಕರ್ ಸತ್ಯವನ್ನೇ ಹೇಳಿದರೂ ಅದು ಸಂಬಂಧಿಸಿದವರಿಗೆ ಪ್ರಿಯವಾಗುವಂತೆ ಹೇಳುತ್ತಿದ್ದರು. ಸಂಬಂಧಪಟ್ಟ ವ್ಯಕ್ತಿ ಅವರ ವರದಿಗಳಿಂದ, ಟೀಕೆ, ಟಿಪ್ಪಣಿಯಿಂದ ವ್ಯಗ್ರನಾಗದೆ ತನ್ನನ್ನು ತಿದ್ದಿಕೊಳ್ಳುವ ಪ್ರಯತ್ನ ಮಾಡುತ್ತಿದ್ದನು. ಪತ್ರಿಕಾ ಮತ್ತು ಸಾರ್ವಜನಿಕ ವಲಯದಲ್ಲಿ ಅವರು ಅಜಾತ ಶತೃವೆಂದೇ ಖ್ಯಾತರಾಗಿದ್ದರು.

ಕಾಗಲಕರ್ ಅವರ ಆರೋಗ್ಯದ ಗುಟ್ಟು ಅವರ ನಿರಂತರ ನಡಿಗೆ. ಒಂದು ಧೋಳೆ ಪ್ಯಾಂಟು, ಒಂದು ಅರ್ಧತೋಳಿನ ಶರ್ಟು, ಕೈಯಲ್ಲೊಂದು ಡೈರಿ, ಕಿಸೆಯಲ್ಲೊಂದು ಪೆನ್ನು, ಸುಲೋಚನಾಧಾರಿಯಾಗಿ, ಮುಖದಲ್ಲಿ ಮುಗುಳ ನಗೆ ತುಂಬಿಕೊಂಡು ಪುಟಿಯುವ ಕುದುರೆ ನಡಿಗೆಯ ಕಾಗಲಕರ್ ಅವರನ್ನು ಕಾಣುವುದೇ ಒಂದು ಆಪ್ಯಾಯಮಾನವಾದ ಅನುಭವ. ಕಾಲು ನಡಿಗೆಯಲ್ಲೇ ಅವರು ಇಡೀ ದಿನ ಸುತ್ತುತ್ತಿದ್ದರು. ಸೈಕಲ್ ರಿಕ್ಷಾ, ಟಾಂಗಾ ಮತ್ತು ಸರಕಾರಿ ಬಸ್ಸುಗಳನ್ನು ಅವರು ಅಗತ್ಯ ಕಂಡು ಬಂದರೆ ಮಾತ್ರ ಬಳಸುತ್ತಿದ್ದರು. ಕಾಗಲಕರ್ ಅವರನ್ನು ತೃಪ್ತಿ ಪಡಿಸುವುದು ಬಹಳ ಸುಲಭ. ಅವರನ್ನು ಬಸ್ ನಿಲ್ದಾಣದಿಂದ ಭಗತ್ ವೃತ್ತದ ವರೆಗೋ, ಅಥವಾ ಸರದಾರ ವಲ್ಲಭಭಾಯಿ ಪಟೇಲ ವೃತ್ತದಿಂದ ಬಸ್ ನಿಲ್ದಾಣದವರೆಗೋ ಯಾರಾದರೂ ತಮ್ಮನ್ನು ಕರೆದೊಯ್ದರೆ ಅವರನ್ನು ಕೃತಜ್ಞತೆಯಿಂದ ನೆನೆಯುತ್ತಿದ್ದರು.

ಜಗತ್ ವೃತ್ತದಲ್ಲಿ ಇಳಿದ ಮೇಲೆ ಅವರು ಯಾಂತ್ರಿಕವಾಗಿ ಹೊರಡುವುದು ವಾರ್ತಾ ಇಲಾಖೆಯ ಕಾರ್ಯಾಲಯಕ್ಕೆ ಅಲ್ಲಿಂದ ಬೇರೆ ಬೇರೆ ಇಲಾಖೆಯ ಕಚೇರಿಗಳಿಗೆ ಕೊನೆಯಲ್ಲಿ ಟೆಲಿಗ್ರಾಫ್ ಆಫೀಸು.

ಈ ಹಿಂದೆ ರಾಜ್ಯ ಸರಕಾರದ ಆರೋಗ್ಯ ಇಲಾಖೆಯಲ್ಲಿ Barefoot Doctor (ಬರಿಗಾಲಿನ ವೈದ್ಯ) ಎಂಬುವವರು ಇರುತ್ತಿದ್ದರು. ಅವರು ಮನೆ ಮನೆಗೆ ಹೋಗಿ ಕುಟುಂಬದ ಆರೋಗ್ಯವನ್ನು ವಿಚಾರಿಸುತ್ತಿದ್ದರು. ಮನೆಯಲ್ಲಿ ಯಾರಿಗಾದರೂ ಅನಾರೋಗ್ಯ ಎಂದು ಕಂಡು ಬಂದರೆ ಅವರಿಗೆ ಅಲ್ಲಿಯೇ ಮಾತ್ರೆಗಳನ್ನು ನೀಡುತ್ತಿದ್ದರು. ಅವರಂತೆ ಕಾಗಲಕರ್ Barefoot Journalist ಆಗಿದ್ದರು! ಸಮಾಜದ ಒಟ್ಟಾರೆ ಸಾಮಾಜಿಕ ಆರ್ಥಿಕ, ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಆರೋಗ್ಯವನ್ನು ವಿಚಾರಿಸಿ ಅದಕ್ಕೆ ಚಿಕಿತ್ಸೆ ನೀಡುವ ಬರಿಗಾಲಿನ ಪತ್ರಕರ್ತ ಕಾಗಲಕರ್!

ಕಾಗಲಕರ್ ಬರೀ ಸಾಧಾರಣ ಪತ್ರಕರ್ತರಾಗಿರಲಿಲ್ಲ, ವೃತ್ತಿಗಾಗಿ ವೃತ್ತಿ ಎನ್ನುವ ಜಾಯಮಾನ ಅವರದಾಗಿರಲಿಲ್ಲ. ಪತ್ರಿಕೋದ್ಯಮ ಅವರಿಗೆ

ಹವ್ಯಾಸವಾಗಲೀ, ಫ್ಯಾಷನ್ ಆಗಲಿ, ಉಪಜೀವನದ ಒಂದು ಕ್ರಮವಾಗಲೀ ಆಗಿರಲಿಲ್ಲ. ಅದು ಅವರ ಜೀವನದ ಧ್ಯೇಯುವೇ ಆಗಿತ್ತು. ತಾಂತ್ರಿಕವಾಗಿ ಪತ್ರಿಕೋದ್ಯಮ ಅರೆಕಾಲಿಕ ಕರ್ತವ್ಯವಾಗಿದ್ದರೂ ಅವರು ಪತ್ರಿಕೋದ್ಯಮದೊಂದಿಗೆ ಹೊಂದಿದ್ದ ಗೀಳು, ತಾದಾತ್ಮ್ಯವನ್ನು ಗಮನಿಸಿದರೆ ಬೇರಾವುದೇ ಪೂರ್ಣಾವಧಿ ಪತ್ರಕರ್ತನಿಗಿಂತ ಕಡಿಮೆ ಎಂದೆನಿಸಿಕೊಳ್ಳಲಿಲ್ಲ. ಅವರು ಅರೆಕಾಲಿಕ ಪತ್ರಕರ್ತ ಎನ್ನುವ ಭಾವನೆ ಯಾರಲ್ಲೂ ಇರಲಿಲ್ಲ. ಅಷ್ಟೊಂದು ಸಂಪೂರ್ಣತೆಯಿಂದ ಪತ್ರಿಕೋದ್ಯಮವನ್ನು ನಿರ್ವಹಿಸಿದವರು ಅವರು.

ತಮ್ಮ ಜೀವನದ ಕೊನೆಯ ಎರಡು ದಶಕಗಳಲ್ಲಿ ಅವರು 'ಹಿಂದು' ಪತ್ರಿಕೆ ವರದಿಗಾರರಾಗಿದ್ದರಷ್ಟೆ. 'ಸಂಯುಕ್ತ ಕರ್ನಾಟಕ' ದಲ್ಲಿಷ್ಟೆ ಶ್ರದ್ಧೆ, ನಿಷ್ಠೆ, ಬದ್ಧತೆ ಮತ್ತು ಪ್ರಾಮಾಣಿಕತೆಯಿಂದ ಅವರು ಇಂಗ್ಲೀಷ್ ಪತ್ರಿಕೆಗೂ ತಮ್ಮ ಜೀವನದ ಕೊನೆಯ ಕ್ಷಣದವರೆಗೂ ಬರೆದರು.

ಬಹುಭಾಷಾ ವಿಶಾರದ

ಕಾಗಲಕರ್ ಬಹು ಭಾಷಾ ವಿಶಾರದ. ಒಬ್ಬ ಪತ್ರಕರ್ತನಿಗೆ ಕಡೆಯ ಪಕ್ಷ ತ್ರಿಭಾಷಾ ಜ್ಞಾನವಾದರೂ ಇರಬೇಕು. ಮಾತೃಭಾಷೆ / ಪ್ರಾದೇಶಿಕ ಭಾಷೆ, ರಾಷ್ಟ್ರ ಭಾಷೆ ಮತ್ತು ಅಂತರರಾಷ್ಟ್ರೀಯ ಭಾಷೆ. ಕರ್ನಾಟಕದ ಸಂದಭದಲ್ಲಿ ಕನ್ನಡ, ಹಿಂದಿ ಮತ್ತು ಇಂಗ್ಲಿಷ್ ಜ್ಞಾನ ಪತ್ರಕರ್ತನಿಗೆ ಇರಲೇಬೇಕು. ಇವುಗಳಿಗೆ ಹೊರತಾಗಿ ಇನ್ನೊಂದು ಭಾಷೆಯ ಪರಿಚಯವಿದ್ದರೆ ಇನ್ನೂ ಒಳಿತು. ಎಷ್ಟೊಂದು ಹೆಚ್ಚಿನ ಭಾಷೆಗಳ ಪರಿಚಯ ಪತ್ರಕರ್ತನಿಗೆ ಇರುತ್ತದೆಯೋ ಅಷ್ಟೊಂದು ಸಮೃದ್ಧಿಯಿಂದ ಅವನ ಬರವಣಿಗೆ ತುಂಬಿರುತ್ತದೆ. ಕಾಗಲಕರ್ ಅವರಿಗೆ ಕನ್ನಡ, ಹಿಂದಿ, ಇಂಗ್ಲಿಷ್ ಜೊತೆಗೆ ಉರ್ದು, ತೆಲುಗು, ಮರಾಠಿ ಭಾಷೆಗಳೂ ಬರುತ್ತಿದ್ದವು. ಉರ್ದುವನ್ನು ಅವರು ಶಾಲೆಯಲ್ಲಿ ಕಲಿತಿದ್ದಷ್ಟೇ ಅಲ್ಲ, ಅದು ನಿಜಾಂ ಸರಕಾರದ ಆಡಳಿತ ಭಾಷೆ ಮತ್ತು ಶಿಕ್ಷಣದ ಮಾಧ್ಯಮವೂ ಆಗಿತ್ತಾದ್ದರಿಂದ ಅದರ ಜೊತೆಗೆ ಒಡನಾಟ ಸಹಜವಾಗಿದ್ದಿತು.

ಅವರು ತಮ್ಮ ವಿದ್ಯಾರ್ಥಿ ಜೀವನದ ಬಹುಭಾಗವನ್ನು ಹೈದ್ರಾಬಾದಿನಲ್ಲಿ, ಕಳೆದಿದ್ದರಿಂದ ಮತ್ತು ಕೆಲಕಾಲ ಆಂಧ್ರಪ್ರದೇಶ ಜೆಡಚೆರ್ಲಾದಲ್ಲಿ ಕೆಲಸ ಮಾಡಿದ್ದರಿಂದ ತೆಲುಗು ಭಾಷೆ ಚೆನ್ನಾಗಿ ಕಲಿಯಲು ಸಾಧ್ಯವಾಯಿತು. ೧೯೫೦ರ ಸುಮಾರಿನಲ್ಲಿ ಅವರು ಕುಲಬುರಗಿಗೆ ಬಂದಾಗ ಇಲ್ಲಿಯ ಭಾಷಾ ಸಾಮ್ರಾಜ್ಯ ಮರಾಠಿಮಯ. ಆಗಿನ ಸಂದರ್ಭದಲ್ಲಿ ಉರ್ದು ಬಲಾಢ್ಯ ಭಾಷೆಯಾಗಿದ್ದರೂ

ಮರಾಠಿ ಅದರ ಉಪಭಾಷೆ ಎಂಬಂತೆ ಕಲಬುರಗಿಯಲ್ಲಿ ಪ್ರಚಲಿತದಲ್ಲಿತ್ತು. ಮರಾಠಿ ಮಾಧ್ಯಮದ ಶಿಕ್ಷಣ ಕಲಬುರಗಿಯಲ್ಲಿ ಧಾರಾಳವಾಗಿ ದೊರೆಯುತ್ತಿತ್ತು. ಆದ್ದರಿಂದ ಅವರು ತಮ್ಮ ತಾರುಣ್ಯದ ದಿನಗಳಲ್ಲೇ ಮರಾಠಿ ಭಾಷೆಗೆ ತಮ್ಮನ್ನು ಒಡ್ಡಿಕೊಂಡರು. ಆರು ಭಾಷೆಗಳನ್ನು ಬಲ್ಲವರಾಗಿದ್ದ ಕಾಗಲಕರ್ ಸಮಯ, ಸಂದರ್ಭ, ತಾವು ಸಂಧಿಸುವ ವ್ಯಕ್ತಿ ಮುಂತಾದವುಗಳ ಅವಶ್ಯಕತೆಗಳಿಗನುಗುಣವಾಗಿ ಭಾಷಾ ಪ್ರಯೋಗ ಮಾಡಿ ತಮ್ಮ ಪತ್ರಿಕಾ ವರದಿಗಾರಿಕೆಯನ್ನು, ಬರವಣಿಗೆಯನ್ನು ಶ್ರೀಮಂತಗೊಳಿಸಿಕೊಂಡಿದ್ದರು.

ಪತ್ರಕರ್ತ ಕಾಗಲಕರ್ ಅವರಲ್ಲಿ ಗುರುತಿಸಬೇಕಾದ ವಿಶಿಷ್ಟ ಗುಣವೊಂದಿದೆ. ಅವರು ರಾಜಕಾರಣವನ್ನು ನೆಚ್ಚಿ ಪತ್ರಿಕಾ ವ್ಯವಸಾಯ ಮಾಡಿದವರಲ್ಲ. ರಾಜಕೀಯವನ್ನೇ ಬಂಡವಾಳವನ್ನಾಗಿಸಿಕೊಂಡ ರಾಷ್ಟ್ರೀಯ ಮುಖ್ಯವಾಹಿನಿ ಜರ್ನಲಿಸಂಗಿಂತ ಅವರ ಪತ್ರಿಕಾ ಕೃಷಿ ಭಿನ್ನವಾಗಿತ್ತು. ದೇಶಕ್ಕೆ ಸ್ವಾತಂತ್ರ್ಯ ಪ್ರಾಪ್ತಿಯಾಗುವವರೆಗೆ ಎಲ್ಲ ಪತ್ರಿಕೆಗಳ ಬಹುತೇಕ ನೀತಿ ರಾಷ್ಟ್ರೀಯತೆಯನ್ನು ಬಿಂಬಿಸುವುದೇ ಆಗಿತ್ತು. ಸ್ವಾತಂತ್ರ್ಯ ಆಂದೋಲನದ ಯಶಸ್ಸಿಗೆ ಪೂರಕವಾದ ನಿಲುವನ್ನು ಸಾಮಾನ್ಯವಾಗಿ ಎಲ್ಲ ಪತ್ರಿಕೆಗಳು ತಾಳಿದ್ದವು. ಆಗಿನ ಸಂದರ್ಭದಲ್ಲಿ ಅದು ಸಹಜವೂ ಆಗಿತ್ತು. ಚಾರಿತ್ರಿಕ ಹಾಗೂ ಸಾಂದರ್ಭಿಕ ಬೇಡಿಕೆಗೆ ಅನುಗುಣವಾಗಿ ಆಗ ಪತ್ರಿಕೆಗಳು ನಡೆದುಕೊಂಡಿದ್ದವು. ಭಾರತೀಯ ಪತ್ರಿಕೆಗಳು ಸ್ವದೇಶಿ ಸ್ವಾತಂತ್ರ್ಯ ಚಳವಳಿಯ ಪ್ರಬಲ ಅಸ್ತ್ರಗಳಾಗಿದ್ದವು.

ಆದರೆ ಸ್ವಾತಂತ್ರ್ಯ ಬಂದ ಮೇಲೆ ಪತ್ರಿಕೆಗಳು ಕವಲುದಾರಿಗೆ ಬಂದವು. ದಾಸ್ಯದ ಶೃಂಖಲೆಯಿಂದ ದೇಶ ಬಿಡುಗಡೆ ಹೊಂದಿ ಸ್ವಾತಂತ್ರ್ಯದ ಗಾಳಿ ಎಲ್ಲೆಡೆ ಬೀಸತೊಡಗಿತ್ತು. ನಮ್ಮ ದೇಶದ ಭವಿಷ್ಯವನ್ನು ನಾವೇ ರೂಪಿಸಿಕೊಳ್ಳುವ ಗುರುತರ ಜವಾಬ್ದಾರಿ ನಮ್ಮ ಮೇಲೆ ಇತ್ತು. ಆದರೆ ದೇಶ ಸ್ವಾತಂತ್ರ್ಯವಾದ ಮೇಲೆ ಪತ್ರಿಕೆಗಳು ದಿಕ್ಕೆಟ್ಟವಂತೆ ವರ್ತಿಸಿದವು. ರಾಜಕಾರಣವೇ ಅವುಗಳ ಕಾರ್ಯಸೂಚಿಯ ಆದ್ಯತಾ ವಿಷಯವಾಯಿತು. ರಾಜಕಾರಣಿಗಳು ಅದರಲ್ಲೂ ಅಧಿಕಾರ ಸೂತ್ರ ಹಿಡಿದ ಪುಡಾರಿಗಳು ಉಲಿದಿದ್ದೆಲ್ಲವೂ ಪತ್ರಿಕೆಗಳಿಗೆ ವೇದವಾಕ್ಯವಾಯಿತು. ರಾಜಕಾರಣಿಗಳ ಹೇಳಿಕೆಗಳನ್ನು ಅತ್ಯಂತ ಶ್ರದ್ಧೆ, ವಿಧೇಯತೆಯಿಂದ ಪ್ರಕಟಿಸತೊಡಗಿದವು. ಪತ್ರಿಕೆ ಬಿಚ್ಚಿದರೆ ಸಾಕು ರಾಜಕೀಯ ತಾಂಡವ ನೃತ್ಯವನ್ನು ಎಲ್ಲೆಲ್ಲೂ ಕಾಣಬಹುದಿತ್ತು. ಅನರ್ಹ, ಅನಕ್ಷರ, ಅನಪೇಕ್ಷಿತ ವ್ಯಕ್ತಿಗಳು ಅಧಿಕಾರದ ನಿರ್ಣಾಯಕ ಸ್ಥಾನಗಳಲ್ಲಿ ಪ್ರತಿಷ್ಠಾಪನೆಗೊಂಡರು. ರಾಜಕಾರಣಿಗಳೇ ಎಲ್ಲವನ್ನು ಬಲ್ಲವರು, ಸರ್ವಜ್ಞರು ಎನ್ನುವ ಭ್ರಮೆಯನ್ನು ಪತ್ರಿಕೆಗಳು ಸೃಷ್ಟಿಸಿದವು. ಈ ರಾಜಕೀಯ ಮತ್ತು ರಾಜಕಾರಣಿ ನಿಷ್ಠ

ಸಂಪ್ರದಾಯ ಭಾರತೀಯ ಪತ್ರಿಕೋದ್ಯಮದಲ್ಲಿ ತೀರಾ ಇತ್ತೀಚಿನವರೆಗೂ ಮುಂದುವರೆದುಕೊಂಡು ಬಂದಿತ್ತು. ಕಳೆದ ಒಂದು ಒಂದೂವರೆ ದಶಕದಿಂದ ಮಾತ್ರ ರಾಜಕಾರಣಕ್ಕೆ ಹೊರತಾಗಿಯೂ ಈ ದೇಶದ ಜನರಿಗೆ ಅಗತ್ಯವಿರುವ ಹತ್ತಾರು ಇತರ ವಿಷಯಗಳೂ ಇವೆ ಎಂಬುದನ್ನು ಮನಗಂಡ ಪತ್ರಿಕೆಗಳು ಶಿಕ್ಷಣ, ಆರೋಗ್ಯ, ಕೃಷಿ, ಗ್ರಾಮೀಣ ಅಭಿವೃದ್ಧಿ, ನೀರಾವರಿ, ಸಾಮಾಜಿಕ ಅಭಿವೃದ್ಧಿ, ಸಾಹಿತ್ಯ, ಸಂಗೀತ, ಸಂಸ್ಕೃತಿ, ಮಹಿಳೆ, ಮಕ್ಕಳು, ವಿಜ್ಞಾನ-ತಂತ್ರಜ್ಞಾನ, ಹಣಕಾಸು, ಕೈಗಾರಿಕೆ ಇತ್ಯಾದಿ ವಿಷಯಗಳ ಬಗ್ಗೆ ಬರೆಯಲು ಪ್ರಾರಂಭಿಸಿದವು.

ಆದರೆ, ಸ್ವಾತಂತ್ರ್ಯದ ಹೊಸದರಲ್ಲೇ ಪತ್ರಿಕೋದ್ಯಮಕ್ಕೆ ಕಾಲಿರಿಸಿದ ಕಾಗಲಕರ್ ಇತರ ಪತ್ರಕರ್ತರಿಗಿಂತ ತೀರಾ ಭಿನ್ನವಾದ ನಿಲುವನ್ನು ತಾಳಿದ್ದು ನಿಜಕ್ಕೂ ಸುತ್ತ್ಯಾರ್ಹವಾದದ್ದು. ಅವರೆಂದೂ ರಾಜಕಾರಣಕ್ಕೆ, ರಾಜಕೀಯ ಪುಢಾರಿಗಳಿಗೆ ಪ್ರಾಶಸ್ತ್ಯ ಕೊಟ್ಟವರಲ್ಲ. ಹಾಗೆಂದು ರಾಜಕಾರಣವನ್ನು ಕಡೆಗಣಿಸಿದವರೂ ಅಲ್ಲ. ರಾಜಕೀಯದ ಬಗ್ಗೆ ನಿರಾಸಕ್ತಿಯೂ ಇರಲಿಲ್ಲ. ಅರ್ಥ ಮತ್ತು ಉದ್ದೇಶಗಳಿಲ್ಲದ ರಾಜಕಾರಣಿಗಳು ಹೇಳಿಕೆಗಳಿಂದ ಸಮಾಜಕ್ಕೆ ದೇಶಕ್ಕೆ ಪ್ರಯೋಜನವಾಗಲಾರದೆಂದು ಅವರು ಭಾವಿಸಿದ್ದರು. ಅಂತೆಯೇ ಅವರ ಕಾರ್ಯಸೂಚಿಯಲ್ಲಿ ರಾಜಕಾರಣಕ್ಕೆ ಖಂಡಿತ ಅಗ್ರ ಪ್ರಾಶಸ್ತ್ಯ ಇರಲಿಲ್ಲ.

ರಾಜಕಾರಣದ ಬಗ್ಗೆ ಅವರಿಗೆ ಅಸಡ್ಡೆಯಾಗಲೀ, ದ್ವೇಷವಾಗಲೀ ಇರಲಿಲ್ಲ. ಅದೇನಾದರೂ ಇದ್ದಿದ್ದರೆ ಅವರು ಕಲಬುರಗಿ ನಗರ ಸಭೆಗೆ ಸ್ಪರ್ಧಿಸಿ ಸೋಲುವ ಸಾಹಸವನ್ನು ಪ್ರದರ್ಶಿಸುತ್ತಿರಲಿಲ್ಲ!

ಒಲ್ಲದ ಮನಸ್ಸಿನ ರಾಜಕಾರಣಿ

ವೆಂಕಟರಾವ್ ನಾರಾಯಣರಾವ್ ಕಾಗಲಕರ್ ಅವರಿಗೆ ರಾಜಕೀಯ ಆಕಾಂಕ್ಷೆ ಇತ್ತೆ? ಅತ್ಯಂತ ಕುತೂಹಲದ ಪ್ರಶ್ನೆ! ಇದಕ್ಕೆ ಉತ್ತರ ಹೌದು ಮತ್ತು ಇಲ್ಲ ಎರಡೂ ಆಗಬಲ್ಲವು. ಅವರನ್ನು ೧೯೫೦ರ ದಶಕದಿಂದ ಹತ್ತಿರದಿಂದ ಕಂಡವರ ಪ್ರಕಾರ ಅವರಿಗೆ ರಾಜಕೀಯ ಆಕಾಂಕ್ಷೆ ಖಂಡಿತ ಇರಲಿಲ್ಲ. ಅವರು ಬಹುಮುಖ ಪ್ರತಿಭೆ, ಬಹು ವಿಷಯಗಳಲ್ಲಿ ಆಸಕ್ತಿ ಹೊಂದಿದವರಾದ್ದರಿಂದ ರಾಜಕಾರಣ ಅವರಿಗೆ ಅಸ್ಪೃಶ್ಯವಾಗಿರಲಿಲ್ಲ.

ರಾಜಕಾರಣದಲ್ಲಿ ನಿರಾಸಕ್ತ ಭಾವ ತಾಳಿದ್ದ ಕಾಗಲ್‌ಕರ್ ಅವರು ತಮ್ಮ ಪತ್ರಿಕೋದ್ಯಮದ ಬದುಕಿನಲ್ಲಿ ರಾಜಕೀಯವನ್ನು ವೈಭವೀಕರಿಸಿ ಸುದ್ದಿಗಳನ್ನು

ಬರೆಯಲಿಲ್ಲ. ರಾಜಕಾರಣಿಗಳ ಓಲೈಕೆ ಅವರ ಜಾಯಮಾನವಾಗಿರಲಿಲ್ಲ. ಅವರು ಎಲ್ಲ ಪಕ್ಷಗಳ, ಎಲ್ಲ ಸಭೆ-ಸಮುದಾಯಗಳ ರಾಜಕಾರಣಿಗಳೊಂದಿಗೆ ಸಮಾನ ಆಸಕ್ತಿಯ ಸಂಬಂಧ ಹೊಂದಿದ್ದರು.

ಆದಾಗ್ಯೂ, ರಾಜಕೀಯಕ್ಕೆ ಸಂಬಂಧಿಸಿದಂತೆ ಕಾಗಲಕರ್ ಅವರಲ್ಲಿ ಒಂದು ವಿಶೇಷವಾದ, ಆಶ್ಚರ್ಯಕರವಾದ ಬೆಳವಣಿಗೆಯನ್ನು ಗುರುತಿಸಬಹುದು. ಅವರು ಎಂ.ಎಸ್.ಕೆ. ಮಿಲ್ಲಿನ ಉದ್ಯೋಗಿಯಾಗಿದ್ದುಕೊಂಡು, ಪತ್ರಕರ್ತರಾಗಿದ್ದುಕೊಂಡು ಸಕ್ರಿಯ ರಾಜಕಾರಣವನ್ನು ನಡೆಸಿದರು. ಅಷ್ಟೇ ಅಲ್ಲ ಅವರು ಚುನಾವಣಾ ರಾಜಕಾರಣದಲ್ಲಿ ನೇರವಾಗಿ ಪಾಲ್ಗೊಂಡಿದ್ದರು!

ಕಲ್ಬುರ್ಗಿ ನಗರ ಸಭೆಯ ಚುನಾವಣೆಗಳಲ್ಲಿ ಅವರು ಒಂದು ಬಾರಿ ಅಲ್ಲ, ಎರಡು ಬಾರಿ ಸ್ಪರ್ಧಿಸಿ ಸೋಲು ಅನುಭವಿಸಿದರು! ಕಾಗಲಕರ್ ಅವರಿಗೆ ಸಕ್ರಿಯ ರಾಜಕಾರಣದಲ್ಲಿ ನಿಜಕ್ಕೂ ಆಸಕ್ತಿ ಇತ್ತೆ? ಅವರಿಗೆ ರಾಜಕೀಯ ಆಕಾಂಕ್ಷೆಗಳು ಇದ್ದವೆ? ಎಂಬುದು ಕುತೂಹಲದ ಪ್ರಶ್ನೆಗಳಾಗಿಯೇ ಉಳಿಯುತ್ತವೆ.

೧೯೬೦ ಮತ್ತು ೧೯೬೪ರಲ್ಲಿ ನಡೆದ ಎರಡು ಚುನಾವಣೆಗಳಲ್ಲಿ ಅವರು ಕಾಂಗ್ರೆಸ್ ಪಕ್ಷದ ಅಭ್ಯರ್ಥಿಯಾಗಿ ಸ್ಪರ್ಧಿಸಿ ಕೈಸುಟ್ಟುಕೊಂಡಿದ್ದರು. ನಗರದ ಬ್ರಹ್ಮಪುರ ವಾರ್ಡಿನಿಂದ ಸ್ಪರ್ಧಿಸಿದ್ದ ಎರಡೂ ಚುನಾವಣೆಗಳಲ್ಲಿ ಅವರ ಪ್ರತಿಸ್ಪರ್ಧಿ ಡಾ।। ಬಿ.ಪಿ. ದೇವುಳಗಾಂವಕರ್ ಎರಡೂ ಚುನಾವಣೆಗಳಲ್ಲಿ ನೇರ ಸ್ಪರ್ಧೆ ಏರ್ಪಟಿದ್ದು ಎರಡರಲ್ಲೂ ಜಯಶಾಲಿಯಾಗಿದ್ದವರು ದೇವುಳಗಾಂವಕರ್.

ದೇವುಳಗಾಂವ್‌ಕರ್ ಅವರು ಸೋಶಿಯಲಿಸ್ಟ್ ಪಕ್ಷದ ಅಭ್ಯರ್ಥಿಯಾದರೆ ಕಾಗಲಕರ್ ಅವರು ಕಾಂಗ್ರೆಸ್ ಪಕ್ಷದ ಅಭ್ಯರ್ಥಿ. ರಾಜಕೀಯವಾಗಿ ಮತ್ತು ಸೈದ್ಧಾಂತಿಕವಾಗಿ ಸೋಶಿಯಲಿಸ್ಟ್ ಪಾರ್ಟಿ ಮತ್ತು ಕಾಂಗ್ರೆಸ್ ಪಕ್ಷ ಆಗಾಯ್ತಿನಿಂದಲೂ ಬದ್ಧ ವೈರಿಗಳು.

ಸೋಶಿಯಲಿಸ್ಟ್ ಪಾರ್ಟಿ ಒಂದು ಕಾಲಕ್ಕೆ ಕಲಬುರಗಿಯಲ್ಲಿ ಸಾಕಷ್ಟು ಪ್ರಭಾವಶಾಲಿಯಾಗಿತ್ತು. ಆ ಪಕ್ಷದ ಐವರು ಸದಸ್ಯರು ಕಲಬುರಗಿ ನಗರಸಭೆಗೆ ಚುನಾಯಿತರಾಗಿದ್ದರು.

ಎಂಬಂತ್ತೆಂಟರ ಇಳಿವಯಸ್ಸಿನ ಡಾ।। ದೇವಳಗಾಂವಕರ್ ಅವರ ಪ್ರಕಾರ ಕಾಗಲಕರ್ ಅವರಿಗೆ ಸಕ್ರಿಯ ರಾಜಕಾರಣದಲ್ಲಿ ಯಾವುದೇ ಆಸಕ್ತಿ ಇರಲಿಲ್ಲ. ಅವರ ಆಸಕ್ತಿ ಎಲ್ಲವೂ ಪತ್ರಿಕೋದ್ಯಮದಲ್ಲೇ ಕೇಂದ್ರೀಕೃತವಾಗಿತ್ತು. ಆದರೆ ಸೈದ್ಧಾಂತಿಕವಾಗಿ

ಕಾಗಲಕರ್ ಕಾಂಗ್ರೆಸ್ ಪಕ್ಷಕ್ಕೆ ಹತ್ತಿರವಾಗಿದ್ದರು. ಕಾಂಗ್ರೆಸ್ ಪಕ್ಷದ ವರಿಷ್ಠ ನಾಯಕರು ಅದರಲ್ಲಿ ಮುಖ್ಯವಾಗಿ ಮಹ್ಮದ್ ಆಲಿ ಮತ್ತು ಇತರ ಸ್ಥಳೀಯ ಮುಖಂಡರ ಆಗ್ರಹ ಮತ್ತು ಒತ್ತಾಸೆ ಮೇರೆಗೆ ಕಾಗಲಕರ್ ಚುನಾವಣೆಗೆ ಸ್ಪರ್ಧಿಸಿದ್ದರು.

೧೯೬೦ರ ದಶಕದಲ್ಲೇ ಕಾಂಗ್ರೆಸ್ ಪಕ್ಷ ಜಾತಿ ರಾಜಕಾರಣವನ್ನು ಹುಟ್ಟು ಹಾಕಿತ್ತು. ಬ್ರಾಹ್ಮಣರ ವಿರುದ್ಧ ಬ್ರಾಹ್ಮಣರನ್ನು, ಲಿಂಗಾಯತರ ವಿರುದ್ಧ ಲಿಂಗಾಯತರನ್ನು ಮತ್ತು ಇತರ ಜಾತಿ-ಜನಾಂಗಗಳ ಅಭ್ಯರ್ಥಿಗಳ ವಿರುದ್ಧ ಅದೇ ಜಾತಿ-ಜನಾಂಗಗಳ ಪ್ರತಿಸ್ಪರ್ಧಿಯನ್ನು ನಿಲ್ಲಿಸುವ ಕಾಂಗ್ರೆಸ್ ವೈಖರಿ ಒಂದು ರಾಜಕೀಯ ಸಿದ್ಧಾಂತವಾಗಿಯೇ ಬೆಳೆದು ಬಂದಿದ್ದು, ಇತರ ಎಲ್ಲ ಪಕ್ಷಗಳು ಅದನ್ನೇ ಅನುಸರಿಸುವಂತಾಗಿದೆ.

ಸೋಶಿಯಲಿಸ್ಟ್ ಪಕ್ಷದ ದೇವುಳಗಾಂವಕರ್ ಅವರು ಬ್ರಾಹ್ಮಣರಾಗಿದ್ದು ಅವರನ್ನು ಬಗ್ಗುಬಡಿಯಲು ಕಾಂಗ್ರೆಸ್ ಪಕ್ಷಕ್ಕೆ ಮತ್ತೊಬ್ಬ ಬ್ರಾಹ್ಮಣರೇ ಬೇಕಿತ್ತು. ಅವರಿಗೆ ದೊರೆತದ್ದು ಕಾಗಲಕರ್!

ಸ್ವಾತಂತ್ರ್ಯಾನಂತರ ೧೯೫೦ರ ದಶಕದಲ್ಲಿ ಅಂದಿನ ರಾಜಕೀಯ ಸಂಸ್ಕೃತಿಗೆ ಅನುಸಾರವಾಗಿ ಮುಖಂಡರುಗಳಿಗೆ ತೀವ್ರತರವಾದ ರಾಜಕೀಯ ಆಕಾಂಕ್ಷೆಗಳು ಇರಲಿಲ್ಲ. ವಿಫುಲ ಅವಕಾಶಗಳಿದ್ದಾಗಲೂ ಕೆಲವರು ಚುನಾವಣಾ ರಾಜಕೀಯಕ್ಕೆ ಇಳಿಯುತ್ತಿರಲಿಲ್ಲ. ಬದಲಿಗೆ ಬೇರೆಯವರನ್ನು ಬೆಂಬಲಿಸುತ್ತಿದ್ದರು. ಆದರೆ ೧೯೬೦ರ ದಶಕದಿಂದ ರಾಜಕಾರಣ ನಿಧಾನವಾಗಿಯಾದರೂ ನಿಶ್ಚಿತವಾಗಿ ಒಂದು ಒಂದು ದಂಧೆಯಾಗಿಯೇ ರೂಪುಗೊಂಡಿತು. ಜನಸೇವೆಯ ಮೂಲ ಉದ್ದೇಶ ಮೂಲೆಗುಂಪಾಗಿ ಶತಾಯ ಗತಾಯ ಅಧಿಕಾರ ಗ್ರಹಣ ಮತ್ತು ಅದರ ಮೂಲಕ ಅಕ್ರಮ ಸಂಪತ್ತು ಸಂಪಾದನೆ ರಾಜಕಾರಣಿಗಳ ಧ್ಯೇಯೋದ್ದೇಶವಾಯಿತು. ಇದನ್ನು ಚೆನ್ನಾಗಿ ಮನಗಂಡಿದ್ದ ಕಾಗಲಕರ್ ಸಕ್ರಿಯ ರಾಜಕಾರಣದಿಂದ ದೂರವಿರಲು ಬಯಸಿದ್ದರು.

ಆದಾಗ್ಯೂ ಸ್ನೇಹಿತರ, ಹಿತೈಷಿಗಳ ಮತ್ತು ಕಾಂಗ್ರೆಸ್ ಮುಖಂಡರ ಒತ್ತಾಯಕ್ಕೆ ಮಣಿದು ಅವರು ಚುನಾವಣೆಯಲ್ಲಿ ಸ್ಪರ್ಧಿಸಿದ್ದು ಅವರ ಒಂದು ದೌರ್ಬಲ್ಯವೆಂದು ಭಾವಿಸಬಹುದೇನೋ!

ಚುನಾವಣೆ ಪ್ರಚಾರ ಸಂದರ್ಭದಲ್ಲಿ ಅವರೆಂದೂ ದೇವುಳಗಾಂವಕರ್ ವಿರುದ್ಧ ಅಪ್ಪಿತಪ್ಪಿಯೂ ವೈಯಕ್ತಿಕ ವಿಷಯದಲ್ಲಾಗಲೀ, ಅವಹೇಳನಕಾರಿಯಾಗಲೀ ಮಾತನಾಡಿದ್ದಿಲ್ಲ. ಪರಸ್ಪರ ಉತ್ತಮ ಸ್ನೇಹಿತರಾಗಿದ್ದ ಕಾಗಲಕರ್-ದೇವುಳಗಾಂವಕರ್

ಕಾಂಗ್ರೆಸ್ ಕೃಪೆಯಿಂದಾಗಿ ರಾಜಕೀಯ ಪ್ರತಿಸ್ಪರ್ಧಿಗಳಾಗಿ ಪರಿವರ್ತನೆಗೊಂಡರು. ಆದಾಗ್ಯೂ ಅವರ ಸ್ನೇಹಕ್ಕೆ ಎಂದೂ ಕುಂದುಂಟಾಗಲಿಲ್ಲ.

ಒಂದು ವೇಳೆ ಕಾಗಲಕರ್ ಚುನಾವಣೆಯಲ್ಲಿ ಗೆದ್ದು ರಾಜಕೀಯ ಕ್ಷೇತ್ರದಲ್ಲಿ ಮುಂದುವರೆದಿದ್ದರೆ ಏನಾಗಬಹುದಿತ್ತು? ಪ್ರಶ್ನೆ ಊಹಾತ್ಮಕವೇನೋ ನಿಜ. ಪತ್ರಿಕೋದ್ಯಮಕ್ಕೆ ನಷ್ಟ ಉಂಟಾದರೂ ರಾಜಕೀಯ ಕ್ಷೇತ್ರಕ್ಕೆ ಖಂಡಿತ ಲಾಭ ಆಗಬಹುದಿತ್ತು. ಕಾಗಲಕರ್ ಅವರಂತಹ ಗೌರವಾನ್ವಿತ, ಸುಶೀಲ ಸಂಪನ್ನ ರಾಜಕಾರಣಕ್ಕೆ ಪ್ರತಿಷ್ಠೆ ತಂದುಕೊಡಬಹುದಿತ್ತೆಂದು ಖಚಿತವಾಗಿ ಹೇಳಬಹುದು.

ರಾಜಕಾರಣದಿಂದಾಚೆಗಿನ ಪತ್ರಿಕೋದ್ಯಮದ ಸಾಧ್ಯತೆಗಳೊಂದಿಗೆ ತೀವ್ರತರವಾದ ಪ್ರಯೋಗ ನಡೆಸಿದವರು ಕಾಗಲಕರ್. ಸಮಾಜದ ಅಭಿವೃದ್ಧಿಗೆ ಪೂರಕವಾದ ಎಲ್ಲ ವಿಷಯಗಳಲ್ಲಿ ಸಮಾನ ಆಸಕ್ತಿ ಅವರಲ್ಲಿತ್ತು. ಸಾಹಿತ್ಯ, ಕಲೆ, ಸಂಗೀತ, ಶಿಲ್ಪಕಲೆ, ಇತಿಹಾಸ ಇತ್ಯಾದಿಗಳನ್ನು ಕುರಿತು ಅವರು ಓತಪ್ರೋತವಾಗಿ ಬರೆದರು. ನೀರಾವರಿಯ ಬಗ್ಗೆ ನಿರ್ಲಿಪ್ತ ಧೋರಣೆ ತಾಳಿದ್ದ ಸರಕಾರಗಳನ್ನು ನಿರಂತರ ಬರವಣಿಗೆಯ ಮೂಲಕ ಎಚ್ಚರಿಸುತ್ತಲೇ ಹೋದರು. ಕೃಷ್ಣಾಮೇಲ್ದಂಡೆ ಯೋಜನೆ ಮತ್ತು ಕೃಷ್ಣಾಕೊಳ್ಳದ ಯೋಜನೆಗಳು ದಶಕಗಳಿಂದ ಕೊಳೆಯುತ್ತಿದ್ದು ಅವರ ಸುಸ್ಥಿರ ವರದಿಗಳಿಂದ ಅವುಗಳೆಲ್ಲ ತಮ್ಮ ಅಸ್ತಿತ್ವವನ್ನು ನವೀಕರಿಸಿಕೊಳ್ಳುತ್ತಿದ್ದವು. ಕಲಬುರಗಿ ನಾಡಿಗೆ ವಿಶಿಷ್ಟವಾಗಿದ್ದು ನಶಿಸಿ ಹೋಗುತ್ತಿದ್ದ ಹಲವು ಕಲಾ ಪ್ರಕಾರಗಳಿಗೆ ಮರು ಜೀವ ತುಂಬಿದರು. ಕರಾವಳಿ ಕರ್ನಾಟಕದ ಎರಡೇ ಜಿಲ್ಲೆಗಳಿಗೆ ಸೀಮಿತವಾಗಿದ್ದ ಯಕ್ಷಗಾನ ರಾಷ್ಟ್ರೀಯ, ಅಂತರ ರಾಷ್ಟ್ರೀಯ ಗಮನ ಸೆಳೆಯುವುದಾದರೆ ಉತ್ತರ ಕರ್ನಾಟಕದ ಜನಪ್ರಿಯ ಜಾನಪದ ಪ್ರದರ್ಶನ ಕಲೆಯಾದ ಬಯಲಾಟ - ದೊಡ್ಡಾಟ ನಾಡಿನ ರಂಗಸಜ್ಜಿಕೆಗೂ ಬಾರದಿರುವುದು ಅವರಿಗೆ ಖೇದವನ್ನುಂಟು ಮಾಡಿತ್ತು.

ಕಾಗಲಕರ್ ಮಾಧ್ವ ಬ್ರಾಹ್ಮಣ ಸಂಪ್ರದಾಯ ಮನೆತನದಿಂದ ಬಂದಿದ್ದರೂ ಸಾಂಪ್ರದಾಯಿಕ ಆಚರಣೆಗಳು ಅವರ ತೀರಾ ವೈಯಕ್ತಿಕ ವಿಚಾರಗಳಾಗಿದ್ದವು. ಅವರು ಅತ್ಯಂತ ಧಾರ್ಮಿಕ ಶ್ರದ್ಧೆ ಮತ್ತು ಆಧ್ಯಾತ್ಮಿಕ ಒಲವು ಉಳ್ಳವರಾಗಿದ್ದರು. ಅಂತಲೇ ಅವರು ಪತ್ರಿಕೋದ್ಯಮದಲ್ಲಿ ವಿಶಾಲ ಮನಸ್ಸು ಮತ್ತು ಹೃದಯವಂತಿಕೆಯಿಂದ ಕಾರ್ಯನಿರ್ವಹಿಸಲು ಸಾಧ್ಯವಾಯಿತು. ಪೂಜೆ, ಪುನಸ್ಕಾರ, ಭಜನೆ, ಕೀರ್ತನೆ, ಸಂಧ್ಯಾವಂದನೆ, ಪಾರಂಪಾರಿಕ ಆಚರಣೆ ಇತ್ಯಾದಿಗಳನ್ನು ಚಾಚುತಪ್ಪದೆ ಮಾಡುತ್ತಿದ್ದರು. ಆದರೆ ಅವರ ಧಾರ್ಮಿಕ ಆಚರಣೆಗಳು, ನಂಬಿಕೆಗಳು

ಅವರ ಬರವಣಿಗೆಗೆ ಯಾವುದೇ ರೀತಿಯ ಚ್ಯುತಿಯನ್ನುಂಟು ಮಾಡಿರಲಿಲ್ಲ. ಬದಲಾಗಿ ಅವರು ಇನ್ನಷ್ಟು ಹೆಚ್ಚು ಶುದ್ಧ, ಸಂಸ್ಕರಿತ, ವೈಜ್ಞಾನಿಕ, ಸತ್ಯನಿಷ್ಠ, ವಸ್ತುನಿಷ್ಠ ವರದಿಗಳನ್ನು ಮಾಡಲು, ಲೇಖನಗಳನ್ನು ಬರೆಯಲು ಅವು ಪ್ರೇರೇಪಿಸುತ್ತಿದ್ದವು.

ಅವರು ಧಾರ್ಮಿಕ ಉದಾರವಾದಿಗಳು ಮತ್ತು ಸತ್ಯನಿಷ್ಠರು ಎನ್ನುವುದಕ್ಕೆ ಒಂದು ಕ್ಲಾಸಿಕ್ ಉದಾಹರಣೆ ಎಂದರೆ ಅವರು ಧಾರ್ಮಿಕ ಸುಕ್ಷೇತ್ರ ಸನ್ನತಿಯ ನಕ್ಷೆಯನ್ನೇ ಬದಲಿಸಿದ್ದು! ಶೈವ ಬ್ರಾಹ್ಮಣರ ಅತ್ಯಂತ ಪವಿತ್ರ ಕ್ಷೇತ್ರವಾಗಿದ್ದ ಸನ್ನತಿ ಬೌದ್ಧ ಮೂಲದ್ದೆಂಬ ಐತಿಹಾಸಿಕ ಬೆರೆತ ಸತ್ಯವನ್ನು ತಮ್ಮ ವರದಿಯ ಮೂಲಕ ಬಹಿರಂಗಗೊಳಿಸುವ ಮೂಲಕ ಬ್ರಾಹ್ಮಣ ಸಂಪ್ರದಾಯ ಪ್ರಪಂಚದಲ್ಲಿ ಅಲ್ಲೋಲ ಕಲ್ಲೋಲವನ್ನೇ ಉಂಟು ಮಾಡಿದ್ದರು! ಅವರು ಧಾರ್ಮಿಕವಾಗಿ ಪೂರ್ವಾಗ್ರಹ ಪೀಡಿತರಾಗಿದ್ದಲ್ಲಿ ಸನ್ನತಿಯ ಗೊಡವೆಗೇ ಹೋಗುತ್ತಿರಲಿಲ್ಲವೇನೋ!

ಕಲಬುರಗಿ ಕರ್ನಾಟಕದಲ್ಲೇ ಅತ್ಯಂತ ದಲಿತ ಸಂವೇದನೆಯ ಮತ್ತು ದಲಿತ ಪ್ರಜ್ಞೆಯ ಜಿಲ್ಲೆ. ದಲಿತ ಚಳವಳಿ ಶಕ್ತಿಯುತವಾಗಿ ಬೆಳೆದು ಬಂದದ್ದು ಇಲ್ಲಿಯೇ. ಹಿಂದುವಾಗಿ ಜನಿಸಿದ್ದ ಡಾ।। ಬಿ.ಆರ್. ಅಂಬೇಡ್ಕರ್ ಅವರು ಹಿಂದುವಾಗಿ ನಿರ್ವಾಣ ಹೊಂದಲು ಇಚ್ಛಿಸಲಿಲ್ಲ. ಹಿಂದು ಧರ್ಮದಲ್ಲಿ ಆಳವಾಗಿ ಬೇರೂರಿರುವ ಅಸ್ಪೃಶ್ಯತೆ ಆಚರಣೆಯಿಂದ ಜರ್ಜರಿತರಾಗಿ ಬೇಸತ್ತು ಹೋಗಿದ್ದ ಅಂಬೇಡ್ಕರ್ ಅವರು ಹಿಂದು ಧರ್ಮವನ್ನು ತೊರೆಯುಲು ನಿರ್ಧರಿಸಿದರು. ಅದಕ್ಕೆ ಪರ್ಯಾಯವಾಗಿ ಅವರು ಆಯ್ದುಕೊಂಡದ್ದು ಬೌದ್ಧ ಧರ್ಮವನ್ನು, ತಮ್ಮ ಅಸಂಖ್ಯಾತ ದಲಿತ ಅನುಯಾಯಿ ಮತ್ತು ಬೆಂಬಲಿಗರೊಂದಿಗೆ ಅವರು ಐದು ದಶಕಗಳ ಹಿಂದೆ (೧೯೫೬) ಬೌದ್ಧ ಧರ್ಮಕ್ಕೆ ಮತಾಂತರಗೊಂಡದ್ದು ಸ್ವಾತಂತ್ರ್ಯೋತ್ತರ ಇತಿಹಾಸದಲ್ಲಿ ಒಂದು ಮಹತ್ವದ ಬೆಳವಣಿಗೆ.

ಅಂಬೇಡ್ಕರ್ ಅವರನ್ನು ದೇವರಂತೆ ಭಾವಿಸುವ, ಆರಾಧಿಸುವ ಕಲಬುರಗಿ ನಾಡಿನಲ್ಲಿ ಅವರ ಬೌದ್ಧ ಧರ್ಮಾಂತರ ಒಂದು ಸಂಚಲನವನ್ನೇ ದಲಿತ ಸಮುದಾಯದಲ್ಲಿ ಉಂಟು ಮಾಡಿತ್ತು. ಇಂತಹ ಸನ್ನಿವೇಶದಲ್ಲಿ ಸನ್ನತಿಯ ಪೂರ್ವಾಶ್ರಮದ ಮೇಲೆ ಐತಿಹಾಸಿದ ಬೆಳಕು ಚೆಲ್ಲಿದ ಕಾಗಲಕರ್ ಅವರ ಲೇಖನ ದಲಿತ ಸಂಚಲನೆಗೆ ಇಂಬು ನೀಡಿತ್ತು.

ಈ ಬೆಳವಣಿಗೆ ಒಂದು ಕಾಲಕ್ಕೆ ಎಷ್ಟೊಂದು ಕಾವನ್ನು ಉಂಟು ಮಾಡಿತ್ತೆಂದರೆ ಹಿರಿಯ ದಲಿತ ಧುರೀಣರೂ ಸಚಿವರೂ ಆಗಿದ್ದ ದಿವಂಗತ ಬಿ. ಬಸವಲಿಂಗಪ್ಪನವರು ತಮ್ಮ ಕಲಬುರಗಿಯ ಒಂದು ಭೇಟಿಯ ಸಂದರ್ಭದಲ್ಲಿ

ಪತ್ರಕರ್ತರೊಂದಿಗೆ ಮಾತನಾಡುತ್ತ ಸನ್ನತಿ ಚಂದ್ರಲಾ ಪರಮೇಶ್ವರಿ ದೇವಸ್ಥಾನ ವಾಸ್ತವವಾಗಿ ದಲಿತರಿಗೆ ಸೇರಬೇಕೆಂದು ಪ್ರತಿಪಾದಿಸಿದ್ದರು!

ಕಪಟರಾಳ ಕೃಷ್ಣರಾಯರ ಸಂಶೋಧನೆ ಮತ್ತು ವಿ.ಎನ್. ಕಾಗಲಕರ್ ಅವರ ಲೇಖನ ಇತಿಹಾಸದ ಬಗ್ಗೆ ಇದ್ದ ಸಾಮಾನ್ಯ ನಂಬಿಕೆಯನ್ನು ಬುಡಮೇಲು ಮಾಡಿ ಒಂದು ಹೊಸ ಸಂಶೋಧನಾ ಪರ್ವಕ್ಕೆ ನಾಂದಿ ಮಾಡಿಕೊಟ್ಟಿತ್ತು.

ಪತ್ರಕರ್ತರಾದವರು ಸತ್ಯಕ್ಕಷ್ಟೇ ನಿಷ್ಠರಾಗಿರಬೇಕೆಂಬ ಸಾರ್ವಕಾಲಿಕ ತಾತ್ವಿಕ ನಿಲುವನ್ನು ಕಾಗಲಕರ್ ತಮ್ಮ ಆಚರಣೆಯ ಮೂಲಕ ಬೋಧಿಸಿದ್ದಾರೆ.

ಔಪಚಾರಿಕ ಕಲಿಕೆಗೂ ಪತ್ರಿಕೋದ್ಯಮ ವೃತ್ತಿಗೂ ಏನೇನೂ ಸಂಬಂಧ ಇಲ್ಲ ಎಂಬುದನ್ನು ಅನೇಕ ಅತಿರಥ ಮಹಾರಥ ಪತ್ರಕರ್ತರಂತೆ ಕಾಗಲಕರ್ ಅವರೂ ಸಾಧಿಸಿತೋರಿಸಿದ್ದಾರೆ. ಅವರು ಔಪಚಾರಿಕ ಶಿಕ್ಷಣ ಪಡೆದದ್ದು ಕೇವಲ ಒಂಭತ್ತನೆಯ ತರಗತಿವರೆಗೆ ಮಾತ್ರ. ಮ್ಯಾಟ್ರಿಕ್ ಕೂಡ ಪಾಸಿಲ್ಲದ ವ್ಯಕ್ತಿಯೊಬ್ಬ ಕನ್ನಡ ಮತ್ತು ಇಂಗ್ಲಿಷ್ ಪತ್ರಿಕೋದ್ಯಮದಲ್ಲಿ ಸುಮಾರು ನಾಲ್ಕೂವರೆ ದಶಕದ ದೀರ್ಘಕಾಲ ತಮ್ಮ ಪ್ರತಿಭೆಯನ್ನು ಮೆರೆದ ಉದಾಹರಣೆ ತೀರಾ ವಿರಳ. ಅವರು ಇಂಗ್ಲಿಷ್ ಭಾಷೆಯನ್ನು ಔಪಚಾರಿಕವಾಗಿ ಕಲಿಯದಿದ್ದರೂ ಆ ಭಾಷೆಯ ಮೇಲೆ ಪ್ರಭುತ್ವ ಬೆಳೆಸಿಕೊಂಡ ಬಗೆ ಬೆರಗುಗೊಳಿಸುವಂತಹುದು. ಇಂಗ್ಲೀಷಿನಲ್ಲಿ ಸ್ನಾತಕೋತ್ತರ ಪದವಿ ಪಡೆದವರೂ ಕೂಡ ಎಸ್ಸೆಸ್ಸೆಲ್ಸಿ ಶಿಕ್ಷಣಾರ್ಹತೆಯೂ ಇಲ್ಲದ ಕಾಗಲಕರ್ ಅವರ ಇಂಗ್ಲೀಷ್ ಪ್ರಾವಿಣ್ಯತೆಯ ಮುಂದೆ ಮಂತ್ರಮುಗ್ಧರಾಗಬೇಕು.

❒

ಅಧ್ಯಾಯ - ೭

ಎಲೆಮರೆಯ ಕಾಯಿ

ವೆಂಕಟರಾವ್ ನಾರಾಯಣರಾವ್ ಕಾಗಲಕರ್ ಅವರ ಬಹುಮುಖಿ ವ್ಯಕ್ತಿತ್ವವನ್ನು ಒಂದೇ ವಾಕ್ಯದಲ್ಲಿ ವರ್ಣಿಸುವ ದುಸ್ಸಾಹಸ ಮಾಡಲಾಗದು. ವೈವಿಧ್ಯಮಯ ವ್ಯಕ್ತಿತ್ವದ ಅವರನ್ನು ಶಬ್ದಗಳಲ್ಲಿ, ವಾಕ್ಯಗಳಲ್ಲಿ ಹಿಡಿದಿಡುವುದು ತುಂಬಾ ಕಷ್ಟದ ಕೆಲಸ. ಆದಾಗ್ಯೂ, ಚಂದ್ರನನ್ನು ಕನ್ನಡಿಯಲ್ಲಿ ಸೆರೆ ಹಿಡಿದು ಅಳುವ ಮಗುವನ್ನು ಸಾಂತ್ವನಗೊಳಿಸಬಹುದೇನೋ! ಅವರು ಸುಮಾರು ಐದು ದಶಕಗಳ ತುಂಬು ವೃತ್ತಿ ಜೀವನವನ್ನು ಗಮನಿಸಿದಾಗ ಅವರನ್ನು ಹೀಗೆ ವರ್ಣಿಸಬಹುದೇನೋ : ಕಾಗಲ್‌ಕರ್ ಒಬ್ಬ ಎಲೆಮರೆಯ ಕಾಯಿ!

ನಿಜ. ಕಾಗಲಕರ್ ತಮ್ಮ ಪತ್ರಿಕಾ ವೃತ್ತಿಯ ಘನತೆ, ಗೌರವ, ಗಾಂಭೀರ್ಯಗಳನ್ನು ಕಾಯ್ದುಕೊಂಡು ಬರುವುದರ ಜೊತೆಗೆ ಪತ್ರಿಕಾ ಬರವಣಿಗೆಯಾಚೆಗೂ ತಮ್ಮ ಆಸಕ್ತಿಗಳನ್ನು ವಿಸ್ತರಿಸುತ್ತ ನಡೆದರು. ದಾಸ ಸಾಹಿತ್ಯ ಸಂಗ್ರಹ, ಪ್ರಚಾರ ಕಾರ್ಯದಲ್ಲಿ ಅವರೊಬ್ಬ ಮಿಶಿನರಿಯಂತೆ ಕೆಲಸ ಮಾಡಿದರು. ಆದರೆ ದಾಸ ಸಾಹಿತ್ಯ ಪ್ರಕಟಣೆಯ ಸಮಿತಿಯಲ್ಲಾಗಲೀ ಅಥವಾ ಮತ್ತಾವುದೇ ಅಧಿಕೃತ, ಔಪಚಾರಿಕ ಸಮಿತಿಯಲ್ಲಾಗಲೀ ಅವರು ಸದಸ್ಯರಾಗಿ ಕೆಲಸ ಮಾಡಲಿಲ್ಲ. ಶೈಕ್ಷಣಿಕ ವಿಷಯಗಳಲ್ಲಿ ಪುಟಗಟ್ಟಲೆ ಬರೆದರು. ಗುಲ್ಬರ್ಗ ವಿಶ್ವವಿದ್ಯಾಲಯದ ಸ್ಥಾಪನೆಗೆ ಮುಂಚೆ ಮತ್ತು ವಿಶ್ವವಿದ್ಯಾಲಯ ಸ್ಥಾಪನೆಯ ನಂತರ ಅದರ ಆಗುಹೋಗುಗಳೊಂದಿಗೆ ನಿಕಟ ಸಂಪರ್ಕ ಹೊಂದಿದ್ದರು. ಆದರೆ ಅವರು ವಿಶ್ವವಿದ್ಯಾಲಯದ ಅಕಾಡೆಮಿಕ್ ಕೌನ್ಸಿಲ್, ಸೆನೆಟ್ ಅಥವಾ ಸಿಂಡಿಕೇಟ್ ಸೇರಿದಂತೆ ಯಾವುದೇ ಸಮಿತಿಗೆ ನೇಮಕ ಹೊಂದಲಿಲ್ಲ. ಕರಪತ್ರದಂತಹ ಕಿರು ಪತ್ರಿಕೆ ನಡೆಸುವ ಹಲವು ಪುಟಗೋಸಿ ಪತ್ರಕರ್ತರು ಅಪ್ಪಟ ವಶೀಲಿ ಬಾಜಿಯಿಂದಾಗಿ ವಿಶ್ವವಿದ್ಯಾಲಯಗಳ ಉನ್ನತ ಸಮಿತಿಗಳಿಗೆ ನೇಮಕಗೊಂಡು ಕಾಗಲಕರ್ ಅವರ ಎದುರಿಗೆ ಅಟ್ಟಹಾಸದಿಂದ ಮೆರೆದು ಹೋದರು!

ದೇಶೀಯ ಕಲೆ, ಪ್ರಾಂತೀಯ ಕಲೆ, ವರ್ಣಚಿತ್ರ, ಶಿಲ್ಪ ಕಲೆ, ಜಾನಪದ, ನಾಟಕ, ಸಂಗೀತ, ಗಮಕ, ನೃತ್ಯ ಮುಂತಾದ ಸಾಂಸ್ಕೃತಿಕ ಆಯಾಮಗಳೊಂದಿಗೆ ತಮ್ಮನ್ನು ತಾವು ತೊಡಗಿಸಿಕೊಳ್ಳುವುದರ ಜೊತೆಗೆ ಅವುಗಳ ಕುರಿತು ಪುಷ್ಕಳವಾಗಿ ಕನ್ನಡ ಮತ್ತು ಇಂಗ್ಲೀಷಗಳೆರಡಲ್ಲೂ ಬರೆದರು. ಆದರೆ ಅವರನ್ನು ಯಾವುದೇ ಅಕಾಡೆಮಿಗೆ ನೇಮಕ ಮಾಡುವ ಸೌಜನ್ಯವನ್ನು ಯಾವ ನಾಯಕನೂ ತೋರಲಿಲ್ಲ!

ಅಷ್ಟೆಲ್ಲ ಏಕೆ, ಅವರ ಅತ್ಯಂತ ಪ್ರೀತಿಯ ಕ್ಷೇತ್ರವಾದ ಪತ್ರಿಕೋದ್ಯಮವನ್ನೇ ತೆಗೆದುಕೊಳ್ಳಿ. ಹಿಂದುಳಿದ ಹೈದ್ರಾಬಾದ್-ಕರ್ನಾಟಕದ ಪತ್ರಿಕೋದ್ಯಮದ ಹರಿಕಾರರಾಗಿ ಅವರು ಅವರ ಕೆಲಸ ಮಾಡಿದರು. ಅದರಲ್ಲೂ ಕಲಬುರಗಿಯಂತಹ ಬೆಂಗಾಡಿನಲ್ಲಿ ಪತ್ರಿಕಾ ವೃತ್ತಿಯ ಅಸ್ತಿವಾರವನ್ನೇ ಅವರು ಹಾಕಿದರು. ಪಿ.ಟಿ.ಐ. ಸುದ್ದಿ ಸಂಸ್ಥೆ, ಸಂಯುಕ್ತ ಕರ್ನಾಟಕ, ದಿ ಹಿಂದು ಪತ್ರಿಕೆಗಳಲ್ಲಿ ಅವರು ನಾಲ್ಕು ದಶಕಗಳಿಗೂ ಮೀರಿ ಅವಿಶ್ರಾಂತವಾಗಿ ಕೊನೆಯ ಉಸಿರು ಇರುವವರೆಗೂ ದುಡಿದರು. ಈ ಭಾಗದ ಅಭ್ಯುದಯದಲ್ಲಿ ಕಾಗಲಕರ್ ಅವರ ಗಣನೀಯ ಪಾಲುಗಾರಿಕೆ ಇದೆ. 'ಸಂಯುಕ್ತ ಕರ್ನಾಟಕ'ವನ್ನು ಜನಜನಿತ ಪತ್ರಿಕೆಯನ್ನಾಗಿ ಮಾಡಿದರು. 'ಸಾರಥಿ' ಸ್ಥಳೀಯ ಪತ್ರಿಕೆಯ ಉದಯಕ್ಕೂ ಕಾರಣರಾದರು. ಕನ್ನಡ ಹಾಗೂ ಇಂಗ್ಲೀಷ್‌ನಲ್ಲಿ ಸಮಾನ ಪರಿಣಿತಿ, ಪಾಂಡಿತ್ಯವನ್ನು ಸಂಪಾದಿಸಿದವರು. ಆದಾಗ್ಯೂ ಕಾಗಲಕರ್ ಅವರನ್ನು ಕರ್ನಾಟಕ ಪತ್ರಿಕಾ ಅಕಾಡೆಮಿಗೆ ನಾಮಕರಣ ಮಾಡುವ ಹೃದಯ ವೈಶ್ಯಾಲತೆ ಮತ್ತು ಯೋಗ್ಯತೆ ಯಾರಲ್ಲಿಯೂ ಕಾಣಲಿಲ್ಲ! ಪ್ರತಿಭೆ ಮತ್ತು ಪರಿಶ್ರಮಕ್ಕೆ ನಿಜಕ್ಕೂ ಪುರಸ್ಕಾರ ಉಂಟೆ? ಕಾಗಲಕರ್ ಅವರ ಸಂದರ್ಭದಲ್ಲಿ ಈ ಪ್ರಶ್ನೆಗೆ ದಿಟವಾಗಿಯೂ ನಕಾರಾತ್ಮಕ ಉತ್ತರ.

ಪ್ರಾಯಃ ಕಾಗಲಕರ್ ಅವರಂತಹ ಜವಾರಿ ಪ್ರತಿಭೆಯನ್ನು ಗುರುತಿಸಲಿಕ್ಕೆ ಸಮಾಜಕ್ಕೆ ಹಾಗೂ ಸರಕಾರಕ್ಕೆ ಯೋಗ್ಯತೆ ಬೇಕು! ಅವರು ನಿಜಕ್ಕೂ ಯಾವುದಾದರೂ ಗೌರವದ ಸ್ಥಾನಮಾನಕ್ಕೆ ಪಾತ್ರರಾಗಬೇಕಿದ್ದರೆ ಸರಕಾರ ಅವರನ್ನು ಯಾವುದೇ ಎರಡನೆ ವಿಚಾರವಿಲ್ಲದೆ ಕರ್ನಾಟಕ ವಿಧಾನ ಪರಿಷತ್ತಿಗೆ ನಾಮಕರಣ ಮಾಡಬೇಕಿತ್ತು! ಕಾಗಲಕರ್ ಅವರೇನೋ ಸಮಾಜ ಋಣವನ್ನು ಸಂಪೂರ್ಣವಾಗಿ ತೀರಿಸಿದ್ದಾರೆ. ಆದರೆ ಕರ್ನಾಟಕ ಸರಕಾರ ಮತ್ತು ಕಲಬುರಗಿ ಸಮಾಜ ಅವರ ಋಣದಲ್ಲಿ ಬಂದಿಯಾಗಿದೆ.

ಗಟ್ಟಿಯಾಗಿ ನಿಂತ ಜಟ್ಟಿ

ಕಡು ಬಡತನದಲ್ಲಿ ಬೆಳೆದು ಹೊಟ್ಟೆಗೆ ಹಿಟ್ಟಿಲ್ಲದಿದ್ದರೂ ಜಟ್ಟಿಯಂತೆ ಪತ್ರಿಕಾ ಮಾಧ್ಯಮದಲ್ಲಿ ಗಟ್ಟಿಯಾಗಿ ನಿಂತವರು ಕಾಗಲಕರ್. ಮುಖ್ಯವಾಗಿ

ಕಲಬುರಗಿಯಲ್ಲಿ ಮತ್ತು ಸಾಮಾನ್ಯವಾಗಿ ಹೈದ್ರಾಬಾದ ಕರ್ನಾಟಕ ಪ್ರದೇಶದಲ್ಲಿ ನಾಲ್ಕು ದಶಕಗಳಿಗೂ ಮಿಕ್ಕು ಅತ್ಯಂತ ನಿಷ್ಠೆ, ಪ್ರಾಮಾಣಿಕತೆಯಿಂದ ಪತ್ರಿಕೋದ್ಯಮವನ್ನು ಬೆಳಗಿದವರು, ಬೆಳೆಸಿದವರು, ಅನೇಕ ಯುವ ಪತ್ರಕರ್ತರನ್ನು ಬೆನ್ನು ತಟ್ಟಿ ಮುಂದೆ ತಂದವರು. ಇನ್ನೂ ಅನೇಕರಿಗೆ ಒತ್ತಾಸೆಯಾಗಿ ನಿಂತವರು. ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಪರಿವರ್ತನೆಗೆ ಪತ್ರಿಕೆಯನ್ನು ಅವರಷ್ಟು ಪರಿಣಾಮಕಾರಿಯಾಗಿ ಬಳಸಿಕೊಂಡವರು ತೀರಾ ಅಪರೂಪ.

ಕನ್ನಡ ಮತ್ತು ಇಂಗ್ಲೀಷಗಳೆರಡರಲ್ಲೂ ಅವರು ಸಮಾನ ಆಸಕ್ತಿಯಿಂದ ದುಡಿದರು. ಮ್ಯಾಟ್ರಿಕ್ ಪಾಸ್ ಆಗದ ಒಬ್ಬ ವ್ಯಕ್ತಿ 'ಹಿಂದು' ಅಂತಹ ಶ್ರೀಮಂತ, ಸಮೃದ್ಧ ಇಂಗ್ಲೀಷ್ ಭಾಷೆಯ ಪತ್ರಿಕೆಯಲ್ಲಿ ಎರಡು ದಶಕಕ್ಕೂ ಮೀರಿ ಬರೆದವರು. ಅವರ ಇಂಗ್ಲೀಷ್ ಭಾಷೆಯ ಮೇಲಿನ ಪ್ರಭುತ್ವ ಇಂಗ್ಲೀಷಿನಲ್ಲಿ ಸ್ನಾತಕೋತ್ತರ ಪದವಿ ಪಡೆದವರನ್ನೇ ನಾಚಿಸುವಂತಿತ್ತು. ಇಂಗ್ಲೀಷ್ ಭಾಷೆಯ ಮೇಲೆ ಅವರಿಗೆ ಹಿಡಿತ ಹೇಗೆ ಸಿದ್ಧಿಸಿತೋ ಎಂಬುದು ಅನೇಕರಿಗೆ ವಿಸ್ಮಯಕಾರಿಯಾಗಿಯೇ ಉಳಿದಿದೆ.

ಪತ್ರಿಕೋದ್ಯಮವನ್ನು ಅವರು ಬರೀ ವೃತ್ತಿಯನ್ನಾಗಿ ಸ್ವೀಕರಿಸಲಿಲ್ಲ. ಅದು ಅವರ ಜೀವನದ ಧ್ಯೇಯವಾಗಿತ್ತು. ಪತ್ರಿಕೆಯನ್ನು ಅವರು ಬರೀ Profession ಆಗಿ ಸ್ವೀಕರಿಸಲಿಲ್ಲ ಬದಲಾಗಿ ಅದನ್ನು Mission ಅನ್ನಾಗಿ ಮಾಡಿಕೊಂಡರು. ಬಡತನದ ಬೇಗೆಯಲ್ಲಿ ಬೆಂದಿದ್ದರೂ, ಆರ್ಥಿಕವಾಗಿ ತೀರ ಸಂಕಷ್ಟದಲ್ಲಿದ್ದರೂ, ಹತ್ತು ಹಲವು ಕೌಟುಂಬಿಕ ತಾಪತ್ರಯಗಳಿದ್ದರೂ ಅವರೆಂದೂ ತಮ್ಮ ಪತ್ರಿಕಾ ವೃತ್ತಿಯನ್ನು ದುರುಪಯೋಗಪಡಿಸಿಕೊಳ್ಳಲಿಲ್ಲ. ಎಂತಹುದೇ ಸಂದರ್ಭದಲ್ಲಿ ಪತ್ರಿಕಾ ವೃತ್ತಿಯ ಘನತೆ-ಗೌರವದೊಂದಿಗೆ ರಾಜಿ ಮಾಡಿಕೊಳ್ಳಲಿಲ್ಲ. ಉನ್ನತ ಆದರ್ಶ ಮತ್ತು ಮೌಲ್ಯಗಳನ್ನು ಅವರು ಜೀವನದಲ್ಲಿ ಅಳವಡಿಸಿಕೊಂಡಿದ್ದರಿಂದಲೇ ಅವರು ನೈತಿಕ ಪಥದಿಂದ ಒಂದಿಂಚೂ ಆಚೆ-ಆಚೆ ಸರಿಯಲಿಲ್ಲ! ಅಂತೆಯೇ ಕಾಗಲಕರ್ ಎಲ್ಲ ಪತ್ರಕರ್ತರಿಗೆ ಎಲ್ಲ ಕಾಲಕ್ಕೆ Role Model ಆಗಿ ಉಳಿಯುತ್ತಾರೆ.

ಕಾಗಲ್‌ಕರ್ ಅವರು ಔಪಚಾರಿಕವಾಗಿ ಸರಕಾರದ ಸಮಿತಿ, ಪ್ರಾಧಿಕಾರ, ನಿಗಮ, ಮಂಡಳಿ, ಅಕಾಡೆಮಿ ಮುಂತಾದವುಗಳಲ್ಲಿ ಸೇವೆ ಸಲ್ಲಿಸದೇ ಇರಲು ಹಲವು ಕಾರಣಗಳಿವೆ. ಅವುಗಳಲ್ಲಿ ಕೆಲವೇ ಪ್ರಮುಖವಾದವುಗಳನ್ನು ಗುರುತಿಸಬಹುದು. ಮೊಟ್ಟಮೊದಲನೆಯದಾಗಿ ಕಾಗಲಕರ್ ಪತ್ರಿಕೆಯನ್ನು, ಪತ್ರಿಕಾ ವೃತ್ತಿಯನ್ನು ಸ್ವಾರ್ಥ ಸಾಧನೆಗಾಗಿ ಎಂದೂ ಬಳಸಿಕೊಳ್ಳಲಿಲ್ಲ. ಯಾರಿಗೂ ಪೂಸಿ ಹೊಡೆದವರಲ್ಲ. ಹಾಗಂತ ಯಾರೊಂದಿಗೂ ಅನಗತ್ಯವಾಗಿ ನಿಷ್ಠುರ ಕಟ್ಟಿಕೊಂಡವರಲ್ಲ.

ಯಾವುದನ್ನೇ ಆಗಲೀ ಅಂಗಲಾಚಿ ಬೇಡುವ ಜಾಯಮಾನ ಅವರದಾಗಿರಲಿಲ್ಲ. ರಾಜಕೀಯ ಪ್ರಪಂಚದ ಅತಿರಥ ಮಹಾರಥರೆಲ್ಲ ಅವರೊಂದಿಗೆ ಗಳಸ್ಯ ಗಂಟಸ್ಯರಾಗಿಯೇ ಇದ್ದರು. ಕಾಗಲಕರ್ ಸ್ವಲ್ಪವೇ ಮನಸ್ಸು ಮಾಡಿದ್ದರೆ ತಮಗಿರುವ ಅಗಾಧ, ಅಪಾರ ರಾಜಕೀಯ ಸ್ನೇಹ, ಸಂಪರ್ಕ, ಪ್ರಭಾವವನ್ನು ಬಳಸಿಕೊಂಡು ಭೌತಿಕ ಜೀವನದಲ್ಲಿ ತಮಗೆ ಬೇಕಿದ್ದನ್ನು ಪಡೆಯಲು ಅವರಿಗೆ ವಿಫುಲ ಅವಕಾಶಗಳಿದ್ದವು. ತಮ್ಮ ಕಾಲದಲ್ಲಿ ಅವರು ಏಕೈಕ ಪ್ರಭಾವಿ ಪತ್ರಕರ್ತರಾಗಿದ್ದು ಹೆಚ್ಚು ಕಡಿಮೆ ಏಕಮೇವಾದ್ವಿತೀಯ ಆಗಿದ್ದರು. ಅನುಚಿತ ಮಾರ್ಗಗಳನ್ನು ಹಿಡಿಯುವಲ್ಲಿ ಅವರಿಗೆ ಪೈಪೋಟಿಯೂ ಇರಲಿಲ್ಲ ಮತ್ತು ಅದನ್ನು ಆಕ್ಷೇಪಿಸುವವರೂ ಇರಲಿಲ್ಲ. ಅವರು ನಡೆದದ್ದೇ ದಾರಿಯಾಗಿತ್ತು.

ಆದಾಗ್ಯೂ ಕಾಗಲಕರ್ ನೈತಿಕ ಮೌಲ್ಯಗಳು, ಆದರ್ಶ, ವೃತ್ತಿ ಗೌರವ, ಘನತೆಗಳೊಂದಿಗೆ ಎಂದೆಂದಿಗೂ ರಾಜಿ ಮಾಡಿಕೊಳ್ಳಲಿಲ್ಲ. ಆದ್ದರಿಂದಲೇ ಅವರೊಬ್ಬ ಅಸಾಮಾನ್ಯ ಪತ್ರಕರ್ತರೆಂದೇ ಗುರುತಿಸಲ್ಪಡುತ್ತಾರೆ.

ಅವರ ಹಿರಿಮೆ-ಗರಿಮೆ, ಸೇವೆ, ನಿಷ್ಠೆ, ಪ್ರಾಮಾಣಿಕತೆ ಇತ್ಯಾದಿಗಳನ್ನು ಗುರುತಿಸಿ ಅವರಿಗೆ ತಕ್ಕುದಾದ ಸ್ಥಾನ-ಮಾನ ದಯಪಾಲಿಸುವ ಔದಾರ್ಯ, ಸೌಜನ್ಯಗಳು ಕಲಬುರಗಿ ನಾಡಿನ ರಾಜಕಾರಣಿಗಳಲ್ಲಿ ಇಲ್ಲದೆ ಹೋಗಿರುವುದು ಒಂದು ದೊಡ್ಡ ದುರಂತ. ಕಾಗಲಕರ್ ಅವರ ಸೇವೆಯನ್ನು ಬಳಸಿಕೊಳ್ಳದೆ ಇರುವುದರಿಂದ ಕಾಗಲಕರ್ ಅವರಿಗಾದ ನಷ್ಟವೇನೂ ಇಲ್ಲ. ನಷ್ಟ ಆಗಿದ್ದರೆ ಅದು ಸಮಾಜಕ್ಕೆ, ನಾಡಿಗೆ ಮತ್ತು ರಾಷ್ಟ್ರಕ್ಕೆ.

ಕಾಗಲಕರ್ ಪ್ರಚಾರ ಪ್ರಿಯರಲ್ಲ. ಅವರು ಯಾವಾಗಲೂ ಪ್ರಚಾರದಿಂದ ಗಾವುದ ದೂರ. ಏನಕೇನ ಪ್ರಕಾರೇಣ ಸ್ವಭಾವ ಅವರದಾಗಿರಲಿಲ್ಲ. ಹೀಗಾಗಿ ತಮ್ಮ ಸೇವೆಯನ್ನು ಅವರು ಇನ್ನಷ್ಟು ವಿಸ್ತರಿಸಿಕೊಳ್ಳುವ ಸಾಧ್ಯತೆಗಳೇ ಅವರಿಗೆ ಪ್ರಾಪ್ತವಾಗಲಿಲ್ಲ.

ಆದರೆ ಪತ್ರಕರ್ತರಾಗಿ ಕಾಗಲಕರ್ ಅವರು ಸಲ್ಲಿಸಿದ ಅಮೋಘ ಸೇವೆ ಸದಾಕಾಲಕ್ಕೂ ಉಳಿಯುವಂತಹುದು. ಕಲಬುರಗಿ ನಾಡಿನ ಪತ್ರಿಕೋದ್ಯಮದ ಇತಿಹಾಸ ಬರೆಯುವವರು ಕಾಗಲಕರ್ ಅವರಿಗೇ ಒಂದು ಅಧ್ಯಾಯವನ್ನು ಮೀಸಲಿಡುವುದು ಅನಿವಾರ್ಯ!

ಗೆಜೆಟ್ ಉಲ್ಲೇಖ

ಕಾಗಲಕರ್ ಬರೆದ ಹಲವು ಹತ್ತು ಲೇಖನಗಳು ಅಧ್ಯಯನಶೀಲರಿಗೆ,

ಸಂಶೋಧಿತರಿಗೆ, ಬರಹಗಾರರಿಗೆ ಉಪಯುಕ್ತ ಪೂರಕ ಮಾಹಿತಿಯನ್ನು ಒದಗಿಸಿಕೊಡುತ್ತವೆ. ಅವರ ಲೇಖನದ ಉಲ್ಲೇಖಗಳು ಅನೇಕ ಕಡೆ ಕಾಣಸಿಗುತ್ತವೆ. ಈ ಉಲ್ಲೇಖಗಳೇ ಅವರಿಗೆ ಅಧ್ಯಯನ ಮತ್ತು ಸಂಶೋಧನಾ ಲೋಕ ಸಲ್ಲಿಸುವ ಅಗತ್ಯ ಗೌರವವಾಗಿದೆ. ಒಬ್ಬ ಸಾಮಾನ್ಯ ಪತ್ರಕರ್ತನ ಬರವಣಿಗೆಗಳು ಕೆಲವರಿಗಾದರು ಅಗತ್ಯವೆಂದು ಕಂಡು ಬಂದರೆ ಅದಕ್ಕಿಂತಲೂ ಮಿಗಿಲಾದ ಸಾರ್ಥಕತೆ ಬೇರೊಂದಿರಲಾರದು.

ಕರ್ನಾಟಕ ಸರಕಾರ ೧೯೯೭ರಲ್ಲಿ ಕನ್ನಡದಲ್ಲಿ ಪ್ರಕಟಿಸಿದ ಗುಲಬರ್ಗ ಜಿಲ್ಲಾ ಗಾಸೆಟಿಯರನ ಪರಿಷ್ಕೃತ ಆವೃತ್ತಿಯಲ್ಲಿ ವಿವಿಧ ವಿಷಯಗಳಿಗೆ ಸಂಬಂಧಿಸಿದಂತೆ ಕಾಗಲಕರ್ ಅವರು 'ಹಿಂದು' ಪತ್ರಿಕೆಯಲ್ಲಿ ಬರೆದ ನಾಲ್ಕು ಲೇಖನಗಳನ್ನು ಉಲ್ಲೇಖಿಸಲಾಗಿದೆ. ಅವುಗಳೆಂದರೆ :

1) Forgotten Cultural Splendour, 7-3-1995

2) An Archeologists' Paradise, 10-10-1995

3) Historical Glory of a Village, 8-6-1996

4) A Historical Site Remains neglected, 16-6-1997

ಕರ್ನಾಟಕ ಸರಕಾರ ೨೦೦೪ರಲ್ಲಿ ಪ್ರಕಟಿಸಿ ಪರಿಷ್ಕೃತ ಗುಲ್ಬರ್ಗ ಜಿಲ್ಲೆ ಇಂಗ್ಲೀಷ್ ಗ್ಯಾಸೇಟಿಯರನಲ್ಲಿ ಈ ನಾಲ್ಕು ಲೇಖನಗಳನ್ನಲ್ಲದೆ ಕಾಗಲಕರ್ ಅವರು ಬರೆದ 'Sports in Gulbarga' (ದಿನಾಂಕ ನಮೂದಿಸಿಲ್ಲ) ಎಂಬ ಮತ್ತೊಂದು ಲೇಖನವನ್ನು ಉಲ್ಲೇಖಿಸಲಾಗಿದೆ.

೧೯೬೮ರಲ್ಲಿ ಗುಲ್ಬರ್ಗ ನಗರ ಸಭೆ ಒಂದು ಸ್ಮರಣ ಸಂಚಿಕೆಯನ್ನು ಹೊರತಂದಿತ್ತು. ಆಗಿನ ಕಾಲದ ಪ್ರಖ್ಯಾತ ನಾಯಕರಲ್ಲಿ ಒಬ್ಬರಾಗಿದ್ದ ನೀಲಕಂಠ ರಾವ್ ಎಸ್. ಪಾಟೀಲ ನಗರ ಸಭೆಯ ಅಧ್ಯಕ್ಷರಾಗಿದ್ದರು. ಪಾಟೀಲರು ಶಾಸಕರಾಗಿದ್ದುಕೊಂಡೇ (ವಿಧಾನ ಸಭೆ) ನಗರಸಭೆ ಅಧ್ಯಕ್ಷರಾಗಿದ್ದುದು ಒಂದು ವೈಶಿಷ್ಟ್ಯ. ಪಾಟೀಲರು ಮತ್ತು ಕಾಗಲಕರ್ ಖಾಸಾ ಸ್ನೇಹಿತರು. ಐವಾನ್-ಎ-ಶಾಹಿ ಪ್ರದೇಶದಲ್ಲಿರುವ ನೀಲಕಂಠರಾವ್ ಅವರ 'ಪರಾಗ' ಮನೆಯಲ್ಲಿ ಆಗಿನ ಕಾಲದ ದಿಗ್ಗಜರಾದ ಮತ್ತು ಈಗಲೂ ಸ್ಮರಣೀಯರಾದ ಮಹದೇವಪ್ಪ ರಾಂಪುರೆ, ವೀರೇಂದ್ರ ಪಾಟೀಲ, ನೀಲಕಂಠರಾವ್ ಪಾಟೀಲ ಮುಂತಾದವರ ಚಿಂತನ ಬೈಠಕ್ ನಡೆಯುತ್ತಿತ್ತು. ಆ ಬೈಠಕ್‌ಗೆ ಬೌದ್ಧಿಕ ಮೆರುಗು ಕೊಡುವವರು ಕಾಗಲಕರ್.

ಕಾಗಲಕರ್ ಇಲ್ಲದ ಚಿಂತನ ಗೋಷ್ಠಿಗಳು, ಹರಟೆಗಳು, ಚರ್ಚೆ ಅಪೂರ್ಣವೇ ಎನಿಸುತ್ತಿದ್ದವು.

ನೀಲಕಂಠರಾವ್ ಪಾಟೀಲ ನಗರಸಭೆ ಅಧ್ಯಕ್ಷರಾಗಿದ್ದಾಗ ನಗರಸಭೆ ತನ್ನ ಸಾಧನೆಗಳ ಕುರಿತಾಗಿ ಒಂದು ಸುಂದರ ಸ್ಮರಣ ಸಂಚಿಕೆಯನ್ನು ಪ್ರಕಟಿಸಿತ್ತು. ಈ ಸ್ಮರಣ ಸಂಚಿಕೆಯ ಹಿಂದಿನ ಪ್ರೇರಕ ಶಕ್ತಿ ಕಾಗಲಕರ್ ಆಗಿದ್ದರು.

"Gulbarga on March" (ಮುನ್ನಡೆಯಲ್ಲಿ ಗುಲ್ಬರ್ಗ) ಎಂಬ ಇಂಗ್ಲೀಷ್ ಭಾಷೆಯ ಈ ಸ್ಮರಣ ಸಂಚಿಕೆ ಅತ್ಯಂತ ಸುಂದರವೂ, ಆಕರ್ಷಕವೂ ಮತ್ತು ಮಾಹಿತಿ ಪೂರ್ಣವೂ ಆಗಿತ್ತು. ಸ್ಮರಣ ಸಂಚಿಕೆ ತಯಾರಿಕೆಯಲ್ಲಿ ಕಾಗಲಕರ್ ಅವರು ನೀಡಿದ್ದ ನೆರವನ್ನು ನೀಲಕಂಠರಾವ್ ಪಾಟೀಲರು ತಮ್ಮ ಮುನ್ನುಡಿಯಲ್ಲಿ ಕೃತಜ್ಞತೆಯಿಂದ ನೆನೆದಿದ್ದಾರೆ. ಆಗಿನ ಉಪರಾಷ್ಟ್ರಪತಿ ಬಿ.ವಿ. ಗಿರಿ, ಅಖಿಲ ಭಾರತ ಕಾಂಗ್ರೆಸ್ ಸಮಿತಿ ಅಧ್ಯಕ್ಷ ನಿಜಲಿಂಗಪ್ಪ, ಮುಖ್ಯಮಂತ್ರಿ ವಿರೇಂದ್ರ ಪಾಟೀಲ ಸೇರಿದಂತೆ ಹಲವು ನಾಯಕರು, ವರಿಷ್ಠ ಅಧಿಕಾರಿಗಳು ಈ ಸ್ಮರಣ ಸಂಚಿಕೆಗೆ ಸಂದೇಶಗಳನ್ನು ನೀಡಿದ್ದರು.

ಕಾರ್ಯಾಗಾರಕ್ಕೆ ಆಹ್ವಾನ

ಕಾಗಲಕರ್ ಅವರಲ್ಲಿದ್ದ ಅಪಾರ ಸಾಂಸ್ಕೃತಿಕ ಕಾಳಜಿ ಅವರು ಲೇಖನಗಳ ಮೂಲಕ ಪ್ರಕಟಗೊಳ್ಳುತ್ತಿತ್ತಷ್ಟೆ. ಅವರಲ್ಲಿ ಅಂತರ್ಗತವಾಗಿದ್ದ ಹೈದ್ರಾಬಾದ ಕರ್ನಾಟಕ ಭಾಗದ ಕಲೆ, ಸಾಹಿತ್ಯ, ಸಂಗೀತ, ಸಂಸ್ಕೃತಿ, ಇತಿಹಾಸ, ಪರಂಪರೆ ಇತ್ಯಾದಿ ಅವರ ಬರಹಗಳ ಮೂಲಕ ಓತಪ್ರೋತವಾಗಿ ಹೊರಹೊಮ್ಮುತ್ತಿದ್ದವು. 'ಹಿಂದು' ಪತ್ರಿಕೆಯಲ್ಲಿ ಪ್ರಕಟವಾದ ಅವರ ಲೇಖನಗಳು ಅಧಿಕಾರಿ ವಲಯದಲ್ಲಿ ವಿಶೇಷ ಪ್ರಭಾವ ಉಂಟು ಮಾಡಿದ್ದವು, ಸಂಚಲನಕ್ಕೆ ದಾರಿ ಮಾಡಿ ಕೊಡುತ್ತಿದ್ದವು.

ಇದಕ್ಕೆ ಒಂದು ಉದಾಹರಣೆ ಎಂದರೆ ಹೈದ್ರಾಬಾದ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ ತನ್ನ ಒಂದು ಕಾರ್ಯಾಗಾರಕ್ಕೆ ಕಾಗಲಕರ್ ಅವರ ಸೇವೆಯನ್ನು ಬಳಸಿಕೊಂಡದ್ದು.

೧೯೯೪ರ ಡಿಸೆಂಬರ್ ೬ ಮತ್ತು ೭ ರಂದು ನಡೆದ ಮಂಡಳಿಯ ಒಂದು ಕಾರ್ಯಾಗಾರದಲ್ಲಿ ಭಾಗವಹಿಸಿ ಸಲಹೆ ಸೂಚನೆಗಳನ್ನು ನೀಡುವಂತೆ ಕಾಗಲಕರ್ ಅವರಿಗೆ ಒಂದು ಅಧಿಕೃತ ಪತ್ರದ ಮೂಲಕ ವಿದ್ಯುಕ್ತ ಆಹ್ವಾನ ನೀಡಲಾಗಿತ್ತು. ಆ ಪತ್ರದ ಒಕ್ಕಣೆ ಈ ಕೆಳಗಿನಂತಿದೆ.

ಮಾನ್ಯರೆ,

ವಿಷಯ : ಹೈದ್ರಾಬಾದ ಕರ್ನಾಟಕದ ಪ್ರದೇಶಾಭಿವೃದ್ಧಿ ಮಂಡಳಿಯ ೧೯೯೫-೯೬ನೇ ಸಾಲಿನ ಕ್ರಿಯಾ ಯೋಜನೆ ತಯಾರಿ ಕುರಿತು.

ಮೇಲ್ಕಂಡ ವಿಷಯದ ಬಗ್ಗೆ ತಮಗೆ ತಿಳಿಸುವುದೇನೆಂದರೆ ದಿನಾಂಕ ೬-೧೨-೧೯೯೪ ಮತ್ತು ೭-೧೨-೧೯೯೪ ರಂದು ಹೈದ್ರಾಬಾದ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯ ೧೯೯೫-೯೬ನೇ ಸಾಲಿನ ಕ್ರಿಯಾ ಯೋಜನೆ ತಯಾರಿ ಕುರಿತು ಗುಲ್ಬರ್ಗ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಒಂದು ಕಾರ್ಯಾಗಾರವನ್ನು ಏರ್ಪಡಿಸಲಾಗಿದೆ. ಹೈದ್ರಾಬಾದ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯ ೧೯೯೫-೯೬ನೇ ಸಾಲಿನ ಆಯ-ವ್ಯಯ ರೂ. ೬೬ ಕೋಟಿ ಇರುತ್ತದೆ. ಇದರ ಪೈಕಿ ರೂ. ಒಂದು ಕೋಟಿಯನ್ನು ಕಲೆ ಹಾಗೂ ಸಂಸ್ಕೃತಿ ಸಲುವಾಗಿ ನೀಡಲು ನಿರ್ಧರಿಸಲಾಗಿದೆ. ಹೈದ್ರಾಬಾದ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯ ವ್ಯಾಪ್ತಿಯಲ್ಲಿ ಬರುವ ನಾಲ್ಕು ಜಿಲ್ಲೆಗಳಾದ ಬೀದರ್, ರಾಯಚೂರು, ಬಳ್ಳಾರಿ ಮತ್ತು ಗುಲ್ಬರ್ಗ ಇವುಗಳಿಗೆ ತಲಾ ರೂ. ೨೫ ಲಕ್ಷ ಕೊಡಲು ನಿರ್ಧರಿಸಲಾಗಿದೆ. ಈ ಹಣದಿಂದ ಆಯಾ ಜಿಲ್ಲೆಗಳಲ್ಲಿರುವ ಐತಿಹಾಸಿಕ ಸ್ಮಾರಕಗಳನ್ನು ಪುನರುಜ್ಜೀವನಗೊಳಿಸುವ ಹಾಗೂ ಸಂರಕ್ಷಿಸುವ ಕಾರ್ಯವನ್ನು ಕೈಗೆತ್ತಿಕೊಳ್ಳುವ ಯೋಜನೆ ಇದೆ. ತಮಗೆ ಈ ವಿಷಯದ ಬಗ್ಗೆ ಹೆಚ್ಚಿನ ಆಸಕ್ತಿ ಇರುವ ಕಾರಣ ತಾವು ಸದರಿ ದಿನಾಂಕಗಳಂದು ನಡೆಯುವ ಕಾರ್ಯಾಗಾರದಲ್ಲಿ ಭಾಗವಹಿಸಿ ತಮ್ಮ ಅಮೂಲ್ಯ ಸಲಹೆ ಸೂಚನೆಗಳನ್ನು ನೀಡಲು ಈ ಮೂಲಕ ಆಹ್ವಾನಿಸಲಾಗಿದೆ. ಕಾರ್ಯಾಗಾರವು ೬-೧೨-೧೯೯೪ ರಂದು ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಬೆಳಿಗ್ಗೆ ೧೦ ಗಂಟೆಗೆ ಪ್ರಾರಂಭವಾಗುವುದು.

ತಮ್ಮ ವಿಶ್ವಾಸಿ
ಎಸ್.ಎಸ್. ಪಟ್ಟಣ ಶೆಟ್ಟಿ
ಸಹಿ/-
ಉಪ ಕಾರ್ಯದರ್ಶಿ
ಹೈದ್ರಾಬಾದ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ
ಗುಲಬರ್ಗ

ಹೈದ್ರಾಬಾದ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ ಕೇವಲ ಕಾಗಲಕರ್ ಅವರಿಗೆ ಮಾತ್ರ ಈ ಆಹ್ವಾನವನ್ನು ನೀಡಿತ್ತು. ಕಾಗಲಕರ್ ಅವರಲ್ಲಿರುವ

ಅನನ್ಯ, ಅಗಾಧ ಸಾಂಸ್ಕೃತಿಕ ಕಾಳಜಿಯನ್ನು ಮಂಡಳಿ ಗುರುತಿಸುವಲ್ಲಿ ಯಶಸ್ವಿಯಾಗಿತ್ತು.

ಕಾಗಲಕರ್ ತಮ್ಮ ವಿದ್ಯಾರ್ಥಿ ದೆಸೆಯಲ್ಲಿಯೇ ಭಾರತ ಸ್ವಾತಂತ್ರ್ಯ ಸಂಗ್ರಾಮ ಚಳುವಳಿಗೆ ಧುಮುಕಿದರು. ದೇಶಕ್ಕೆ ಸ್ವಾತಂತ್ರ್ಯ ಬಂದ ನಂತರವೂ ಅವರು ತಮ್ಮ ಪ್ರಾಂತಕ್ಕಾಗಿ ಹೋರಾಟ ನಡೆಸಬೇಕಾಗಿ ಬಂದದ್ದು ಒಂದು ವಿಲಕ್ಷಣ ವೈಚಿತ್ರ್ಯ. ಬ್ರಿಟೀಷರ ದಾಸ್ಯ ಶೃಂಖಲೆಯಿಂದ ಭಾರತ ಬಿಡುಗಡೆಯಾದರೂ ನಿಜಾಂಶಾಹಿಯಿಂದ ಹೈದ್ರಾಬಾದ ಸ್ಟೇಟ್ ಬಿಡುಗಡೆ ಹೊಂದಲಿಲ್ಲ. ಸ್ವಾತಂತ್ರ್ಯ ನಂತರದ ಒಂದು ವರ್ಷದ ಅವಧಿಯಲ್ಲಿ ನಿಜಾಂ ಆಡಳಿತದಲ್ಲಿ ಹಿಂದುಗಳ ಮೇಲೆ ಹೇಳ ತೀರದಷ್ಟು ದೌರ್ಜನ್ಯ, ಅತ್ಯಾಚಾರ, ಕೊಲೆ, ಸುಲಿಗೆ, ರಕ್ತಪಾತ ನಡೆದು ಹೋದವು. ಹೈದ್ರಾಬಾದ ವಿಮೋಚನಾ ಚಳವಳಿಯಲ್ಲಿ ಅವರು ತಮ್ಮ ಭವಿಷ್ಯವನ್ನು ಪಣಕ್ಕಿಟ್ಟು ಹೋರಾಟಕ್ಕಿಳಿದರು. ಈ ಚಳವಳಿಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದರಿಂದಲೇ ಮನೆಯವರಿಂದ ಅವರಿಗೆ 'ಉಡಾಳ' ಎಂಬ ಬಿರುದು ಪ್ರಾಪ್ತವಾಗಿತ್ತು. ಚಳವಳಿಯ ಪರಿಣಾಮವಾಗಿ ಅವರು ತಮ್ಮ ಶಿಕ್ಷಣವನ್ನು ಒಂಭತ್ತನೆಯ ಇಯತ್ತೆಗೆ ಮೊಟಕುಗೊಳಿಸಿದರು.

ಅವರು ಹೈದ್ರಾಬಾದಿನಲ್ಲಿದ್ದಾಗಲೇ 'ವಂದೇ ಮಾತರಂ' ಚಳುವಳಿಯಲ್ಲಿ ಪಾಲ್ಗೊಂಡು ಶಾಲೆಯನ್ನು ತೊರೆದರು. ಹೈದ್ರಾಬಾದ ಸಂಸ್ಥಾನ ಸ್ಟೇಟ್ ಕಾಂಗ್ರೆಸ್ಸಿನಲ್ಲಿ ಸ್ವಯಂ ಸೇವಕರಾದರು.

ಭಾರತ ಸ್ವಾತಂತ್ರ್ಯ ಚಳವಳಿ ಹಾಗೂ ಹೈದ್ರಾಬಾದ ವಿಮೋಚನಾ ಚಳುವಳಿಯಲ್ಲಿ ಅವರು ಸಕ್ರಿಯವಾಗಿ ಭಾಗವಹಿಸಿದ್ದರೂ ಸ್ವಾತಂತ್ರ್ಯ ಯೋಧನೆಂಬ ಅಧಿಕೃತ ಹಣೆಪಟ್ಟಿ ಅವರಿಗೆ ದೊರೆಯಲಿಲ್ಲ. ಅದನ್ನು ದೊರಕಿಸಿಕೊಳ್ಳಲು ಅವರು ಯಾವುದೇ ವಿಶೇಷ ಪ್ರಯತ್ನವನ್ನೂ ಮಾಡಲಿಲ್ಲ. ಸ್ವಾತಂತ್ರ್ಯ ಯೋಧರಿಗೆ ದೊರೆಯುವ ಪಿಂಚಣಿ ಮತ್ತಿತರ ಸೌಕರ್ಯಗಳಿಗೆ ಹಾತೊರೆಯಲಿಲ್ಲ. ಅವರು ಮನಸ್ಸು ಮಾಡಿದ್ದರೆ ತಮ್ಮ ಆರ್ಥಿಕ ಉದ್ಧಾರಕ್ಕೆ ಸ್ವಾತಂತ್ರ್ಯ ಹೋರಾಟದ ಹಿನ್ನೆಲೆಯನ್ನು ಬಂಡವಾಳವನ್ನಾಗಿ ಮಾಡಿಕೊಂಡು ಸಂಪತ್ತಿನ ಶೇಖರಣೆಯಲ್ಲಿ ತೊಡಗಬಹುದಿತ್ತು. ಹೊಲ, ಮನೆ, ಪೆಟ್ರೋಲ ಬಂಕ್ ಇತ್ಯಾದಿಗಳನ್ನು ಗಿಟ್ಟಿಸಿಕೊಳ್ಳುವ ವಿಫುಲ ಅವಕಾಶಗಳು ಅವರಿಗೆ ಖಂಡಿತ ಇದ್ದವು.

ಆಗಿನ ಮೈಸೂರು ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾಗಿದ್ದ ಮಹ್ಮದ್ ಅಲಿ ಅವರು ೧೯೬೪ರಲ್ಲಿ ಕಾಗಲಕರ್ ಅವರು ಸ್ವಾತಂತ್ರ್ಯ ಚಳುವಳಿಯಲ್ಲಿ ಕಷ್ಟ-ನಷ್ಟ

ಅನುಭವಿಸಿದ್ದರ ಕುರಿತು ಒಂದು ಪ್ರಮಾಣ ಪತ್ರವನ್ನು ನೀಡಿ ರಾಜಕೀಯ ಸಂತ್ರಸ್ತರಿಗೆ ದೊರೆಯುವ ಎಲ್ಲ ಸಹಾಯ ಮತ್ತು ನೆರವಿಗೆ ಕಾಗಲಕರ್ ಅರ್ಹರಾಗಿದ್ದಾರೆಂದು ಶಿಫಾರಸು ಮಾಡಿದ್ದರು. ಮಹ್ಮದ್ ಅಲಿ ಅವರು ಇಂಗ್ಲಿಷ್‌ನಲ್ಲಿ ನೀಡಿದ್ದ ಪ್ರಮಾಣ ಪತ್ರದ ಕನ್ನಡ ಅನುವಾದ ಈ ಕೆಳಗಿನಂತಿದೆ.

"ಗುಲ್ಬರ್ಗ ಜಿಲ್ಲೆಯ ಶ್ರೀ ವಿ.ಎನ್. ಕಾಗಲಕರ್ ಅವರು ಸ್ವಾತಂತ್ರ್ಯ ಚಳವಳಿಯಲ್ಲಿ ಭಾಗವಹಿಸಿ ರಾಜಕೀಯ ಸಂತ್ರಸ್ತರಾಗಿದ್ದಾರೆ. ಸ್ವಾತಂತ್ರ್ಯಾಂದೋಲನ -ದಲ್ಲಿ ಅವರು ಸಾಕಷ್ಟು ಕಷ್ಟ ನಷ್ಟಗಳನ್ನು ಅನುಭವಿಸಿ ಬಂಧನಕ್ಕೆ ಒಳಗಾಗಿದ್ದರು. ಓರ್ವ ರಾಜಕೀಯ ಸಂತ್ರಸ್ತರಿಗೆ ದೊರೆಯುವ ಎಲ್ಲ ನೆರವು ಮತ್ತು ಸಹಾಯಕ್ಕೆ ಕಾಗಲಕರ್ ಅರ್ಹರಾಗಿದ್ದಾರೆ."

ಇದಕ್ಕೂ ಮುಂಚೆ ಕಾಂಗ್ರೆಸ್ ಪಕ್ಷದ ವರಿಷ್ಠ ಹಾಗೂ ಅತ್ಯಂತ ಗೌರವಾನ್ವಿತ ನಾಯಕರಾಗಿದ್ದ ಕೊಳ್ಳೂರ ಮಲ್ಲಪ್ಪ ೨೧-೨-೧೯೬೩ ರಂದು ಕಾಗಲಕರ್ ಅವರು ರಾಜಕೀಯ ಸಂತ್ರಸ್ತರಾಗಿ ಸಂಕಷ್ಟಗಳನ್ನು ಅನುಭವಿಸಿದ್ದನ್ನು ಕುರಿತು ಪ್ರಮಾಣ ಪತ್ರವನ್ನು ನೀಡಿ ಅವರು ಅಗತ್ಯ ನೆರವಿಗೆ ಅರ್ಹರಾಗಿದ್ದಾರೆಂದು ಶಿಫಾರಸು ಮಾಡಿದ್ದರು. ಅವರು ನೀಡಿದ ಶಿಫಾರಸು ಪತ್ರದ ಒಕ್ಕಣೆ ಹೀಗಿದೆ :

"ಗುಲ್ಬರ್ಗದ ಎಂ.ಎಸ್.ಕೆ. ಮಿಲ್ಸಿನ ಶ್ರೀ ವಿ.ಎನ್. ಕಾಗಲಕರ್ ಅವರು ರಾಜಕೀಯ ಸಂತ್ರಸ್ತರಾಗಿದ್ದು ಹಳೆಯ ಸಾಮಾಜಿಕ ಕಾರ್ಯಕರ್ತರೂ ಆಗಿದ್ದಾರೆಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ. ಕಳೆದ ಕೆಲವಾರು ವರ್ಷಗಳಿಂದ ಅವರು ಕಾರ್ಮಿಕ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಅವರು ಸಹಾಯುಕ್ಕೆ ಅರ್ಹರಾಗಿದ್ದಾರೆ."

ಈ ಎರಡು ಅಧಿಕೃತವಾದ ಪ್ರಯಾಣ ಪತ್ರ / ಶಿಫಾರಸು ಪತ್ರಗಳಿದ್ದರೂ ಕಾಗಲಕರ್ ಎಂದಿಗೂ ಅವುಗಳನ್ನು ಬಳಸಿ ಯಾವುದೇ ನೆರವನ್ನು ಪಡೆಯಲಿಲ್ಲ. "ಪಿಂಚಣಿ ಅಥವಾ ಇನ್ನಿತರ ಸೌಲಭ್ಯಗಳು ಲಭಿಸುತ್ತವೆ ಎಂದು ತಾವು ಸ್ವಾತಂತ್ರ್ಯ ಹೋರಾಟದಲ್ಲಿ ಸ್ವಯಂ ಸೇವಕರಾಗಿ ಭಾಗವಹಿಸಿರಲಿಲ್ಲ. ಸ್ವಾತಂತ್ರ್ಯಕ್ಕಾಗಿ ಹೋರಾಡುವುದು ರಾಷ್ಟ್ರೀಯ ಕರ್ತವ್ಯವಾಗಿತ್ತು. ಅಷ್ಟನ್ನು ಮಾತ್ರ ಮಾಡಿದೆ. ಸ್ವಾತಂತ್ರ್ಯ ಬಂದದ್ದೇ ನಮ್ಮ ಹೋರಾಟಕ್ಕೆ ಸಂದ ಪ್ರತಿಫಲ." ಸ್ವಾತಂತ್ರ್ಯ ಯೋಧರ ಸ್ಥಾನಮಾನ ಏಕೆ ಪಡೆಯಲಿಲ್ಲ ಎಂದು ಯಾರಾದರೂ ಕೇಳಿದರೆ ಕಾಗಲಕರ್ ನೀಡುತ್ತಿದ್ದ ಉತ್ತರ ಇದಾಗಿತ್ತು.

ಕಡುಬಡತನ ಮತ್ತು ತುಂಬು ಸಂಸಾರದ ತಾಪತ್ರಯಗಳ ಸರಮಾಲೆಯನ್ನೇ ಧರಿಸಿದ್ದ ಕಾಗಲಕರ್ ಅಭಿಮನ್ಯುವಿನಂತೆ ಏಕಾಂಗಿ ವೀರನಾಗಿ ಪತ್ರಿಕೋದ್ಯಮದ ಅಸ್ತ್ರದ ಮೂಲಕ ಸಾಂಸಾರಿಕ, ಸಾಮಾಜಿಕ ಚಕ್ರವ್ಯೂಹದಲ್ಲಿ ಹೋರಾಡಿದರು. ಪ್ರಶಸ್ತಿ, ಗೌರವ, ಪುರಸ್ಕಾರ, ಸತ್ಕಾರ, ಸನ್ಮಾನ ಇತ್ಯಾದಿ ಯಾವುದರ ಬಗ್ಗೆಯೂ ತಲೆಕೆಡಿಸಿಕೊಳ್ಳಲಿಲ್ಲ. ಅವರು ಎಂದಿಗೂ ತಮ್ಮ ಸ್ವ-ಪರಿಚಯ ಪತ್ರ (ಬಯೋ ಡಾಟಾ) ಯಾರಿಗೂ ನೀಡಿದವರಲ್ಲ. ಕಾರಣ, ಅವರಲ್ಲಿ ಬಯೋಡಾಟಾ ಇರಲೇಇಲ್ಲ! ಪ್ರಚಾರ, ಪ್ರಸಿದ್ಧಿಯ ಗೀಳಿನಿಂದ ಗಾವುದ ದೂರವಿದ್ದುದರಿಂದಲೇ ಪ್ರಾಯಃ ಕಾಗಲಕರ್ ಅತ್ಯಂತ ನಿಸ್ಪೃಹತೆಯಿಂದ ಪತ್ರಿಕಾ ಪ್ರಪಂಚದಲ್ಲಿ ಕರ್ಮಯೋಗಿಯಂತೆ ಕಾರ್ಯನಿರ್ವಹಿಸಲು ಸಾಧ್ಯವಾಯಿತು. ಸದ್ದು-ಗದ್ದವಿಲ್ಲದೆ ಸಭ್ಯನಾಗಿ ನಿಷ್ಠುರತೆಯಿಂದ ಕರ್ತವ್ಯ ನಿರ್ವಹಿಸುವ ಶಕ್ತಿ ಅವರಲ್ಲಿತ್ತು. ಅಂತೆಯೇ ಪ್ರಶಸ್ತಿ, ಪುರಸ್ಕಾರ, ಗೌರವಗಳು ಅವರನ್ನು ಅರಸಿ ಬಂದವೇ ಹೊರತು ಅವರು ಅವುಗಳ ಬೆನ್ನ ಹಿಂದೆ ಬೀಳಲಿಲ್ಲ.

ಆಗಿನ ಕಾಲದಲ್ಲಿ ಈಗಿರುವಂತೆ ಪತ್ರಕರ್ತರಿಗೆ ಪ್ರಶಸ್ತಿ ನೀಡುವ ಅವಕಾಶಗಳು ಇರಲಿಲ್ಲ. ಇದ್ದರೂ ಬಹಳ ಕಡಿಮೆಯೇ. ಈಗ ಕರ್ನಾಟಕ ಮಾಧ್ಯಮ ಅಕಾಡೆಮಿ, ಸರಕಾರ ಹಾಗೂ ಸರಕಾರೇತರ ಸಂಸ್ಥೆಗಳು ಪತ್ರಕರ್ತರಿಗೆ ಪ್ರಶಸ್ತಿಗಳ ಹೆಬ್ಬಾಗಿಲನ್ನೇ ತೆರೆದಿವೆ. ಈ ಹಿನ್ನೆಲೆಯಲ್ಲಿ ನೋಡುವುದಾದರೆ ಈ ಎಲ್ಲ ಪ್ರಶಸ್ತಿಗಳು ಕಾಗಲಕರ್ ಅವರಿಗೇ ದೊರೆಯಬೇಕಿತ್ತು.

ಗೃಹ ಸನ್ಮಾನ

ಕಲಬುರಗಿಯಲ್ಲಿ ನಿರಂತರವಾಗಿ ಸಕ್ರಿಯವಾಗಿರುವ ಸಾಹಿತ್ಯಕ - ಸಾಂಸ್ಕೃತಿಕ ಸಂಘಟನೆ ಎಂದರೆ ವೀರಭದ್ರ ಸಿಂಪಿ ಅವರು ಸ್ಥಾಪಿಸಿರುವ 'ಉದಯೋನ್ಮುಖ ಯುವ ಬರಹಗಾರರ ಬಳಗ'. ಈ ಸಂಸ್ಥೆ ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಅನನ್ಯ ಸೇವೆ ಗೈದು, ಸಾಧನೆ ಮಾಡಿದವರಿಗೆ ಒಂದು ವಿನೂತನ ಕಾರ್ಯಕ್ರಮ ಹಾಕಿಕೊಂಡಿದೆ. ಸಾಧಕರ ಮನೆಗೆ ತೆರಳಿ 'ಗೃಹ ಸನ್ಮಾನ' ನೀಡುವುದು ಇದರ ವೈಶಿಷ್ಟ್ಯ. ಉದಯೋನ್ಮುಖ ಯುವ ಬರಹಗಾರರ ಬಳಗದ ಗೃಹ ಸನ್ಮಾನಕ್ಕೆ ಪಾತ್ರರಾದ ಕೆಲವೇ ಮಹನೀಯರಲ್ಲಿ ಕಾಗಲಕರ್ ಒಬ್ಬರು. ದಿನಾಂಕ ೨೭-೧೦-೧೯೯೬ ರಂದು ಕಲಬುರಗಿಯ ಶಾಂತಿನಗರದ ಕಾಗಲಕರ್ ಅವರ ಕಿರಿದಾದ ಮನೆಯಲ್ಲಿ ನಡೆದ ಗೃಹ ಸನ್ಮಾನದಲ್ಲಿ ಕಾಗಲಕರ್ ಅವರಿಗೆ ತುಂಬು ಹೃದಯದ ಸನ್ಮಾನ ಪತ್ರವನ್ನು ಅರ್ಪಿಸಲಾಯಿತು. ಸನ್ಮಾನ ಪತ್ರದ ಒಕ್ಕಣೆ ಈ ರೀತಿ ಇದೆ :

ಹಿರಿಯ ಪತ್ರಕರ್ತ ಲೇಖಕ ಶ್ರೀ ವಿ.ಎನ್. ಕಾಗಲಕರ್ ಅವರಿಗೆ ಗೃಹ ಸನ್ಮಾನ ಪತ್ರ

ಮಾನ್ಯರೆ,

ನಮ್ಮ ಬಳಗ ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿದ ಹಿರಿಯರನ್ನು ಗುರುತಿಸಿ ಅವರ ಮನೆಗೆ ಹೋಗಿ ಗೌರವಿಸಲು ೧೯೯೫ ರಿಂದ ಗೃಹ ಸನ್ಮಾನ ಕೈಕೊಳ್ಳುತ್ತಿದೆ. ಈಗಾಗಲೇ ಗುರುನಾಥರಾವ್ ಅಲಗೂಡಕರ್ (ಶಾಹಾಬಾದ), ಡಾ|| ವೀರಣ್ಣ ದಂಡೆ, ಗೀತಾ ನಾಗಭೂಷಣ ಮತ್ತು ಧನಂಜಯ ಶಿಲ್ಪಿ ಅವರಿಗೆ ಗೌರವಿಸಿ, ಅವರ ಗಣನೀಯ ಸಾಧನೆ ಸ್ಮರಿಸಿ ಅವರ ಅನುಭವಗಳನ್ನು ಹಂಚಿಕೊಂಡಿದೆ. ಅದರಂತೆ ನಮ್ಮ ಹಿರಿಯ ಪತ್ರಕರ್ತ-ಲೇಖಕರಾದ ಶ್ರೀ ವಿ.ಎನ್. ಕಾಗಲಕರ್ ಅವರನ್ನು ಸತ್ಕರಿಸಲು ನಿರ್ಧರಿಸಿದೆ.

ವಿಶ್ವವಿಖ್ಯಾತವಾಗಿರುವ ಹೈದ್ರಾಬಾದ ಕರ್ನಾಟಕದ ಕಲೆ, ಸಾಹಿತ್ಯ, ಐತಿಹಾಸಿಕ ಸ್ಮಾರಕಗಳ ನಿರ್ಲಕ್ಷತೆಯ ಕೊರಗಿನಲ್ಲಿ ಶ್ರೀ ಕಾಗಲಕರ್ ಅವರು ಕನ್ನಡ ಮತ್ತು ಇಂಗ್ಲೀಷ ಪತ್ರಿಕೆಗಳಲ್ಲಿ ಲೇಖನಗಳ ಮೂಲಕ ನಾಡು ಮತ್ತು ರಾಷ್ಟ್ರಕ್ಕೆ ಪರಿಚಯಿಸುತ್ತಿದ್ದಾರೆ.

ಕರ್ನಾಟಕದ ಐತಿಹಾಸಿಕ, ಸಾಂಸ್ಕೃತಿಕ ಮತ್ತು ಆಧ್ಯಾತ್ಮಿಕ ಕ್ಷೇತ್ರಗಳಲ್ಲಿ ಆಳವಾದ ಅಧ್ಯಯನ ಮಾಡಿರುವ ಶ್ರೀ ಕಾಗಲಕರ್ ಅವರು ಪಿ.ಟಿ.ಐ. ವರದಿಗಾರರಾಗಿ ೧೯೫೩ ರಿಂದ ತಮ್ಮ ಪತ್ರಿಕಾ ರಂಗದ ವೃತ್ತಿಯನ್ನು ಆರಂಭಿಸಿದರು. ಬಳಿಕ 'ಸಂಯುಕ್ತ ಕರ್ನಾಟಕ' ನಂತರ ೧೯೭೬ ರಿಂದ 'ಹಿಂದು' ಪತ್ರಿಕೆಯ ವರದಿಗಾರರಾಗಿ ಲೇಖಕರಾಗಿ ಅವಿಸ್ಮರಣೀಯ ಸೇವೆ ಸಲ್ಲಿಸುತ್ತಿದ್ದಾರೆ.

ನಾಗಾಯಿ ಘಟಕ (ಪ್ರಾಚೀನ ವಿಶ್ವವಿದ್ಯಾಲಯು), ಸನ್ನತಿ ಮತ್ತು ಚಂದ್ರಲಾಪರಮೇಶ್ವರಿ ಮಂದಿರ, ಬೌದ್ಧ ಕೇಂದ್ರಗಳು, ಶಿರವಾಳದ ರಾಷ್ಟ್ರಕೂಟರ ಕಲಾ ಮಂದಿರಗಳು, ಚಾಲುಕ್ಯ ಶೈಲಿಯ ಮಂದಿರಗಳು, ನೃಪತುಂಗನ ರಾಜಧಾನಿ ಮಳಖೇಡ, ಜಯತೀರ್ಥ ಟೀಕಾಚಾರ್ಯರ ವೃಂದಾವನ, ಸುರಪುರದ ಆಸ್ಥಾನ ಕಲಾವಿದ ಗರುಡಾದ್ರಿ ಹೀಗೆ ಅನೇಕ ಐತಿಹಾಸಿಕ ವ್ಯಕ್ತಿ ಮತ್ತು ಸ್ಮಾರಕಗಳ ಪರಿಚಯದ ಕೀರ್ತಿ ಇವರದಾಗಿದೆ.

ಈ ಭಾಗದ ಸಾಹಿತ್ಯ ಮತ್ತು ಸಾಂಸ್ಕೃತಿಕ ಕಂಪನ್ನು ಇಡೀ ದೇಶಕ್ಕೆ ಪರಿಯಿಸಿದ ಇವರ ಅಪ್ರತಿಮ ಸೇವೆಗೆ ಕರ್ನಾಟಕದ ರಾಜ್ಯೋತ್ಸವ ಪ್ರಶಸ್ತಿ,

ಕರ್ನಾಟಕ ಪತ್ರಿಕಾ ಅಕಾಡೆಮಿ ಪ್ರಶಸ್ತಿಗಳು ಸಂದಿವೆ. ಇಂತಹ ವಿಖ್ಯಾತ ಪತ್ರಕರ್ತ - ಲೇಖಕನಿಗೆ ನಮ್ಮ ಯುವ ಬರಹಗಾರರ ಬಳಗದ ಯೋಜನೆಯಂತೆ ಗೃಹ ಸನ್ಮಾನಿಸಿ ಅವರ ಅನಿಸಿಕೆ, ಅನುಭವಗಳನ್ನು ಹಂಚಿಕೊಳ್ಳಲು ಹೊರಟಿದ್ದೇವೆ. ತಾವು ನಮ್ಮ ಬಳಗದ ಸದಸ್ಯರೊಂದಿಗೆ ಆಗಮಿಸಲು ಈ ಪತ್ರದ ಮೂಲಕ ಕೋರುತ್ತೇನೆ.

ಇಂತಿ ತಮ್ಮ ವಿಶ್ವಾಸಿ
ವೀರಭದ್ರ ಸಿಂಪಿ
ಅಧ್ಯಕ್ಷ

ಕಾಗಲಕರ್ ಅವರು ಹಲವು ಹತ್ತು ಪ್ರಶಸ್ತಿ, ಗೌರವ, ಪುರಸ್ಕಾರಗಳಿಗೆ ಪಾತ್ರರಾಗಿದ್ದಾರೆ. ರಾಷ್ಟ್ರಕೂಟ ಚಕ್ರವರ್ತಿ ಅಮೋಘವರ್ಷ ನೃಪತುಂಗನ ಸ್ಮರಣಾರ್ಥ ಧಾತೃನಾಮ ಸಂವತ್ಸರ ಮಾಘ ಬಹುಳ ತೃತಿಯಾ ಮತ್ತು ಚತುರ್ಥಿ ೧೯೯೭ರ ಫೆಬ್ರವರಿ ೨೫ ಮತ್ತು ೨೬ ರಂದು ನಡೆದ "ಮಳಖೇಡ ಉತ್ಸವ ೧೯೯೭" ಸಂದರ್ಭದಲ್ಲಿ ಕಾಗಲಕರ್ ಅವರಿಗೆ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಕೆನರಾ ಬ್ಯಾಂಕ್ ೧೧ನೆ ಡಿಸೆಂಬರ ೧೯೯೫ ರಂದು ತನ್ನ ೯೦ನೆ ವಾರ್ಷಿಕೋತ್ಸವ ಸಮಾರಂಭದಲ್ಲಿ ಕಾಗಲಕರ್ ಅವರಿಗೆ ಅಭಿನಂದನಾ ಪತ್ರವನ್ನು ಸಮರ್ಪಿಸಿತು. ವಿವಿಧ ರಂಗಗಳಲ್ಲಿ ಸೇವೆ ಸಲ್ಲಿಸಿ ಎಲ್ಲರ ಗೌರವಕ್ಕೆ ಪಾತ್ರರಾಗಿದ್ದು ರಾಜ್ಯ ಹಾಗೂ ರಾಷ್ಟ್ರಮಟ್ಟದಲ್ಲಿ ಕಲಬುರ್ಗಿ ಪ್ರದೇಶದ ಹೆಸರನ್ನು ಬೆಳಗಿಸಿದ್ದಕ್ಕಾಗಿ ಕೆನರಾ ಬ್ಯಾಂಕ್ ತನ್ನ ಅಭಿನಂದನಾ ಪತ್ರದಲ್ಲಿ ಕೃತಜ್ಞತೆಯಿಂದ ಕಾಗಲಕರ್ ಅವರನ್ನು ನೆನೆದಿದೆ.

ರೋಟರಿ ಕ್ಲಬ್ ಗುಲಬರ್ಗ ಉತ್ತರ ೨೮ನೆಯ ಸೆಪ್ಟೆಂಬರ್ ೧೯೯೬ರಂದು ತಮಗೆ ದೊರೆತಿರಬಹುದಾದ ಪ್ರಶಸ್ತಿ, ಗೌರವ ಅಭಿನಂದನೆ, ಪುರಸ್ಕಾರ ಇತ್ಯಾದಿಗಳ ಕುರಿತಾಗಿ ಯಾವುದೇ ದಾಖಲೆಯನ್ನು ಜತನದಿಂದ ಸಂಗ್ರಹಿಸಿ ರಕ್ಷಿಸಿಕೊಂಡು ಬರಲಿಲ್ಲ. ಈ ಮೇಲೆ ಉಲ್ಲೇಖಿಸಿರುವ ಗೌರವದ ಪ್ರಸಂಗಗಳು ಅವರ ಜೀವನದ ಸಂಧ್ಯಾಕಾಲದವುಗಳಾಗಿದ್ದು ಅವು ಹೇಗೋ ಅವರ ಕಡತಗಳಲ್ಲಿ ಉಳಿದುಕೊಂಡಿವೆ.

ಕಳಶ ಪ್ರಾಯ

ಪ್ರಶಸ್ತಿ - ಗೌರವಗಳಲ್ಲೆಲ್ಲ ಕಳಶ ಪ್ರಾಯವೆಂಬಂತೆ ಕಾಗಲಕರ್ ಅವರು ಕರ್ನಾಟಕ ಸರಕಾರದ ರಾಜ್ಯೋತ್ಸವ ಪ್ರಶಸ್ತಿ ಮತ್ತು ಕರ್ನಾಟಕ ಪತ್ರಿಕಾ ಅಕಾಡೆಮಿಯ (ಈಗ ಕರ್ನಾಟಕ ಮಾಧ್ಯಮ ಅಕಾಡೆಮಿ) ಪ್ರಶಸ್ತಿಗಳಿಗೆ ಪಾತ್ರರಾದಾಗ ಇಡೀ ಸಮಾಜವೇ ಸಂತಸದಿಂದ ಸಂಭ್ರಮಿಸಿತ್ತು.

ಸಮಾಜ ಕಾಗಲಕರ್ ಅವರ ಸೇವೆಯನ್ನು ಗುರುತಿಸಿ ಕಾಲಕಾಲಕ್ಕೆ ಸತ್ಕರಿಸಿ ತನ್ನ ಕೃತಜ್ಞತೆಯನ್ನು ಸಲ್ಲಿಸುತ್ತ ಬಂದಿದ್ದರೂ ಸರಕಾರಕ್ಕೆ ಅವರ ಸೇವೆಯನ್ನು ಗುರುತಿಸಲು ತನ್ನದೇ ಆದ ದೀರ್ಘ ಸಮಯ ತೆಗೆದುಕೊಂಡಿತು. ವರ್ಷ ೧೯೯೨ರಲ್ಲಿ ಮೊಟ್ಟಮೊದಲ ಬಾರಿಗೆ ಕರ್ನಾಟಕ ಸರಕಾರದ ಗೌರವದ ಮುದ್ರೆ ಅವರ ಸೇವೆಯ ಮೇಲೆ ಮೂಡಿ ಬರಲು ಸಾಧ್ಯವಾಯಿತು. ಆಗ ಅವರಿಗೆ ೬೫ ವರ್ಷ ವಯಸ್ಸು! ಪತ್ರಿಕೋದ್ಯಮ ಕ್ಷೇತ್ರದಲ್ಲಿ ಅವರು ಸಲ್ಲಿಸಿದ ಅನುಪಮ ಸೇವೆಯನ್ನು ಕೃತಜ್ಞತೆಯಿಂದ ಸ್ಮರಿಸುತ್ತ ರಾಜ್ಯ ಸರಕಾರವು ೧೯೯೨ನೇ ಸಾಲಿನ ರಾಜ್ಯೋತ್ಸವ ಪ್ರಶಸ್ತಿಯನ್ನು ಅವರಿಗೆ ಪ್ರದಾನ ಮಾಡಿತು.

ಆಶ್ಚರ್ಯದ ಸಂಗತಿ ಎಂದರೆ ಕರ್ನಾಟಕ ಪತ್ರಿಕಾ ಅಕಾಡೆಮಿ ಸಂಪೂರ್ಣವಾಗಿ ಕಾಗಲಕರ್ ಅವರನ್ನು, ಅವರ ಸೇವೆಯನ್ನು ಮರೆತೇ ಬಿಟ್ಟಿತ್ತು. ಪತ್ರಕರ್ತರ ಸೇವೆಯನ್ನು ಸಕಾಲದಲ್ಲಿ ಗುರುತಿಸಿ ಅವರಿಗೆ ಸೂಕ್ತ ಗೌರವವನ್ನು ಸಲ್ಲಿಸುವ ಹೊಣೆ ಇರುವುದು ಪತ್ರಿಕಾ ಅಕಾಡೆಮಿಯ ಮೇಲೆಯೇ ಪತ್ರಿಕಾ ಅಕಾಡೆಮಿಯು ಒಂದು ಪ್ರಮುಖ ಮೂಲಭೂತ ಉದ್ದೇಶವೂ ಆದೇ. ಕಲಬುರ್ಗಿಯಂತಹ ತೀರ ಅಯಕಟ್ಟಿನ, ಹಿಂದುಳಿದ ಪ್ರದೇಶದಲ್ಲಿ ನಾಲ್ಕು ದಶಕಗಳಿಗೂ ಮಿಕ್ಕ ನಿರಂತರ, ಸ್ವಾರ್ಥರಹಿತ, ಪ್ರಾಮಾಣಿಕ, ನಿಷ್ಠಾಪೂರ್ಣ, ವೃತ್ತಿಯ ಘನತೆ - ಗೌರವಗಳೊಂದಿಗೆ ರಾಜಿ ಮಾಡಿಕೊಳ್ಳದೆ, ಆದರ್ಶಗಳೊಂದಿಗೆ ಬದುಕಿ ತಮ್ಮನ್ನು ತಾವು ಗಂಧದ ಚೆಕ್ಕೆಯಂತೆ ತೇದುಕೊಂಡು ಅನುಪಮ ಹಾಗೂ ವಿಶಿಷ್ಟ ಸೇವೆ ಸಲ್ಲಿಸಿದ ಕಾಗಲಕರ್ ಅವರು ಪತ್ರಿಕಾ ಅಕಾಡೆಮಿ ಕಣ್ಣಿಗೆ ಬೀಳಲೇ ಇಲ್ಲ. ಯಾಕೆಂದರೆ ಪ್ರಶಸ್ತಿಗಳಿಗಾಗಿ ಅವರೆಂದೂ ಲಾಬಿ ಮಾಡಿದವರಲ್ಲ!

ಎಲೆ ಮರೆಯ ಕಾಯಿಯಂತೆ ಪತ್ರಿಕಾ ವೃತ್ತಿಯನ್ನು ನಡೆಸಿಕೊಂಡು ಹೋಗುತ್ತಿದ್ದ ಕಾಗಲಕರ್ ಎಲೆಮರೆಯ ಕಾಯಿಯಾಗಿಯೇ ಉಳಿದುಕೊಳ್ಳಲು ಅಕಾಡೆಮಿ ಬಯಸಿತೇನೋ! ಬೆಂಗಳೂರು ಹಾಗೂ ಸುತ್ತಮುತ್ತಲಿನ ಪ್ರದೇಶವನ್ನಷ್ಟೇ ಕರ್ನಾಟಕ ಎಂದು ಭಾವಿಸಿದ್ದ ಅಕಾಡೆಮಿ (ಈಗ ಆ ಭಾವನೆ ಇರಲಿಕ್ಕಿಲ್ಲ) ವಶೀಲಿ ಬಾಜಿ ಮಾಡುವ ಪತ್ರಕರ್ತರನ್ನಷ್ಟೇ ಪುರಸ್ಕರಿಸುತ್ತಿದ್ದುದು ದುರದೃಷ್ಟಕರ. ಪ್ರಶಸ್ತಿಗಾಗಿ ಪತ್ರಕರ್ತರ ಆಯ್ಕೆಯಲ್ಲಿ ಪ್ರತಿಭೆ, ಕಾಣಿಕೆ, ಅನುಭವ, ಅರ್ಹತೆ ಮಾನದಂಡ ಆಗುವುದರ ಬದಲು ಅವರ ಧರ್ಮ, ಜಾತಿ, ಉಪಜಾತಿ, ಪ್ರದೇಶ ಇತ್ಯಾದಿಗಳು ಮಾನದಂಡಗಳಾಗಿದ್ದರಿಂದ ಪ್ರಾಯಃ ಕಾಗಲಕರ್ ಅವರು ಅಕಾಡೆಮಿಯ ದಿವ್ಯ ದೃಷ್ಟಿಗೆ ಬೀಳಲಿಲ್ಲವೇನೋ.

ಎಂದಿಗೂ ಗುರುತಿಸದೆ ಇರುವುದಕ್ಕಿಂತ ವಿಳಂಬವಾಗಿಯಾದರೂ ಗುರುತಿಸುವುದು ಮೇಲೆಂಬ ಲೋಕಾನುಭವದಂತೆ ಪತ್ರಿಕಾ ಅಕಾಡೆಮಿ ಕೊನೆಗೂ ಕಾಗಲಕರ್ ಅವರು ಪತ್ರಿಕೋದ್ಯಮ ಕ್ಷೇತ್ರದಲ್ಲಿ ಸಲ್ಲಿಸಿದ ಗಣನೀಯ ಸೇವೆಗಾಗಿ ಗೌರವ ಪೂರ್ವಕವಾಗಿ ೧೯೯೪-೯೫ನೇ ಸಾಲಿನ ಪ್ರಶಸ್ತಿ ಘೋಷಿಸಿತು. ೧೯೯೬ನೇ ಮಾರ್ಚ್ ೩ ರಂದು ಬೆಳಗಾವಿಯಲ್ಲಿ ನಡೆದ ಸಮಾರಂಭದಲ್ಲಿ ಈ ಪ್ರಶಸ್ತಿಯನ್ನು ಪ್ರದಾನ ಮಾಡಲಾಯಿತು. ಆಗ ಕಾಗಲಕರ್ ಅವರ ವಯಸ್ಸು ೬೯ ! ಅದರ ಮೂರನೆ ವರುಷವೇ ಕಾಗಲಕರ್ ಇಹಲೋಕ ಯಾತ್ರೆಯನ್ನು ಮುಗಿಸಿದರು. ಪ್ರಶಸ್ತಿ ನೀಡಿಕೆ ಒಂದು ವರ್ಷ ತಡವಾಗಿದ್ದಲ್ಲಿ ಪ್ರಾಯಃ ಕಾಗಲಕರ್ ಅದರಿಂದಲೂ ವಂಚಿತರಾಗಬಹುದಿತ್ತು.

ಇವೆಲ್ಲಕ್ಕೂ ಮಿಗಿಲಾದ, ಕಾಗಲಕರ್ ಅವರಿಗೆ ಶಾಶ್ವತ ಸ್ವರೂಪದ ಗೌರವ ಕೃತಜ್ಞತೆಯನ್ನು ಸಲ್ಲಿಸಿದ ಶ್ರೇಯಸ್ಸು ಗುಲ್ಬರ್ಗ ಮಹಾನಗರ ಪಾಲಿಕೆಗೆ ಸಲ್ಲುತ್ತದೆ. ನಗರದ ಪ್ರಮುಖ ರಸ್ತೆಯಾದ ಸರದಾರ ವಲ್ಲಭಭಾಯಿ ಪಟೇಲ ವೃತ್ತದಿಂದ ಎಂ.ಎಸ್.ಕೆ. ಮಿಲ್ಲಿಗೆ ಹೋಗುವ ರಸ್ತೆಯ, ಕೇಂದ್ರ ಬಸ್‌ನಿಲ್ದಾಣದ ಎದುರುಗಡೆ, ಶಾಂತಿನಗರಕ್ಕೆ ಹೋಗುವ ರಸ್ತೆಗೆ "ವಿ.ಎನ್. ಕಾಗಲಕರ್ ರಸ್ತೆ" ಎಂದು ಮಹಾನಗರ ಪಾಲಿಕೆ ನಾಮಕರಣ ಮಾಡಿ ಕಲಬುರಗಿ ಜನತೆ ಪರವಾಗಿ ನಿಜವಾದ ಗೌರವಾಂಜಲಿ ಸಲ್ಲಿಸಿದೆ.

ಕಾಗಲಕರ್ ಅವರಿಗೆ ಸಲ್ಲಬೇಕಾದ ಪ್ರಾಯಃ ಸೂಕ್ತ ಗೌರವವೆಂದರೆ ಅವರ ಹೆಸರಿನಲ್ಲಿ ಪತ್ರಿಕೋದ್ಯಮಕ್ಕೆ ಅದರಲ್ಲೂ ವಿಶೇಷವಾಗಿ ಮುದ್ರಣ ಮಾಧ್ಯಮದಲ್ಲಿ ವಿಶೇಷ ಹಾಗೂ ವಿಶಿಷ್ಟ ಸೇವೆ ಸಲ್ಲಿಸಿದ ಪತ್ರಕರ್ತನಿಗ ನೀಡಲು ವಾರ್ಷಿಕ ಪ್ರಶಸ್ತಿಯನ್ನು ಪ್ರಾರಂಭಿಸುವುದೇ ಆಗಿದೆ. ಈ ಕುರಿತ ಪ್ರಸ್ತಾವನೆಯೊಂದು ರಾಜ್ಯ ಸರಕಾರದ ಮಟ್ಟದಲ್ಲಿ ಕೆಲವಾರು ವರುಷಗಳಿಂದ ಹಾಗೆಯೇ ಉಳಿದುಕೊಂಡಿದೆ. ಕೆಲವು ವಾರ್ತಾ ಸಚಿವರು ಕಾಗಲಕರ್ ಪ್ರಶಸ್ತಿ ಪ್ರಾರಂಭಿಸುವ ಆಶಾದಾಯಕ ಭರವಸೆಯನ್ನೇನೋ ನೀಡಿದ್ದರು. ಆದರೆ ಅವೆಲ್ಲವೂ ಹುಸಿಯಾಗಿಯೇ ಉಳಿದುಕೊಂಡವು.

ಕಾಗಲಕರ್ ಅವರು ಕಾರ್ಯನಿರ್ವಹಿಸಿದಂತಹ ಪತ್ರಿಕೆಗಳು ಅಥವಾ ಅದಕ್ಕಿಂತಲೂ ಉತ್ತಮ ಪತ್ರಿಕೆಗಳು ಬರಬಹುದು. ಆದರೆ ಕಾಗಲಕರ್ ಅವರಂತಹ ಪತ್ರಕರ್ತರು ದೊರಕುವುದು ತೀರಾ ದುರ್ಲಭ. ❒

–ಃ ಸಮಾಪ್ತಿ ಃ–

ವಿ.ಎನ್. ಕಾಗಲ್ಕರ್ ಅವರು ಹೈದರಾಬಾದ್ ಕರ್ನಾಟಕ ಪ್ರದೇಶದ ಪತ್ರಿಕೋದ್ಯಮದಲ್ಲಿ ಒಂದು ದೊಡ್ಡ ಹೆಸರು. ಪತ್ರಿಕೋದ್ಯಮವನ್ನು ಬದುಕಿನ ಉಸಿರಾಗಿಸಿಕೊಂಡು ಕಾಯಕ ದೃಷ್ಟಿಯಲ್ಲಿ ಬಾಳಿದವರು. ಅಂಥವರ ಹೋರಾಟ, ಸಾಧನೆಗಳು ಚರಿತ್ರೆಯಲ್ಲಿ ದಾಖಲಾಗಬೇಕಾದ ಅಗತ್ಯವಿದೆ.

ಪ್ರೊ॥ ಎಸ್. ಜಿ. ಸಿದ್ಧರಾಮಯ್ಯ
ಅಧ್ಯಕ್ಷರು



ಕರ್ನಾಟಕ ಸರ್ಕಾರ
ಕನ್ನಡ ಪುಸ್ತಕ ಪ್ರಾಧಿಕಾರ
ಬೆಂಗಳೂರು

ISBN-81-7713-213-X